ಗುರುವಾರ, ಮೇ 22, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಳಗಿದ ಸೂರ್ಯ

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಐಪಿಎಲ್ ಕ್ರಿಕೆಟ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಮಿಂಚಿನ ಅರ್ಧಶತಕ ಗಳಿಸಿದರು

73*	43	7	4
ರನ್	ಎಸೆತ	ಬೌಂಡರಿ	ಸಿಕ್ಸರ್

Slimmest Galaxy S ever at 5.8 mm

Titanium body with Gorilla® Glass Ceramic® 2

200 MP camera with ProVisual Engine

Snapdragon 8 Elite for Galaxy

Pre-order now at ₹ 109999 (1 unit)*

^Free memory upgrade worth ₹ 12000. Buy 256GB and get 512GB.

Limited time offer#

samsung.com

Scan and experience Galaxy AI

Or WhatsApp "Hi" to 9870 494949 to pre-order at Samsung Experience Store

Please dispose of e-waste and plastic waste responsibly. Customers can Whatsapp on 1800 5 7267864 for information on e-waste/plastic pick up.

Image simulated for representational purpose, actual may vary. Samsung login required for certain AI features. Samsung promotes responsible use of Artificial Intelligence (AI) features. All third party logos/brands are trademarks of the respective brand/company. *T&C apply. Offer price shown for1 Unit of Galaxy S25 Edge 12GB | 512GB. Final pricing subject to dealer discretion. ^Pre-order customers of S25 Edge 256 GB are eligible to benefits of memory upgrade from 256 GB to 512 GB worth ₹ 12000. #Pre-order offer valid till May 29, 2025.

Cheil-26363/25



Own now at ₹ 3612/month*

HDFC BANK | BAJAJ FINSERV | IDFC FIRST Bank | TVS CREDIT | HDB FINANCIAL SERVICES REIMAGINING OPPORTUNITIES | Samsung Finance+™

samsung.com

Please dispose of e-waste and plastic waste responsibly. Customers can WhatsApp on 180057267864 for information on e-waste/plastic waste.

Image simulated for illustrative purpose only. Actual UX/UI may differ. Color subject to availability. Samsung login is required for certain AI features. Samsung does not make any promises, assurances or guarantees as to the accuracy, completeness or reliability of the output provided by AI features. Samsung promotes responsible use of Artificial Intelligence (AI) features. Gemini is a trademark of Google LLC. Results for illustrative purposes and may vary. Check responses for accuracy. Compatible with certain features and with certain accounts. Internet connection required. Available on select devices, languages, and countries. Only available to users 18 years and older. *T&C apply, ₹ 3612/month EMI computed on the price of ₹ 129999 for 1 Unit of Galaxy S25 Ultra 12GB|256GB with gross EMI tenure of 36 months and 12 months EMI as downpayment. Final price at sole discretion of dealer. Eligibility of EMI at the sole discretion of the financiers including those listed on Samsung Finance+ (Financier T&C applies). Samsung disclaims any liabilities with the same. Offer may be revised at any point of time. Samsung disclaims any liabilities thereof. All third party logos/brands are trademarks /registered trademarks of the respective brand/company.

Scan to experience

Or WhatsApp 'S25' to 9870 494949 to buy now at Samsung Experience Store

Cheil-26406/25

ಗುರುವಾರ, ಮೇ 22, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 141 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

'ಐಎನ್ಎಸ್‌ವಿ ಕೌಂಡಿನ್ಯ' ಲೋಕಾರ್ಪಣೆ 4
ಜಪಾನ್‌ಗೆ ಸರ್ವಪಕ್ಷಗಳ ನಿಯೋಗ 9

ಸೆನ್ಸೆಕ್ಸ್	ನಿಫ್ಟಿ	₹/$
81,596	24,813	85.59

ಸಿಂಹಗಳ ಸಂಖ್ಯೆ ಏರಿಕೆ

ತನ್ನ ಆವಾಸಸ್ಥಾನವಾದ ಗುಜರಾತ್‌ನ ಗಿರ್ ರಾಷ್ಟ್ರೀಯ ಉದ್ಯಾನದಲ್ಲಿ ಮಾತ್ರವಲ್ಲದೇ ಅದರ ಹೊರಗೂ ಸಿಂಹಗಳ ಸಂಖ್ಯೆ ಅಧಿಕಗೊಂಡಿದ್ದು, ಒಟ್ಟು 11 ಜಿಲ್ಲೆಗಳಿಗೆ ಸಿಂಹಗಳ ಆವಾಸಸ್ಥಾನ ವಿಸ್ತರಿಸಿದೆ

674 2020ರಲ್ಲಿ ಇದ್ದ ಸಂಖ್ಯೆ
891 2025ರಲ್ಲಿ ಇರುವ ಸಂಖ್ಯೆ

196 ಗಂಡು
330 ಹೆಣ್ಣು
140 2ರಿಂದ 4 ವರ್ಷದ ಮರಿಗಳು
225 ಮರಿಗಳು

ಆಧಾರ: ಗುಜರಾತ್ ಅರಣ್ಯ ಇಲಾಖೆಯು ಮೇ 30ಗಳಲ್ಲಿ ಕೈಗೊಂಡ ಗಣತಿ

ಪ್ರಶಸ್ತಿ ಪಡೆದ ಬಾನು ಮುಷ್ತಾಕ್ ಹಾಗೂ ದೀಪಾ ಭಾಸ್ತಿ ಸಂಭ್ರಮ –ಎಪಿ ಚಿತ್ರ

ಇನ್ನಷ್ಟು ಸುದ್ದಿಗಳು 4 11

ಕನ್ನಡದ 'ಎದೆಯ ಹಣತೆ'ಗೆ ಒಲಿದ ಬೂಕರ್

ಬಾನು ಮುಷ್ತಾಕ್ ಅವರ 'ಹಾರ್ಟ್ ಲ್ಯಾಂಪ್' ಕಥಾ ಸಂಕಲನಕ್ಕೆ ಸಂದ ಪ್ರತಿಷ್ಠಿತ ಪ್ರಶಸ್ತಿ

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು/ಲಂಡನ್: ಬುಧವಾರದ ನಸುಕಿನ ಹೊತ್ತು. ಬಾನಲ್ಲಿ ಇನ್ನೂ ಕತ್ತಲು ಆವರಿಸಿತ್ತು. ಆ ಹೊತ್ತಿನಲ್ಲಿ ಕನ್ನಡದ 'ಎದೆಯ ಹಣತೆ'ಯೊಂದು ಜಗತ್ತಿನ ಸಾಹಿತ್ಯ ದಿಗಂತದಲ್ಲಿ ತನ್ನ ಬೆಳಕನ್ನು ಹರಡಿ ಮಿನುಗಿತು. ಕನ್ನಡಿಗರ ಸಂಭ್ರಮವೂ ಹೊನಲಾಗಿ ಹರಿಯಿತು. ಹೌದು, ಹಿರಿಯ ಕಥೆಗಾರ್ತಿ ಬಾನು ಮುಷ್ತಾಕ್ ಅವರ ಸಣ್ಣ ಕಥೆಗಳ ಸಂಕಲನ 'ಹಾರ್ಟ್ ಲ್ಯಾಂಪ್'ಗೆ 'ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ' ಒಲಿದ ಕ್ಷಣ ಅದಾಗಿತ್ತು.

ಇದು ಕನ್ನಡಕ್ಕೆ ಬಂದ ಮೊದಲ 'ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ'. ಕಥಾ ಸಂಕಲನವೊಂದಕ್ಕೆ ಈ ಗೌರವ ಲಭಿಸುತ್ತಿರುವುದು ಕೂಡ ಇದೇ ಮೊದಲು. ಈ ಪ್ರಶಸ್ತಿಯನ್ನು ಪಡೆದ ಮೊದಲ ಭಾರತೀಯ ಅನುವಾದಕಿ ಎಂಬ ಹಿರಿಮೆಗೆ ಕನ್ನಡದವರೇ ಆದ ದೀಪಾ ಭಾಸ್ತಿ (ಬಾನು ಅವರ ಕಥೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದವರು) ಒಳಗಾದರು. ಆ ಮೂಲಕ ಕನ್ನಡಿಗರ ಸಂಭ್ರಮ ಇಮ್ಮಡಿಗೊಳಿಸಿದರು.

> **ಈ ಪ್ರಶಸ್ತಿಯು ವೈವಿಧ್ಯಕ್ಕೆ ಸಂದಿರುವ ಗೆಲುವು. ಯಾವ ಕಥೆಯೂ ಎಂದಿಗೂ ಸಣ್ಣದಲ್ಲ ಎಂಬ ನಂಬಿಕೆಯಿಂದ ಕೃತಿಯು ರೂಪುತಳೆದಿದೆ. ಮನುಷ್ಯನ ಅನುಭವವೊಂದು ವಸ್ತ್ರವಿದ್ದಂತೆ. ಅದರ ಪ್ರತಿ ಎಳೆಯೂ ಭಾರವನ್ನು ಹಿಡಿದಿಟ್ಟುಕೊಳ್ಳುತ್ತದೆ**
> **ಬಾನು ಮುಷ್ತಾಕ್**

ವಕೀಲೆ, ಚಳವಳಿಗಾರ್ತಿ, ಕಥೆಗಾರ್ತಿ – ಇವು ಮೂರೂ ಬಾನು ಅವರ ವ್ಯಕ್ತಿತ್ವದ ಮೂರು ಭಿನ್ನ ಮುಖಗಳು. ವಕೀಲೆಯಾಗಿ ಅವರು ಹೆಚ್ಚು ಸಕ್ರಿಯರು. ತಮ್ಮ ಕಾಲದ ಎಲ್ಲ ಮಹತ್ವದ ಚಳವಳಿಗಳಲ್ಲೂ ಅವರು ಮುಖ್ಯ ಭೂಮಿಕೆಯಲ್ಲಿ ನಿಂತವರು. ಹಾಗೆ ನೋಡಿದರೆ ಬರಹ ಅವರ ನಂತರದ ಆಯ್ಕೆ. ತಮ್ಮ ಸಮುದಾಯದ ಬದುಕನ್ನು ಕಥೆಗಳಲ್ಲಿ ದಾಖಲಿಸುವಾಗ ವಕೀಲಿಕೆ ಹಾಗೂ ಚಳವಳಿಗಳಲ್ಲಿ ಕಂಡುಂಡ ಅನುಭವಗಳನ್ನು ಅವರು ಸಮರ್ಥವಾಗಿ ಬಳಸಿಕೊಂಡರು. ಅವರ ಕಥಾ ಜಗತ್ತಿನ ಬದುಕು ಎಷ್ಟೊಂದು ಜೀವಂತಿಕೆಯಿಂದ ಕೂಡಿದೆ ಎನ್ನುವುದಕ್ಕೆ ಈಗ ಒಲಿದು ಬಂದಿರುವ ಪ್ರಶಸ್ತಿಯೇ ಸಾಕ್ಷಿ.

ಟೇಟ್ ಮಾಡರ್ನ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಘೋಷಿಸಲಾಯಿತು. (50,000 ಪೌಂಡ್ (₹57,41,490) ಮೌಲ್ಯದ ಪ್ರಶಸ್ತಿ ಇದಾಗಿದೆ.

4ನೇ ಪುಟ ನೋಡಿ

'ಜೇನಿನ ಹೊಳೆಯೊ...'

ಅನುವಾದಕಿ ದೀಪಾ ಭಾಸ್ತಿ ಅವರು ಕನ್ನಡ ಭಾಷೆಯ ಸೊಗಡು ಹಾಗೂ ಮಹತ್ವವನ್ನು ಜಗತ್ತಿನೆದುರು ಸಾರಲು 'ಚಲಿಸುವ ಮೋಡಗಳು' ಸಿನಿಮಾದ 'ಜೇನಿನ ಹೊಳೆಯೊ ಹಾಲಿನ ಮಳೆಯೊ' ಹಾಡಿನ ಸಾಲುಗಳನ್ನು ಉದ್ಧರಿಸಿದರು. ಚಿ. ಉದಯಶಂಕರ್ ಬರೆದಿರುವ ಈ ಸಾಲುಗಳ ಅರ್ಥವನ್ನೂ ಅವರು ಇಂಗ್ಲಿಷ್‌ನಲ್ಲಿ ಬಿಚ್ಚಿಟ್ಟರು.

ಕಥೆಗಳಲ್ಲಿ ಬಾನು ಮುಷ್ತಾಕ್ ಅವರು ಬಳಸಿರುವ ಉರ್ದು ಹಾಗೂ ಪರ್ಷಿಯನ್ ಪದಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡುವಾಗ ದೀಪಾ ಯಥಾವತ್ತು ಉಳಿಸಿಕೊಂಡಿದ್ದಾರೆ. ಕಥೆಗಳು ಹೊರಡಿಸುವ ಧ್ವನಿಯನ್ನು ಅರ್ಥೈಸಿಕೊಳ್ಳುವಲ್ಲಿ ಇದು ನೆರವಿಗೆ ಬಂದಿದೆ ಎಂದೂ ತೀರ್ಪುಗಾರರು ಅಭಿಪ್ರಾಯಪಟ್ಟಿದ್ದಾರೆ.

ರನ್ಯಾ ಚಿನ್ನ ಕಳ್ಳಸಾಗಣೆ ಪ್ರಕರಣದ ನಂಟು • ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳಲ್ಲಿ ಶೋಧ

ಪರಮೇಶ್ವರ ಬೆನ್ನುಬಿದ್ದ ಇ.ಡಿ

ಪ್ರಜಾವಾಣಿ ವಾರ್ತೆ

ಪರಮೇಶ್ವರ

ಬೆಂಗಳೂರು/ತುಮಕೂರು: ಚಿತ್ರನಟಿ ರನ್ಯಾ ರಾವ್ ಭಾಗಿಯಾಗಿರುವ ಚಿನ್ನ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಜಿ. ಪರಮೇಶ್ವರ ಮುಖ್ಯಸ್ಥರಾಗಿರುವ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳ ಸಮೂಹದ ಕಚೇರಿಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಶೋಧ ನಡೆಸಿದ್ದಾರೆ.

'ರನ್ಯಾ ರಾವ್ ಜೊತೆ ಹಣಕಾಸು ವಹಿವಾಟು ನಡೆಸಿದ್ದ ಖಾಸಗಿ ಭದ್ರತಾ ಏಜೆನ್ಸಿಯೊಂದರ ಜೊತೆ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯೂ ನಂಟು ಹೊಂದಿದೆ. ಶಿಕ್ಷಣ ಸಂಸ್ಥೆಯು ಕಂಪನಿಯೊಂದಕ್ಕೆ ₹40 ಲಕ್ಷ ವರ್ಗಾವಣೆ ಮಾಡಿದೆ. ಅದೇ ದಿನ ಆ ಕಂಪನಿಯು ರನ್ಯಾ ರಾವ್ ಅವರ ಕ್ರೆಡಿಟ್ ಕಾರ್ಡ್ ಬಿಲ್ ಮೊತ್ತ ₹40 ಲಕ್ಷ ಪಾವತಿಸಿದೆ. ಆ ಕ್ರೆಡಿಟ್ ಕಾರ್ಡ್‌ನಿಂದಲೇ ರನ್ಯಾ ಏರ್ ಟಿಕೆಟ್‌ಗಳನ್ನು ಖರೀದಿಸಿದ್ದರು ಎಂಬುದು ಈಗ ಪತ್ತೆಯಾಗಿದೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ಖಚಿತಪಡಿಸಿವೆ.

ತುಮಕೂರಿನ ಮರಳೂರು ದಿಣ್ಣೆಯ ಸಿದ್ಧಾರ್ಥ ಎಂಜಿನಿಯರಿಂಗ್ ಕಾಲೇಜು, ತುಮಕೂರು ಹೊರ ವಲಯದ ಸಿದ್ಧಾರ್ಥ ನಗರದಲ್ಲಿರುವ ಸಿದ್ಧಾರ್ಥ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ, ಸಿದ್ಧಾರ್ಥ ಶಿಕ್ಷಣ ಸಂಸ್ಥೆ ಸೊಸೈಟಿ ಮತ್ತು ನೆಲಮಂಗಲ ಸಮೀಪದ ಟಿ.ಬೇಗೂರಿನಲ್ಲಿರುವ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಕಚೇರಿ ಮೇಲೆ 30ಕ್ಕೂ ಹೆಚ್ಚು ಅಧಿಕಾರಿಗಳ ತಂಡಗಳು ದಾಳಿ ನಡೆಸಿದವು. ತಡರಾತ್ರಿಯೂ ಶೋಧ ಕಾರ್ಯಾಚರಣೆ ಮುಂದುವರಿದಿತ್ತು.

ಪರಮೇಶ್ವರ ಅವರು ಸಿದ್ಧಾರ್ಥ ಎಜುಕೇಷನ್ ಸೊಸೈಟಿಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದು, ಅದರ ಅಧೀನದಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಕುಲಾಧಿಪತಿಯೂ ಆಗಿದ್ದಾರೆ. ಅವರ ಪತ್ನಿ ಕನ್ನಿಕಾ ಪರಮೇಶ್ವರ ಮತ್ತು ಅಣ್ಣನ ಮಗ ಜಿ.ಎಸ್. ಆನಂದ್ ಅವರು ಆಡಳಿತ ಮಂಡಳಿಯ ನಿರ್ದೇಶಕರಾಗಿದ್ದಾರೆ. ತುಮಕೂರು ಹೊರ ವಲಯದಲ್ಲಿರುವ ಎಚ್‌ಎಂಎಸ್ ಎಂಜಿನಿಯರಿಂಗ್ ಕಾಲೇಜನ್ನು ಸಿದ್ಧಾರ್ಥ ಶಿಕ್ಷಣ ಸಂಸ್ಥೆಯು ಇತ್ತೀಚೆಗೆ ಖರೀದಿಸಿತ್ತು.

ಬುಧವಾರ ಬೆಳಿಗ್ಗೆಯೇ ನಾಲ್ಕೂ ಸ್ಥಳಗಳಲ್ಲಿ ಶೋಧ ಆರಂಭಿಸಿದ ಇ.ಡಿ ಅಧಿಕಾರಿಗಳು, ಪ್ರವೇಶ ದ್ವಾರಗಳನ್ನು ಬಂದ್ ಮಾಡಿದರು. ಹಲವು ವರ್ಷಗಳಿಂದ ಸಿದ್ಧಾರ್ಥ ಎಜುಕೇಷನ್ ಸೊಸೈಟಿಯಲ್ಲಿ ನಡೆದಿರುವ ವಹಿವಾಟುಗಳು, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿನ ಪ್ರವೇಶಾತಿ, ಶುಲ್ಕ ಸಂಗ್ರಹ, ಸಂಸ್ಥೆಯು ನಡೆಸಿರುವ ದೊಡ್ಡ ಮೊತ್ತದ ವಹಿವಾಟುಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ ಎಂಬ ಮಾಹಿತಿ ಲಭ್ಯವಾಗಿದೆ.

9ನೇ ಪುಟ ನೋಡಿ

ಕೋಳಿ ಫಾರ್ಮ್ ಕಚೇರಿ ಮೇಲೂ ದಾಳಿ

ಕೊಪ್ಪಳ ಜಿಲ್ಲೆಯ ಕುದರಿಮೋತಿ ಸಮೀಪದಲ್ಲಿರುವ ಕೋಳಿ ಸಾಕಾಣಿಕೆ ಮತ್ತು ಮೊಟ್ಟೆ ಉತ್ಪಾದನಾ ಕಂಪನಿಯೊಂದರ ಕಚೇರಿಯಲ್ಲಿಯೂ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬುಧವಾರ ಶೋಧ ನಡೆಸಿದ್ದಾರೆ.

ರಾಜ್ಯದಲ್ಲಿ ಅತ್ಯಧಿಕ ಮೊಟ್ಟೆ ಉತ್ಪಾದಿಸುವ ಕಂಪನಿಗಳಲ್ಲಿ ಇದು ಕೂಡ ಒಂದಾಗಿದೆ. ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧನದಲ್ಲಿರುವ ರನ್ಯಾ ರಾವ್ ಅವರ ಮಲತಂದೆ, ಐಪಿಎಸ್ ಅಧಿಕಾರಿ ಆರ್. ರಾಮಚಂದ್ರರಾವ್ ಅವರ ಆಪ್ತರು ಈ ಕಂಪನಿಯ ಮಾಲೀಕರು ಎಂಬ ಮಾಹಿತಿ ಲಭ್ಯವಾಗಿದೆ.

> **ಕೇಂದ್ರ ಸರ್ಕಾರವು ದೇಶದಾದ್ಯಂತ ವಿರೋಧ ಪಕ್ಷಗಳ ದಲಿತ ನಾಯಕರ ವಿರುದ್ಧ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಪರಮೇಶ್ವರ ಅವರು ಒಬ್ಬ ದಲಿತ ನಾಯಕ. ಅವರ ವಿರುದ್ಧ ಕೇಂದ್ರವು ಇ.ಡಿಯನ್ನು ಬಳಸಿಕೊಳ್ಳುತ್ತಿದೆ. ಸತ್ಯವೇ ಇಲ್ಲದ ಆರೋಪಗಳಲ್ಲಿ ತನಿಖೆ ಹೆಸರಿನಲ್ಲಿ ಕಿರುಕುಳ ನೀಡಲಾಗುತ್ತಿದೆ.**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಪರಮೇಶ್ವರ ಅವರು ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿರುವ ಸಾಧ್ಯತೆಯೇ ಇಲ್ಲ. ಅವರು ಬಹಳ ಸರಳ ಮತ್ತು ನೇರ ವ್ಯಕ್ತಿತ್ವದ ಮನುಷ್ಯ. ಶೈಕ್ಷಣಿಕ ಸಂಸ್ಥೆಗಳಲ್ಲಿ ಏನು ಸಿಗುತ್ತದೆ ಎಂದು ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೋ ನನಗೆ ಗೊತ್ತಿಲ್ಲ**
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

27 ನಕ್ಸಲರು ಭದ್ರತಾ ಪಡೆಗಳ ಗುಂಡಿಗೆ ಬಲಿ • ಒಬ್ಬ ಪೊಲೀಸ್ ಸಾವು

ನಕ್ಸಲ್ ನಾಯಕ ಬಸವರಾಜು ಹತ್ಯೆ

ಪ್ರಜಾವಾಣಿ ವಾರ್ತೆ/ಪಿಟಿಐ

ನಾರಾಯಣಪುರ/ಹೈದರಾಬಾದ್: ಛತ್ತೀಸಗಢದ ಬಸ್ತಾರ್ ಪ್ರದೇಶದಲ್ಲಿ ನಡೆಸಿದ ಎನ್‌ಕೌಂಟರ್‌ನಲ್ಲಿ ಸಿಪಿಐ (ಮಾವೋವಾದಿ) ಪಕ್ಷದ ಪ್ರಧಾನ ಕಾರ್ಯದರ್ಶಿ, ಪ್ರಮುಖ ನಕ್ಸಲ್ ನಾಯಕ ನಂಬಾಲಾ ಕೇಶವ್ ರಾವ್ ಅಲಿಯಾಸ್ ಬಸವರಾಜು (70) ಸೇರಿ 27 ನಕ್ಸಲರನ್ನು ಭದ್ರತಾ ಪಡೆಗಳು ಬುಧವಾರ ಹತ್ಯೆ ಮಾಡಿವೆ.

ಬಸವರಾಜು ಅವರ ಹತ್ಯೆಯು ಭದ್ರತಾ ಪಡೆಗಳಿಗೆ ದೊರಕಿದ ಗೆಲುವು ಎನ್ನಲಾಗಿದೆ. ಬಸವರಾಜು ಹತ್ಯೆಯನ್ನು ಖಚಿತಪಡಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಇದೊಂದು ಐತಿಹಾಸಿಕ ಸಾಧನೆ' ಎಂದು ಬಣ್ಣಿಸಿದ್ದಾರೆ. ಇನ್ನೊಂದೆಡೆ, ಬಸವರಾಜು ಅವರ ಹತ್ಯೆಯು ನಕ್ಸಲ್ ಚಳವಳಿಗೆ ಆದ ಹಿನ್ನಡೆ ಎಂದೂ ವಿಶ್ಲೇಷಿಸಲಾಗುತ್ತಿದೆ. ಛತ್ತೀಸಗಢದ ನಾರಾಯಣಪುರ–ಬಿಜಾಪುರ–ದಂತೆವಾಡಾ ಜಿಲ್ಲೆಗಳಲ್ಲಿ ಹಬ್ಬಿಕೊಂಡಿರುವ ಅಬೂಜ ಮಾಢ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ಕಳೆದ 2 ದಿನಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದವು.

9ನೇ ಪುಟ ನೋಡಿ

> **ನಮ್ಮ ಭದ್ರತಾ ಪಡೆಗಳ ಬಗ್ಗೆ ಹೆಮ್ಮೆ ಇದೆ. ನಕ್ಸಲ್‌ವಾದವನ್ನು ಇಲ್ಲವಾಗಿಸಿ ಜನರಿಗೆ ಶಾಂತಿಯುತ ಬದುಕು ಒದಗಿಸಿ, ಪ್ರಗತಿ ಪಥದತ್ತ ಕೊಂಡೊಯ್ಯಲು ನಮ್ಮ ಸರ್ಕಾರ ಬದ್ಧವಾಗಿದೆ**
> **ನರೇಂದ್ರ ಮೋದಿ,** ಪ್ರಧಾನಿ

ಬಸವರಾಜು ಯಾರು?

ನಂಬಾಲಾ ಕೇಶವ್ ರಾವ್ ಅಲಿಯಾಸ್ ಬಸವರಾಜು ಅವರು ನಕ್ಸಲ್ ಚಳವಳಿಯ ಬೆನ್ನೆಲುಬಾಗಿದ್ದರು. ದಾಳಿಯ ಕಾರ್ಯತಂತ್ರ ರೂಪಿಸುವಲ್ಲಿ ನಿಪುಣರಾಗಿದ್ದರು. ಇವರನ್ನು ಹುಡುಕಿ ಕೊಟ್ಟವರಿಗೆ ₹1.5 ಕೋಟಿ ಬಹುಮಾನ ನೀಡುವುದಾಗಿ ಸರ್ಕಾರ ಘೋಷಿಸಿತ್ತು.

2010ನಲ್ಲಿ ದಂತೇವಾಡದಲ್ಲಿ ನಡೆಸಿದ ದಾಳಿಯಲ್ಲಿ 76 ಸಿಆರ್‌ಪಿಎಫ್ ಸಿಬ್ಬಂದಿ ಮೃತಪಟ್ಟಿದ್ದರು. 2013ರ ಜೀರಂ ಘಾಟಿ ದುರಂತದಲ್ಲಿ 27 ಮಂದಿ ಮೃತಪಟ್ಟಿದ್ದರು. ಈ ಎಲ್ಲ ದಾಳಿಗಳ ರೂವಾರಿ ಬಸವರಾಜು ಅವರಾಗಿದ್ದರು. ರ್‍ಯಾಡಿಕಲ್ ಸ್ಟೂಡೆಂಟ್ಸ್ ಯೂನಿಯನ್ (ಆರ್‌ಎಸ್‌ಯು) ಮೂಲಕ ರಾಜಕೀಯ ಜೀವನ ಆರಂಭಿಸಿದ್ದ ಅವರು ನಂತರ ನಕ್ಸಲ್ ಚಳವಳಿಗೆ ಸೇರಿಕೊಂಡರು.

ಕೇಶವ್ ರಾವ್ ಅವರಿಗೆ ಬಸವರಾಜು, ಗಂಗಣ್ಣ ಮತ್ತು ಪ್ರಕಾಶ್ ಎಂಬ ಹೆಸರುಗಳೂ ಇದ್ದವು. ಇವರು ಹುಟ್ಟಿದ್ದು ಆಂಧ್ರಪ್ರದೇಶದ ಶ್ರೀಕಾಕುಳ ಜಿಲ್ಲೆಯ ಪುಟ್ಟ ಗ್ರಾಮವೊಂದರಲ್ಲಿ. ವರಂಗಲ್‌ನ ರೀಜನಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದು ಮುಗಿಸಿದ್ದ ಅವರು, ಕಾಲೇಜು ದಿನಗಳಲ್ಲಿಯೇ ಎಡಪಂಥೀಯ ವಿದ್ಯಾರ್ಥಿ ರಾಜಕಾರಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. 1980ರಲ್ಲಿ 'ಸಿಪಿಐ (ಮಾರ್ಕ್ಸ್–ಲೆನಿನ್) ಪೀಪಲ್ಸ್ ವಾರ್' ಪಕ್ಷವನ್ನು ಇತರರ ಜೊತೆ ಸೇರಿಕೊಂಡು ಸ್ಥಾಪಿಸಿದರು. 1992ರಲ್ಲಿ ಇದರ ಕೇಂದ್ರ ಸಮಿತಿಯ ಸದಸ್ಯರಾದರು. 2004ರಲ್ಲಿ ಸಿಪಿಐ (ಮಾವೋವಾದಿ) ಪಕ್ಷದೊಂದಿಗೆ 'ಸಿಪಿಐ (ಮಾರ್ಕ್ಸ್–ಲೆನಿನ್) ಪೀಪಲ್ಸ್ ವಾರ್' ವಿಲೀನವಾಯಿತು.

9ನೇ ಪುಟ ನೋಡಿ



ಮಳೆಯ ರಭಸಕ್ಕೆ ಭೂಕುಸಿತ

ಹುಬ್ಬಳ್ಳಿ: ಕಿತ್ತೂರು ಕರ್ನಾಟಕದ ಹಲವೆಡೆ ಬುಧವಾರ ಉತ್ತಮ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮಳೆಯ ಅಬ್ಬರ ಮುಂದುವರಿದಿದ್ದು, ಕೆಲವೆಡೆ ಭೂಕುಸಿತ ಸಂಭವಿಸಿದೆ. 6

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸಲೀಂ ಪ್ರಭಾರ ಡಿಜಿಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರಭಾರ ಪೊಲೀಸ್ ಮಹಾನಿರ್ದೇಶಕರಾಗಿ (ಡಿಜಿ–ಐಜಿಪಿ) ಡಾ.ಎಂ.ಎ. ಸಲೀಂ ಅವರನ್ನು ಸರ್ಕಾರ ನೇಮಿಸಿದ್ದು, ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಪಡೆಯ ಮುಖ್ಯಸ್ಥರ ಕಚೇರಿಯಲ್ಲಿ ಬುಧವಾರ ಸಂಜೆ ಅವರು ಅಧಿಕಾರ ಸ್ವೀಕರಿಸಿದರು.

ಸಿಐಡಿಯ ಆರ್ಥಿಕ ಅಪರಾಧಗಳು ಹಾಗೂ ವಿಶೇಷ ಘಟಕಗಳು ವಿಭಾಗದ ಪೊಲೀಸ್ ನಿರ್ದೇಶಕರಾಗಿರುವ ಸಲೀಂ ಅವರಿಗೆ ಹೆಚ್ಚುವರಿ ಜವಾಬ್ದಾರಿ ವಹಿಸಲಾಗಿದೆ.

ನಿವೃತ್ತ ಡಿಜಿ–ಐಜಿಪಿ ಅಲೋಕ್ ಮೋಹನ್ ಅವರಿಂದ 43ನೇ ಡಿಜಿಪಿಯಾಗಿ ಸಲೀಂ ಅಧಿಕಾರ ಸ್ವೀಕರಿಸಿದರು. ಇದೇ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿಗಳು ಹಾಜರಿದ್ದು ಶುಭ ಹಾರೈಸಿದರು.

ನಂತರ ಮಾತನಾಡಿದ ಸಲೀಂ, 'ಪೊಲೀಸ್ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಾಗುವುದು. ಅಪರಾಧ ಪ್ರಕರಣಗಳ ತನಿಖೆಯಲ್ಲಿ ನೊಂದ ವ್ಯಕ್ತಿಗಳನ್ನು ಕೇಂದ್ರೀಕರಿಸುವ ವ್ಯವಸ್ಥೆಯನ್ನು ಅನುಸರಿಸಲಾಗುವುದು' ಎಂದು ಹೇಳಿದರು.

> **ಪೊಲೀಸ್ ಅಧಿಕಾರಿಗಳಿಗೆ, ಸಿಬ್ಬಂದಿಗೆ ಉತ್ತಮ ಕೆಲಸದ ವಾತಾವರಣ ನಿರ್ಮಿಸಲಾಗುವುದು**
> **ಡಾ.ಎಂ.ಎ. ಸಲೀಂ,** ಪ್ರಭಾರ ಡಿಜಿ–ಐಜಿಪಿ

ವಯೋನಿವೃತ್ತಿಯಾದ ಅಲೋಕ್ ಮೋಹನ್ ಮಾತನಾಡಿ, 'ನನ್ನ ಅವಧಿಯಲ್ಲಿ ನಕ್ಸಲರ ಶರಣಾಗತಿಗೆ ಪ್ರಯತ್ನಿಸಿದ್ದು ಯಶಸ್ವಿ ಆಯಿತು. ಪಾಸ್‌ಪೋರ್ಟ್ ಪರಿಶೀಲನೆ ಸರಳೀಕರಿಸಲಾಯಿತು' ಎಂದು ಹೇಳಿದರು.

6ನೇ ಪುಟ ನೋಡಿ

ಕಾಡಾನೆ ದಾಳಿ: ಇಬ್ಬರ ಸಾವು

ಮಡಿಕೇರಿ/ಮೈಸೂರು: ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ದೇವರಪುರದ ಅಣ್ಣಯ್ಯ (41) ಹಾಗೂ ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಡಿ.ಬಿ. ಕುಪ್ಪೆ ಪಂಚಾಯಿತಿಯ ಬಳ್ಳೆ ಅರಣ್ಯವಲಯದ ಬಳ್ಳೆ ಹಾಡಿಯ ಸೀತೆ (46) ಅವರು ಕಾಡಾನೆ ದಾಳಿಯಿಂದ ಬುಧವಾರ ಮೃತಪಟ್ಟರು.

ಭಾರತ ಸರ್ಕಾರ
ಹಣಕಾಸು ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ

ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು (ಡಿಆರ್‌ಟಿ-2)

ಫಾರಂ ನಂ. 14 (ನೋಡಿ ರೆಗ್ಯುಲೇಶನ್ 33(2))

ಡಿಮ್ಯಾಂಡ್ ನೋಟೀಸು

ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯಿದೆ 1993ರ ಸೆಕ್ಷನ್ 25ರಿಂದ 28ರವರೆಗೆ ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲ್ ನಿಯಮ 2ರ ಅಡಿಯಲ್ಲಿ ನೋಟೀಸ್

ಆರ್‌ಸಿ ನಂ. 676/2023 ಒ. ಎ. ನಂ. 1637/2019

ಕರ್ನಾಟಕ ಬ್ಯಾಂಕ್ ಲಿಮಿಟೆಡ್ V/s ಶ್ರೀ ರಾಜಪ್ಪ ಟಿ. ಮತ್ತು ಇತರರು

[illegible] ....ಸರ್ಟಿಫಿಕೇಟ್ ಹೋಲ್ಡರ್

ವಿರುದ್ಧ

(ಸಿಡಿ 1) ಶ್ರೀ ರಾಜಪ್ಪ ಟಿ., S/o. ತಮ್ಮೇಗೌಡ, ನಂ. 79, ಹಾರೋಬೆಲೆ ಗ್ರಾಮ ಮತ್ತು ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ – 562 126

(ಸಿಡಿ 2) ಶ್ರೀಮತಿ ಮಡ್ಡೀನ್ ಮೇರಿ W/o. ರಾಜಪ್ಪ ಟಿ. ನಂ. 79, ಹಾರೋಬೆಲೆ ಗ್ರಾಮ ಮತ್ತು ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ – 562 126

(ಸಿಡಿ 3) ಶ್ರೀಮತಿ ಅಂತೋಣಿಮ್ಮಾ ಆರ್. W/o. ರಾಜಪ್ಪ ಟಿ. ನಂ. 79, ಹಾರೋಬೆಲೆ ಗ್ರಾಮ ಮತ್ತು ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ – 562 126

(ಸಿಡಿ 4) ಶ್ರೀ ಸತೀಶ್ ಪೌಲ್‌ರಾಜ್ S/o. ರಾಜಪ್ಪ ಟಿ. ನಂ. 79, ಹಾರೋಬೆಲೆ ಗ್ರಾಮ ಮತ್ತು ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ – 562 126

(ಸಿಡಿ 5) ಶ್ರೀ ಜಾನ್ಸ್ ಕುಮಾರ್ ಆರ್. S/o. ರಾಜಪ್ಪ ಟಿ. ನಂ. 79, ಹಾರೋಬೆಲೆ ಗ್ರಾಮ ಮತ್ತು ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ – 562 126

(ಸಿಡಿ 6) ಶ್ರೀ ಪ್ರಕಾಶ್ ಮರಿಯಪ್ಪ ಆರ್. S/o. ರಾಜಪ್ಪ ಟಿ. ನಂ. 79, ಹಾರೋಬೆಲೆ ಗ್ರಾಮ ಮತ್ತು ಅಂಚೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ – 562 126

... ಸರ್ಟಿಫಿಕೇಟ್ ಡೆಟ್ಟರ್

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕರಣ ಬೆಂಗಳೂರು (ಡಿಆರ್‌ಟಿ-2) ಇವರು, ಒ.ಎ. ನಂ./1637/2019ರಂತೆ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ ರೂ.2095953/- (ರೂಪಾಯಿ ಇಪ್ಪತ್ತು ಲಕ್ಷ ತೊಂಬತ್ತೈದು ಸಾವಿರದ ಒಂಬೈನೂರ ಐವತ್ತ ಮೂರು ಮಾತ್ರ) ಜೊತೆಗೆ ದಿನಾಂಕ 09.10.2019 ರಿಂದ ಪೂರ್ತಿ ಪಾವತಿಯ ದಿನಾಂಕದ ವರೆಗೆ ಅರ್ಜಿ ಪ್ರಕಾರ ಮುಂದಿನ ಬಡ್ಡಿ ಮತ್ತು ವೆಚ್ಚ ರೂ.23255/- (ರೂಪಾಯಿ ಇಪ್ಪತ್ತಮೂರು ಸಾವಿರದ ಇನ್ನೂರ ಐವತ್ತೈದು ಮಾತ್ರ) ನಿಮ್ಮಿಂದ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬಾಕಿ ಇರುತ್ತದೆ. (2) ನೀವು ಸದರಿ ಮೊತ್ತವನ್ನು ಈ ನೋಟೀಸನ್ನು ಸ್ವೀಕರಿಸಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ, ಇದಕ್ಕೆ ತಪ್ಪಿದಲ್ಲಿ, ರಿಕವರಿ ಡಿ ಡೆಟ್ ಡ್ಯೂ ಬ್ಯಾಂಕ್ ಅಂಡ್ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್ ಆಕ್ಟ್ 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು. 3. ಮುಂದಿನ ವಿಚಾರಣೆಯ ದಿನಾಂಕ ಅಥವಾ ಮೊದಲು ನಿಮ್ಮ ಸ್ಥಿರಾಸ್ತಿ ವಿವರಗಳನ್ನು ಅಫಿಡವಿಟ್‌ನಲ್ಲಿ ಘೋಷಿಸಲು ನಿಮಗೆ ಈ ಮೂಲಕ ಆದೇಶಿಸಲಾಗಿದೆ. 4. ನಿಮಗೆ ಈ ಮೂಲಕ ಆದೇಶಿಸಲಾಗಿದೆಯೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ಈ ನೋಟೀಸು ನೀಡಿದ 15 ದಿನಗಳ ಒಳಗೆ ಕೇಸಿನ ವಿವರದೊಂದಿಗೆ ಹಾಜರಾಗಬೇಕು. 5. ಮೇಲೆ ಹೇಳಿದ ಮೊತ್ತಕ್ಕೆ ಹೆಚ್ಚುವರಿಯಾಗಿ ನೀವು ಪಾವತಿಸಬೇಕಾಗುತ್ತದೆ. (ಎ) ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಗಾಗಿ ಮತ್ತು ಪ್ರಮಾಣಪತ್ರದಲ್ಲಿ ಆದೇಶಿಸಿದ ಬಡ್ಡಿ ಮೊತ್ತ. (ಬ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ಪ್ರಕ್ರಿಯೆಗಳಿಗೆ ಸಾಲ ವಸೂಲಾತಿ ಮಾಡುವಲ್ಲಿ ತಗಲುವ ಎಲ್ಲಾ ಖರ್ಚು ಮತ್ತು ವೆಚ್ಚಗಳು.

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ 17.02.2024 ರಂದು ಕೊಡಲಾಗಿದೆ.

ಸಹಿ/-ವಸೂಲಾತಿ ಅಧಿಕಾರಿ
ಸಾಲ ವಸೂಲಾತಿ ನ್ಯಾಯಾಧಿಕರಣ (ಡಿಆರ್‌ಟಿ–2)

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್

TeamLease® Putting India to Work

CIN: L74140KA2000PLC118395

ನೋಂದಾಯಿತ ಕಚೇರಿ: [illegible] ಕೋರಮಂಗಲ [illegible] ಬೆಂಗಳೂರು – 560 095, ಕರ್ನಾಟಕ, ಭಾರತ

ಈ-ಮೇಲ್: corporateaffairs@teamlease.com | ವೆಬ್‌ಸೈಟ್: https://group.teamlease.com

ಮಾರ್ಚ್ 31, 2025 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಲೆಕ್ಕಪರಿಶೋಧಿತ, ಬಿಡಿ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳು

ಆಡಿಟ್ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ, ಮೇ 21, 2025 ರಂದು ನಡೆದ ಸಭೆಯಲ್ಲಿ ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್ ("ಟೀಮ್‌ಲೀಸ್/ಕಂಪನಿ") ನಿರ್ದೇಶಕರ ಮಂಡಳಿಯು ಮಾರ್ಚ್ 31, 2025 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಲೆಕ್ಕಪರಿಶೋಧಿತ, ಬಿಡಿ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ. [illegible] ನಿಯಮಗಳು, 2015 ರ ನಿಯಮ 33 ರ ಪ್ರಕಾರ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಾದ ಮೆ. ಎಸ್.ಆರ್. ಬ್ಯಾಟ್ಲಿಬಾಯ್ & ಅಸೋಸಿಯೇಟ್ಸ್, ಎಲ್‌ಎಲ್‌ಪಿ, ಚಾರ್ಟರ್ಡ್ ಅಕೌಂಟೆಂಟ್ಸ್, ಇವರ ಪರಿಶೀಲನೆಗೆ ಒಳಪಡಿಸಲಾಗಿದೆ.

ಪರಿಶೋಧಿತ ಬಿಡಿ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳ ಸಂಪೂರ್ಣ ಪಾಠವು ಸ್ಟಾಕ್ ಎಕ್ಸ್‌ಚೇಂಜುಗಳ ಬಿಎಸ್‌ಇ (www.bseindia.com) ಮತ್ತು ಎನ್‌ಎಸ್‌ಇ (www.nseindia.com) ವೆಬ್‌ಸೈಟ್‌ನಲ್ಲಿ ಮತ್ತು ಕಂಪನಿಯ https://group.teamlease.com/investor/quarterly-results/ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಕೆಳಗೆ ನೀಡಲಾದ ಕ್ವಿಕ್ ರೆಸ್ಪಾನ್ಸ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಇದನ್ನು ಪಡೆಯಬಹುದು.

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಕಂಪನಿಯ ವೆಬ್‌ಸೈಟಿನಲ್ಲಿರುವ ಫಲಿತಾಂಶಗಳನ್ನು ನೋಡಬಹುದು.

ದಿನಾಂಕ: ಮೇ 21, 2025
ಸ್ಥಳ: ಬೆಂಗಳೂರು

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಲಿಗಾಗಿ, ಮತ್ತು ಅದರ ಪರವಾಗಿ
ಸಹಿ/-
ಅಶೋಕ್ ಕುಮಾರ್ ನೆಡುರುಮಲ್ಲಿ
ಮ್ಯಾನೇಜಿಂಗ್ ಡೈರೆಕ್ಟರ್ & ಸಿಇಒ
DIN: 00151814

ಕೋವಿಡ್: ಭಯಪಡಬೇಕಾದ ಪರಿಸ್ಥಿತಿಯಿಲ್ಲ – ಸಚಿವ ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಈ ತಿಂಗಳು 16 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈ ಸೋಂಕಿನ ಬಗ್ಗೆ ಸದ್ಯ ಭಯಪಡುವ ಪರಿಸ್ಥಿತಿಯಿಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ದಿನೇಶ್ ಗುಂಡೂರಾವ್

ಜಗತ್ತಿನ ವಿವಿಧೆಡೆ ಕೋವಿಡ್ ಹೊಸ ಪ್ರಕರಣಗಳ ಹೆಚ್ಚಳಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ಈ ವೈರಾಣು ಸದಾ ಇರುತ್ತದೆ. ಪರೀಕ್ಷೆ ಮಾಡಿದಾಗ ಸೋಂಕು ದೃಢ ಪ್ರಕರಣಗಳು ಪತ್ತೆಯಾಗಬಹುದು. ಅದರ, ಅದರ ತೀವ್ರತೆ ಏನು? ತೊಂದರೆಯಾಗುವ ಲಕ್ಷಣಗಳೇನು ಎಂಬುದನ್ನು ಗಮನಿಸಬೇಕು. ಸದ್ಯ ಆತಂಕ ಪಡಬೇಕಾದ ಸ್ಥಿತಿಯಿಲ್ಲ' ಎಂದು ತಿಳಿಸಿದರು.

'ಕೋವಿಡ್‌ಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಜತೆ ಸಂಪರ್ಕದಲ್ಲಿದ್ದೇವೆ. ತಾಂತ್ರಿಕ ಸಲಹಾ ಸಮಿತಿಯ ಸದಸ್ಯರ ಜೊತೆ ಚರ್ಚೆ ಮಾಡುತ್ತಿದ್ದಾರೆ. ಏನಾದರೂ ಭಯ ಹುಟ್ಟಿಸುವಾರದು. ಈ ಋತುವಿನಲ್ಲಿ ಶ್ವಾಸ ಸಂಬಂಧಿ ಅನಾರೋಗ್ಯ ಸಮಸ್ಯೆಗಳು ಸಹಜವಾಗಿ ಕಾಣಿಸಿಕೊಳ್ಳುತ್ತವೆ. ಇಂತಹ ಸಂದರ್ಭದಲ್ಲಿ ಮಾಸ್ಕ್ ಧರಿಸುವಿಕೆಯಂತಹ ಮುನ್ನೆಚ್ಚರಿಕೆ ವಹಿಸುವುದು ಉತ್ತಮ' ಎಂದು ಹೇಳಿದರು.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 11/ಎಂವೈಎಸ್/2025 ದಿನಾಂಕ : 15–05–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಸಂಪಿಗೆ ರೋಡ್ – ಅರಸೀಕೆರೆ ಸೆಕ್ಷನ್ : ರಸ್ತೆ ಮೇಲ್ಪದರದ ಸುಧಾರಣೆಗಾಗಿ ರಸ್ತೆ ಮೇಲ್ಸೇತುವೆ ಸಂ. 228ಎ, 227ಎ ಮತ್ತು 219ಎ ಗಳಿಗೆ ಪೂರಕ ಕಾಮಗಾರಿಗಳು, ರೀಟೇನಿಂಗ್ ಗೋಡೆಗಳು ಮತ್ತು ಬ್ಯಾಂಕ್‌ಗಳಿಗೆ ರಕ್ಷಣಾ ಗೋಡೆ.	ರೂ. 2,21,54,501/-
2	ಸಹಾಯಕ ವಿಭಾಗೀಯ ಇಂಜಿನಿಯರ್ / ಶಿವಮೊಗ್ಗ ಟೌನ್ ಉಪ–ವಿಭಾಗ : ಬೀರೂರು – ತಾಳಗುಪ್ಪ ಮತ್ತು ಕಡೂರು – ಚಿಕ್ಕಮಗಳೂರು ಸೆಕ್ಷನ್‌ನ ರಸ್ತೆ ಮೇಲ್ಸೇತುವೆಗಳಲ್ಲಿ ಸ್ಟಾಂಡರ್ಡ್ ಹೈಟ್ ಗೇಜ್‌ಗಳನ್ನು ಒದಗಿಸುವುದು (ಒಟ್ಟು 32 ಸಂಖ್ಯೆಗಳು).	ರೂ. 2,21,89,446/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06–06–2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ ಮೈಸೂರು

ಪಿಯುಬಿ/125/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 34ಎಂಇಸಿಹೆಚ್‌ಬಿಯುಎಲ್‌ಕೆಆರ್‌ಎಸ್‌ಪಿ1000 ಡಬ್ಲ್ಯುಎಜಿಓಎನ್‌ಹೆಚ್‌ಪಿಟಿ ದಿನಾಂಕ : 16–05–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹೊಸಪೇಟೆ / ಡಿಪೋದಲ್ಲಿ ಒಂದು ವರ್ಷದ ಅವಧಿಗೆ 1000 ವ್ಯಾಗನ್‌ಗಳ ಆರ್‌ಓಹೆಚ್ ಷೆಡ್ಯೂಲ್‌ನ ಹೊರಗುತ್ತಿಗೆ ನೀಡುವುದು.	ರೂ. 1,59,74,740.30

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06–06–2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್ / ಸಮನ್ವಯ, ಹುಬ್ಬಳ್ಳಿ

ಪಿಯುಬಿ/127/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway - SWR | SWRRLY | SWRRLY

ಭಾರತ ಸರ್ಕಾರ

ಸಾಲ ವಸೂಲಾತಿ ನ್ಯಾಯಾಧಿಕರಣ-2, ಬೆಂಗಳೂರು

4ನೇ ಮಹಡಿ, ಬಿಎಂಟಿಸಿ ಬಿಲ್ಡಿಂಗ್, ಶಾಂತಿನಗರ, ಬೆಂಗಳೂರು-560 001

ಮಾರಾಟ ಉದ್ಘೋಷಣೆ ಮತ್ತು ಇ- ಹರಾಜು ಸೂಚನೆ ಫಾರಂ ನಂ–22

ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲ್‌ನ ನಿಯಮ 52(2)ರ ಅಡಿ ರಿಕವರಿ ಆಫ್ ಡೆಟ್ಸ್ ಅಂಡ್ ಬ್ಯಾಂಕ್ರಪ್ಟ್ಸಿ ಆಕ್ಟ್ 1993ರ ಅನ್ವಯ ಮಾರಾಟ ಪ್ರಕಟಣೆ

ಆರ್‌ಸಿ ನಂ. 95/2022 ಒ ಎ. ನಂ.1856/2020

ಕರ್ನಾಟಕ ಬ್ಯಾಂಕ್ ಲಿ., ನೆಲಮಂಗಲ ಶಾಖೆ ....ಸರ್ಟಿಫಿಕೇಟ್ ಹೋಲ್ಡರ್ ಬ್ಯಾಂಕ್

V/s.

ಶ್ರೀ ಬಸವರಾಜ ಮತ್ತು ಇತರರು ....ಸರ್ಟಿಫಿಕೇಟ್ ಡೆಟರ್ (CDs)

ಗೆ: ಸರ್ಟಿಫಿಕೇಟ್ ಡೆಟರ್ಸ್: 1.ಶ್ರೀ ಬಸವರಾಜ S/o. ಲೇಟ್ ಲಕ್ಕಣ್ಣ, ಹ್ಯಾಗನಹಳ್ಳಿ, ಬ್ಯಾಲಕೆರೆ ಅಂಚೆ- 562 127, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ರಾಮನಗರ ಜಿಲ್ಲೆ. 2. ಕುಮಾರಿ ಸೋಣಾಲಿ D/o. ಬಸವರಾಜ, ಹ್ಯಾಗನಹಳ್ಳಿ, ಬ್ಯಾಲಕೆರೆ ಅಂಚೆ- 562 127, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ರಾಮನಗರ ಜಿಲ್ಲೆ. 3. ಕುಮಾರ ಬಸವರಾಜ S/o. ಬಸವರಾಜ, ಹ್ಯಾಗನಹಳ್ಳಿ, ಬ್ಯಾಲಕೆರೆ ಅಂಚೆ- 562 127, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ರಾಮನಗರ ಜಿಲ್ಲೆ. (ಸಿಡಿ ನಂ. 2 ಮತ್ತು 3 ಅವರು ಮೈನರ್ ಆಗಿರುವುದರಿಂದ ಅವರ ತಂದೆ ಮತ್ತು ಸ್ವಾಭಾವಿಕ ಪೋಷಕರಾದ ಶ್ರೀ ಬಸವರಾಜ ಅವರು ಪ್ರತಿನಿಧಿಸುತ್ತಾರೆ). 4.ಶ್ರೀ ಮಂಜುಳ S/o. ಲೇಟ್ ಲಕ್ಕಣ್ಣ, ಹ್ಯಾಗನಹಳ್ಳಿ, ಬ್ಯಾಲಕೆರೆ ಅಂಚೆ- 562 127, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ರಾಮನಗರ ಜಿಲ್ಲೆ. 5. ಕುಮಾರ ದಿವ್ಯಶ್ರೀ D/o. ಮಂಜುಳ್, ಹ್ಯಾಗನಹಳ್ಳಿ, ಬ್ಯಾಲಕೆರೆ ಅಂಚೆ- 562 127, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ರಾಮನಗರ ಜಿಲ್ಲೆ. 6. ಶ್ರೀ ದರ್ಶನ್ S/o. ಮಂಜುಳ್, ಹ್ಯಾಗನಹಳ್ಳಿ, ಬ್ಯಾಲಕೆರೆ ಅಂಚೆ- 562 127, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ರಾಮನಗರ ಜಿಲ್ಲೆ. 7.ಶ್ರೀ ಮುದ್ದರಾಜು S/o. ಲೇಟ್ ಲಕ್ಕಣ್ಣ, ಹ್ಯಾಗನಹಳ್ಳಿ, ಬ್ಯಾಲಕೆರೆ ಅಂಚೆ- 562 127, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ರಾಮನಗರ ಜಿಲ್ಲೆ. 8.ಮಾಸ್ಟರ್ ಚೇತನ್ S/o. ಮುದ್ದರಾಜು, ಮೈನರ್ ಆಗಿರುವುದರಿಂದ ಅವರ ತಂದೆ ಮತ್ತು ಸ್ವಾಭಾವಿಕ ಪೋಷಕರಾದ ಶ್ರೀ ಮುದ್ದರಾಜು ಅವರು ಪ್ರತಿನಿಧಿಸುತ್ತಾರೆ. 9.ಶ್ರೀ ರಂಗ S/o. ಲೇಟ್ ಲಕ್ಕಣ್ಣ, ಹ್ಯಾಗನಹಳ್ಳಿ, ಬ್ಯಾಲಕೆರೆ ಅಂಚೆ- 562 127, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ರಾಮನಗರ ಜಿಲ್ಲೆ.

....ಸರ್ಟಿಫಿಕೇಟ್ ಡೆಟರ್ಸ್

ಕೆಳಗೆ ಸೂಚಿಸಿರುವ ಆಸ್ತಿಯನ್ನು ವೆಬ್‌ಸೈಟ್ www.foreclosure india.com ಮುಖಾಂತರ ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್ ಮೂಲಕ ದಿನಾಂಕ 30.06.2025 ರಂದು ಬ್ಯಾಂಕಿಗೆ ಬರಬೇಕಾದ ಬಾಕಿ ಮೊತ್ತ ರೂ.54,50,000/- (ರೂಪಾಯಿ ಐವತ್ತ ನಾಲ್ಕು ಲಕ್ಷ ಐವತ್ತು ಸಾವಿರ ಮಾತ್ರ) ಮತ್ತು ದಿನಾಂಕ 15.02.2025 ರಂತೆ ಮತ್ತು ದಿನಾಂಕ 16.02.2025 ರಿಂದ ಖರ್ಚು ಮತ್ತು ಬಡ್ಡಿಯನ್ನು ಹೊರತುಪಡಿಸಿ ತಹಲ್‌ವರೆಗಿನ ಮೊತ್ತ ಹಾಗೂ ವೆಚ್ಚ ಇತ್ಯಾದಿಗಳನ್ನು ರಿಕವರಿ ಸರ್ಟಿಫಿಕೇಟ್ ಆರ್‌ಸಿ ನಂ. 95/2022 ಮತ್ತು ಒ.ಎ. ನಂ. 1856/2020 ರಂತೆ ವಸೂಲಿಮಾಡಲು ಮಾರಾಟ ಮಾಡಲಾಗುವುದು.

ಹರಾಜು ಮಾರಾಟದ ದಿನಾಂಕ ಮತ್ತು ಸಮಯ	ದಿನಾಂಕ 30.06.2025 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ಘಂಟೆಯ ನಡುವೆ
ಮೀಸಲು ಬೆಲೆ	ರೂ.75,00,000/- (ರೂಪಾಯಿ ಎಪ್ಪತ್ತೈದು ಲಕ್ಷ ಮಾತ್ರ)
ಮುಂಗಡ ಠೇವಣಿ (ಇಎಂಡಿ)	ರೂ.7,50,000/- (ರೂಪಾಯಿ ಏಳು ಲಕ್ಷ ಐವತ್ತು ಸಾವಿರ ಮಾತ್ರ)
ಬಿಡ್ ಮೊತ್ತದ ಹೆಚ್ಚಿಸುವಿಕೆ	ರೂ.1,00,000/-(ರೂಪಾಯಿ ಒಂದು ಲಕ್ಷ ಮಾತ್ರ)
ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ 24.06.2025 ರಂದು ಬೆಳಿಗ್ಗೆ 11.59 ಗಂಟೆ ಒಳಗೆ

ಆಸ್ತಿಯ ವಿವರ: ಅರ್ಜಿದಾರ ಬ್ಯಾಂಕಿಗೆ ಅಡಮಾನ ಮಾಡಿರುವ ಆಸ್ತಿ:

ಐಟಂ ನಂ. 1 : ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ, ಹ್ಯಾಗನಹಳ್ಳಿ ಗ್ರಾಮ ಇಲ್ಲಿ ಸರ್ವೆ ನಂ. 44/1ರಲ್ಲಿರುವ 13 ಗುಂಟೆ ಕೃಷಿ ಆಸ್ತಿ, ಈ ಜಮೀನಿನ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಬಸವರಾಜುರವರ ಮನೆ, ಉತ್ತರಕ್ಕೆ: ಲಕ್ಕಣ್ಣನವರ ಜಮೀನು, ದಕ್ಷಿಣಕ್ಕೆ: ಸಂಜೀವಯ್ಯನವರ ಜಮೀನು.

ಮಾರಾಟದ ನಿಯಮ ಮತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ www.foreclosureindia.com ಅನ್ನು ಸಂದರ್ಶಿಸಬಹುದು. ಹೆಚ್ಚಿನ ವಿವರಗಳಿಗೆ (ಸಂಪರ್ಕಿಸಿ : ಶ್ರೀ ಜಯಪ್ರಕಾಶ್ ರೆಡ್ಡಿ – 8142000809, 8142000066) e-mail Id : dinesh@ bankauctions.in., info@bankauctions.in ಹೆಚ್ಚಿನ ವಿವರಗಳಿಗೆ ಶ್ರೀ ಹರೀಶ, ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್ ಲಿ., ನೆಲಮಂಗಲ ಶಾಖೆ, (ಸಂಪರ್ಕಿಸುವ ಸಂಖ್ಯೆ :9741777409 (ಬಿಎಂ), 9663376808 (ಎಬಿಎಂ), 080-27722668 (ಸಾಮಾನ್ಯ) ಶಾಖೆಯ e-Mail ID : blr.nelamangala@ktkbank.com

ನನ್ನ ಸಹಿಯೊಂದಿಗೆ ಮತ್ತು ನ್ಯಾಯಾಧಿಕರಣದ ಮೊಹರಿನೊಂದಿಗೆ ದಿನಾಂಕ 08.05.2025ರಂದು ನೀಡಲಾಗಿದೆ.

ಸಹಿ/-
ವಸೂಲಾತಿ ಅಧಿಕಾರಿ-1,
ಸಾಲವಸೂಲಾತಿ ನ್ಯಾಯಾಧಿಕರಣ- 2, ಬೆಂಗಳೂರು

ನಕಲಿ ಪ್ರಮಾಣಪತ್ರ: ಡಾ.ಶಂಕರ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ವೈದ್ಯಕೀಯ ಪ್ರಮಾಣಪತ್ರ ವಿತರಣೆ ಹಾಗೂ ಭ್ರಷ್ಟಾಚಾರದ ಆರೋಪದ ಮೇಲೆ ವಿಕ್ಟೋರಿಯಾ ಆಸ್ಪತ್ರೆಯ ತುರ್ತುಚಿಕಿತ್ಸಾ ವೈದ್ಯಾಧಿಕಾರಿ ಡಾ. ಶಂಕರ್ ಕೆ.ಎನ್. ಅವರನ್ನು ವೈದ್ಯಕೀಯ ಶಿಕ್ಷಣ ಇಲಾಖೆ ಅಮಾನತು ಮಾಡಿದೆ.

ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್ ಈ ಬಗ್ಗೆ ಆದೇಶ ಹೊರಡಿಸಿದ್ದಾರೆ.

'ಡಾ. ಶಂಕರ್ ಕೆ.ಎನ್. ಅವರು ನಕಲಿ ವೈದ್ಯಕೀಯ ಪ್ರಮಾಣಪತ್ರ ನೀಡುತ್ತಿರುವುದು ಹಾಗೂ ಭ್ರಷ್ಟಾಚಾರ ನಡೆಸಿರುವ ಬಗ್ಗೆ ಖಾಸಗಿ ಸುದ್ದಿ ವಾಹಿನಿಯೊಂದು ಪ್ರಸಾರ ಮಾಡಿದೆ. ಈ ಪ್ರಕರಣದಲ್ಲಿ ದೊರಕಿದ ದಾಖಲೆಗಳು ಹಾಗೂ ಘಟನೆಯನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಆರೋಪ ಎಸಗಿದಂತೆ ಕಂಡುಬಂದಿದೆ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ತಕ್ಷಣ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಅವರನ್ನು ಅಮಾನತಿನಲ್ಲಿ ಇರಿಸಲಾಗುವುದು' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

'ಕೊಳಚೆ ಪ್ರದೇಶಗಳ ಸಮೀಕ್ಷೆ ನಡೆಸಿ'

ಬೆಂಗಳೂರು: ಬೆಂಗಳೂರು ನಗರದಲ್ಲಿ ಮೂರು ನಾಲ್ಕು ದಿನಗಳಿಂದ ಸುರಿದ ಮಳೆಯಿಂದಾಗಿ ಜಲಾವೃತಗೊಂಡ ಘೋಷಿತ ಹಾಗೂ ಅಘೋಷಿತ ಕೊಳೆಗೇರಿಗಳ ಸಮಗ್ರ ಸಮೀಕ್ಷೆ ನಡೆಸಬೇಕು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ–ಲೆನಿನ್‌ವಾದಿ) ಲಿಬರೇಷನ್ ಆಗ್ರಹಿಸಿದೆ.

'ಸತತ ಮಳೆಯಿಂದ ಕೊಳಚೆ ಪ್ರದೇಶಗಳಲ್ಲಿ ನೀರು ಸಂಗ್ರಹಗೊಂಡು ಜನಜೀವನ ಅಸ್ತವ್ಯಸ್ತಗೊಂಡಿದೆ. ಸಂಕಷ್ಟದಲ್ಲಿರುವ ನಿವಾಸಿಗಳಿಗೆ ಪಡಿತರ, ಬಟ್ಟೆ, ಹಾಸಿಗೆ ಸೇರಿದಂತೆ ಅಗತ್ಯ ವಸ್ತುಗಳನ್ನು ಪೂರೈಸಬೇಕು. ಇಲ್ಲಿನ ನಿವಾಸಿಗಳ ಮನೆ, ಆಸ್ತಿಗೆ ಹಾನಿಯಾಗಿದ್ದು, ಇದಕ್ಕೆ ಕೂಡಲೇ ಪರಿಹಾರ ನೀಡಬೇಕು' ಎಂದು ಲಿಬರೇಷನ್ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮೈತ್ರೇಯಿ ಕೃಷ್ಣನ್ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

23ರಂದು ಮೆಟ್ರೊ ವಿಸ್ತರಣೆ ಇಲ್ಲ

ಬೆಂಗಳೂರು: ಚಿನ್ನಸ್ವಾಮಿ ಮೈದಾನದಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯ ನಿಗದಿಪಡಿಸಿದ್ದರಿಂದ ಮೇ 23ರಂದು ನಮ್ಮ ಮೆಟ್ರೊ ಅವಧಿಯನ್ನು ವಿಸ್ತರಿಸಲಾಗಿತ್ತು. ಪಂದ್ಯವನ್ನು ಲಖನೌಗೆ ಸ್ಥಳಾಂತರಿಸಿರುವುದರಿಂದ ಮೆಟ್ರೊ ಅವಧಿ ವಿಸ್ತರಣೆಯನ್ನು ರದ್ದು ಪಡಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ ಎಂದಿನಂತೆ ಕೊನೇ ಮೆಟ್ರೊ ರೈಲುಗಳು ರಾತ್ರಿ 11.30ಕ್ಕೆ ಮೆಜೆಸ್ಟಿಕ್‌ನಿಂದ ನಾಲ್ಕು ಟರ್ಮಿನಲ್‌ಗಳ ಕಡೆಗೆ ಸಂಚರಿಸಲಿವೆ ಎಂದು ನಮ್ಮ ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ಜನೌಷಧಿ ತೆರವಿಗೆ ಷಡ್ಯಂತ್ರ: ಬಿಜೆಪಿ

ಬೆಂಗಳೂರು: ರಾಜ್ಯ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಜನೌಷಧಿ ಮಳಿಗೆಗಳನ್ನು ತೆರವು ಮಾಡಲು ಆದೇಶ ಹೊರಡಿಸಿರುವುದು ಖಂಡನೀಯ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ಯೋಜನೆಗಳು ಕನ್ನಡಿಗರಿಗೆ ಸಿಗದಂತೆ ಮಾಡಲು ಭ್ರಷ್ಟ ಕಾಂಗ್ರೆಸ್ ಸರ್ಕಾರ ಷಡ್ಯಂತ್ರ ರೂಪಿಸಿದೆ' ಎಂದು ದೂರಿದ್ದಾರೆ.

'ಕೇಂದ್ರ ಸರ್ಕಾರದ ಯೋಜನೆಗಳು ರಾಜ್ಯದ ಜನರಿಗೆ ಸಿಗದಂತೆ ಕಾಂಗ್ರೆಸ್ ಮಾಡುತ್ತಿದೆ. ಇದೀಗ ಅನಾರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ರೋಗಿಗಳಿಗೆ ಕಡಿಮೆ ದರದ ಔಷಧಿಗಳು ಸಿಗದಂತೆ ಮಾಡಿದ್ದಾರೆ' ಎಂದು ವಿಜಯೇಂದ್ರ ಹೇಳಿದ್ದಾರೆ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ DIAGEO India

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001
ಫೋನ್: +91 80 22210705; ಫ್ಯಾಕ್ಸ್: +91 80 2224 5253
ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಸೂಚನೆ

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ("ಕಂಪನಿ") ಈ ಕೆಳಗಿನವುಗಳಿಗೆ ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ: 1) ಶ್ರೀ ಪ್ರವೀಣ್ ಸೋಮೇಶ್ವರ್ ಅವರನ್ನು ಕಂಪನಿಯ ನಿರ್ದೇಶಕರಾಗಿ ನೇಮಕ ಮಾಡುವುದು. 2) ಶ್ರೀ ಪ್ರವೀಣ್ ಸೋಮೇಶ್ವರ್ ಅವರನ್ನು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕ ಮಾಡುವುದು ಮತ್ತು ಐದು ವರ್ಷಗಳ ಅವಧಿಗೆ ಅವರಿಗೆ ಪಾವತಿಸಬೇಕಾದ ಸಂಭಾವನೆಯ ಅನುಮೋದನೆ. ಸದಸ್ಯರ ಅನುಮೋದನೆಯನ್ನು ದೂರಸ್ಥ ಇ–ಮತದಾನದ ಮೂಲಕ ಅಂಚೆ ಮತಪತ್ರದ ಮೂಲಕ ಪಡೆಯಲಾಗುತ್ತಿದೆ.

ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 108 ಮತ್ತು 110ರ ಅನುಸಾರವಾಗಿ (ಸದ್ಯಕ್ಕೆ ಜಾರಿಯಲ್ಲಿರುವ ಇದುವರೆಗಿನ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಮರು–ಅನುಷ್ಠಾನಗಳ ಸಹಿತ) (ಕಾಯ್ದೆ), ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014ರ ನಿಯಮ 20 ಮತ್ತು 22ರೊಂದಿಗೆ ಓದಿ ('ನಿಯಮಗಳು') ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು ('ಎಂಸಿಎ') ಸೂಚಿಸಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ಇ–ವೋಟಿಂಗ್ ಮೂಲಕ ಸಾಮಾನ್ಯ ಸುತ್ತೋಲೆ ಸಂಖ್ಯೆ. 09/2024 ದಿನಾಂಕ 19ನೇ ಸೆಪ್ಟೆಂಬರ್, 2024ರಂದು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ('ಎಂಸಿಎ ಸುತ್ತೋಲೆಗಳು'), ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 ದಿನಾಂಕ 3ನೇ ಅಕ್ಟೋಬರ್ 2024 ರಂದು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ ನಿಯಮ 44 (ಲಿಸ್ಟಿಂಗ್ ಹೊಣೆಗಾರಿಕೆ ಮತ್ತು ಘೋಷಣಾ ಅಗತ್ಯಗಳು) ನಿಯಮಗಳು, 2015, ('ಪಟ್ಟಿ ನಿಯಮಗಳು'), ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡ ('ಎಸ್‌ಎಸ್–2') ಮತ್ತು ಕಾಯ್ದೆಯ ಇತರ ಅನ್ವಯವಾಗುವ ನಿಬಂಧನೆಗಳು, ನಿಯಮಗಳು, ಸುತ್ತೋಲೆಗಳು ಮತ್ತು ಅದರ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಗಳ ಅಡಿಯಲ್ಲಿ, ಕಂಪನಿಯು 21ನೇ ಮೇ 2025ರಂದು ಯಾವ ಸದಸ್ಯರ ಹೆಸರು ಕಂಪನಿ / ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ರೊಂದಿಗೆ ('ಡಿಪಿಗಳು') ತಮ್ಮ ಇಮೇಲ್ ನೀಡಿರುವವರಿಗೆ ನ್ಯಾಶನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ('ಎನ್‌ಎಸ್‌ಡಿಎಲ್') ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ('ಸಿಡಿಎಸ್‌ಎಲ್') ನಿಂದ ಶುಕ್ರವಾರ 9ನೇ ಮೇ 2024 ('ಕಟ್–ಆಫ್ ದಿನಾಂಕ') ಸ್ವೀಕರಿಸಿದಂತೆ ಸದಸ್ಯರ ನೋಂದಣೆ/ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಇಮೇಲ್ ವಿಳಾಸಗಳು ದಾಖಲಿಸಿರುವ ಸದಸ್ಯರಿಗೆ ಎಲೆಕ್ಟ್ರಾನಿಕ್ ಮೋಡ್ ಮೂಲಕ ಅಂಚೆ ಮತಪತ್ರ ನೋಟೀಸನ್ನು ಕಳುಹಿಸಿದೆ.

ಅಂಚೆ ಮತದಾನದ ನೋಟೀಸು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಹಾಗೂ ಷೇರು ವಿನಿಮಯ ಕೇಂದ್ರಗಳಾದ ಬಿಎಸ್‌ಇ ಲಿಮಿಟೆಡ್ ('ಬಿಎಸ್‌ಇ') ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ('ಎನ್‌ಎಸ್‌ಇ')ಗಳ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ಗಳಲ್ಲಿ ಹಾಗೂ ಸಿಡಿಎಸ್‌ಎಲ್‌ನ www.evotingindia.com ಗಳಲ್ಲಿ ಲಭ್ಯವಿದೆ.

ಸದಸ್ಯರ ದಾಖಲೆ ಪುಸ್ತಕ / ಕಟ್–ಆಫ್ ದಿನಾಂಕದಲ್ಲಿದ್ದಂತೆ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರು ಇರುವ ಸದಸ್ಯರು ನೋಟೀಸಿನಲ್ಲಿ ನಿಗದಿಪಡಿಸಿದ ಗೊತ್ತುವಳಿಗೆ ಮತ ಚಲಾಯಿಸಬಹುದು. ಸದಸ್ಯರ ಮತ ನೀಡುವ ಅಧಿಕಾರವು ಅವರು ಹೊಂದಿರುವ ಪ್ರಮಾಣದ ಪೂರ್ಣಪಾವತಿಯಾದ, ಕಂಪನಿಯ ಈಕ್ವಿಟಿ ಷೇರು ಬಂಡವಾಳದ, ಕಟ್–ಆಫ್ ದಿನಾಂಕದಲ್ಲಿದ್ದ ಷೇರುಗಳನ್ನು ಅವಲಂಬಿಸಿರುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ಅಂಚೆ ಮತಪತ್ರ ಪ್ರಕಟಣೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು.

ಕಂಪನಿಯು ತನ್ನ ಸದಸ್ಯರಿಗೆ ಪರೋಕ್ಷ ಇ–ವೋಟಿಂಗ್ ಸೌಲಭ್ಯ ಒದಗಿಸಲು ಸಿಡಿಎಸ್‌ಎಲ್ ಸೇವೆಯನ್ನು ಪಡೆದುಕೊಂಡಿದೆ. ಪರೋಕ್ಷ ಮತದಾನವು ಗುರುವಾರ 22ನೇ ಮೇ, 2025ರಂದು ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗಿ 20ನೇ ಜೂನ್ 2025 ಶುಕ್ರವಾರ ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯವಾಗುತ್ತದೆ. ಪರೋಕ್ಷ ಇ–ವೋಟಿಂಗ್ ಮಾಡ್ಯೂಲ್ ವ್ಯವಸ್ಥೆಯು ನಂತರ ಸಿಡಿಎಸ್‌ಎಲ್ ನಿಂದ ನಿಷ್ಕ್ರಿಯ ಮಾಡಲ್ಪಡುವುದು. ಸದಸ್ಯರು ಒಮ್ಮೆ ಗೊತ್ತುವಳಿಗೆ ಮತ ಚಲಾಯಿಸಿದ ನಂತರ ಅದನ್ನು ಬದಲಿಸಲು ಅವಕಾಶವಿರುವುದಿಲ್ಲ.

ಇ–ಮೇಲ್ ವಿಳಾಸ ನೋದಾಯಿಸಿಲ್ಲದ ಸದಸ್ಯರು ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ)/ಡಿಪಿಗಳ ಬಳಿ ನೋದಾವಣೆ ಮಾಡಬಹುದು. ಇ–ಮೇಲ್ ವಿಳಾಸ ನೋಂದಾಯಿಸುವ ಹಾಗೂ ಪರೋಕ್ಷ ಇ–ವೋಟಿಂಗ್ ಮಾಡುವ ವಿಧಾನಗಳು ನೋಟೀಸಿನಲ್ಲಿ ಲಭ್ಯವಿವೆ.

ಶ್ರೀ ಸುಧೀರ್ ವಿ ಹುಲ್ಯಾಳ್ಕರ್, ಕಂಪನಿ ಸೆಕ್ರೆಟರಿ ಪ್ರಾಕ್ಟೀಸ್ ವಿಫಲವಾದಲ್ಲಿ ಶ್ರೀ ಸುಧೀಂದ್ರ ಕೆ ಎಸ್ ಕಂಪನಿ ಸೆಕ್ರೆಟರಿ ಅವರನ್ನು ಅಂಚೆ ಮತಪತ್ರದ ಮೂಲಕ ಚಲಾವಣೆಯಾದ ಮತಗಳನ್ನು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯಲ್ಲಿ ನ್ಯಾಯಯುತ ಮತ್ತು ಪಾರದರ್ಶಕವಾಗಿ ಪರಿಶೀಲಿಸಲು ಪರಿಶೀಲಕರನ್ನಾಗಿ ನೇಮಿಸಲಾಗಿದೆ.

ಅಂಚೆ ಮತದಾನದ ಫಲಿತಾಂಶವನ್ನು ಮಂಗಳವಾರ 24ನೇ ಜೂನ್ 2025ರಂದು ಅಥವಾ ಅದಕ್ಕೆ ಮುಂಚಿತವಾಗಿ ಘೋಷಿಸಲಾಗುವುದು. ಫಲಿತಾಂಶವನ್ನು ಪರಿಶೀಲಕರ ವರದಿಯೊಂದಿಗೆ ಬಿಎಸ್‌ಇ ಮತ್ತು ಎನ್‌ಎಸ್‌ಇ ಗೆ ಕಳುಹಿಸಲಾಗುವುದು ಹಾಗೂ ಕಂಪನಿಯ ವೆಬ್ ಸೈಟ್ www.diageoindia.com ಮತ್ತು ಸಿಡಿಎಸ್‌ಎಲ್‌ನ ವೆಬ್ ಸೈಟ್ www.evotingindia.com ಗಳಲ್ಲಿ ಅಪ್ಲೋಡ್ ಮಾಡಲಾಗುವುದು.

ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು helpdesk.evoting@cdslindia.com ಗೆ ಇಮೇಲ್ ಬರೆಯಬಹುದು ಅಥವಾ ಟೋಲ್ ಫ್ರೀ ಸಂಖ್ಯೆ 18002109911ಗೆ ಸಂಪರ್ಕಿಸಬಹುದು ಅಥವಾ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್, ಎ ವಿಂಗ್, 25ನೇ ಮಹಡಿ, ಮ್ಯಾರಥಾನ್ ಫ್ಯೂಚರ್ಕ್ಸ್, ಮಫತ್ಲಾಲ್ ಮಿಲ್ ಕಾಂಪೌಂಡ್ಸ್, ಎನ್ ಎಂ ಜೋಶಿ ಮಾರ್ಗ್, ಲೋವರ್ ಪರೇಲ್ (ಪೂರ್ವ), ಮುಂಬೈ – 400013 ನಲ್ಲಿ ಶ್ರೀ ರಾಕೇಶ್ ದಳವಿ, ಸೀನಿಯರ್ ಮ್ಯಾನೇಜರ್, (CDSL) ಅವರಿಗೆ ವಿನಂತಿಯನ್ನು helpdesk.evoting@cdslindia.com ಗೆ ಕಳುಹಿಸಬಹುದು.

ಸದಸ್ಯರು ನೋಟೀಸಿನಲ್ಲಿ ವಿವರಿಸಿರುವ ಎಲ್ಲಾ ಟಿಪ್ಪಣೆಗಳನ್ನು ಗಮನವಿಟ್ಟು ನೋಡಲು ವಿಶೇಷವಾಗಿ ಪರೋಕ್ಷ ಇ–ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನವನ್ನು ಗಮನವಿಟ್ಟು ಓದಿಕೊಳ್ಳಲು ಕೋರಲಾಗಿದೆ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ

ಸ್ಥಳ : ಬೆಂಗಳೂರು
ದಿನಾಂಕ : 21ನೇ ಮೇ, 2025

ಮಿತ್ತಲ್ ಸಂಘ್ವಿ
ಕಂಪನಿ ಕಾರ್ಯದರ್ಶಿ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

PANCHAJANYA VIDYA PEETHA WELFARE TRUST (R)
1st "N" Block, Rajajinagar, Bengaluru-10 and Dr. Ambedkar Institute of Technology, Mallathahalli, BDA Outer Ring Road, Near Jnanabharathi, Bengaluru-56.

WALK-IN-INTERVIEW
Appointments of Management Cadres
Applications are invited for the following posts in the institutions of PVP Welfare Trust.

1. Degree Colleges Day & Evening, Mallathahalli — Principal-1 Post
2. Degree College (Evening), Rajajinagar & PU College, AD Halli — Principal - 1 Post
3. High School Teacher Posts
   - Social Science - 3 Posts
   - Science (CBZ) - 1 Post
   - Physical Education - 1 Post
   - Hindi - 1 Post
   - Mathematics - 1 Post
   - Kannada - 1 Post
4. Primary School Teacher Posts
   - Head Master - 2 Posts
   - Science (PCM) Teacher - 1 Post
   - Social Science Teacher - 1 Post

Qualification, Experience and Age As per UGC and C&R rules of Government of Karnataka. Salary - Negotiable. Interested candidates may apply and attend WALK-IN-INTERVIEW on 29/05/2025 at 10.30 am with a written application along with photo copies of all the documents to "The Managing Trustee/Secretary, PVP Welfare Trust, Dr. AIT Campus, Bengaluru- 560056. P#9845257643

Sd/-
Secretary, PVP Welfare Trust

Drivers

ಡ್ರೈವರರು ಬೇಕಾಗಿದ್ದಾರೆ
ಬೆಂಗಳೂರು ನಗರದೊಳಗೆ ಚಲಾಯಿಸಲು.
TATA 407 ಮತ್ತು TATA ACE ಕಮರ್ಷಿಯಲ್ ಗಾಡಿಗಳಿಗೆ
ಕೆಲಸದ ಸಮಯ: ಸೋಮ–ಶನಿವಾರ ಬೆಳಿಗ್ಗೆ 10.00 – 6.30 ತನಕ
ಮೂಲ ಸಂಬಳ – ರೂ. 19000 – ಇ.ಎಸ್.ಐ (145) = ರೂ. 18855
ಸಂದರ್ಶನಕ್ಕೆ ಆಧಾರ್, ಡಿ.ಎಲ್ ಮತ್ತು ಫೋಟೋ ಸಮೇತ ಬನ್ನಿ:
ಪ್ಯಾನ್ ಆಫೀಸ್ ಸಿಸ್ಟಮ್ಸ್ ಪ್ರೈ.ಲಿ.
ನಂ. 5, ಒಂದನೇ "ಅ" ಕ್ರಾಸ್, ಬಿಸ್ಮಿಲ್ಲಾನಗರ್, ಬನ್ನೇರುಘಟ್ಟ ರಸ್ತೆ ಕ್ರಾಸ್, ಬೆಂಗಳೂರು–29.
Ph: 9341221125
ಬೆಂಗಳೂರಿನ ಹೊರಗೆ ವಾಸಿಸುವರು, ದಯವಿಟ್ಟು ಕರೆ ಮಾಡಬೇಡಿ

DH Classifieds | ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com BOOK NOW
*Conditions apply
For more details contact:
9731810277
9886213331
9845114560

PUBLIC NOTICE

PUBLIC NOTICE
I,VIKRAM KRISHNAMURTHY, aged about 59 years, S/o Late E.V.Krishnamurthy, No.122, 3rd Main, 1st Block, Dollars Colony, RMV 2nd Stage, Bangalore-560 094, the owner of the Property described in the schedule hereunder and herein after referred to as the

SCHEDULE PROPERTY.

I hereby notify that the Original Allotment Letter No.Bk/122/RMV/II/1981-82 dated 01.03.1982 and the Original Possession Certificate No.122/1983-84 dated 27.05.1983 issued by the Bangalore Development Authority with respect of the Schedule Property have been lost and despite my best efforts I could not find the same. And therefore I have lodged Complaints on 16.05.2025 Vide Lost Report No.1610456/2025 and No.1610477/2025 Public are hereby cautioned not to deal with any person with regard to Schedule Property or the lost Allotment Letter No.122/RMV/II/1981-82 dated 01.03.1982 and the Possession Certificate No.122/1983-84 dated 27.05.1983 and such dealing if any shall be the sole risk of the person so dealing with and I shall not be bound in any manner. I also request the finder of the said lost Original Allotment Letter No.Bk/122/RMV/II/1981-82 dated 01.03.1982 and the Original Possession Certificate No.122/1983-84 dated 27.05.1983 to return the same to me immediately

SCHEDULE PROPERTY

All that piece and parcel of the immovable property bearing Site No.122, Present BBMP EPID No.4819812471 (old BBMP PID No.99-151-122), measuring East to West 28.00 Mtrs and North to South 15.00 Mtrs., totally measuring 420 Sq. Mtrs = 4521 Sq. Ft., situated at Rajmahal Vilas,II Stage Extension (Southern Side), 1st Block, Ashwathanagar, Bangalore-560 094, Present BBMP Aramane Nagara Ward No.35, consisting therein 1550 Sq. Ft of residential building with civic amenities and bounded on the;

East by : Site No.163;
West by : Road;
North by : Site No.121;
South by : Site No.123

(VIKRAM KRISHNAMURTHY)
DATE : 16-05-2025
MOBILE No: 98450 44872
Mahesh Devraj. SPA Holder

BUSINESS

Business to Business

Business

VIZAG (VISAKHAPATNAM) Biggest City of Andhra. Want to start Any Business/ Buy Apartments/ RE/ Schools Arranging Big Finances. Excellent Guidance. Radhika Projects/ Services. Dr Swamy Naidu:- 9342247637. Bangalore.

Business Offers

Finance

NRI'S Investment And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

ADMISSION CORNER

Sahakara Bhishma Shri K. H. Patil Memorial Trust's
K. H. PATIL SCHOOL OF LAW, BENGALURU
Affiliated to Karnataka State Law University, Hubballi / Approved by Bar Council of India
Grameena Bhavan, #6, 13th Cross Road, Jnanabharathi 2nd Block, BDA Layout, Amma Ashram Road, Bengaluru-98
Email: khpsl.blr@gmail.com | website: https://www.khplawschool.in

ADMISSIONS OPEN to 5 Years B.A., LL.B. & B.COM., LL.B. & 3 year LLB,

Eligibility: PUC or Equivalent with 45% Marks (40% for SC/ST) for 5 year LL.B. and Degree in any stream for 3 Year LL.B.).

How to apply: Eligible candidates may apply in person or by post in the prescribed form along with a prescribed fees of Rs.200/-. The forms are available at the college office. Those submitting application through post have to download the application form from the **website: https://www.khplawschool.in** and send it to the college with a online bank transfer to Acc No: 7823833175, IFSC: IDIB000T135 of Rs.200/- or Demand draft drawn in favour of The **Principal, K. H. Patil School of Law, Bengaluru.**

For Details Contact Principal: 90353 54809 / 77958 99712 or send e-mail tokhpsl.blr@gmail.com

Sd/- Principal

I, NAGARAJA Munishamappa, Residing at Avalagurki Village and Post, Chickballapur Taluk 562101 have changed my name to NAGARAJ AVALAGURKI MUNISHAMAPPA Vide Affidavit dated 20.05.2025 sworn before advocate and notary K.H. Venkatappa, Chickaballapur.

CHANGE OF NAME
I , Dr. G.B.PRAVEEN KUMAR & Dr. PRATHIBHA J P, R/a # D-20, Staff Quarters, St. John's Medical College Hospital, Bangalore-560 034, changed my daughter's name from MISHEETA P to MADHURASRI P, vide affidavit dated 11.05.2024 before notary B.M. Chandrashekar, Bangalore

CHANGE OF NAME
I, LEKSHMI BIJOY PILLAI W/o. Bijoy Pillai, R/a #2012, Tower-2, Prestige Willow Tree, 8th Main Road, Vidyaranyapura, Bengaluru-560097 have changed my Name to LEKSHMI BIJOY vide affidavit dated: 17.5.2025 Sworn before Notary S.R. Ravikumar, Bengaluru.

I PANKAJ KUMAR RAMESHCHAND R/a, #200, Srirama Road, Thyagarajanagar 2nd block, Bengaluru- 560070 Have Changed My Minor Son's Name From DHEER PANKAJ JAIN To DHEER JAIN vide Affidavit Dated 19/05/2025 before Notary B. Chitra Bangalore

I, NEELUPER JAVEED NEELUFER JAVEED, Residing at No.283, Ward No.9, Town Hall, Jamia Masid Road Chickballapur 562101 have changed my name to NEELUFER JAVEED Vide Affidavit dated 20.05.2025 sworn before advocate and notary K.H. Venkatappa, Chickaballapur.

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8970126393

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Change of Name

CHANGE OF NAME
I, PILLAI BIJOY RAGHAVAN S/o. Puthenveetil Sankaran Raghavan Pillai. R/a #2012, Tower-2, Prestige Willow Tree, 8th Main Road, Vidyaranyapura, Bengaluru-560097 have changed my Name to BIJOY PILLAI vide affidavit dated: 17.5.2025 Sworn before Notary S.R. Ravikumar, Bengaluru.

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
For more details contact:
+91 9731810277 | +91 9845114560 | +91 9900428036



₹14 ಕೋಟಿ ವೆಚ್ಚದಲ್ಲಿ ಮತ್ಸ್ಯಾಲಯದ ಮರು ಅಭಿವೃದ್ಧಿ

ಬಣ್ಣದ ಮೀನು... ಬನ್ನಿ ನೋಡೋಣು

ಮತ್ಸ್ಯಾಲಯದ ಎರಡನೇ ಅಂತಸ್ತಿನ ಅಕ್ವೇರಿಯಂಗಳಲ್ಲಿನ ಆಲಂಕಾರಿಕ ಮೀನುಗಳನ್ನು ಸಾರ್ವಜನಿಕರು ವೀಕ್ಷಿಸಿದರು ಚಿತ್ರಗಳು: ರಂಜು ಪಿ.

ಆಲಂಕಾರಿಕ ಮೀನುಗಳನ್ನು ಪುಟಾಣಿಗಳು ಕುತೂಹಲದಿಂದ ವೀಕ್ಷಿಸಿದರು

ಮುಖ್ಯಾಂಶಗಳು

- ಸಮುದ್ರದಾಳದ ಅನುಭವ ನೀಡುವ 'ಟನಲ್ ಅಕ್ವೇರಿಯಂ'
- ಅಮೆಜಾನ್ ನದಿಯಲ್ಲಿ ಕಂಡುಬರುವ ಪಿರಾನ ಮೀನುಗಳ ಆಕರ್ಷಣೆ
- ವೈವಿಧ್ಯಮಯ ಅಲಂಕಾರಿಕ ಮೀನುಗಳ ಕಲರವ

● ಖಲೀಲಅಹ್ಮದ ಶೇಖ

ಬೆಂಗಳೂರು: ಜಪಾನಿನ ಕೋಯಿ ಫಿಶ್‌ಗಳ ಕೊಳ, ಅಮೆಜಾನ್ ನದಿಯಲ್ಲಿ ಕಂಡುಬರುವ ಪಿರಾನ ಮೀನುಗಳು, ಅಂತರರಾಷ್ಟ್ರೀಯ ಮಟ್ಟದ ಸುರಂಗ (ಟನಲ್) ಅಕ್ವೇರಿಯಂ, ಸಮುದ್ರದ ತರಹೇವಾರಿ ಆಲಂಕಾರಿಕ ಮೀನುಗಳು.. ಇವೆಲ್ಲವನ್ನೂ ಒಂದೇ ಸ್ಥಳದಲ್ಲಿ ನೋಡುವ ಅವಕಾಶವನ್ನು ನಮ್ಮ ಬೆಂಗಳೂರು ಅಕ್ವೇರಿಯಂ ಸಂಸ್ಥೆ ಒದಗಿಸಿದೆ.

ಇದು ಕಸ್ತೂರಬಾ ರಸ್ತೆಯ ಕಬ್ಬನ್ ಉದ್ಯಾನದ ಆವರಣದಲ್ಲಿ ಹೊಸ ರೂಪದೊಂದಿಗೆ ಕಂಗೊಳಿಸುತ್ತಿರುವ 'ಸರ್ಕಾರಿ ಮತ್ಸ್ಯಾಲಯ'. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) 'ನಮ್ಮ ಬೆಂಗಳೂರು ಅಕ್ವೇರಿಯಂ' ಎಂಬ ಖಾಸಗಿ ಸಂಸ್ಥೆ ಹಳೆಯ ಸರ್ಕಾರಿ ಮತ್ಸ್ಯಾಲಯಕ್ಕೆ ಆಧುನಿಕ ಸ್ಪರ್ಶ ನೀಡಿದೆ. ಪ್ರದರ್ಶನದಲ್ಲಿ 110ಕ್ಕೂ ಹೆಚ್ಚಿನ ಆಲಂಕಾರಿಕ ಮೀನುಗಳಿವೆ. ನಿತ್ಯ ಸಾವಿರಾರು ಜನ ಭೇಟಿ ನೀಡುತ್ತಿದ್ದಾರೆ. ಪ್ರದರ್ಶನಕ್ಕಿಟ್ಟಿರುವ ವೈವಿಧ್ಯಮಯ ಸಾಕಾಣಿಕೆ ಮೀನುಗಳ ಕುರಿತು ಕುತೂಹಲಕರ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ.

ಟನಲ್ ಅಕ್ವೇರಿಯಂ: ಕಟ್ಟಡದ ಆವರಣದಲ್ಲಿ 75 ಸಾವಿರ ಲೀಟರ್ ಸಾಮರ್ಥ್ಯದ ಉಪ್ಪು ನೀರಿನ ಅಂತರರಾಷ್ಟ್ರೀಯ ಮಟ್ಟದ ಟನಲ್ ನಿರ್ಮಿಸಲಾಗಿದೆ. ಇದರಲ್ಲಿ ವಿವಿಧ ಜಾತಿಯ ಅಲಂಕಾರಿಕ ಮೀನುಗಳಿವೆ. ಇದು ನೋಡುಗರ ಆಕರ್ಷಣೀಯ ಕೇಂದ್ರವಾಗಿದೆ. ಸುರಂಗ ಪ್ರವೇಶಿದವರಿಗೆ, ಸ್ಕೂಬಾ ಡೈವಿಂಗ್ ಮೂಲಕ ಸಮುದ್ರದಾಳಕ್ಕೆ ಇಳಿಯುವವರಿಗೆ ಆಗುವಂತಹ ಅನುಭವ ಸಿಗುತ್ತದೆ. ಒಂದು ರೀತಿ ಸಮುದ್ರದ ಆಳದಲ್ಲಿದ್ದಂತೆಯೇ ಭಾಸವಾಗುತ್ತದೆ. ಇದು ಕರ್ನಾಟಕದಲ್ಲಿ ಮೊದಲನೇ ಶಾಶ್ವತ ಟನಲ್ ಅಕ್ವೇರಿಯಂ ಆಗಿದೆ' ಎಂದು ನಮ್ಮ ಬೆಂಗಳೂರು ಅಕ್ವೇರಿಯಂ ಸಂಸ್ಥೆಯ ನಿರ್ದೇಶಕ ಪ್ರಣವ್ ಹೇಳಿದರು.

ಕೋಯಿ ಫಿಶ್ ಕೊಳ: ಮತ್ಸ್ಯಾಲಯದ ಹಿಂಭಾಗದಲ್ಲಿ 90 ಸಾವಿರ ಲೀಟರ್ ನೀರು ಸಂಗ್ರಹ ಸಾಮರ್ಥ್ಯದ ಜಪಾನ್ ಕೋಯಿ ಫಿಶ್‌ಗಳ ಕೊಳವನ್ನು ನಿರ್ಮಿಸಲಾಗಿದೆ. ಇದರಲ್ಲಿ ಬಣ್ಣದ ಬಣ್ಣದ ಕೋಯಿ ಫಿಶ್‌ಗಳನ್ನು ವೀಕ್ಷಿಸಬಹುದು, ಅವುಗಳಿಗೆ ಆಹಾರ ನೀಡುವಂತಹ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ, ಅಲ್ಲೇ ಮೀನುಗಳಿಗೆ ಆಹಾರ ಖರೀದಿಸಬೇಕು. ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಫಲಕಗಳಲ್ಲಿ ಅಳವಡಿಸಲಾಗಿದೆ.

ಮತ್ಸ್ಯಾಲಯದ ಒಂದನೇ ಅಂತಸ್ತಿನಲ್ಲಿ ನೇಚರ್ ಮತ್ತು ಮರೀನ್ ಅಕ್ವೇರಿಯಂಗಳಲ್ಲಿ ಸಹ್ಯಾದ್ರಿಯ ನೇತ್ರಾಣಿ ದ್ವೀಪಗಳಲ್ಲಿರುವ ಮೀನಿನ ಪ್ರಭೇಧಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಆಲಂಕಾರಿಕ ಮೀನುಗಳಿಗೆ ಬೇಕಾಗಿರುವ ನೈಸರ್ಗಿಕ ಪರಿಸರವನ್ನು ನಿರ್ಮಿಸಲಾಗಿದೆ. ಪ್ರತಿ ಅಕ್ವೇರಿಯಂ ಮೇಲ್ಭಾಗದಲ್ಲಿ ಪ್ರದರ್ಶಿಸಿರುವ ಮೀನುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕನ್ನಡ ಮತ್ತು ಇಂಗ್ಲಿಷ್ ಫಲಕಗಳಲ್ಲಿ ಅಳವಡಿಸಲಾಗಿದೆ. ಇದರಿಂದ ಪ್ರೇರಕ್ಷರಿಗೆ ಮೀನುಗಳು ಹಾಗೂ ಸಸ್ಯಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಎರಡನೇ ಅಂತಸ್ತಿನಲ್ಲಿ ವಿದೇಶಿ ಆಲಂಕಾರಿಕ ಮೀನುಗಳಿರುವ 60ಕ್ಕೂ ಹೆಚ್ಚು ವೈವಿಧ್ಯಮಯ ಅಕ್ವೇರಿಯಂಗಳಿವೆ. ಇದು ಮಕ್ಕಳಿಗೆ ಹೆಚ್ಚು ಖುಷಿ ಕೊಡುವ ತಾಣ. ಸಮುದ್ರದ ಆಳದಲ್ಲಿನ ಪರಿಸರವನ್ನು ಈ ಚಿಕ್ಕ ಚಿಕ್ಕ ಅಕ್ವೇರಿಯಂಗಳಲ್ಲಿ ನಿರ್ಮಿಸಲಾಗಿದೆ. ಆಯಾ ಪರಿಸರಕ್ಕೆ ಹೊಂದಿಕೊಳ್ಳುವಂತಹ ಮೀನುಗಳನ್ನು ಅದರಲ್ಲಿ ಪ್ರದರ್ಶಿಸಲಾಗಿದೆ. ಇದರ ಮಧ್ಯ ಭಾಗದಲ್ಲಿ ಒಂದು ಚಿಕ್ಕದಾದ ಕೃತಕ ಜಲಪಾತ ನಿರ್ಮಿಸಲಾಗಿದ್ದು, ಪ್ರೇಕ್ಷಕರು ಇದರ ಮುಂಭಾಗದಲ್ಲಿ ನಿಂತುಕೊಂಡು ಫೋಟೊ ತೆಗೆಸಿಕೊಳ್ಳುತ್ತಾರೆ.

ಟನಲ್‌ನಲ್ಲಿರುವ ಮೀನುಗಳನ್ನು ಸಾರ್ವಜನಿಕರು ವೀಕ್ಷಿಸಿದರು

'ಮತ್ಸ್ಯಾಲಯಕ್ಕೆ ಜೀವಕಳೆ'

'ಮತ್ಸ್ಯಾಲಯಕ್ಕೆ ಹೊಸ ರೂಪ ನೀಡಿದ ನಂತರ ನಿತ್ಯ ಸಾವಿರಾರೂ ಜನ ಭೇಟಿ ನೀಡುತ್ತಿದ್ದಾರೆ. ಮತ್ಸ್ಯಾಲಯಕ್ಕೆ ಮತ್ತೆ ಹೊಸ ಜೀವಕಳೆ ಬಂದಿದೆ. ವಿಭಿನ್ನ ಹಾಗೂ ವಿಶೇಷ ತಳಿಯ ಮೀನುಗಳು ಮತ್ಸ್ಯಾಲಯದಲ್ಲಿ ನೋಡಲು ಸಿಗುತ್ತವೆ. ಇದು ಪ್ರವಾಸಿಗರು ಹಾಗೂ ಮಕ್ಕಳನ್ನು ಆಕರ್ಷಿಸುತ್ತಿದೆ. ಅಕ್ವೇರಿಯಂ ಉದ್ದೇಶ ಬರೀ ಆದಾಯ ಗಳಿಕೆ ಮಾತ್ರವಲ್ಲ. ಜೊತೆಗೆ ಮಕ್ಕಳು ಹಾಗೂ ಸಾರ್ವಜನಿಕರಿಗೆ ಆಲಂಕಾರಿಕ ಮೀನುಗಳ ಮಾಹಿತಿ ತಿಳಿಸುವ ಉದ್ದೇಶವೂ ಇದೆ. 110ಕ್ಕೂ ಹೆಚ್ಚಿನ ಆಲಂಕಾರಿಕ ಮೀನುಗಳು ಇಲ್ಲಿವೆ. ಮೀನುಗಾರಿಕೆ ಕ್ಷೇತ್ರದಲ್ಲಿ ಆಸಕ್ತಿ ಇರುವವರಿಗೆ ತರಬೇತಿಯನ್ನು ನೀಡಲಾಗುತ್ತದೆ' ಎಂದು ನಮ್ಮ ಬೆಂಗಳೂರು ಅಕ್ವೇರಿಯಂ ಸಂಸ್ಥೆಯ ನಿರ್ದೇಶಕ ಪ್ರಣವ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರವೇಶ ಶುಲ್ಕದ ವಿವರ

ವಯಸ್ಸು	ವಾರದ ದಿನಗಳಲ್ಲಿನ ಪ್ರವೇಶ ಶುಲ್ಕ	ವಾರಾಂತ್ಯದ ಪ್ರವೇಶ ಶುಲ್ಕ
3 ವರ್ಷದಿಂದ 16 ವರ್ಷದೊಳಗಿನ ಮಕ್ಕಳಿಗೆ	₹30	₹47
ವಯಸ್ಕರಿಗೆ	₹95	₹118

ಮೂರು ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರವೇಶ

ಸಾರ್ವಜನಿಕರು ಏನಂತಾರೆ?

ಮತ್ಸ್ಯಾಲಯದಲ್ಲಿನ ಸುರಂಗವು ಸಮುದ್ರದಾಳದ ಅನುಭವ ನೀಡುತ್ತದೆ. ನಾನು, ಇಲ್ಲಿ ಬಗೆ ಬಗೆಯ ಆಲಂಕಾರಿಕ ಮೀನುಗಳನ್ನು ನೋಡಿದೆ. ಜೊತೆಗೆ ಅವುಗಳಿಗೆ ಸಂಬಂಧಿಸಿದ ಮಾಹಿತಿಯೂ ಲಭ್ಯವಾಯಿತು. ಮಕ್ಕಳು ಸೇರಿದಂತೆ ಪ್ರತಿಯೊಬ್ಬರು ಇಲ್ಲಿಗೆ ಭೇಟಿ ನೀಡಬಹುದು.

ರಂಜಿತಾ, ಚಾಮರಾಜನಗರ

ಸಮುದ್ರದಲ್ಲಿ ಸ್ಕೂಬಾ ಡ್ರೈವಿಂಗ್ ಮಾಡಲು ಆಗದವರು ಇಲ್ಲಿಗೆ ಭೇಟಿ ನೀಡಿದರೆ, ಅದರ ಅನುಭವ ಪಡೆದುಕೊಳ್ಳಬಹುದು. ಸಮುದ್ರದ ಜೀವಿಗಳ ಬಗ್ಗೆ ತಿಳಿದುಕೊಳ್ಳುವುದಕ್ಕೆ ಇದೊಂದು ಅದ್ಭುತ ತಾಣ.

ಹರ್ಷಿತಾ, ಬನಶಂಕರಿ

ಇಲ್ಲಿರುವ ಪಿರಾನ ಮೀನುಗಳ, ಜೆಲ್ಲಿ ಫಿಶ್, ವಿವಿಧ ಆಲಂಕಾರಿಕ ಮೀನುಗಳನ್ನು ಒಂದೇ ವೇದಿಕೆಯಲ್ಲಿ ನೋಡಬಹುದು. ಮೀನು ಸಾಕಾಣಿಕೆ ಕ್ಷೇತ್ರದಲ್ಲಿ ಉದ್ಯೋಗ ಪಡೆದುಕೊಳ್ಳಲು ಇಲ್ಲಿ ತರಬೇತಿ ನೀಡಲಾಗುತ್ತದೆ. ಪ್ರತಿಯೊಬ್ಬರು ಇಲ್ಲಿಗೆ ಒಮ್ಮೆ ಭೇಟಿ ನೀಡಬೇಕು.

ಸಂಜು, ಐಟಿ ಉದ್ಯೋಗಿ

ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿ

1983ರಲ್ಲಿ ಈ ಮತ್ಸ್ಯಾಲಯವನ್ನು 17,500 ಚದರಡಿಯಲ್ಲಿ ನಿರ್ಮಿಸಲಾಗಿದೆ. ಸದ್ಯ ಇದನ್ನು ಪಿಪಿಪಿ ಯೋಜನೆಯ ಅಡಿಯಲ್ಲಿ ಸುಮಾರು ₹14 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗಿದೆ. ಎರಡು ಅಂತಸ್ತಿನ ಮತ್ಸ್ಯಾಲಯದ ಹಳೆಯ ಕಟ್ಟದ ವಿನ್ಯಾಸವನ್ನು ಹಾಗೇ ಉಳಿಸಿಕೊಂಡು ಅಭಿವೃದ್ಧಿ ಮಾಡಲಾಗಿದೆ. 'ನಮ್ಮ ಬೆಂಗಳೂರು ಅಕ್ವೇರಿಯಂ' ಸಂಸ್ಥೆಯು ಈ ಮತ್ಸ್ಯಾಲಯವನ್ನು 30 ವರ್ಷಗಳವರೆಗೆ ನಿರ್ವಹಣೆ ಮಾಡಲಿದೆ.

ಜಿಬಿಎ: ಜನಾಭಿಪ್ರಾಯ

'ಜಿಬಿಎ ರಚನೆಯ ನಂತರ ಮುಂದೇನಾಗಬೇಕು'– ಈ ಪ್ರಶ್ನೆಗೆ ಸಾರ್ವಜನಿಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲ್ಲಿವೆ.

ಬೆಂಗಳೂರು ನಗರದಲ್ಲಿ ಬೆಲೆ ಏರಿಕೆ, ನಿರುದ್ಯೋಗ, ಕಸ ವಿಲೇವಾರಿ, ಸಂಚಾರ ದಟ್ಟಣೆ ನಿವಾರಣೆಗೆ, ರಸ್ತೆ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಬಿಬಿಎಂಪಿ ವ್ಯಾಪ್ತಿಯಲ್ಲಿ ನಿತ್ಯ ಹಲವು ಸಮಸ್ಯೆಗಳು ಉದ್ಭವಿಸುತ್ತಿವೆ. ಇವುಗಳ ದುರಸ್ತಿಗೆ ಯಾರೂ ಸ್ಪಂದಿಸುತ್ತಿಲ್ಲ. ರಸ್ತೆ, ಪಾದಚಾರಿ ಮಾರ್ಗ ಸೇರಿದಂತೆ ನಗರದ ಸ್ವಚ್ಛತೆಗೆ ಆದ್ಯತೆ ನೀಡಿದ ನಂತರ ಜಿಬಿಎ ಅನುಷ್ಠಾನಗೊಳಿಸಿದರೆ, ಇದು ಯಶಸ್ವಿ ಆಗುತ್ತದೆ. ಇಲ್ಲದಿದ್ದರೆ ಮೊದಲಿನಂತಯೇ ಸಮಸ್ಯೆಗಳ ಸರಮಾಲೆಯಲ್ಲಿ ಜೀವನ ನಡೆಸಬೇಕಾಗುತ್ತದೆ.

ಕೆಂಪರಾಜು ಸಿ.ವಿ., ಜ್ಞಾನಭಾರತಿ

ಬಿಬಿಎಂಪಿಯನ್ನು ಜಿಬಿಎ ಮಾಡಿದರೆ ಏನೂ ಬದಲಾವಣೆ ಆಗುವುದಿಲ್ಲ. ನಾಗರಿಕರಿಗೆ ಅನುಕೂಲವಾಗುವಂತೆ ಮೂಲಸೌಕರ್ಯ ಅಭಿವೃದ್ಧಿಯನ್ನು ಹೇಗೆ ಮಾಡಲಾಗುತ್ತದೆ ಎಂಬ ಸ್ಪಷ್ಟ ನೀಲನಕ್ಷೆ ರೂಪಿಸಬೇಕು. 2008ರಲ್ಲಿ 110 ಹಳ್ಳಿಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರಿಸಿಕೊಳ್ಳಲಾಯಿತು. ಆದರೆ, ಈಗಲೂ ಈ ಹಳ್ಳಿಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಯಾಗಿಲ್ಲ. ಇಲ್ಲಿ ರಸ್ತೆಗಳಿಲ್ಲ, ಪಾದಚಾರಿ ಮಾರ್ಗವಿಲ್ಲ, ಉದ್ಯಾನಗಳಿಲ್ಲ. ಮಹಿಳೆಯರ ಸುರಕ್ಷತೆ ಇಲ್ಲವೇ ಇಲ್ಲ. ಆದ್ದರಿಂದ ಜಿಬಿಎ ಮಾಡುವ ಮುನ್ನ ಮೂಲಸೌಕರ್ಯದ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

ಶಿವರಾಮು ಕೆ.ಬಿ., ಮೇದರಹಳ್ಳಿ, ಚಿಕ್ಕಬಾಣಾವರ

ಜಿಬಿಎ ಹೆಸರಿನಲ್ಲಾದರೂ ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿ ಆಗಲಿ. ಬಿಬಿಎಂಪಿ ಹೆಸರು ಜಿಬಿಎ ಆಗಿ ಬದಲಾದರೆ ಸಾಲದು. ಶಿಕ್ಷಣ, ಆರೋಗ್ಯ, ವಸತಿ, ಬಡಾವಣೆ ನಿರ್ಮಾಣ, ಸಮರ್ಪಕ ಕಸ ವಿಲೇವಾರಿ ಸೇರಿದಂತೆ ನಾಗರಿಕರಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ನೀಡಬೇಕು. ಜಿಬಿಎ ಅನ್ನು ಹೇಗೆ ಅನುಷ್ಠಾನ ಮಾಡಬೇಕು ಎಂಬ ಸ್ಪಷ್ಟತೆ ಇರಬೇಕು.

ಸಯ್ಯದ್ ಯೇಜಸ್ ಪಾಷ, ಬಸವೇಶ್ವರನಗರ

ಕಾಲಕ್ಕೆ ತಕ್ಕಂತೆ ಬದಲಾವಣೆ, ಜಗದ ನಿಯಮ. ಹಾಗೆಯೇ, ಬಿಬಿಎಂಪಿ ಬದಲಿಗೆ ಜಿಬಿಎ ಅನುಷ್ಠಾನ ಸ್ವಾಗತಾರ್ಹ. ಜಿಬಿಎ ಅನುಷ್ಠಾನದ ನಂತರ ಇದರ ವ್ಯಾಪ್ತಿಯ ಎಲ್ಲರೂ ಕಾವೇರಿ ನೀರನ್ನೇ ಅವಲಂಬಿಸಬಾರದು. ಆಯಾ ಪಾಲಿಕೆಯ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ನಗರದಲ್ಲಿ ವಿದ್ಯುತ್ ಚಾಲಿತ 'ಟ್ರಾಮ್‌ವೇ' ಸೌಲಭ್ಯ ಒದಗಿಸಬೇಕು. ನಗರದಲ್ಲಿ ಹಸಿರೀಕರಣ ಹೆಚ್ಚಿಸಲು ಉದ್ಯಾನಗಳನ್ನು ನಿರ್ಮಿಸಬೇಕು.

ವಿಜಯ ಮುತ್ತತ್ತಿ, ಯಲಹಂಕ–ಉಪನಗರ

ಜಿಬಿಎ ಆಯ್ತು: ಮುಂದೇನಾಗಬೇಕು

'ಗ್ರೇಟರ್ ಬೆಂಗಳೂರು ಪ್ರದೇಶ' ಘೋಷಣೆಯಾಗಿದೆ. ಮುಂದೆ ಏನಾಗಬೇಕು? ಪ್ರತಿಕ್ರಿಯಿಸಿ. ಮಾಹಿತಿ ಸಂಕ್ಷಿಪ್ತವಾಗಿರಲಿ.ಜೊತೆಗೆ ವಿಳಾಸ, ಭಾವಚಿತ್ರವಿರಲಿ.

9606038256

ಬೆಂಗಳೂರು ದಕ್ಷಿಣ ಜಿಲ್ಲೆಯಾಗಿ ರಾಮನಗರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರ ಜಿಲ್ಲೆಯನ್ನು 'ಬೆಂಗಳೂರು ದಕ್ಷಿಣ ಜಿಲ್ಲೆ' ಎಂದು ಮರುನಾಮಕರಣ ಮಾಡುವ ಸಂಬಂಧ ಗುರುವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ವಿಷಯವನ್ನು ಈಗಾಗಲೇ ಪ್ರಸ್ತಾಪಿಸಿದ್ದು, ಗುರುವಾರ ನಡೆಯಲಿರುವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿ ಈ ವಿಷಯವನ್ನು ತರಲಾಗಿದೆ.

ರಾಮನಗರ ಜಿಲ್ಲೆಯ ಹೆಸರನ್ನು ಬದಲಾಯಿಸುವ ಪ್ರಯತ್ನವನ್ನು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರೋಧಿಸಿದ್ದಾರೆ.

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದಲ್ಲಿ ಭಾಗಿಯಾಗಿದ್ದ ಕೆಪಿಎಸ್‌ಸಿಯ ಹಿಂದಿನ ಅಧ್ಯಕ್ಷ ಮತ್ತು ಹಿಂದಿನ ಎಂಟು ಸದಸ್ಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆಯೂ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಅಲ್ಲದೇ, 'ಕರ್ನಾಟಕ ಗ್ರೀನ್ ಹೈಡ್ರೋಜನ್ ನೀತಿ 2024–29'ಕ್ಕೆ ಒಪ್ಪಿಗೆ ನೀಡುವ ಪ್ರಸ್ತಾವವೂ ಗುರುವಾರದ ಸಂಪುಟ ಸಭೆಯ ಮುಂದಿದೆ.

24ಕ್ಕೆ 'ಯಾದೇ' ಸಂಗೀತ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ದಕ್ಷತಾ ಸಮಿತಿಯು ಗಾಯಕರಾದ ಕಿಶೋರ್ ಕುಮಾರ್ ಮತ್ತು ಆಶಾ ಭೋಸ್ಲೆ ಅವರಿಗೆ ಸಂಗೀತ ನಮನ ಸಲ್ಲಿಸಲು ಇದೇ 24ರಂದು ಸಂಜೆ 6 ಗಂಟೆಗೆ 'ಯಾದೇ' ಶೀರ್ಷಿಕೆಯಡಿ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಸಂಗೀತ ಕಾರ್ಯಕ್ರಮ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಉಪಾಧ್ಯಕ್ಷೆ ಉಷಾ ಕಾಮತ್, 'ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವವರ ಆರೋಗ್ಯ, ಶಿಕ್ಷಣಕ್ಕೆ ಸಮಿತಿ ನೆರವಾಗುತ್ತಿದೆ. ಆರ್ಥಿಕವಾಗಿ ಹಿಂದುಳಿದ ಪ್ರತಿಭಾನ್ವಿತ 300 ವಿದ್ಯಾರ್ಥಿನಿಯರಿಗೆ ಪ್ರತಿ ವರ್ಷ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. ಈ ಕಾರ್ಯಗಳಿಗೆ ನಿಧಿ ಸಂಗ್ರಹಿಸುವ ಸಂಬಂಧ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಂಗಕರ್ಮಿ ಪ್ರಕಾಶ್ ಬೆಳವಾಡಿ ಅವರ ನಿರೂಪಣೆಯಲ್ಲಿ ಸಂಗೀತ ಸಂಯೋಜಕ ಅರುಣ್ ಕುಮಾರ್ ಬಿ.ಎಸ್. ಅವರು ಈ ರಸಮಂಜರಿ ಕಾರ್ಯಕ್ರಮ ನಡೆಸಿಕೊಡುತ್ತಾರೆ' ಎಂದು ತಿಳಿಸಿದರು.

'ಮೂರೂವರೆ ಗಂಟೆ ಈ ಕಾರ್ಯಕ್ರಮ ನಡೆಯಲಿದೆ. ಮೋಹನ್ ಕೃಷ್ಣ, ಸಮನ್ವಿತಾ ಶರ್ಮಾ, ಶ್ರುತಿ ಭೀಡೆ, ಗೋವಿಂದ್ ಕರ್ನೂಲ್, ಅಂಕಿತಾ ಕುಂಡು ಅವರು ಕಿಶೋರ್ ಕುಮಾರ್ ಮತ್ತು ಆಶಾ ಭೋಸ್ಲೆ ಅವರ ವಿವಿಧ ಗೀತೆಗಳನ್ನು ಹಾಡಲಿದ್ದಾರೆ. ಕಾರ್ಯಕ್ರಮದ ಪಾಸ್‌ಗಳು 'ಬುಕ್ ಮೈ ಶೋ'ದಲ್ಲಿ ಲಭ್ಯವಿವೆ' ಎಂದರು.

ಪ್ರಕಾಶ್ ಬೆಳವಾಡಿ, 'ಮಹಿಳಾ ದಕ್ಷತಾ ಸಮಿತಿಯು ಆರೋಗ್ಯ,ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು, ಇವುಗಳಿಗೆ ಆರ್ಥಿಕ ಸಂಪನ್ಮೂಲ ಅಗತ್ಯವಿದೆ. ಆದ್ದರಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕನ್ನಡದಲ್ಲಿ ಉತ್ತಮ ಗಾಯಕರಿದ್ದು, ಅವರಿಗೆ ಅವಕಾಶ ಕಲ್ಪಿಸಬೇಕು ಎಂದರು.

ವಿದ್ಯುತ್ ಕಂಬದ ಮೇಲೆ ವಾಲಿದ ಮರವನ್ನು ಬೆಸ್ಕಾಂ ಸಿಬ್ಬಂದಿ ತೆರವುಗೊಳಿಸಿದರು

ವಿದ್ಯುತ್ ಕಂಬದ ಮೇಲೆ ವಾಲಿದ ಮರ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ವಾರ್ಡ್ ಸಂಖ್ಯೆ 129ರ ಪೂರ್ಣಚಂದ್ರ ಬಡಾವಣೆಯ 13ನೇ ಮುಖ್ಯ ರಸ್ತೆಯ ಕೃಷ್ಣದೇವರಾಯ ರಸ್ತೆಯ ತಿರುವಿನಲ್ಲಿ ಮರವೊಂದು ವಿದ್ಯುತ್ ಕಂಬದ ಮೇಲೆ ವಾಲಿತ್ತು. ಇದನ್ನು ಬೆಸ್ಕಾಂ ಸಿಬ್ಬಂದಿ ಬುಧವಾರ ತೆರವುಗೊಳಿಸಿದ್ದಾರೆ.

'ಪ್ರಜಾವಾಣಿ'ಯ ಮೇ 19ರ ಸಂಚಿಕೆಯ ಕುಂದು ಕೊರತೆ ವಿಭಾಗದಲ್ಲಿ 'ವಿದ್ಯುತ್ ಕಂಬದ ಮೇಲೆ ವಾಲಿದ ಮರ' ಎಂಬ ಶೀರ್ಷಿಕೆ ಅಡಿಯಲ್ಲಿ ಸಾರ್ವಜನಿಕರ ಅಹವಾಲು ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಬೆಸ್ಕಾಂ ಸಿಬ್ಬಂದಿ, ವಾಲಿದ ಮರವನ್ನು ತೆರವುಗೊಳಿಸಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಅಶೋಕ ಹೇಳಿಕೆ

'ಬಿಜೆಪಿ ಅಧಿಕಾರಕ್ಕೆ ಬಂದರೆ ಜಿಬಿಎ ರದ್ದು'

ಪ್ರಜಾವಾಣಿ ವಾರ್ತೆ



ಆರ್. ಅಶೋಕ

ಬೆಂಗಳೂರು: 'ಬಿಜೆಪಿ ಮುಂದಿನ ಬಾರಿ ಅಧಿಕಾರಕ್ಕೆ ಬಂದರೆ ಗ್ರೇಟರ್ ಬೆಂಗಳೂರು ರದ್ದು ಮಾಡಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಅವರು ಮಾತನಾಡಿದ ಅವರು,

ಮಳೆಹಾನಿ ಪ್ರದೇಶಕ್ಕೆ ಭೇಟಿ ನೀಡಿದ ಸಿದ್ದರಾಮಯ್ಯ ಅವರಿಗೆ ಅಧಿಕಾರಿಗಳು ಕೆಂಪು ಹಾಸಿನ ಬದಲು ಚಿನ್ನದ ಹಾಸು ಹಾಕಿ ಸ್ವಾಗತಿಸಬೇಕಿತ್ತು

ಆರ್.ಅಶೋಕ

ವಿಧಾನಸಭೆ ವಿಪಕ್ಷ ನಾಯಕ

'ಮುಳುಗುವ ಬೆಂಗಳೂರು, ಗ್ರೇಟರ್ ಬೆಂಗಳೂರು, ಗ್ರೇಟೆಸ್ಟ್ ಬೆಂಗಳೂರುಗಳೆಲ್ಲ ಬೇಡ. ಕೆಂಪೇಗೌಡರು ಕಟ್ಟಿದ ಬೆಂಗಳೂರು ಬೇಕು' ಎಂದು ಹೇಳಿದರು.

'ನಗರದಲ್ಲಿ ಏನು ಹಾನಿಯಾಗಿದೆ ಎಂದು ನೋಡಿ ಕೂಡಲೇ ಸರಿಪಡಿಸಲು ಅನುದಾನ ಬಿಡುಗಡೆ ಮಾಡುವುದಿದ್ದರೆ ಪ್ರದಕ್ಷಿಣೆ ಹಾಕಬೇಕು. ಖಜಾನೆ ಬರಿದು ಮಾಡಿಕೊಂಡು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸುತ್ತುವುದರಲ್ಲಿ ಅರ್ಥವಿಲ್ಲ. ಎಲ್ಲ ರಸ್ತೆಗಳಲ್ಲಿ ಗುಂಡಿ ಬಿದ್ದು ಸುರಂಗಗಳಾಗಿವೆ. ಈಗ ಹೆಗ್ಗಣಗಳು ಓಡಾಡುತ್ತಿವೆ. ಇನ್ನೊಂದು ತಿಂಗಳು ಕಳೆದರೆ ಬೈಕ್, ಆರು ತಿಂಗಳು ಕಳೆದರೆ ಕಾರುಗಳೇ ಅದರೊಳಗೆ ಹೋಗಬಹುದು. ಇಂಥ ಪರಿಸ್ಥಿತಿ ಇರುವಾಗ ಹೊಸ ಸುರಂಗ ಮಾರ್ಗ ಯೋಜನೆ ಯಾಕೆ ಬೇಕು' ಎಂದು ಕೇಳಿದರು.

ಪಂಪ್‌ಗಳ ಮೂಲಕ ನೀರು ಹೊರ ಹಾಕುವುದನ್ನು ಇಲ್ಲಿವರೆಗೆ ನೋಡಿದ್ದೆವು. ಈಗ ರಾಜ್ಯ ಸರ್ಕಾರವು ಹೊಸ ತಂತ್ರಜ್ಞಾನವನ್ನು ಕಂಡು ಹಿಡಿದಿದೆ. ಜೆಸಿಬಿ ಮೂಲಕ ನೀರು ತಳ್ಳುವ ತಂತ್ರಜ್ಞಾನ ಅದು ಎಂದರು.

'ರಾಜ್ಯ ಸರ್ಕಾರಕ್ಕೆ ಬರುವ ತೆರಿಗೆಯಲ್ಲಿ ಶೇ 67ರಷ್ಟು ಬೆಂಗಳೂರಿನಿಂದಲೇ ಬರುತ್ತಿದೆ. ಅದಕ್ಕೆ ಪ್ರತಿಯಾಗಿ ನೀವು ನೀರಲ್ಲಿ ತೇಲುವ ಬೆಂಗಳೂರನ್ನು ನೀಡಿದ್ದೀರಿ. ನೀರಲ್ಲಿ ಮುಳುಗುವ ಬೆಂಗಳೂರನ್ನು ಜನರು ಕೇಳಿದ್ದಾರೆಯೆ' ಎಂದು ಪ್ರಶ್ನಿಸಿದರು.

ದೇವರು,ಧರ್ಮ ಬಿಜೆಪಿ ಆಸ್ತಿಯೆ?: ಡಿಕೆಶಿ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು ರಾಜೀವ್ ಗಾಂಧಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

ಬೆಂಗಳೂರು: 'ದೇವರು, ಧರ್ಮ ಬಿಜೆಪಿ ಆಸ್ತಿಯೆ? ಪೂಜೆಯನ್ನು ಬಿಜೆಪಿ ನಾಯಕರು, ಕಾರ್ಯಕರ್ತರು ಮಾತ್ರ ಮಾಡುತ್ತಾರೆಯೆ? ನೀರು, ಗಾಳಿ, ಬೆಳಕಿಗೆ ಜಾತಿ ಇದೆಯೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ರಾಜೀವ್ ಗಾಂಧಿ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಪುಷ್ಪ ನಮನ ಸಲ್ಲಿಸಿದ ನಂತರ ಅವರು ಮಾತನಾಡಿದರು.

'ಕಾಂಗ್ರೆಸ್ ಏನೇ ಮಾಡಿದರೂ ಟೀಕೆ ಮಾಡುತ್ತಾರೆ. ಬೆಂಗಳೂರಿನ ಸ್ಯಾಂಕಿ ಕೆರೆಯಲ್ಲಿ ನಡೆದ ಕಾವೇರಿ ಆರತಿ ಕಾರ್ಯಕ್ರಮವನ್ನು ನೋಡಿದ ಸ್ಥಳೀಯ ಶಾಸಕರು ಗಾಬರಿಯಾಗಿದ್ದರು. ರೈತ ಸಂಘದವರೂ ಟೀಕೆ ಮಾಡುತ್ತಿದ್ದಾರೆ. ಟೀಕೆಗಳಿಲ್ಲದೆ ಯಾವುದೇ ಕೆಲಸ ಆಗುವುದಿಲ್ಲ. ಆದರೂ, ಎಲ್ಲರೂ ಒಟ್ಟಾಗಿ ಸಮಾಜ ಮುನ್ನಡೆಸಬೇಕಿದೆ' ಎಂದರು.

'ರಾಜೀವ್ ಗಾಂಧಿ ಅವರ ಹತ್ಯೆಯಿಂದ ಸ್ತ್ರೀ ಶಕ್ತಿಗೆ, ಯುವ ಪೀಳಿಗೆ ಹಾಗೂ ಇಡೀ ದೇಶಕ್ಕೆ ದೊಡ್ಡ ನಷ್ಟವಾಗಿದೆ. 18 ವರ್ಷಕ್ಕೆ ಮತದಾನದ ಹಕ್ಕು ನೀಡಿದ್ದರು. ಮಹಿಳೆಯರಿಗೆ ಸ್ಥಳೀಯ ಸಂಸ್ಥೆಯಲ್ಲಿ ಶೇ 50 ರಷ್ಟು ಮೀಸಲಾತಿಗೆ ಶ್ರಮಿಸಿದ್ದರು. ಪಕ್ಷಾಂತರ ನಿಷೇಧಕ್ಕೆ ಕಾನೂನು ತಂದಿದ್ದರು' ಎಂದು ಸ್ಮರಿಸಿದರು.

'ಆರೋಗ್ಯ ಸಮಸ್ಯೆಯ ಕಾರಣಕ್ಕೆ ಸಿಎಂ ಸ್ಥಾನದಿಂದ ವೀರೇಂದ್ರ ಪಾಟೀಲ ಅವರ ಬದಲಾವಣೆ, ಬಂಗಾರಪ್ಪ ನೇಮಕ, ಎಲ್ಲ ಜಾತಿಗಳ ನಾಯಕರಿಗೆ, ಯುವಕರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ, ಬಿ.ಕೆ. ಹರಿಪ್ರಸಾದ್ ಅವರಿಗೆ ಯುವ ಕಾಂಗ್ರೆಸ್ ಉಪಾಧ್ಯಕ್ಷ ಸ್ಥಾನ. ರಾಜ್ಯಸಭೆಗೆ ಆಯ್ಕೆ ನಿರ್ಧಾರಗಳ ಹಿಂದೆ ರಾಜೀವ್ ಅವರ ದೂರದೃಷ್ಟಿ ಇತ್ತು' ಎಂದರು.

ನಗರದಲ್ಲಿ ಇಂದು

ಉದ್ಯೋಗ ಮೇಳ: ಅತಿಥಿಗಳು: ಎಂ. ನಾಗರಾಜ್ ಯಾದವ್, ರಾಮಕೃಷ್ಣರೆಡ್ಡಿ ಕೆ., ಸಿ. ಜಗನ್ನಾಥ, ಗೌರಿ ಓಝಾ, ಶಶಿಮೌಳಿ ವಿ., ಎಲಿಜಬೆತ್ ಚೆರಿಯನ್, ಅಧ್ಯಕ್ಷತೆ: ಫಜೀಹಾ ಸುಲ್ತಾನಾ, ಆಯೋಜನೆ ಮತ್ತು ಸ್ಥಳ: ನೃಪತುಂಗ ವಿಶ್ವವಿದ್ಯಾಲಯ, ನೃಪತುಂಗ ರಸ್ತೆ, ಬೆಳಿಗ್ಗೆ 10

ಆರ್ಯಭಟ ನೃತ್ಯೋತ್ಸವ: ಉದ್ಘಾಟನೆ: ಅಶೋಕ ಬಿ. ಹಿಂಚಿಗೇರಿ, ಬಸವರಾಜ ಹೊರಟ್ಟಿ, ಮಹೇಶ ಜೋಶಿ, ಅಧ್ಯಕ್ಷತೆ: ಎಚ್.ಎನ್. ಎಲ್. ರಾವ್, ಸನ್ಮಾನಿತರು: ಭಾರತಿ ವಿಷ್ಣುವರ್ಧನ್, ಜಯಮಾಲಾ, ರಾಜೇಂದ್ರಸಿಂಗ್ ಬಾಬು, ವಿಶ್ವೇಶ್ವರ ಭಟ್, ಕೆ. ಕಲ್ಯಾಣ್, ಆಯೋಜನೆ: ಆರ್ಯಭಟ ಸಾಂಸ್ಕೃತಿಕ ಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4ರಿಂದ

ಭಾರತಿ ವಿಷ್ಣುವರ್ಧನ್

ಸಾಂಸ್ಕೃತಿಕ ವೈಭವ, 'ಕರುನಾಡ ಸಿರಿ' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಅಪ್ಪಗೆರೆ ತಿಮ್ಮರಾಜು, ಅಧ್ಯಕ್ಷತೆ: ಅಶೋಕ್ ಎನ್. ಛಲವಾದಿ, ಪ್ರಶಸ್ತಿ ಪ್ರದಾನ: ಆರ್. ಚಂದ್ರಶೇಖರ, ಅತಿಥಿಗಳು: ಅನು ಅಮ್ಮ, ಕೆಂಚನೂರು ಶಂಕರ, ಕೆ. ಪ್ರಕಾಶ್ ಬಾಬು, ಆರ್. ಕುಮಾರ್, ಲೋಕೇಶ್, ಪ್ರಶಸ್ತಿ ಸ್ವೀಕರಿಸುವವರು: ಹೇಮಾ ಎಸ್., ರಚನಾ ಪಾಯಲ್, ಶಾರದಾ ಕೆ.ಎನ್., ಎಸ್. ಮಂಜುನಾಥ್, ಶಿವಪ್ಪ, ಚಂದ್ರು, ಸಚಿನ್ ಆಚಾರ್, ಇಸ್ಮಾಯಿಲ್, ಆಯೋಜನೆ: ಸಂಗೀತನಾದ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2.30ರಿಂದ

'ಕರ್ನಾಟ ದೇಶವನ್ನು ಕಟ್ಟಿದ ಐತಿಹಾಸಿಕ ಪುರುಷರು' ಉಪನ್ಯಾಸ: ಗುರುದೇವ ನಾರಾಯಣ್ ಕುಮಾರ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ಬಿ.ವಿ. ಕಾರಂತ–90' ನೆನಪಿನ ರಾಜ್ಯಮಟ್ಟದ ನಾಟಕೋತ್ಸವ ಸಮಾರೋಪ: ಭಾಗವಹಿಸುವವರು: ಕೆ.ವಿ. ನಾಗರಾಜಮೂರ್ತಿ, ಸಂಚಯ ಗಣೇಶ್, 'ತಿಂಮ್ಮಾರ್ಪಣ ಮಸ್ತು' ನಾಟಕ ಪ್ರದರ್ಶನ: ರಚನೆ: ಬೀಚಿ, ತಂಡ: ವರ್ಣರಂಗ ಕಲಾವಾತ್ಸಲ್ಯ ಟ್ರಸ್ಟ್, ನಿರ್ದೇಶನ: ರಮೇಶ್ ಕೆ. ಬೆಣಕಲ್, ಆಯೋಜನೆ: ಭಾಗವತರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.45ರಿಂದ

ಉಡುಪ ಮ್ಯೂಸಿಕ್ ಫೆಸ್ಟಿವೆಲ್: ತಾಳವಾದ್ಯ ಸಂಗೀತ ಕಛೇರಿ: ಮೃದಂಗ: ಆನೂರು ಆರ್. ಅನಂತಕೃಷ್ಣ ಶರ್ಮ, ಖಂಜೀರಾ: ಸಿ.ಪಿ. ವ್ಯಾಸವಿಠ್ಠಲ, ಗಾಯನ: ವೆಂಕಟೇಶ್ ಕುಮಾರ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ: ಕೇಶವ ಜೋಶಿ, ಆಯೋಜನೆ: ಉಡುಪ ಫೌಂಡೇಶನ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 7ರಿಂದ

ಹರಿದಾಸ ನಮನ: ಗಾಯನ: ವೈಷ್ಣವಿ ಕೊಪ್ಪ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಮಧುಸೂದನ್ ಕೊಪ್ಪ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಸುಧಾ ಓದಿರಿ

ದೀಪಾ ಭಾಸ್ತಿ ತವರು ಕೊಡಗು, ಬಾನು ತವರು ಹಾಸನದಲ್ಲಿ ಕುಟುಂಬ ಸದಸ್ಯರ ಸಂಭ್ರಮ– ಸಿಹಿ ವಿನಿಮಯ

ಸಾಧಕಿಯರ ತವರಲ್ಲಿ ಸಂತಸದ ಹೊನಲು

• ಕೆ.ಎಸ್.ಗಿರೀಶ

ಮಡಿಕೇರಿ: ಲೇಖಕಿ ಬಾನು ಮುಷ್ತಾಕ್ ಅವರು ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಯವರೆಗೂ ಬರಲು ಪ್ರಮುಖ ಕಾರಣಕರ್ತರಾದ ಅವರ ಕಥೆಗಳ ಅನುವಾದಕಿ ದೀಪಾ ಭಾಸ್ತಿ ಕೊಡಗಿನವರಾದ್ದರಿಂದ ಅಲ್ಲಿಯೂ ಸಂಭ್ರಮ ಮನೆ ಮಾಡಿದೆ.

ಅವರು ಹುಟ್ಟಿದ್ದು, ಬೆಳೆದಿದ್ದು, ವಾಸ ಇರುವುದು ಮಂಜಿನ ನಗರಿ ಮಡಿಕೇರಿ ಸಮೀಪದಲ್ಲಿ ಇರುವ 'ಮಿನುಗುತಾರೆ' ತೋಟದಲ್ಲಿ. ಒಂದೆಡೆ ಅವರು ಲಂಡನ್‌ನಲ್ಲಿ ಬೂಕರ್ ಪ್ರಶಸ್ತಿಯ ಸಂಭ್ರಮದಲ್ಲಿದ್ದರೆ, ಮತ್ತೊಂದೆಡೆ ಅವರ ತಂದೆ, ತಾಯಿ, ಪತಿ ಇಲ್ಲಿ ಸಂತಸದ ಹೊನಲಿನಲ್ಲಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ದೀಪಾ ಭಾಸ್ತಿ ಅವರ ತಾಯಿ ಸುಧಾಮಣಿ, 'ಇದು ದೀಪಾಳ ಶ್ರಮಕ್ಕೆ ಸಿಕ್ಕ ಗೌರವ' ಎಂದು ಸಂತಸಪಟ್ಟರು.

ದೀಪಾ ಅವರ ಅಜ್ಜ ಡಾ.ಬಿ.ಕೆ.ನಂಜುಂಡೇಶ್ವರ ಸ್ವಾತಂತ್ರ್ಯ ಹೋರಾಟಗಾರರು. ವೈದ್ಯರಾಗಿದ್ದ ಅವರು ಇಲ್ಲಿನ ಇಂದಿರಾಗಾಂಧಿ ವೃತ್ತ (ಚೌಕಿ)ದಲ್ಲಿ ಕ್ಲಿನಿಕ್ ನಡೆಸುತ್ತಿದ್ದರು. ಆ ಕಾಲದಲ್ಲಿ ಅವರು ನಗರದ ಪ್ರಸಿದ್ಧ ವೈದ್ಯರಾಗಿದ್ದರು. ಅವರ ಬಳಿ ಅಮೂಲ್ಯ ಪುಸ್ತಕಗಳ ಭಂಡಾರವೇ ಇತ್ತು. ಇದು ದೀಪಾ ಅವರ ಸಾಧನೆಗೆ ಮೊದಲನೆಯ ಪ್ರೇರಣೆಯಾಗಿತ್ತು.

'ದೀಪಾ ಅಜ್ಜಿ ಹೇಮಾವತಿ ಅವರು ಕಥೆ ಹೇಳುವುದರಲ್ಲಿ ಪರಿಣತರಾಗಿದ್ದರು. ಅವರ ಕಥೆ ಕೇಳಲು ಪದವಿ ಓದುವವರೂ ಆಗಿನ ಕಾಲದಲ್ಲಿ ಮನೆಗೆ ಬರುತ್ತಿದ್ದರು. ಅವರ ಕಥೆಗಳೂ ದೀಪಾ ಅವರ ಓದಿಗೆ ಹಾಗೂ ಸೃಜನಶೀಲತೆಗೆ ಪ್ರೇರಕ ಶಕ್ತಿಯಾಯಿತು' ಎಂದು ಸುಧಾಮಣಿ ಹೇಳುತ್ತಾರೆ.

ದೀಪಾ ಅವರ ದೊಡ್ಡಮ್ಮ ತಾಳ್ತಜೆ ವಸಂತಕುಮಾರ್ ಅವರ ಪತ್ನಿ ವಿ.ಕೆ.ಮಣಿಮಾಲಿನಿ ಸಹ ಬರಹಗಾರ್ತಿ. ಹೀಗಾಗಿ, ದೀಪಾ ಅವರು ಬಾಲ್ಯದಲ್ಲೇ ಕೊಡಗಿನಂತಹ ರಮ್ಯ ತಾಣದಲ್ಲಿ ಸಾರಸ್ವತ ಪರಿಸರದಲ್ಲಿ ಬೆಳೆಯುವಂತಾಯಿತು.

ಇಲ್ಲಿನ ಕೊಡಗು ವಿದ್ಯಾಲಯದಲ್ಲಿ ಅವರು ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸ ಮುಗಿಸಿ ಎಫ್‌ಎಂಸಿ ಕಾಲೇಜಿನಲ್ಲಿ ಬಿ.ಕಾಂ ಪದವಿ ಪಡೆದರು. ನಂತರ, ಮಂಗಳೂರಿನಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ಪತ್ರಕರ್ತರಾಗಿಯೂ ಕೆಲಸ ಮಾಡಿದ ದೀಪಾ ನಂತರ ಅನುವಾದ ಕ್ಷೇತ್ರದತ್ತ ಗಮನ ಹರಿಸಿದರು. ಕನ್ನಡ ಕಥಾ ಸಾಹಿತ್ಯದಲ್ಲಿ ಕೊಡಗಿನ ಅಸ್ಮಿತೆ ಎನಿಸಿದ ಕೊಡಗಿನ ಗೌರಮ್ಮ ಅವರ ಸಣ್ಣಕಥೆಗಳನ್ನೂ ಇವರು ಇಂಗ್ಲಿಷ್‌ಗೆ ಭಾಷಾಂತರ ಮಾಡುವ ಮೂಲಕ, ಗೌರಮ್ಮ ಅವರ ಪ್ರತಿಭೆಯನ್ನು ಇಡೀ ಜಗತ್ತು ತಿಳಿಯುವಂತೆ ಮಾಡಿದರು. ಶಿವರಾಮ ಕಾರಂತ ಅವರ 'ಅದೇ ಊರು ಅದೇ ಮರ' ಕಾದಂಬರಿಯನ್ನು 'ಸೇಮ್ ಟ್ರೀ ಸೇಮ್ ವಿಲೇಜ್' ಎನ್ನುವ ಶೀರ್ಷಿಕೆಯಡಿ ಇಂಗ್ಲಿಷ್‌ಗೆ ತಂದಿದ್ದಾರೆ.

ಈಗ ಇಲ್ಲಿಯೇ ನೆಲಸಿರುವ ದೀಪಾ ಅವರ ತಂದೆ ಪ್ರಕಾಶ್, ತಾಯಿ ಸುಧಾಮಣಿ, ಪತಿ ಚೆಟ್ಟೀರ ನಾಣಯ್ಯ ಸಂಭ್ರಮದಲ್ಲಿದ್ದಾರೆ.

ದೀಪಾ ಭಾಸ್ತಿ ಅವರ ತಾಯಿ ಸುಧಾಮಣಿ ಅವರು ಪುತ್ರಿಗೆ ಪ್ರಶಸ್ತಿ ಲಭಿಸಿದ್ದಕ್ಕೆ ಅಳಿಯ ಚೆಟ್ಟೀರ ನಾಣಯ್ಯ ಅವರಿಗೆ ಸಿಹಿ ತಿನಿಸಿ ಸಂಭ್ರಮಿಸಿದರು

ಸಿಹಿ ಹಂಚಿ ಸಂಭ್ರಮಿಸಿದ ಬಾನು ಕುಟುಂಬಸ್ಥರು

ಹಾಸನ: 'ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಪಡೆದ ಕನ್ನಡತಿ' ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ನಗರದ ಲೇಖಕಿ ಬಾನು ಮುಷ್ತಾಕ್ ಅವರ ತವರಿನಲ್ಲಿ ಬುಧವಾರ ಸಂಭ್ರಮ ಮನೆ ಮಾಡಿತ್ತು. ಅವರ ಇಲ್ಲಿನ ಪೆನ್ಷನ್ ಮೊಹಲ್ಲಾದ ಮನೆಯಲ್ಲಿ ಪತಿ ಮುಷ್ತಾಕ್ ಮೊಹಿದ್ದೀನ್ ಅವರು ಪುತ್ರ ತಾಹೀರ್, ಸೊಸೆ ಯಾಸಿನ್ ಹಾಗೂ ಮೊಮ್ಮಗಳಿಗೆ ಸಿಹಿ ತಿನ್ನಿಸಿ ಸಂಭ್ರಮಿಸಿದರು.

'ಈ ಗೌರವ ಕರ್ನಾಟಕಕ್ಕೆ, ವಿಶೇಷವಾಗಿ ಹಾಸನ ಜಿಲ್ಲೆಗೆ ಸಿಕ್ಕಿರುವುದು ಅತೀವ ಸಂತೋಷದ ವಿಷಯ. ಇಂಗ್ಲೆಂಡ್‌ನಲ್ಲಿ ಪ್ರಶಸ್ತಿ ಘೋಷಣೆಯವರೆಗೂ ಕುತೂಹಲದಿಂದ ಕಾದಿದ್ದೆವು. ಘೋಷಣೆಯಾದಾಗ ನಂಬಲಾಗಲಿಲ್ಲ' ಎಂದು ಹೇಳಿದರು.

ಹಾಸನದ ಬಾನು ಮುಷ್ತಾಕ್ ಅವರ ಮನೆಯಲ್ಲಿ ಮಗ ತಾಹೀರ್ ಅವರು ಮಗಳಿಗೆ ಸಿಹಿ ತಿನ್ನಿಸಿದರು. ಸೊಸೆ ಯಾಸಿನ್, ಬಾನು ಅವರ ಪತಿ ಮುಷ್ತಾಕ್ ಮೊಹಿದ್ದೀನ್ ಇದ್ದರು.

ಪುತ್ರ ತಾಹೀರ್ ಮುಷ್ತಾಕ್ ಮಾತನಾಡಿ, 'ಪ್ರಶಸ್ತಿ ಬರುವವರೆಗೂ ಕುತೂಹಲವಿತ್ತು. ಇನ್ನೂ ಆ ಗುಂಗಿನಿಂದ ಹೊರಬರಲು ಆಗಿಲ್ಲ. ಈ ಹಿಂದೆ ಎಲ್ಲ ಬೂಕರ್ ಪ್ರಶಸ್ತಿಗಳು ಕಾದಂಬರಿಗೆ ಸಿಕ್ಕಿದ್ದವು. ಆದರೆ ಈ ಬಾರಿ ಆಯ್ದ ಕತೆಗಳಿಗೆ ಸಿಗುತ್ತದೆಯೋ ಇಲ್ಲವೋ ಎಂಬ ಅನುಮಾನವಿತ್ತು. ಆ ಅನುಮಾನ ಮೀರಿ ನನ್ನ ತಾಯಿಯ ಕೃತಿಗೆ ಪ್ರಶಸ್ತಿ ಸಿಕ್ಕಿದೆ. ಇದು ನಮ್ಮ ನಾಡಿಗೆ ಹೆಮ್ಮೆಯ ವಿಚಾರ. ಅವರು ಮೊದಲಿನಿಂದಲೂ ಸಾಹಿತ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಈ ಪ್ರಶಸ್ತಿ ಸಿಕ್ಕಿರುವುದು ನಮಗೆ ಸಂತಸ ತಂದಿದೆ' ಎಂದು ತಿಳಿಸಿದರು.

ವಕೀಲಿಕೆ: 1948ರ ಏಪ್ರಿಲ್ 3 ರಂದು ಎಸ್‌.ಎ. ರೆಹಮಾನ್– ಅಖ್ತರ್ ಬಾನು ಅವರ ಪುತ್ರಿಯಾಗಿ ಹಾಸನದಲ್ಲಿ ಜನಿಸಿದ ಬಾನು ಮುಷ್ತಾಕ್, ಬಿಎಸ್ಸಿ, ಎಲ್‌ಎಲ್‌ಬಿ ಪದವಿ ಪಡೆದಿದ್ದಾರೆ. ಮಕ್ಕಳಾದ ಸಮೀನ ಮೆರಾಜ್, ಲುಬ್ನ ಹಿಜಾಬ್, ಆಯಿಷಾ ನರ್ಗೀಸ್, ತಾಹೀರ್ ಮುಷ್ತಾಕ್ ಹಾಗೂ ಮೊಮ್ಮಕ್ಕಳೊಂದಿಗೆ ತುಂಬು ಕುಟುಂಬವನ್ನು ಹೊಂದಿದ್ದಾರೆ.

ಅವರಿಗೆ ಪ್ರಶಸ್ತಿ ಬಂದಿರುವುದಕ್ಕೆ ಅವರ ಅಭಿಮಾನಿಗಳು, ಸಾಹಿತಿಗಳು ಸಂತಸ ಹಂಚಿಕೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅವರಿಗೆ ಅಭಿನಂದನೆಗಳ ಮಹಾಪೂರವೇ ಹರಿದು ಬಂದಿದೆ.

ಕನ್ನಡದ 'ಎದೆಯ ಹಣತೆ'ಗೆ ಒಲಿದ ಬೂಕರ್

ಒಂದನೇ ಪುಟದಿಂದ...

ತಮ್ಮ ಕಥೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿರುವ ದೀಪಾ ಭಾಸ್ತಿ ಅವರೊಟ್ಟಿಗೆ ಬಾನು ಮುಷ್ತಾಕ್ ಪ್ರಶಸ್ತಿ ಸ್ವೀಕರಿಸಿದರು. ಪ್ರಶಸ್ತಿ ಮೊತ್ತವನ್ನು ಇಬ್ಬರೂ ಸಮಾನವಾಗಿ ಹಂಚಿಕೊಂಡರು.

ಬಾನು ಅವರ ಸಂಕಲನದ 12 ಕಥೆಗಳಲ್ಲಿ ಸಹಿಷ್ಣುಭಾವ, ಪ್ರತಿರೋಧ, ವಿಡಂಬನೆ, ದಕ್ಷಿಣ ಭಾರತದ ಪುರುಷಪ್ರಧಾನ ಸಮಾಜದಲ್ಲಿನ ಪ್ರತಿ ಹೆಣ್ಣುಮಗಳಲ್ಲಿನ ಸಹೋದರಿ ಪ್ರಜ್ಞೆ ಮಿಳಿತವಾಗಿವೆ. ಆಡುಮಾತಿನಲ್ಲಿ ಕಟ್ಟಲಾಗಿರುವ ಕಥೆಗಳಿವು. ಇವೆಲ್ಲವುಗಳ ಜತೆಗೆ ಈ ಕಥಾಜಗತ್ತಿನ ಚಲನಶೀಲ ಹಾಗೂ ಕಾಡುವ ಗುಣಗಳು ಪ್ರಶಸ್ತಿ ಸುತ್ತಿನಲ್ಲಿ ಇತರ ಕೃತಿಗಳನ್ನು ಹಿಂದಿಕ್ಕಿದವು.

ಪ್ರಶಸ್ತಿಯನ್ನು ಘೋಷಿಸಿದ್ದೇ ತಡ, ಬಾನು ಹಾಗೂ ಭಾಸ್ತಿ ಇಬ್ಬರೂ ಪರಸ್ಪರ ಆಲಿಂಗಿಸಿದರು. 'ವೈವಿಧ್ಯಕ್ಕೆ ಸಂದ ಗೌರವವಿದು' ಎಂದು ಬಾನು ಅವರು ಭಾವುಕರಾಗಿ ಹೇಳಿದರು. 'ನನ್ನ ಭಾಷೆಗೆ ಸಂದಿರುವ ಸುಂದರವಾದ ಗೆಲುವು ಈ ಪ್ರಶಸ್ತಿ' ಎಂದು ಅನುವಾದಕಿ ಭಾಸ್ತಿ ಪ್ರತಿಕ್ರಿಯಿಸಿದರು. ಜಗತ್ತಿನ ಆರು ಕೃತಿಗಳು ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಅಂತಿಮ ಸುತ್ತಿನಲ್ಲಿ ಪರಿಗಣಿತವಾಗಿದ್ದವು.

> **ಜಗತ್ತಿಗೆ ಭಾರತೀಯ ಸಾಹಿತ್ಯದ– ಅದೂ ಒಂದು ಭಾಷೆಯ ಸಾಹಿತ್ಯದ– ಬಗ್ಗೆ ಅಲ್ಪ ತಿಳಿವಳಿಕೆ ಇತ್ತು. ಇಂದು ವ್ಯತ್ಯಾಸ ಏನೆಂದರೆ, ಜನರು ಭಾಷೆಗಳ ವೈವಿಧ್ಯವನ್ನು ಅರಿತುಕೊಳ್ಳತೊಡಗಿದ್ದಾರೆ. ದೇಶದ ಭಾಷೆಗಳ ಬಹುತ್ವ ಮತ್ತು ಶ್ರೀಮಂತಿಕೆಯನ್ನು ಕಾಣುವುದು ಬಹಳ ಮುಖ್ಯವಾದುದಾಗಿದೆ. ಬಾನು ಮತ್ತು ಭಾಸ್ತಿ ಅವರನ್ನು ನಾನು ಅಭಿನಂದಿಸುತ್ತೇನೆ**
>
> **ಗೀತಾಂಜಲಿ ಶ್ರೀ,** ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಪಡೆದಿದ್ದ ಭಾರತದ ಮೊದಲ ಸಾಹಿತಿ

'ಇಂಗ್ಲಿಷ್ ಓದುಗರಿಗೆ ನಿಜಕ್ಕೂ ಹೊಸತೇ ಆದ ಕೃತಿ ಇದು. ಆಮೂಲಾಗ್ರವಾದ ಅನುವಾದವು ಭಾಷೆಯನ್ನು ದುಡಿಸಿಕೊಂಡಿರುವ ಬಗೆ ಸೊಗಸಾಗಿದೆ. ಹಲವು ಬಗೆಯ 'ಇಂಗ್ಲಿಷ್‌ಗಳು' ಇಲ್ಲಿ ಬಹುತ್ವದ ಆಯಾಮದಲ್ಲಿ ಸೃಷ್ಟಿಯಾಗಿವೆ. ಅನುವಾದವನ್ನು ವಿಸ್ತೃತವಾಗಿ ಅರ್ಥೈಸಿಕೊಳ್ಳುವ ಸವಾಲನ್ನೂ ಈ ಕೃತಿ ಎದುರಲ್ಲಿಟ್ಟಿದೆ' ಎಂದು ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ–2025ರ ತೀರ್ಪುಗಾರರ ಸಮಿತಿಯ ಅಧ್ಯಕ್ಷ ಮ್ಯಾಕ್ಸ್ ಪೋರ್ಟರ್ ಶ್ಲಾಘಿಸಿದರು.

'ತೀರ್ಪುಗಾರರಿಗೆ ಮೊದಲ ಓದಿನಿಂದಲೇ ಕೃತಿಯು ಖುಷಿ ಕೊಟ್ಟಿತು. ಒಬ್ಬೊಬ್ಬರೂ ತಾವು ಮೆಚ್ಚಿಕೊಳ್ಳಲು ಬಗೆಬಗೆಯ ಕಾರಣಗಳನ್ನು ನೀಡುತ್ತಾ ಹೋದರು' ಎಂದು ಹೇಳಿದರು.

ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಯ ಆಡಳಿತಾಧಿಕಾರಿ ರಿಯಾಮೆಟಾ ರೋಕೊ ಅವರೂ 'ಹಾರ್ಟ್ ಲ್ಯಾಂಪ್' ಕೃತಿಯನ್ನು ಮನದುಂಬಿ ಹೊಗಳಿದರು. ದಮನಿತಗೊಂಡ ಮಹಿಳೆಯ ಮೂರು ದಶಕಗಳ ಆರ್ತನಾದವೊಂದು ಕಥೆಗಳಲ್ಲಿ ಮಿಳಿತವಾಗಿದೆ. ಜಗತ್ತಿನ ಪುರುಷ-ಮಹಿಳೆಯರೆಲ್ಲರೂ ಕೃತಿಯನ್ನು ಓದಬೇಕು. ಸಹಾನುಭೂತಿಯಿಂದಲೂ ದಕ್ಷತೆಯಿಂದಲೂ ಮಾಡಿರುವ ಅನುವಾದವಿದು ಎಂದು ಕೊಂಡಾಡಿದರು.

ಪ್ರಶಸ್ತಿಯ ಅಂತಿಮ ಸುತ್ತಿನಲ್ಲಿ ಡ್ಯಾನಿಷ್ ಲೇಖಕಿ ಸಾಲ್ವೆಜ್ ಬಲ್ಲೆ ಅವರ 'ಆನ್ ದಿ ಕ್ಯಾಲ್ಕ್ಯು-ಲೇಷನ್ ಆಫ್ ವಾಲ್ಯೂಮ್ 1' (ಅನುವಾದ: ಬಾರ್ಬರಾ ಜೆ. ಹ್ಯಾವ್‌ಲ್ಯಾಂಡ್), ಫ್ರೆಂಚ್ ಲೇಖಕ ವಿನ್ಸೆಂಟ್ ಡೆಲೆಕ್ರಾಯಿಕ್ಸ್ ಅವರ 'ಸ್ಮಾಲ್ ಬೋಟ್' (ಅನು: ಹೆಲೆನ್ ಸ್ಟೀವನ್‌ಸನ್), ಜಪಾನ್ ಲೇಖಕಿ ಹಿರೋಮಿ ಕವಾಕಮಿ ಅವರ 'ಅಂಡರ್ ದಿ ಐ ಆಫ್ ದಿ ಬಿಗ್ ಬರ್ಡ್' (ಅನು: ಅಸಾ ಯೊನೆಡಾ), ಇಟಲಿಯ ಬರಹಗಾರ ವಿನ್ಸೆನ್ಜೊ ಲ್ಯಾಟ್ರೊನಿಕೊ ಅವರ 'ಪರ್ಫೆಕ್ಷನ್' (ಅನು: ಸೋಫಿ ಹ್ಯೂಸ್), ಫ್ರೆಂಚ್ ಲೇಖಕಿ ಆ್ಯನೆ ಸೆರೆ ಅವರ 'ಎ ಲಿಯೊಪಾರ್ಡ್–ಸ್ಕಿನ್ ಹ್ಯಾಟ್' (ಅನು: ಮಾರ್ಕ್ ಹಚಿನ್‌ಸನ್) ಕೃತಿಗಳಿದ್ದವು.

ಅಂತಿಮ ಸುತ್ತು ಪ್ರವೇಶಿಸಿದ ಪ್ರತಿ ಕೃತಿಗೆ 5000 ಪೌಂಡ್ (₹5,70,000ಕ್ಕೂ ಹೆಚ್ಚು) ಬಹುಮಾನ ದೊರೆತಿದೆ. ಬೂಕರ್ ಪ್ರಶಸ್ತಿಯ ಮೊತ್ತವನ್ನು ಲೇಖಕಿ ಹಾಗೂ ಅನುವಾದಕರ ನಡುವೆ ಸಮನಾಗಿ ಹಂಚಲಾಗಿದೆ.

> **'ಹಾರ್ಟ್ ಲ್ಯಾಂಪ್' ಕಥಾಸಂಕಲನಕ್ಕೆ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಲಭಿಸಿರುವುದು ಭಾರತಕ್ಕೆ ಅದರಲ್ಲೂ ಕನ್ನಡ ಸಾಹಿತ್ಯಕ್ಕೆ ಐತಿಹಾಸಿಕ ಗಳಿಗೆ. ಸಮಾಜದ ಅಂಚಿನಲ್ಲಿರುವವರ ಕಥೆಯನ್ನು ಪ್ರಾಮಾಣಿಕವಾಗಿ ಹೇಳುವ ಕಾರ್ಯವು ಜಗತ್ತನ್ನು ಕದಲಿಸಬಲ್ಲದು ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ. ಬಾನು ಮುಷ್ತಾಕ್ ಮತ್ತು ಅನುವಾದಕಿ ದೀಪಾ ಭಾಸ್ತಿ ಅವರಿಗೆ ಹೃದಯಪೂರ್ವ ಅಭಿನಂದನೆಗಳು**
>
> **ರಾಹುಲ್ ಗಾಂಧಿ,** ಲೋಕಸಭೆಯ ವಿರೋಧ ಪಕ್ಷದ ನಾಯಕ

ಗೀತಾಂಜಲಿ ಶ್ರೀ ಅವರ 'ಟಾಂಬ್ ಆಫ್ ಸ್ಯಾಂಡ್' ಕೃತಿಗೆ (ಹಿಂದಿಯಿಂದ ಇಂಗ್ಲಿಷ್‌ಗೆ ಡೈಸಿ ರಾಕ್‌ವೆಲ್ ಅನುವಾದಿಸಿದ್ದರು) 2022ರಲ್ಲಿ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಲಭಿಸಿತ್ತು. ಅದಾದ ನಂತರ ಭಾರತದ ಕೃತಿಗೆ ಈ ಪ್ರಶಸ್ತಿ ಲಭಿಸುತ್ತಿರುವುದು ಈಗಲೇ. 2023ರಲ್ಲಿ ತಮಿಳು ಕಾದಂಬರಿಕಾರ ಪೆರುಮಾಳ್ ಮುರುಗನ್ ಅವರ 'ಪೈರ್' (ಅನುವಾದ: ಅನಿರುದ್ಧನ್ ವಾಸುದೇವನ್) ಕೃತಿಯು ಪ್ರಶಸ್ತಿಯ ಅಂತಿಮ ಸುತ್ತು ಪ್ರವೇಶಿಸಿತ್ತು.

ಕನ್ನಡದ ಜತೆಗೆ ಮಹಿಳೆಗೆ ಗೌರವ

ಕನ್ನಡಕ್ಕೆ ಈ ಪ್ರಶಸ್ತಿ ಪ್ರಥಮ ಬಾರಿಗೆ ಬಂದಿದೆ ಎಂಬುದು ಒಂದಾದರೆ, ಮಹಿಳೆಗೆ ದೊರೆತಿದೆ ಎನ್ನುವುದು ಸಂತೋಷಕ್ಕೆ ಇನ್ನೊಂದು ಕಾರಣವಾಗಿದೆ. ಬಹಳಷ್ಟು ವರ್ಷಗಳ ಹಿಂದೆ ಬರೆದ ಕಥೆಗಳಿಗೆ ಈಗ ಜಾಗತಿಕ ಪುರಸ್ಕಾರ ದೊರೆತಿದೆ. ಇದು ಸಂತೋಷದ ಜತೆಗೆ ಹೆಮ್ಮೆಯ ಸಂಗತಿ. ಬಾನು ಮುಷ್ತಾಕ್ ಅವರು ಮಹಿಳೆ ಹಾಗೂ ತಾವು ಕಂಡ ಮುಸ್ಲಿಂ ಲೋಕವನ್ನು ಕೃತಿಯಲ್ಲಿ ಅನಾವರಣ ಮಾಡಿದ್ದಾರೆ. ಅವರು ವಕೀಲೆಯೂ ಆಗಿದ್ದರಿಂದ ನ್ಯಾಯದ ಸಂಗತಿಗಳನ್ನು ಕೂಡ ಕೃತಿಯಲ್ಲಿ ಪ್ರಜ್ಞಾಪೂರ್ವಕ ತಂದಿದ್ದಾರೆ. ಆದ್ದರಿಂದ ಈ ಕೃತಿ ಮುಖ್ಯವಾಗುತ್ತದೆ. ಮಹಿಳೆಯರು ಬರಹವನ್ನು ತಮ್ಮ ಬೌದ್ಧಿಕ ಸಾಮರ್ಥ್ಯದ ಅಭಿವ್ಯಕ್ತಿಗೆ ಬಳಸಿಕೊಳ್ಳುತ್ತಿದ್ದಾರೆ. ಲೇಖಕಿಯರಿಗೆ ಕಥನ ಸಾಹಿತ್ಯವು ಅತ್ಯಂತ ಸಹಜವಾದದ್ದಾಗಿದೆ. ಆದರೆ, ಬೇರೆ ಬೇರೆ ಕಾರಣದಿಂದ ಅದು ಮಸುಕಾಗಿದೆ. ಆ ಅಭಿವ್ಯಕ್ತಿಯನ್ನು ಮುನ್ನೆಲೆಗೆ ತರುವಲ್ಲಿ ಲೇಖಕಿಯರು ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಬಾನು ಮುಷ್ತಾಕ್ ಕೆಲಸ ಗಮನಾರ್ಹವಾಗಿದೆ. ಕನ್ನಡದ ಕೃತಿಯೊಂದಕ್ಕೆ ಈ ರೀತಿ ಮನ್ನಣೆ ಸಿಕ್ಕಾಗ ಕನ್ನಡದಲ್ಲಿ ಏನೋ ಮಹತ್ತರ ಕಾರ್ಯ ನಡೆಯುತ್ತಿದೆ ಎನ್ನುವುದು ಹೊರ ಜಗತ್ತಿಗೆ ತಿಳಿಯುತ್ತದೆ. ಕನ್ನಡದ ಸಾಹಿತ್ಯ ಮುನ್ನೆಲೆಗೆ ಬರಲು ಇದು ಸಹಕಾರಿ.

ಎಚ್.ಎಸ್. ಶ್ರೀಮತಿ, ಲೇಖಕಿ

ಕನ್ನಡ ಲೇಖಕಿಯರಿಗೆ ಹೆಮ್ಮೆ

ಬಾನು ಮುಷ್ತಾಕ್ ಅವರು ಮೊದಲಿನಿಂದಲೂ ಪ್ರತಿರೋಧದ ಮನೋಭಾವ ಹೊಂದಿದವರು. 1970ರಲ್ಲಿ ಸ್ತ್ರೀವಾದಿ ಸಾಹಿತ್ಯ ಶುರುವಾದ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದಂತಹ ಲೇಖಕಿ. ಅವರ ಧಾರ್ಮಿಕ ಮಿತಿಗಳ ಮಧ್ಯೆಯೂ ತಮಗೆ ಅನಿಸಿದ್ದನ್ನು ಬಹಳ ದಿಟ್ಟವಾಗಿ ತಮ್ಮ ಬರಹಗಳಲ್ಲಿ ಪ್ರಸ್ತುತಪಡಿಸಿದ್ದಾರೆ. ಅವರ ಬಗ್ಗೆ ನಮಗೆ ಯಾವಾಗಲೂ ಬಹಳ ಅಭಿಮಾನ ಇದೆ. ಅವರು ಇನ್ನೂ ಹೆಚ್ಚಿನ ಕೀರ್ತಿಗೆ, ಪುರಸ್ಕಾರಕ್ಕೆ ಅರ್ಹರಾಗಿದ್ದಾರೆ. ಅವರ ಸಾಧನೆ ಇಡೀ ಕನ್ನಡದ ಲೇಖಕಿಯರಿಗೆ ಹೆಮ್ಮೆ ಮೂಡಿಸಿದೆ. ಕನ್ನಡದಲ್ಲಿ ಇನ್ನೂ ಗುರುತಿಸಲಾರದ, ಜಾಗತಿಕ ಮನ್ನಣೆಗೆ ಅರ್ಹವಾದಂತಹ ಹಲವು ಕೃತಿಗಳಿವೆ. ಸರ್ಕಾರ, ಕರ್ನಾಟಕ ಅನುವಾದ ಅಕಾಡೆಮಿಗಳು ಯೋಗ್ಯ ಕೃತಿಗಳನ್ನು ಆಯ್ಕೆ ಮಾಡಿ ಕನ್ನಡದ ಕೃತಿಗಳನ್ನು ಜಗತ್ತಿನ ಬೇರೆ ಭಾಷೆಗಳಿಗೆ ಅನುವಾದ ಮಾಡಿದಾಗ ಕನ್ನಡ ಸಾಹಿತ್ಯದ ಶ್ರೀಮಂತಿಕೆಯ ಬಗ್ಗೆ ಜಗತ್ತಿಗೆ ಗೊತ್ತಾಗುತ್ತದೆ. ಇದಕ್ಕಿಂತಲೂ ಹೆಚ್ಚಿನ ಮಹತ್ವದ ಕೃತಿಗಳು ಕನ್ನಡದಲ್ಲಿವೆ. ಅವುಗಳನ್ನು ಬೆಳಕಿಗೆ ತರುವ ಕೆಲಸವನ್ನು ಸರ್ಕಾರ ಮಾಡಬೇಕು

ವೀಣಾ ಶಾಂತೇಶ್ವರ, ಲೇಖಕಿ, ಧಾರವಾಡ

ಕನ್ನಡದ ವಿವೇಕಕ್ಕೆ ಸಂದ ಗೌರವ

1990ರಲ್ಲಿ ನಾವು ಹಾಸನದಲ್ಲಿ ಇದ್ದಾಗ ಬಾನು ಮುಷ್ತಾಕ್ ಅವರ 'ಹೆಜ್ಜೆ ಮೂಡಿದ ಹಾದಿ' ಪ್ರಥಮ ಕಥಾ ಸಂಕಲನವನ್ನು ಡಿ.ಎಸ್.ನಾಗಭೂಷಣ ಮತ್ತವರ ಗೆಳೆಯರು ತಮ್ಮ ಸಾಹಿತ್ಯ–ಸಂವಾದ ಪ್ರಕಾಶನದ ಮೂಲಕ ಪ್ರಕಟಿಸಿದ್ದರು. ಗೃಹಿಣಿ, ಪತ್ರಕರ್ತೆ, ನಗರಸಭೆ ಸದಸ್ಯೆ, ವಕೀಲೆ, ಹೋರಾಟಗಾರ್ತಿ, ಸಾಹಿತಿ, ಮಹಾತಾಯಿ ಹೀಗೆ ಹಲವು ಅವತಾರಗಳಲ್ಲಿ ನಾನವರನ್ನು ಕಂಡಿರುವೆ. ಈ ಕ್ಷೇತ್ರಗಳಲ್ಲಿನ ಒಳನೋಟಗಳು ಅವರ ಬರವಣಿಗೆಗೆ ಕಸುವು ತುಂಬಿವೆ ಅಂದುಕೊಂಡಿರುವೆ. ತಮ್ಮ ಸಮುದಾಯದ ಪಾತ್ರಗಳನ್ನು, ಪರ-ವಿರೋಧ ಧೋರಣೆ ತಳೆಯದೆ ನಿರ್ಮಮಕಾರದಿಂದ ಮನುಷ್ಯರನ್ನಾಗಿ ಮಾತ್ರ ನೋಡಿ ಚಿತ್ರಿಸಿರುವುದನ್ನು ನೋಡಬಹುದು. ಯಾವುದೇ ರೀತಿಯ ಸಾಹಿತ್ಯಕ ರಾಜಕೀಯ ಮಾಡದ, ತಮ್ಮ ಪಾಡಿಗೆ ತಾವಿದ್ದು ಬರೆದ ಘನವಾದ ವ್ಯಕ್ತಿತ್ವ ಅವರದ್ದು. ಅವರು ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಪಾತ್ರರಾಗಿರುವುದು ಲೇಖಕಿಯರ ವಿಶ್ವಾಸ ಹೆಚ್ಚಿಸಿದೆ. ಇದು ಮಹಿಳಾ ಸಾಹಿತ್ಯ ಲೋಕಕ್ಕೆ, ಕನ್ನಡದ ವಿವೇಕಕ್ಕೆ ಸಂದ ಗೌರವ

ಸವಿತಾ ನಾಗಭೂಷಣ, ಕವಯಿತ್ರಿ

ಕನ್ನಡದ ಗುಣಮಟ್ಟ ಸಾಬೀತು

ಬಾನು ಮುಷ್ತಾಕ್ ಅವರಿಗೆ ಬೂಕರ್ ಪ್ರಶಸ್ತಿ ಲಭಿಸಿರುವುದು ತುಂಬಾ ಖುಷಿ ತಂದಿದೆ. ಲೇಖಕಿಯ ಪುಸ್ತಕಕ್ಕೆ ಸಿಕ್ಕಿದ್ದು ಖುಷಿಯನ್ನು ಹೆಚ್ಚಿಸಿದೆ. ಬಾನು ಮುಷ್ತಾಕ್ ಅವರು ಕನ್ನಡದ ಮಹಿಳಾ ಬರಹಗಾರರಿಗೆ ಕೀರ್ತಿ ತಂದುಕೊಟ್ಟಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಹ ಗುಣಮಟ್ಟ ಕನ್ನಡ ಸಾಹಿತ್ಯಕ್ಕಿದೆ ಎಂಬುದು ಈ ಪ್ರಶಸ್ತಿಯ ಮೂಲಕ ಸಾಬೀತಾಗಿದೆ. ಮಾನವ ಸಮಾಜದ ಅಸ್ವಸ್ಥತೆಯನ್ನು, ಅದು ಸೃಷ್ಟಿಸುವ ಸಂಕಟವನ್ನು ನೋವನ್ನು, ವಿಶೇಷತಃ ಹೆಣ್ಣಿನ ಬದುಕಿನ ದಾರುಣತೆಯನ್ನು ಬಾನು ಅವರು ಜಗತ್ತಿಗೆ ನಿರೂಪಿಸಿದ್ದಾರೆ.

ವೈದೇಹಿ, ಲೇಖಕಿ



ಮರವೇರಿದ ಚಿರತೆ

ಮೈಸೂರು ಜಿಲ್ಲೆಯ ನಾಗರಹೊಳೆ ಅಭಯಾರಣ್ಯದ ದಮ್ಮನಕಟ್ಟೆ ಅರಣ್ಯದಲ್ಲಿ ಬುಧವಾರ ಮರವೊಂದರ ಮೇಲೆ ಚಿರತೆ ವಿರಮಿಸಿದ್ದು, ಸಫಾರಿ ಪ್ರಿಯರ ಕ್ಯಾಮೆರಾಕ್ಕೆ ಪೋಸ್ ಕೊಟ್ಟಿತು– ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

'ಹಿಂದೂಗಳನ್ನಷ್ಟೇ ಗುರಿ ಮಾಡಬೇಡಿ'

ಬೆಳಗಾವಿಯಲ್ಲಿ ನಡೆದಿದ್ದ ಕುರಾನ್ ದಹನ ಪ್ರಕರಣ • ಗ್ರಾಮಸ್ಥರಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಸಂತಿ ಬಸ್ತವಾಡದಲ್ಲಿ ಕುರಾನ್ ಮತ್ತು ಹದೀಸ್‌ಗಳನ್ನು ಸುಟ್ಟ ಪ್ರಕರಣದಲ್ಲಿ ಪೊಲೀಸರು ವಿನಾಕಾರಣ ಹಿಂದೂಗಳಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಆರೋಪಿಸಿ, ಗ್ರಾಮಸ್ಥರು ನಗರದಲ್ಲಿ ಬುಧವಾರ 'ಹಿಂದೂ ಜನಾಕ್ರೋಶ ಯಾತ್ರೆ' ನಡೆಸಿದರು.

ಇಲ್ಲಿನ ರಾಣಿ ಚನ್ನಮ್ಮ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಸಂಚಾರ ತಡೆದರು. ನಂತರ ಜಿಲ್ಲಾಧಿಕಾರಿ ಕಚೇರಿಯವರೆಗೆ ಮೆರವಣಿಗೆ ನಡೆಸಿ, ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಕುರಾನ್ ಸುಟ್ಟ ಪ್ರಕರಣದಲ್ಲಿ ವಿನಾಕಾರಣ ಹಿಂದೂಗಳನ್ನು ಗುರಿ ಮಾಡಲಾಗುತ್ತಿದೆ. ಹಿಂದೂಗಳು ಕುರಾನ್ ಸುಡುವಂಥ ಕೆಟ್ಟ ಕೆಲಸ ಮಾಡುವುದಿಲ್ಲ. ಬರೀ ಹಿಂದೂಗಳನ್ನೇ ಏಕೆ ಗುರಿ ಮಾಡುತ್ತಿದ್ದೀರಿ' ಎಂದೂ ಪ್ರಶ್ನಿಸಿದರು.

'ಮಸೀದಿಯಲ್ಲಿ ಅಳವಡಿಸಿದ್ದ ಸಿ.ಸಿ. ಟಿ.ವಿ ಕ್ಯಾಮೆರಾ ಯಾವ ಕಾರಣಕ್ಕೆ ತೆಗೆದಿದ್ದಾರೆ? ಘಟನೆ ನಡೆದಾಗ ಮಸೀದಿ ಬೀಗ ಯಾರು ತೆಗೆದಿದ್ದಾರೆ? ಧರ್ಮಗುರು (ಮೌಲಾನಾ) ಮಸೀದಿ ಬಿಟ್ಟು, ಅನುಮಾನಾಸ್ಪದವಾಗಿ ಊರಿಗೆ ಹೋಗಿದ್ದು ಏಕೆ' ಎಂದು ಪ್ರಶ್ನಿಸಿದರು.

ಮಾಜಿ ಶಾಸಕ ಸಂಜಯ ಪಾಟೀಲ, ಮುಖಂಡರಾದ ಧನಂಜಯ ಜಾಧವ, ಕೃಷ್ಣಭಟ್, ಪ್ರಸಾದ ಸಡೇಕರ, ಪವನ ನಾಯಕ, ಜ್ಯೋತಿಬಾ ಪಾಟೀಲ, ಬಾಬಾಜಿ ಪಾವಸೆ, ನಾಗೇಂದ್ರ ನಾಯಕ, ರಾಮಾ ಪಾಟೀಲ, ಅಜಯ ಚನ್ನಿಕುಪ್ಪಿ, ವಿಠ್ಠಲ ಅಂಕಲಗಿ, ಗಂಗಾರಾಮ ಗುರುವ ನೇತೃತ್ವ ವಹಿಸಿದ್ದರು.

ಕುರಾನ್ ಸುಟ್ಟ ಪ್ರಕರಣದಲ್ಲಿ ಹಿಂದೂಗಳನ್ನಷ್ಟೇ ಗುರಿ ಮಾಡಲಾಗುತ್ತಿದೆ ಎಂದು ಆರೋಪಿಸಿ, ಸಂತಿ ಬಸ್ತವಾಡ ಗ್ರಾಮಸ್ಥರು ಬೆಳಗಾವಿಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ನಿರ್ವಾಹಕನ ಮಗನಿಗೆ ಒಲಿದ ಐಎಫ್‌ಎಸ್ ಹುದ್ದೆ

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಕರಡಕಲ್ ಗ್ರಾಮದ ಆನಂದಕುಮಾರ ನಾಗರಾಳ ಅವರು ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ದೇಶಕ್ಕೆ 41ನೇ ರ‍್ಯಾಂಕ್ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

ಅವರ ತಂದೆ ಬಸವರಾಜ ಅವರು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆ (ಕೆಕೆಆರ್‌ಟಿಸಿ)ಯಲ್ಲಿ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದಾರೆ. ತಾಯಿ ಟೇಲರಿಂಗ್ ಮಾಡುತ್ತಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ಆನಂದಕುಮಾರ ಐಎಎಸ್ ಅಧಿಕಾರಿಯಾಗುವ ಕನಸು ಕಂಡಿದ್ದರು.

ಅವರು ಪಟ್ಟಣದ ಆದರ್ಶ ವಿದ್ಯಾಲಯದಲ್ಲಿ 6ನೇ ತರಗತಿಗೆ ಪ್ರವೇಶ ಪಡೆದು, 10ನೇ ತರಗತಿವರೆಗೆ ಓದಿ ಮುಂದೆ ಪಿಯುಸಿಯನ್ನು ಬಳ್ಳಾರಿಯಲ್ಲಿ ಹಾಗೂ ಬಿ.ಎಸ್‌ಸಿ ಧಾರವಾಡದಲ್ಲಿ ಪೂರ್ಣಗೊಳಿಸಿದ್ದಾರೆ.

ಆನಂದ ಕುಮಾರ

ಮೂರನೇ ಪ್ರಯತ್ನದಲ್ಲಿ ಸಾಧನೆ: ಯುಪಿಎಸ್‌ಸಿ ಪರೀಕ್ಷೆಗೆ ದೆಹಲಿ, ಬೆಂಗಳೂರಿನಲ್ಲಿ ಕೋಚಿಂಗ್ ಪಡೆದುಕೊಂಡು ಮೇನ್ಸ್‌ವರೆಗೂ ಹೋಗಿದ್ದರೂ ಐಎಎಸ್ ಆಸೆ ಕೈಗೂಡಿರಲಿಲ್ಲ. ಐಎಫ್‌ಎಸ್ ಪರೀಕ್ಷೆಯಲ್ಲಿ ಎರಡು ಪ್ರಯತ್ನದಲ್ಲಿ ವಿಫಲವಾದರೂ ಮತ್ತೆ ಕಠಿಣ ಪರಿಶ್ರಮದ ಮೂಲಕ ಮೂರನೇ ಪ್ರಯತ್ನದಲ್ಲಿ ದೇಶಕ್ಕೆ 41ನೇ ರ‍್ಯಾಂಕ್ ಗಳಿಸುವ ಮೂಲಕ ಆನಂದಕುಮಾರ ಗುರಿ ತಲುಪಿದ್ದಾರೆ.

ಗುಂಡು ಸಿಡಿದು ಯುವಕ ಸಾವು

ತೀರ್ಥಹಳ್ಳಿ: ಸಮೀಪದ ಕಟ್ಟೇಹಕ್ಕಲು ಗ್ರಾಮದ ಬಳಿ ಬೇಟೆಗೆಂದು ತೆರಳಿದ್ದ ಯುವಕನೊಬ್ಬ ಕೈಲಿದ್ದ ಬಂದೂಕಿನಿಂದ ಗುಂಡು ಸಿಡಿದ ಪರಿಣಾಮ ಮಂಗಳವಾರ ತಡರಾತ್ರಿ ಮೃತಪಟ್ಟಿದ್ದಾನೆ.

ಬಸವಾನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಳವಾರ ಮಜರೆ ಗ್ರಾಮದ ಗೌತಮ್ ಕೆ.ವಿ. (27) ಮೃತ ಯುವಕ.

ಬಂದೂಕಿನ ಟ್ರಿಗರ್ ಎಳೆದು ಗುಡ್ಡ ಹತ್ತುವಾಗ ಕಾಲು ಜಾರಿ ಕೆಳಗೆ ಬಿದ್ದ ವೇಳೆ ಬಂದೂಕಿನಿಂದ ಗುಂಡು ಸಿಡಿದು ಕುತ್ತಿಗೆ ಮೂಲಕ ಮುಖವನ್ನು ಸೀಳಿಕೊಂಡು ಹೋಗಿ ಮೃತಪಟ್ಟಿದ್ದಾನೆ

ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು. ತೀರ್ಥಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಿಯಾಂಕ್‌ ಗೆ ನಿಂದನೆ: ಛಲವಾದಿಗೆ ದಿಗ್ಬಂಧನ

ಚಿತ್ತಾಪುರ (ಕಲಬುರಗಿ ಜಿಲ್ಲೆ): ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಅವಾಚ್ಯ ಪದಗಳಿಂದ ನಿಂದಿಸಿದ ಆರೋಪದಡಿ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರಿಗೆ ಚಿತ್ತಾಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ನಾಲ್ಕು ಗಂಟೆ ಕಾಲ ದಿಗ್ಬಂಧನ ಹಾಕಿ ಪ್ರತಿಭಟಿಸಿದರು.

ಕಲಬುರಗಿಯಲ್ಲಿ ಬೆಳಿಗ್ಗೆ ಪತ್ರಿಕಾ ಗೋಷ್ಠಿಯಲ್ಲಿ ಪ್ರಿಯಾಂಕ್ ವಿರುದ್ಧ ನಾರಾಯಣಸ್ವಾಮಿ ಅವಾಚ್ಯ ಪದ ಬಳಸಿದ್ದರು. ಬಿಜೆಪಿ ಸಂಜೆ ಹಮ್ಮಿಕೊಂಡಿದ್ದ ತಿರಂಗಾ ಯಾತ್ರೆಯಲ್ಲಿ ಪಾಲ್ಗೊಳ್ಳಲು ಚಿತ್ತಾಪುರದ ಪ್ರವಾಸಿ ಮಂದಿರಕ್ಕೆ ಬಂದಿದ್ದಾಗ ಕಾಂಗ್ರೆಸ್‌ನ ನೂರಾರು ಕಾರ್ಯಕರ್ತರು ಬಂದು ನಾರಾಯಣಸ್ವಾಮಿ ವಿರುದ್ಧ ಘೋಷಣೆ ಕೂಗಿದರು. ನಾರಾಯಣಸ್ವಾಮಿ ಅವರ ಕಾರಿನ ಮೇಲೆ ನೀಲಿ ಬಣ್ಣ ಎರಚಿ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದಾಗಿ ನಾರಾಯಣಸ್ವಾಮಿ ಅವರು ತಿರಂಗಾ ಯಾತ್ರೆಯಲ್ಲೂ ಪಾಲ್ಗೊಳ್ಳದೆ ಪ್ರವಾಸಿ ಮಂದಿರದಲ್ಲಿ ದಿಗ್ಬಂಧನಕ್ಕೆ ಒಳಗಾದರು.

ಟೀಕೆಗೆ ವಿಷಾದ: 'ಗಾದೆ ಮಾತು ಹೇಳುವಾಗ ಪ್ರಿಯಾಂಕ್ ಖರ್ಗೆ ಅವರ ಹೆಸರು ಉಲ್ಲೇಖಿಸಿದ್ದೆ. ಅದರಿಂದ ಸಚಿವರ ಮನಸ್ಸಿಗೆ ನೋವಾಗಿದ್ದರೆ ವಿಷಾದಿಸುತ್ತೇನೆ. ಅವರನ್ನು ಟೀಕಿಸಿದ ಮಾತನ್ನು ಹಿಂಪಡೆಯುತ್ತೇನೆ' ಎಂದು ಛಲವಾದಿ ನಾರಾಯಣಸ್ವಾಮಿ ಅವರು ರಾತ್ರಿ ಸುದ್ದಿಗಾರರಿಗೆ ತಿಳಿಸಿದರು.

ಭೀಕರ ಅಪಘಾತ: ಆರು ಸಾವು

ವಿಜಯಪುರ: ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮನಗೂಳಿ ಬಳಿ ಸೋಲಾಪುರ- ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಬುಧವಾರ ಬೆಳಿಗ್ಗೆ ಸಂಭವಿಸಿದ ಭೀಕರ ಅಪಘಾತದಲ್ಲಿ ಆರು ಜನ ಸಾವಿಗೀಡಾಗಿದ್ದಾರೆ.

ಮಹಿಂದ್ರಾ ಸ್ಕಾರ್ಪಿಯೋ ವಾಹನದಲ್ಲಿ ಪಯಣಿಸುತ್ತಿದ್ದ ತೆಲಂಗಾಣ ರಾಜ್ಯದ ಗದ್ವಾಲದ ಕೆನರಾ ಬ್ಯಾಂಕ್ ಉದ್ಯೋಗಿ ಟಿ.ಭಾಸ್ಕರನ್(36) ಹಾಗೂ ಅವರ ಪತ್ನಿ ಪವಿತ್ರಾ(34), ಪುತ್ರ ಅಭಿರಾಮ್(14), ಮಗಳು ಜೋಸ್ನಾ(12), ಕಾರು ಚಾಲಕ ವಿಜಯಪುರ ಜಿಲ್ಲೆಯ ಹೊರ್ತಿ ನಿವಾಸಿ ವಿಕಾಸ ಮಕನಿ(30) ಹಾಗೂ ವಿ.ಆರ್.ಎಲ್ ಬಸ್ ಚಾಲಕ ಧಾರವಾಡ ಜಿಲ್ಲೆಯ ಗೋಪನಕೊಪ್ಪ ಸಿದ್ರಾಮ ನಗರದ ಬಸವರಾಜ ರಾಠೋಡ(48) ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ಮೃತ ಭಾಸ್ಕರನ್ ಅವರ ಪುತ್ರ ಪ್ರವೀಣತೇಜ(10) ಹಾಗೂ ಬಸ್ ಪ್ರಯಾಣಿಕ ಪುಣೆ ನಿವಾಸಿ ಬಾಳಾಸಾಹೇಬ ಕನಸೆ (49) ತೀವ್ರವಾಗಿ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸ್ಕಾರ್ಪಿಯೊ ಹೆದ್ದಾರಿ ಡಿವೈಡರ್‌ಗೆ ಡಿಕ್ಕಿ ಹೊಡೆದು ಹಾರಿ, ವಿ.ಆರ್.ಎಲ್ ಬಸ್‌ಗೆ ಡಿಕ್ಕಿ ಹೊಡೆದಿದೆ. ನಿಯಂತ್ರಣ ಕಳೆದುಕೊಂಡ ಬಸ್, ರಸ್ತೆ ಬದಿ ಲಾರಿಗೆ ಡಿಕ್ಕಿಹೊಡೆದಿದೆ.ಲಾರಿ ಉರುಳಿ ಬಿದ್ದಿದೆ.

ತೆಂಗಿನ ನಾರು, ಮರದ ಹಲಗೆಗಳಿಂದ ತಯಾರಿಸಿದ ಪ್ರಾಚೀನ ಮಾದರಿ ನೌಕೆ

'ಐಎನ್‌ಎಸ್‌ವಿ ಕೌಂಡಿನ್ಯ' ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಕಾರವಾರ: ಪ್ರಾಚೀನ ಕಾಲದ ಮಾದರಿಯಲ್ಲೇ ಸಿದ್ಧಪಡಿಸಲಾದ ಭಾರತೀಯ ನೌಕಾಸೇನೆಯ ಹಡಗು 'ಐಎನ್‌ಎಸ್‌ವಿ ಕೌಂಡಿನ್ಯ' ಬುಧವಾರ ಇಲ್ಲಿನ ಕದಂಬ ನೌಕಾನೆಲೆಯಲ್ಲಿ ಲೋಕಾರ್ಪಣೆಗೊಂಡಿತು.

ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರು ನೌಕೆ ಲೋಕಾರ್ಪಣೆಗೊಳಿಸಿದರು. ಮರದ ಹಲಗೆಗಳನ್ನು ತೆಂಗಿನ ನಾರುಗಳ ದಾರ ಬಳಸಿ ಹೊಲಿದು ರಚಿಸಿದ ನೌಕೆಯ ಮುಂಭಾಗದಲ್ಲಿ ಸಿಂಹದ ಪ್ರತಿಕೃತಿ ರಚಿಸಿದ್ದು ಗಮನಸೆಳೆಯುತ್ತಿದೆ. ಹರಪ್ಪ ಶೈಲಿಯ ಲಂಗರು ಹೊಂದಿದೆ.

'ಹಿಂದೂ ಮಹಾಸಾಗರದಾದ್ಯಂತ ಪ್ರಯಾಣ ಬೆಳೆಸಿದ ಪೌರಾಣಿಕ ಭಾರತೀಯ ನಾವಿಕ ಮತ್ತು ಸನ್ಯಾಸಿ ಕೌಂಡಿನ್ಯ ಅವರು ನೌಕಾಯಾನದಲ್ಲಿ ಹೆಸರು ಮಾಡಿದ್ದರು. ಹೀಗಾಗಿ ನೌಕೆಗೆ ಅವರ ಹೆಸರು ಇಡಲಾಗಿದೆ. ನೌಕೆಯ ಹಾಯಿಗೆ ಕದಂಬರ ರಾಜಲಾಂಛನವಾಗಿದ್ದ ಗಂಡಭೇರುಂಡ ಚಿತ್ರ ಅಳವಡಿಸಲಾಗಿದೆ. ಅಜಂತಾ ಗುಹೆಯಲ್ಲಿನ ಪ್ರಾಚೀನ ನೌಕಾಯಾನದ ಚಿತ್ರಗಳು ನೌಕೆ ತಯಾರಿಕೆಗೆ ಸ್ಫೂರ್ತಿಯಾಗಿವೆ' ಎಂದು ಈ ಹಡಗಿನ ತಯಾರಿಕೆಯ ಪರಿಕಲ್ಪನೆಯ ರೂವಾರಿ, ಪ್ರಧಾನ ಮಂತ್ರಿ ಅವರ ಆರ್ಥಿಕ ಸಲಹಾ ಮಂಡಳಿ ಸದಸ್ಯ ಸಂಜೀವ್ ಸನ್ಯಾಲ್ ತಿಳಿಸಿದರು.

ಕಾರವಾರದ ಕದಂಬ ನೌಕಾನೆಲೆಯಲ್ಲಿ ಲೋಕಾರ್ಪಣೆಗೊಂಡು ನಿಂತಿರುವ ಪ್ರಾಚೀನ ಮಾದರಿಯ 'ಐಎನ್‌ಎಸ್‌ವಿ ಕೌಂಡಿನ್ಯ'

ಅಭಿವೃದ್ಧಿಗೆ ಅಡ್ಡಗಾಲಿಡುವ ಯತ್ನ

'ಪಹಲ್ಗಾಮ್ ದಾಳಿ ಕೇವಲ ಭಾರತೀಯರನ್ನು ಬೆದರಿಸುವ ಯತ್ನವಲ್ಲ. ದೇಶದ ಅಭಿವೃದ್ಧಿಗೆ ಅಡ್ಡಗಾಲಿಡಲು ಶತ್ರುರಾಷ್ಟ್ರಗಳು ನಡೆಸಿದ ಕುಕೃತ್ಯ. ಇವುಗಳಿಗೆ ದೇಶ ಎಂದಿಗೂ ಹೆದರುವುದಿಲ್ಲ' ಎಂದು ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಹೇಳಿದರು.

'ಉರಿ, ಪುಲ್ವಾಮಾ ದಾಳಿಯ ಬಳಿಕ ಭಯೋತ್ಪಾದಕರ ನೆಲೆಗಳ ಮೇಲೆ ದಾಳಿ ನಡೆಸಿದಾಗ ಕಾಂಗ್ರೆಸ್ ನಾಯಕರು ಸಾಕ್ಷ್ಯ ಕೇಳಿದ್ದರು. ಈ ಬಾರಿಯೂ ಅಂತಹದ್ದೇ ಮಾತುಗಳನ್ನಾಡುತ್ತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಜನರೇ ಅವರಿಗೆ ತಕ್ಕ ಉತ್ತರ ನೀಡಲಿದ್ದಾರೆ' ಎಂದೂ ವ್ಯಂಗ್ಯವಾಡಿದರು.

'ಗೋವಾದ ಹೋದಿ ಇನ್ನೋವೇಶನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ನೌಕೆಯನ್ನು ಎರಡು ವರ್ಷಗಳ ಅವಧಿಯಲ್ಲಿ ನಿರ್ಮಿಸಿದೆ. ಸಾಂಪ್ರದಾಯಿಕ ತೆಂಗಿನ ನಾರಿನ ಹೊಲಿಗೆ ತಂತ್ರಗಳನ್ನು ಬಳಸಿ ಬಾಬು ಶಂಕರನ್ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಕರಕುಶಲಕರ್ಮಿಗಳು ಸೇರಿ ಹಡಗನ್ನು ನಿರ್ಮಿಸಿದ್ದಾರೆ' ಎಂದು ನೌಕಾದಳದ ಅಧಿಕಾರಿಗಳು ವಿವರಿಸಿದರು.

'ಹಡಗು ಸದ್ಯ ಕದಂಬ ನೌಕಾನೆಲೆಯಲ್ಲಿ ಇರಲಿದ್ದು, ಕೆಲ ದಿನಗಳ ಬಳಿಕ ಒಮನ್ ದೇಶಕ್ಕೆ ಪ್ರಯಾಣ ಬೆಳೆಸಲಿದೆ' ಎಂದೂ ಮಾಹಿತಿ ನೀಡಿದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ವೈಸ್ ಅಡ್ಮಿರಲ್ ರಾಜಾರಾಮ್ ಸ್ವಾಮಿನಾಥನ್, ನೌಕಾದಳದ ನಿವೃತ್ತ ಮುಖ್ಯಸ್ಥ ಕರಣವೀರ ಸಿಂಗ್, ಕರ್ನಾಟಕ ನೌಕಾ ಪ್ರದೇಶದ ಧ್ವಜಾಧಿಕಾರಿ ರಿಯರ್ ಅಡ್ಮಿರಲ್ ಕೆ.ಎಂ.ರಾಮಕೃಷ್ಣನ್ ಇದ್ದರು.

ನಕಲಿ ದಾಖಲೆ ಸೃಷ್ಟಿ ನಾಲ್ವರು ಅಮಾನತು

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): 'ನಕಲಿ ದಾಖಲೆ ಸೃಷ್ಟಿಸಿ ಬೇರೊಬ್ಬ ವ್ಯಕ್ತಿಗೆ ಜಮೀನು ಮಂಜೂರಾತಿಗೆ ಅವಕಾಶ ಮಾಡಿಕೊಟ್ಟು ಕರ್ತವ್ಯಲೋಪ ಎಸಗಿದ್ದಾರೆ' ಎಂಬ ಆರೋಪದ ಮೇರೆಗೆ ಉಪತಹಶೀಲ್ದಾರ್ ಸೇರಿದಂತೆ ನಾಲ್ವರು ಕಂದಾಯ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಉಪ ತಹಶೀಲ್ದಾರ್ ಪ್ರಸನ್ನ ಕುಮಾರ್, ಕಂದಾಯ ನಿರೀಕ್ಷಕ ಶಶಿಧರ್, ಪ್ರಥಮ ದರ್ಜೆ ಸಹಾಯಕ ಸಿ.ಗಣೇಶ್ ಮತ್ತು ಗ್ರಾಮ ಆಡಳಿತ ಅಧಿಕಾರಿ ಎಚ್. ಕರ್ಣ ಅಮಾನತುಗೊಂಡವರು.

'ಎನ್.ಸಿ.ಆರ್. ಕಡತಗಳನ್ನು ಪರಿಶೀಲಿಸದೆ ಅಕ್ರಮವಾಗಿ ಅರ್ಜಿಯನ್ನು ಬದಲಾಯಿಸಿ, ಕಡತವನ್ನು ಬಗರ್ ಹುಕುಂ ಸಮಿತಿಯ ಮುಂದೆ ಮಂಡಿಸಲು ಅವಕಾಶ ಮಾಡಿಕೊಟ್ಟು ನಿರ್ಲಕ್ಷತೆ ತೋರಿ ಕರ್ತವ್ಯ ಲೋಪವೆಸಗಿದ್ದಾರೆ' ಎಂದು ಬಗರ್‌ಹುಕುಂ ಸಮಿತಿ ಮಾಜಿ ಸದಸ್ಯ ನರಸಿಂಹಮೂರ್ತಿ ಎಂಬುವರು ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿಗೆ ದೂರು ನೀಡಿದ್ದರು.

ವಿಕಸಿತ ಭಾರತದ
ಅಮೃತ ನಿಲ್ದಾಣಗಳು

ಉದ್ಘಾಟನೆ

ದೇಶದಾದ್ಯಂತ **103** ಪುನರಾಭಿವೃದ್ಧಿಗೊಂಡ ಅಮೃತ ನಿಲ್ದಾಣಗಳು

ಸೇರಿದಂತೆ

ಕರ್ನಾಟಕದಲ್ಲಿ 5 ಅಮೃತ ನಿಲ್ದಾಣಗಳು

ಧಾರವಾಡ

ಮುನಿರಾಬಾದ್

ಗದಗ

ಬಾಗಲಕೋಟೆ

ಗೋಕಾಕ ರೋಡ್

ಪ್ರಯೋಜನೆಗಳು

- ನಿಲ್ದಾಣಗಳನ್ನು ನಗರ ಕೇಂದ್ರಗಳಾಗಿ ಅಭಿವೃದ್ಧಿಪಡಿಸಲಾಗಿದ್ದು, ವಿಶ್ರಾಂತಿ ಕೊಠಡಿ, ವಿಶಾಲವಾದ ಸಂಚಾರ ಪ್ರದೇಶ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿದೆ.
- ವಿರಾಸತ್ ಭೀ, ವಿಕಾಸ್ ಭೀ" ಎಂಬ ಧ್ಯೇಯವಾಕ್ಯದೊಂದಿಗೆ ಸ್ಥಳೀಯ ವಾಸ್ತುಶೈಲಿಯಿಂದ ಪ್ರೇರಿತವಾದ ನಿಲ್ದಾಣಗಳ ಕಟ್ಟಡಗಳು
- ಪ್ರತ್ಯೇಕ ಪ್ರವೇಶ ಮತ್ತು ನಿರ್ಗಮನ ದ್ವಾರಗಳು, ಉತ್ತಮ ಪಾರ್ಕಿಂಗ್, ಲಿಫ್ಟ್, ಎಸ್ಕಲೇಟರ್, ಎಕ್ಸಿಕ್ಯೂಟಿವ್ ಲೌಂಜ್ , ವೈಟಿಂಗ್ ಏರಿಯಾ, ಪ್ರಯಾಣಿಕರು ಮತ್ತು ದಿವ್ಯಾಂಗ ಸ್ನೇಹಿ ಸೌಲಭ್ಯಗಳನ್ನು ಒದಗಿಸಲಾಗಿದೆ
- ಬಹು-ಮಾದರಿ ಸಂಪರ್ಕದ ಏಕೀಕರಣದೊಂದಿಗೆ ಈ ನಿಲ್ದಾಣಗಳು ಈ ಪ್ರದೇಶದ ಸಾಮಾಜಿಕ-ಆರ್ಥಿಕ ಚಟುವಟಿಕೆಗಳ ಕೇಂದ್ರವಾಗುತ್ತವೆ
- ಪರಿಸರದಮೇಲೆ ಆಗುವ ಪರಿಣಾಮವನ್ನು ತಗ್ಗಿಸಲು ಇಂಧನ ದಕ್ಷತೆ ಮತ್ತು ಹಸಿರು ಕ್ರಮಗಳನ್ನು ಅಳವಡಿಸಲಾಗಿದೆ

ಇವರಿಂದ

ನರೇಂದ್ರ ಮೋದಿ

ಪ್ರಧಾನ ಮಂತ್ರಿಗಳು

(ವೀಡಿಯೊ ಕಾನ್ಫರೆನ್ಸ್ ಮೂಲಕ)

ಗುರುವಾರ 22 ಮೇ, 2025, ಸಮಯ: ಬೆಳಿಗ್ಗೆ 10:30

ಘನ ಉಪಸ್ಥಿತಿ

ಥಾವರ್ ಚಂದ್ ಗೆಹ್ಲೋಟ್
ರಾಜ್ಯಪಾಲರು, ಕರ್ನಾಟಕ

ಸಿದ್ದರಾಮಯ್ಯ
ಮುಖ್ಯಮಂತ್ರಿಗಳು, ಕರ್ನಾಟಕ

ಪ್ರಲ್ಹಾದ್ ಜೋಶಿ
ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಮತ್ತು ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರು

ಅಶ್ವಿನಿ ವೈಷ್ಣವ್
ಕೇಂದ್ರ ರೈಲ್ವೆ, ಮಾಹಿತಿ ಮತ್ತು ಪ್ರಸಾರ ಮತ್ತು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು

ಅರ್ಜುನ್ ರಾಮ್ ಮೇಘವಾಲ್
ಕೇಂದ್ರ ಕಾನೂನು ಮತ್ತು ನ್ಯಾಯ (ಸ್ವತಂತ್ರ ಅಧಿಕಾರ) ಹಾಗೂ ಸಂಸದೀಯ ವ್ಯವಹಾರಗಳ ಸಚಿವರು

ವಿ. ಸೋಮಣ್ಣ
ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರು

ಭಾರತೀಯ ರೈಲ್ವೆ

DD NEWS ಡಿಡಿ ನ್ಯೂಸ್‌ನಲ್ಲಿ ಕಾರ್ಯಕ್ರಮದ ನೇರಪ್ರಸಾರವನ್ನು ವೀಕ್ಷಿಸಿ

www.indianrailways.gov.in

ಫಾಲೋ ಮಾಡಿ /RailMinIndia

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಕೈರೆ ಬಳಿ ಕಾರವಾರ–ಶಿರಸಿ ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಭೂಕುಸಿತ ಸಂಭವಿಸಿದೆ

ಹೊಸಪೇಟೆ ತಾಲ್ಲೂಕಿನ ಬೈಲವದ್ದಿಗೇರಿಯಲ್ಲಿ ಮಂಗಳವಾರ ಸಂಜೆ ಮಳೆ ನೀರಲ್ಲಿ ಸಿಲುಕಿಕೊಂಡಿದ್ದ ವಾಹನದಲ್ಲಿದ್ದವರನ್ನು ರಕ್ಷಿಸಲಾಯಿತು

ರಾಜ್ಯದ ಹಲವೆಡೆ ಮುಂದುವರಿದ ವರ್ಷಧಾರೆಯ ಅಬ್ಬರ

ಮಳೆಯ ರಭಸಕ್ಕೆ ಭೂಕುಸಿತ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಕಲಬುರಗಿ: ಕಿತ್ತೂರು ಕರ್ನಾಟಕದ ಹಲವು ಭಾಗಗಳಲ್ಲಿ ಬುಧವಾರ ಉತ್ತಮ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮಳೆಯ ಅಬ್ಬರ ಮುಂದುವರಿದಿದೆ. ಕೆಲವೆಡೆ ಭೂಕುಸಿತ ಸಂಭವಿಸಿದ್ದು ಆತಂಕ ಸೃಷ್ಟಿಸಿದೆ.

ಜಿಲ್ಲೆಯ ಕುಮಟಾ ತಾಲ್ಲೂಕಿನ ಕೈರೆ ಬಳಿ ರಾಷ್ಟ್ರೀಯ ಹೆದ್ದಾರಿ–66 ಮತ್ತು 766ಇ ಸಂಪರ್ಕಿಸುವ ರಾಜ್ಯ ಹೆದ್ದಾರಿಯ ಅಂಚಿನಲ್ಲಿ ಭೂ ಕುಸಿತ ಉಂಟಾಗಿದೆ. ಶಿರಸಿ–ಕುಮಟಾ ಮಾರ್ಗದ ದೇವಿಮನೆ ಘಟ್ಟದಲ್ಲಿಯೂ ಕುಸಿತ ಸಂಭವಿಸಿದ್ದು, ದೊಡ್ಡ ಗಾತ್ರ ಬಂಡೆಗಲ್ಲುಗಳು ರಸ್ತೆಗೆ ಉರುಳಿವೆ.

ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಕೊಪ್ಪಳ, ಬೀದರ್ ಜಿಲ್ಲೆಯ ವಿವಿಧೆಡೆಯೂ ಮುಂಗಾರು ಪೂರ್ವ ಮಳೆ ಮುಂದುವರಿದಿದೆ. ಕಲಬುರಗಿಯಲ್ಲಿ ಬೆಳಿಗ್ಗೆ ಸಾಧಾರಣ ಮಳೆಯಾದರೆ, ಮಧ್ಯಾಹ್ನ 3.30ರಿಂದ ಒಂದು ಗಂಟೆ ಧಾರಾಕಾರ ಮಳೆ ಸುರಿದಿದೆ. ಚಿಂಚೋಳಿ, ಕಮಲಾಪುರದಲ್ಲಿ ಸಾಧಾರಣ ಮಳೆಯಾಗಿದೆ.

ಗಂಗಾವಳಿ ನದಿಯಲ್ಲಿ ನೀರಿನ ಹರಿವಿನ ಮಟ್ಟ ಏರಿಕೆಯಾಗಿದ್ದು, ಯಲ್ಲಾಪುರ ತಾಲ್ಲೂಕಿನ ಪಣಸಗುಳಿಯ ಸೇತುವೆ ಮೇಲೆ ನೀರು ಉಕ್ಕಿ ಹರಿಯುತ್ತಿದೆ. ಸಮೀಪದ ಗುಳ್ಳಾಪುರದಲ್ಲಿ ಗ್ರಾಮಸ್ಥರು ನಿರ್ಮಿಸಿಕೊಂಡಿದ್ದ ತಾತ್ಕಾಲಿಕ ಮಣ್ಣಿನ ಸೇತುವೆ ಕೊಚ್ಚಿಕೊಂಡು ಹೋಗಿದೆ.

ಭಟ್ಕಳ ತಾಲ್ಲೂಕಿನ ಬೆಳಕೆಯಲ್ಲಿ ಮಂಗಳವಾರದಿಂದ ಬುಧವಾರ ನಸುಕಿನ ಜಾವದವರೆಗೆ 22.4 ಸೆಂ.ಮೀ, ಹೊನ್ನಾವರದ ಸಾಲ್ಕೋಡ ಗ್ರಾಮದಲ್ಲಿ 22.1 ಸೆಂ.ಮೀ ಮಳೆಯಾಗಿದೆ.

ವಿಜಯನಗರ ಜಿಲ್ಲೆಯ ಹಲವೆಡೆ ಮಂಗಳವಾರ ರಾತ್ರಿಯಿಂದ ಜಿಟಿ ಜಿಟಿ ಮಳೆ ಸುರಿಯುತ್ತಿದ್ದು, ಹರಪನಹಳ್ಳಿ ತಾಲ್ಲೂಕಿನ ಹುಲಿಕಟ್ಟಿ ಗ್ರಾಮದ ಕಣದಲ್ಲಿ ಸಿಡಿಲು ಬಡಿದು ನಾಗರಾಜಪ್ಪ ಎಂಬುವವರಿಗೆ ಸೇರಿದ ಒಂದು ಎತ್ತು ಸತ್ತಿದೆ. ಹೂವಿನಹಡಗಲಿಯಲ್ಲಿ ನಾಲ್ಕು ಮಣ್ಣಿನ ಮನೆಗಳು, ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿಯಲ್ಲಿ ಎರಡು ಮನೆಗಳು ಕುಸಿದಿವೆ. ಬೈಲವದ್ದಿಗೇರಿಯಲ್ಲಿ ಮಂಗಳವಾರ ಸಂಜೆ ವಿದ್ಯುತ್ ಕಾಮಗಾರಿಗೆ ಮಹೀಂದ್ರಾ ಗೂಡ್ಸ್ ವಾಹನದಲ್ಲಿ ಬಂದಿದ್ದ ಕಾರ್ಮಿಕರು ಮಳೆ ನೀರಲ್ಲಿ ಸಿಕ್ಕಿಹಾಕಿಕೊಂಡಾಗ ಸ್ಥಳೀಯರು ಅವರನ್ನು ಅಪಾಯದಿಂದ ಪಾರು ಮಾಡಿದರು.

ಬಳ್ಳಾರಿ ಜಿಲ್ಲೆಯಲ್ಲಿ ಅಂದಾಜು 9 ಮನೆಗಳಿಗೆ ಹಾನಿಯಾಗಿದೆ. ಸಂಡೂರು ತಾಲ್ಲೂಕಿನ ನಾರಿಹಳ್ಳ ಜಲಾಶಯ ಭರ್ತಿಯಾಗಿದೆ. ಬುಧವಾರ ರಾತ್ರಿಯಿಂದ ಜಲಾಶಯದಿಂದ ನೀರು ಹೊರ ಬಿಡಲಾಗುತ್ತಿದೆ. ಜಲಾಶಯಕ್ಕೆ 374 ಕ್ಯುಸೆಕ್ ಒಳಹರಿವು ಇದೆ. ಕಂಪ್ಲಿ ತಾಲ್ಲೂಕಿನ ಸೋಮಲಾಪುರ ರಸ್ತೆ ಬಳಿ ಹೊಲದಲ್ಲಿದ್ದ ಕುರಿಮಂದೆಗೆ ಸಿಡಿಲು ಬಡಿದು ದೇವರಮನೆ ದೊಡ್ಡಬಸಪ್ಪ ಅವರಿಗೆ ಸೇರಿದ ನಾಲ್ಕು ಕುರಿಗಳು ಮೃತಪಟ್ಟಿವೆ.

ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಮುಕ್ಕಾಲು ಗ್ರಾಮದಲ್ಲಿ ಕೊಟ್ಟಿಗೆಯೊಂದು ಕುಸಿದಿದೆ. ಹುಬ್ಬಳ್ಳಿ ಸೇರಿದಂತೆ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ಗದಗ ಜಿಲ್ಲೆಯ ವಿವಿಧೆಡೆ ಇಡೀ ದಿನ ಜಿಟಿಜಿಟಿ ಮಳೆ ಸುರಿಯಿತು.

ಕೊಪ್ಪಳ ಜಿಲ್ಲೆಯಲ್ಲಿ ಜಿಟಿ–ಜಿಟಿ ಮಳೆ ಸುರಿದಿದ್ದು, ಜನಜೀವನ ಅಸ್ತವ್ಯಸ್ತಗೊಂಡಿತು. ಗಂಗಾವತಿ ತಾಲ್ಲೂಕಿನಲ್ಲಿ ಮುಂಗಾರು ಪೂರ್ವ ಮಳೆಯಿಂದ ಭತ್ತದ ರಾಶಿಗೆ ತೊಂದರೆಯಾಗಿದೆ.

ಯಾದಗಿರಿ ತಾಲ್ಲೂಕಿನ ಯರಗೋಳ ಗ್ರಾಮದಲ್ಲಿ ಸಿಡಿಲು ಬಡಿದು 12 ಆಡು ಮೃತಪಟ್ಟಿವೆ. ವಡಗೇರಾ ತಾಲ್ಲೂಕಿನ ನಾಯ್ಕಲ್ ಗ್ರಾಮದ ಮರೆಮ್ಮ ದೇವಸ್ಥಾನದ ಗೋಪುರಕ್ಕೆ ಸಿಡಿಲು ಬಡಿದು ಹಾನಿಯಾಗಿದೆ.

ಬೀದರ್ ಜಿಲ್ಲೆಯ ಭಾಲ್ಕಿ, ಬೀದರ್ ಹಾಗೂ ಔರಾದ್ ತಾಲ್ಲೂಕು ವ್ಯಾಪ್ತಿಯಲ್ಲಿ ಮಂಗಳವಾರ ತಡರಾತ್ರಿ, ಬುಧವಾರ ನಸುಕಿನ ಜಾವ ಬಿರುಸಿನ ಮಳೆಯಾಗಿದೆ. ಮಧ್ಯಾಹ್ನದಿಂದ ಜಿಟಿಜಿಟಿ ಮಳೆಯಾಗಿದೆ.

ಮಡಿಕೇರಿಯಲ್ಲಿ ಬಿರುಸಿನಿಂದ ಮತ್ತು ವಿರಾಜಪೇಟೆಯಲ್ಲಿ ಸಾಧಾರಣವಾಗಿ ಮಳೆ ಸುರಿಯಿತು.

ಹುಬ್ಬಳ್ಳಿಯಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಬುಧವಾರ ಇಲ್ಲಿನ ಉಣಕಲ್ ಕೆರೆ ತುಂಬಿ ಕೋಡಿ ಹರಿದಿದೆ
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ದಕ್ಷಿಣ ಕನ್ನಡ: 12 ಕಡೆ 10 ಸೆಂ.ಮೀ.ಗೂ ಹೆಚ್ಚು ಮಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮಂಗಳವಾರ ದಿನವಿಡೀ ಸುರಿದ ಮಳೆ ಬುಧವಾರವೂ ಮುಂದುವರೆದಿದೆ. ಆದರೆ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಯಲ್ಲಿ ಆರ್ಭಟ ಕಡಿಮೆಯಾಗಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ದ.ಕ. ಜಿಲ್ಲೆಯ 12 ಗ್ರಾಮಗಳಲ್ಲಿ 10 ಸೆಂ.ಮೀ.ಗೂ ಅಧಿಕ ಮಳೆಯಾಗಿದೆ. ಹಲವೆಡೆ ಮಣ್ಣು ಕುಸಿದು ಹಾನಿ ಉಂಟಾಗಿದೆ.

ನಗರದಲ್ಲಿ ಮಂಗಳವಾರ ರಾತ್ರಿ ಬಿಟ್ಟು ಬಿಟ್ಟು ಮಳೆಯಾಗಿದೆ. ಬುಧವಾರ ನಸುಕಿನಲ್ಲಿ ಮಳೆ ನಿಂತಿತ್ತು. ಬಳಿಕ ಸಂಜೆವರೆಗೂ ಬಿಟ್ಟು ಬಿಟ್ಟು ತುಂತುರು ಮಳೆಯಾಯಿತು. ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆ (15.7 ಸೆಂಮೀ) ನೀರುಮಾರ್ಗದಲ್ಲಿ ದಾಖಲಾಗಿದೆ.

ಮೇರಮಜಲಿನಲ್ಲಿ 14.7, ಕೋಟೆಕಾರಿನಲ್ಲಿ 12.8, ಪುದು ಗ್ರಾಮದಲ್ಲಿ 12.6, ಬಗಡಬೆಳ್ಳೂರಿನಲ್ಲಿ 12, ತಲಪಾಡಿಯಲ್ಲಿ 11.5, ಕಿನ್ಯದಲ್ಲಿ 11.1, ಐಕಳದಲ್ಲಿ 10.8, ಮುನ್ನೂರಿನಲ್ಲಿ 10.75, ಅಮ್ಟಾಡಿಯಲ್ಲಿ 10.7, ರಾಯಿಯಲ್ಲಿ 10.1 ಹಾಗೂ ಪಡುಮಾರ್ನಾಡಿನಲ್ಲಿ 10.05 ಸೆಂ.ಮೀ ಮಳೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಉಳ್ಳಾಲ ತಾಲ್ಲೂಕಿನ ಸಜಿಪಪಡು ಗ್ರಾಮದ ತಲೆಮೊಗರು ಎಂಬಲ್ಲಿ ಮಸೀದಿಯ ಆವರಣ ಗೋಡೆ ಬಿದ್ದು ಇಸಮ್ಮ ಅವರ ಮನೆ ಹಾಗೂ ಮನೆಯಂಗಳದಲ್ಲಿ ನಿಲ್ಲಿಸಿದ್ದ ಸ್ಕೂಟರ್ ಭಾಗಶಃ ಹಾನಿಗೊಳಗಾಗಿದೆ. ಕೊಣಾಜೆ ಗ್ರಾಮದ ಆದಿಶಕ್ತಿ ದೇವಸ್ಥಾನ ದಡಸ್ ಎಂಬಲ್ಲಿ ತಡೆಗೋಡೆ ಕುಸಿದಿದೆ. ಕಿನ್ಯ ಗ್ರಾಮದ ಮಹಮ್ಮದ್ ಹನೀಫ್ ಅವರ ಮನೆ ಭಾಗಶಃ ಹಾನಿಗೊಂಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ತಾಲ್ಲೂಕಿನ ಸಜಿಪ ಪಡುವಿನಲ್ಲಿ ಬುಧವಾರ ಕುಸಿದ ತಡೆಗೋಡೆಯಡಿ ಸ್ಕೂಟರ್ ಸಿಲುಕಿತ್ತು

ನಕಲಿ ವೆಬ್‌ಸೈಟ್ ವಿರುದ್ಧ ಕೆಇಎ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಬಯಸುವ ಅಭ್ಯರ್ಥಿಗಳಿಂದ ವೈಯಕ್ತಿಕ ಮಾಹಿತಿ ಸಂಗ್ರಹಿಸುತ್ತಿದ್ದ ಆರೋಪದ ಮೇಲೆ ನಕಲಿ ವೆಬ್‌ಸೈಟ್ www-kcet.org ವಿರುದ್ಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸೈಬರ್ ಅಪರಾಧ ಠಾಣೆಗೆ ದೂರು ನೀಡಿದೆ.

ಕೆಇಎ ಹೆಸರಿನಲ್ಲಿ, ಪ್ರಾಧಿಕಾರದ ಲೋಗೊ ಸಹ ಬಳಸಿಕೊಂಡು ಅಭ್ಯರ್ಥಿಗಳಿಂದ ಶೈಕ್ಷಣಿಕ ವಿವರ, ಇಂಟರ್ನೆಟ್ ಪ್ರೊಟೊಕಾಲ್ (ಐಪಿ) ವಿಳಾಸಗಳು ಸೇರಿದಂತೆ ಮಾಹಿತಿ ಸಂಗ್ರಹಿಸಿ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ 'ಮೆಡಿಕಲ್ ಎಕ್ಸ್‌ಪೊ' ಆಯೋಜಿಸಲಾಗಿದೆ. ವೈದ್ಯಕೀಯ ಸೀಟು ಪಡೆಯಲು ಸೂಕ್ತ ಮಾರ್ಗದರ್ಶನ ನೀಡಲಾಗುತ್ತದೆ ಎಂದು ಕೆಲ ಅಭ್ಯರ್ಥಿಗಳಿಂದ ತಲಾ ₹30 ಸಾವಿರ ವಸೂಲಿ ಮಾಡಲಾಗಿದೆ ಎಂದು ಕೆಇಎ ಅಧಿಕಾರಿಗಳು ದೂರಿನಲ್ಲಿ ವಿವರಿಸಿದ್ದಾರೆ.

ವಂಚನೆ ವಿಷಯ ತಿಳಿದ ನಂತರ ಕೆಇಎ ಸಿಬ್ಬಂದಿ ತಾವೇ ವಿದ್ಯಾರ್ಥಿಗಳಂತೆ ನಟಿಸಿ, ಮತ್ತಷ್ಟು ಮಾಹಿತಿ ಸಂಗ್ರಹಿಸಿದ್ದಾರೆ. ನಂತರ ಪೊಲೀಸರಿಗೆ ದೂರು ನೀಡಿದ್ದಾರೆ.

'ವೈದ್ಯಕೀಯ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳನ್ನೂ 'ಮೆಡಿಕಲ್ ಎಕ್ಸ್‌ಪೊ'ಗೆ ಆಹ್ವಾನಿಸಿರುವುದಾಗಿ ಅಭ್ಯರ್ಥಿಗಳನ್ನು ವಂಚಕರು ನಂಬಿಸಿದ್ದಾರೆ. ತಮ್ಮನ್ನು ವೈದ್ಯಕೀಯ ಮಾರ್ಗದರ್ಶಕರು ಎಂದು ಗುರುತಿಸಿಕೊಂಡಿದ್ದಾರೆ. ಸುಮಾರು 1,000 ಅಭ್ಯರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಶಂಕಿಸಿದ್ದಾರೆ.

ವಿದ್ಯಾರ್ಥಿಗಳು ಮತ್ತು ಪೋಷಕರು ಕೆಇಎ ವೆಬ್‌ಸೈಟ್‌ಗೆ ಭೇಟಿ ನೀಡಿದಾಗ ಈ ನಕಲಿ ವೆಬ್‌ಸೈಟ್ ಸ್ವಯಂಚಾಲಿತವಾಗಿ ತೆರೆದುಕೊಳ್ಳುತ್ತಿದ್ದು, ಲಿಂಕ್ ಕ್ಲಿಕ್ ಮಾಡಿದ ತಕ್ಷಣ ಅರ್ಜಿ ಸಂಖ್ಯೆ, ಕೋರ್ಸ್, ಮೊಬೈಲ್ ಸಂಖ್ಯೆ ಮತ್ತು ಇತರ ಮಾಹಿತಿ ದಾಖಲಿಸಲು ಕೇಳುತ್ತಿದೆ. ಇಂತಹ ನಕಲಿ ವೆಬ್‌ಸೈಟ್‌ಗಳ ಕುರಿತು ಜಾಗೃತಿ ವಹಿಸಬೇಕು. ಕೆಇಎ ಸಹಾಯವಾಣಿಗೆ ಕರೆ ಮಾಡಿ ವಿಚಾರಿಸಬೇಕು ಎಂದು ಕೆಇಎ ಸಲಹೆ ನೀಡಿದೆ.

ಸುದ್ದಿ 2 ನಿಮಿಷ

ದರ್ಶನ್ ಪ್ರಕರಣ: ಜುಲೈಗೆ ವಿಚಾರಣೆ ಮುಂದೂಡಿಕೆ

ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಇತರೆ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿರುವ ಆದೇಶ ಪ್ರಶ್ನಿಸಿ ಬೆಂಗಳೂರು ನಗರ ಪೊಲೀಸರು ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮುಂದೂಡಿದೆ.

ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಆರ್. ಮಹದೇವನ್ ಪೀಠವು ಬುಧವಾರ ನಡೆಸಬೇಕಿತ್ತು. ಪ್ರಕರಣದ ವಿಚಾರಣೆ ನಡೆಸುವಂತೆ ಕರ್ನಾಟಕ ಸರ್ಕಾರದ ಪರ ವಕೀಲರು ಮನವಿ ಮಾಡಿದರು.

ನ್ಯಾಯಾಲಯದ ಬೇಸಿಗೆ ರಜೆಯ ಬಳಿಕ ವಿಚಾರಣೆ ನಡೆಸುವುದಾಗಿ ಪೀಠ ಹೇಳಿತು.

ದರ್ಶನ್, ಪವಿತ್ರಗೌಡ, ಲಕ್ಷ್ಮಣ್, ಪ್ರದೂಶ್, ನಾಗರಾಜು, ಅನುಕುಮಾರ್ ಹಾಗೂ ಜಗದೀಶ್ ಅವರಿಗೆ ಹೈಕೋರ್ಟ್ ನಿಯಮಿತ ಜಾಮೀನು ಮಂಜೂರು ಮಾಡಿತ್ತು. ಉಳಿದ ಹತ್ತು ಆರೋಪಿಗಳಿಗೆ ವಿಚಾರಣಾ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಈ ನಿಯಮಿತ ಜಾಮೀನು ಆದೇಶ ಪ್ರಶ್ನಿಸಿ ವಕೀಲ ಅನಿಲ್ ನಿಶಾನಿ ಅರ್ಜಿ ಸಲ್ಲಿಸಿದ್ದರು.

ರುದ್ರಪಟ್ಟಣ ಸಂಗೀತೋತ್ಸವ

ಕೊಣನೂರು (ಹಾಸನ): 'ಸಂಗೀತದ ಹಬ್ಬ'ವೆಂದೇ ಪ್ರಖ್ಯಾತವಾಗಿರುವ ಇಲ್ಲಿನ ರುದ್ರಪಟ್ಟಣದ 5 ದಿನಗಳ ಸಂಗೀತೋತ್ಸವಕ್ಕೆ ಬುಧವಾರ ಅದ್ದೂರಿ ಚಾಲನೆ ದೊರಕಿತು. 22ನೇ ವರ್ಷದ ಸಂಗೀತೋತ್ಸವದಲ್ಲಿ ಮೊದಲ ದಿನವೇ ಯುವ ಪ್ರತಿಭೆಗಳು ತಮ್ಮ ಹಾಡುಗಾರಿಕೆ, ನೃತ್ಯಗಳಿಂದ ಜನರ ಮನಸೂರೆಗೊಂಡರು.

ಗಾಯಕಿ ಮಧುರಾ ಪ್ರಶಾಂತ್ ನಡೆಸಿಕೊಟ್ಟ ಕಛೇರಿಯಲ್ಲಿ 'ಮಹಾಗಣಪತಿ' ಕೃತಿಯನ್ನು ಅಠಾಣ ರಾಗದಲ್ಲಿ, ತ್ಯಾಗರಾಜರ 'ಶ್ರೀರಾಮ ಪಾದಮ' ಕೃತಿಯನ್ನು ಅಮೃತ ವಾಹಿನಿ ರಾಗದಲ್ಲಿ, 'ಬ್ರೋವ ಭಾರಮಾ' ಕೃತಿಯನ್ನು ಬಹುದಾರಿ ರಾಗದಲ್ಲಿ ಮತ್ತು ವಾದಿರಾಜರ ಕೃತಿ 'ನಾರಾಯಣ ಎನ್ನಿರೋ' ಅನ್ನು ಹಂಸಧ್ವನಿ ರಾಗದಲ್ಲಿ ಪ್ರಸ್ತುತಪಡಿಸಿದರು.

ಉತ್ಸವವನ್ನು ಉದ್ಘಾಟಿಸಿ ಮಾತನಾಡಿದ ಆಯೋಜಕ ವಿದ್ವಾನ್ ಆರ್.ಕೆ.ಪದ್ಮನಾಭ್, 'ರುದ್ರಪಟ್ಟಣದಲ್ಲಿ ಜರುಗುವ ಸಂಗೀತೋತ್ಸವದಲ್ಲಿ ದೇಶದ ವಿವಿಧ ಭಾಗಗಳ ಸಂಗೀತ ಕಲಾವಿದರು ಸ್ವಯಂ ಆಸಕ್ತಿಯಿಂದ ಕಾರ್ಯಕ್ರಮ ನೀಡುವ ರೀತಿಯು ಇಲ್ಲಿನ ಸಂಗೀತ ಪರಂಪರೆಗೆ ದೊರಕುತ್ತಿರುವ ದೊಡ್ಡ ಗೌರವ' ಎಂದರು.

ಬಿಎಂಸಿಆರ್‌ಐ ವೈದ್ಯ ಅಮಾನತು

ಬೆಂಗಳೂರು: ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ತುರ್ತು ಸೇವೆಗಳ ವೈದ್ಯಾಧಿಕಾರಿಯನ್ನು ವೈದ್ಯಕೀಯ ಶಿಕ್ಷಣ ಇಲಾಖೆ ಅಮಾನತುಗೊಳಿಸಿದೆ.

ಡಾ.ಕೆ.ಎನ್. ಶಂಕರ್ ಅಮಾನತುಗೊಂಡವರು. ನಕಲಿ ವೈದ್ಯಕೀಯ ಪ್ರಮಾಣಪತ್ರ ನೀಡಿದ ಆರೋಪ ಹಾಗೂ ಭ್ರಷ್ಟಾಚಾರದ ದೂರುಗಳ ಕುರಿತು ಬಿಎಂಸಿಆರ್‌ಐ ತನಿಖೆ ನಡೆಸಿ, ವೈದ್ಯಕೀಯ ಶಿಕ್ಷಣ ಇಲಾಖೆಗೆ ವರದಿ ನೀಡಿತ್ತು. ಈಚೆಗೆ ನಡೆದ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲೂ ಅಮಾನತಿಗೆ ಶಿಫಾರಸು ಮಾಡಲಾಗಿತ್ತು.

ಡಾ.ಶಂಕರ್ ಕ್ರಿಮಿನಲ್ ಆರೋಪ ಎದುರಿಸುತ್ತಿರುವವರಿಗೆ ನಕಲಿ ವೈದ್ಯಕೀಯ ಪ್ರಮಾಣಪತ್ರ ವಿತರಿಸಿದ್ದಾರೆ. ಅವರ ವಿರುದ್ಧದ ದೂರುಗಳು ಪ್ರಾಥಮಿಕ ತನಿಖೆಯಲ್ಲಿ ಸಾಬೀತಾಗಿವೆ. ಹಾಗಾಗಿ, ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಇಲಾಖೆಯ ಆದೇಶದಲ್ಲಿ ವಿವರಿಸಲಾಗಿದೆ.

ಸರ್ಫಿಂಗ್
ಮಂಗಳೂರಿನಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಅರಬ್ಬಿ ಸಮುದ್ರದಲ್ಲಿ ಅಲೆಗಳ ಅಬ್ಬರ ಹೆಚ್ಚಾಗಿದ್ದು, ಸರ್ಫಿಂಗ್ ಪಟುಗಳು ತಣ್ಣೀರು ಬಾವಿಯಲ್ಲಿ ಬುಧವಾರ ಮುಂಜಾನೆ ಮಳೆಯಲ್ಲೇ ಅಭ್ಯಾಸ ನಡೆಸಿದರು
ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಸಲೀಂ ಪ್ರಭಾರ ಡಿಜಿಪಿ

ಒಂದನೇ ಪುಟದಿಂದ...

ಸೈಬರ್ ಅಪರಾಧ- ಪೊಲೀಸರಿಗೆ ತರಬೇತಿ: 'ಸೈಬರ್ ಅಪರಾಧ ಪ್ರಕರಣಗಳು ಇತ್ತೀಚೆಗೆ ಸಾಮಾನ್ಯ ಪ್ರಕರಣಗಳಂತೆ ಆಗಿವೆ. ಅಪರಾಧ ಪ್ರಕರಣಗಳ ಪೈಕಿ ಸೈಬರ್ ಅಪರಾಧ ಪ್ರಕರಣಗಳ ಪ್ರಮಾಣ ಶೇ 12ರಷ್ಟಿದೆ. ಈ ಪ್ರಕರಣಗಳ ನಿಯಂತ್ರಣ, ಪತ್ತೆ ಕಾರ್ಯಕ್ಕೆ 40 ಸಾವಿರ ಪೊಲೀಸರಿಗೆ ತರಬೇತಿ ನೀಡಲಾಗಿದೆ' ಎಂದು ಸಲೀಂ ಹೇಳಿದರು.

'ಸೈಬರ್ ಅಪರಾಧ ಪ್ರಕರಣ ಪತ್ತೆಗೆ ಗ್ರಾಮೀಣ ಠಾಣೆಗಳಿಗೆ ಸೌಲಭ್ಯ ಕಲ್ಪಿಸಲಾಗುವುದು. ಪೊಲೀಸ್ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೂ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

ವಿವಿಧೆಡೆ ಸಲೀಂ ಕಾರ್ಯ: ಬೆಂಗಳೂರು ಸಮೀಪದ ಚಿಕ್ಕಬಾಣಾವರದ ಸಲೀಂ ಅವರು, 1993ರ ಅಖಿಲ ಭಾರತೀಯ ನಾಗರಿಕ ಸೇವಾ ಪರೀಕ್ಷೆಯಲ್ಲಿ ಆಯ್ಕೆ ಆದರು.

> **ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿದ್ದು, ಹೆಮ್ಮೆ ಅನಿಸುತ್ತಿದೆ**
> **ಅಲೋಕ್ ಮೋಹನ್**
> ನಿವೃತ್ತ ಡಿಜಿ–ಐಜಿಪಿ

ರಾಜ್ಯ ಪೊಲೀಸ್ ಇಲಾಖೆಯ 26 ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಉಡುಪಿ, ಹಾಸನದಲ್ಲಿ ಎಸ್‌ಪಿ ಆಗಿದ್ದರು. ಮೈಸೂರು ನಗರ ಪೊಲೀಸ್ ಕಮಿಷನರ್ ಆಗಿ, ಬೆಂಗಳೂರು ನಗರದ ವಿಶೇಷ ಪೊಲೀಸ್ ಕಮಿಷನರ್ ಆಗಿ, ಪೂರ್ವ ವಲಯದ ಪೊಲೀಸ್ ಮಹಾ ನಿರೀಕ್ಷಕರಾಗಿ ಕೆಲಸ ಮಾಡಿದ್ದರು.

ಐಎಂಎ, ಕ್ರಿಪ್ಟೊ ಕರೆನ್ಸಿ ಹ್ಯಾಕಿಂಗ್ ಹಗರಣ, ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ನಡೆಸಿದ್ದಾರೆ ಎನ್ನಲಾದ ಲೈಂಗಿಕ ದೌರ್ಜನ್ಯ ಪ್ರಕರಣ, ವಾಲ್ಮೀಕಿ ನಿಗಮದಲ್ಲಿ ನಡೆದ ಹಗರಣ, ಪಿಎಸ್‌ಐ ನೇಮಕಾತಿ ಹಗರಣದ ತನಿಖೆಗೆ ಸರ್ಕಾರ ರಚಿಸಿದ್ದ ಎಸ್‌ಐಟಿ ಮೇಲ್ವಿಚಾರಣೆಯನ್ನು ಸಲೀಂ ಅವರೇ ವಹಿಸಿದ್ದರು.

ಸಂಕ್ಷಿಪ್ತ ಸುದ್ದಿ

ಸಮವಸ್ತ್ರ ಪೂರೈಕೆ ನಾಲ್ಕು ಸಂಸ್ಥೆಗಳಿಗೆ ಹೊಣೆ

ಬೆಂಗಳೂರು: ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಮಕ್ಕಳಿಗೆ ಎರಡು ಜತೆ ಸಮವಸ್ತ್ರದ ಬಟ್ಟೆ ಪೂರೈಸಲು ಶಾಲಾ ಶಿಕ್ಷಣ ಇಲಾಖೆ ನಾಲ್ಕು ಸಂಸ್ಥೆಗಳಿಗೆ ಅವಕಾಶ ನೀಡಿದೆ.

ವಿದ್ಯಾವಿಕಾಸ ಯೋಜನೆಯಲ್ಲಿ 2025–26ನೇ ಸಾಲಿಗೆ ಉಚಿತವಾಗಿ ಸಮವಸ್ತ್ರದ ಬಟ್ಟೆ ವಿತರಿಸಲಾಗುತ್ತಿದ್ದು, ಬೆಂಗಳೂರಿನ ಎಚ್‌ಡಿಸಿ ಕಂಪನಿ, ಮಹಾರಾಷ್ಟ್ರದ ಪದಮಚಂದ್ ಮಿಲಾಪಚಂದ್ ಜೈನ್, ಅರವಿಂದ್ ಕಾಟ್ಸನ್ ಇಂಡಿಯಾ ಹಾಗೂ ರಾಜಸ್ಥಾನದ ಸಂಗಂ ಇಂಡಿಯಾ ಕಂಪನಿಗಳಿಗೆ ಬಟ್ಟೆ ಪೂರೈಸಲು ಕಾರ್ಯಾದೇಶ ನೀಡಲಾಗಿದೆ. ಪೂರೈಕೆಯಾದ ಬಟ್ಟೆಯ ಗುಣಮಟ್ಟ ಪರೀಕ್ಷಿಸಲು ಪ್ರತಿ ತಾಲ್ಲೂಕಿಗೂ ನೋಡಲ್ ಅಧಿಕಾರಿ, ಮುಖ್ಯ ಶಿಕ್ಷಕರನ್ನು ಒಳಗೊಂಡ ಸಮಿತಿ ರಚಿಸಲು ಸೂಚಿಸಲಾಗಿದೆ.

ಕಂಪನಿಗಳು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳಿಗೆ ಸರಬರಾಜು ಮಾಡುತ್ತವೆ. ಅಲ್ಲಿಂದ ಶಾಲೆಗಳಿಗೆ ತಲುಪಿಸಲು ಪ್ರತಿ ಬಿಇಒಗಳಿಗೆ ಸಾಗಣೆ ವೆಚ್ಚ ₹20 ಸಾವಿರ ನೀಡಲಾಗುತ್ತಿದೆ. ಇಲಾಖೆ ವಿತರಿಸಿದ ಬಟ್ಟೆಯ ಹೊಲಿಗೆ ವೆಚ್ಚವನ್ನು ಫಲಾನುಭವಿ ಮಕ್ಕಳ ಪೋಷಕರೇ ಭರಿಸಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಸ್ಮಾರ್ಟ್ ಮೀಟರ್: ರಾಜ್ಯಪಾಲರಿಗೆ ದೂರು

ಬೆಂಗಳೂರು: 'ಇಂಧನ ಇಲಾಖೆಯಿಂದ ಸ್ಮಾರ್ಟ್ ಮೀಟರ್ ಮೂಲಕ ಹಗಲು ದರೋಡೆ ನಡೆದಿದೆ. ಈ ಹಗರಣದ ಮಾಹಿತಿಯನ್ನು ರಾಜ್ಯಪಾಲರಿಗೆ ನೀಡಿದ್ದೇವೆ' ಎಂದು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ವಿರೋಧಪಕ್ಷದ ನಾಯಕ ಆರ್.ಅಶೋಕ ನೇತೃತ್ವದಲ್ಲಿ ರಾಜ್ಯಪಾಲರನ್ನು ಬುಧವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

'ಈ ಹಗರಣದಲ್ಲಿ ಗ್ರಾಹಕರಿಗೆ ಅನ್ಯಾಯವಾಗುತ್ತಿದೆ. ಸಾವಿರಾರು ಕೋಟಿ ಲೂಟಿ ನಡೆಯುತ್ತಿದೆ. ರಾಜ್ಯ ಸರ್ಕಾರ, ಇಂಧನ ಇಲಾಖೆಯ ಅಧಿಕಾರಿಗಳು ಇದರಲ್ಲಿ ಭಾಗಿ ಆಗಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತಕ್ಕೆ ದೂರು ನೀಡಿದ್ದೇವೆ. ಇದುವರೆಗೂ ಎಫ್‌ಐಆರ್ ದಾಖಲಾಗಿಲ್ಲ' ಎಂದು ದೂರಿದರು.

'ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗ. ಕೇಂದ್ರ ವಿದ್ಯುತ್ ಆಯೋಗದ ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೂ ಸ್ಮಾರ್ಟ್ ಮೀಟರ್ ಕಡ್ಡಾಯ ಮಾಡಲಾಗಿದೆ. ಅರ್ಹತೆ ಇಲ್ಲದವರಿಗೆ ಗುತ್ತಿಗೆ ಕೊಡಲಾಗಿದೆ. ಅಧಿಕಾರ ದುರ್ಬಳಕೆ ಮಾಡಿರುವ ವಿಚಾರವನ್ನೂ ರಾಜ್ಯಪಾಲರ ಗಮನಕ್ಕೆ ತರಲಾಗಿದೆ ಎಂದರು. ಶಾಸಕರಾದ ಕೆ.ಗೋಪಾಲಯ್ಯ, ಧೀರಜ್ ಮುನಿರಾಜು ಇದ್ದರು.

ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಆರೋಗ್ಯ ರಕ್ಷಣಾ ಸಂಶೋಧನೆಗೆ

ವಿಐಟಿ–ಎಮ್‌ಜಿಆರ್ ವಿವಿ ನಡುವೆ ಒಪ್ಪಂದ

ಚೆನ್ನೈ: ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ಮತ್ತು ತಮಿಳುನಾಡು ಡಾ. ಎಂ.ಜಿ.ಆರ್. ವೈದ್ಯಕೀಯ ವಿಶ್ವವಿದ್ಯಾಲಯ (ಟಿಎನ್‌ಎಮ್‌ಜಿಆರ್‌ಎಮ್‌ಯು) ಆರೋಗ್ಯ ರಕ್ಷಣೆಯಲ್ಲಿ ಕೃತಕ ಬುದ್ಧಿಮತ್ತೆ (AI) ಸಹಯೋಗದ ಸಂಶೋಧನಾ ಮಧ್ಯಸ್ಥಿಕೆಯನ್ನು ಅಭಿವೃದ್ಧಿಪಡಿಸಲು ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿವೆ.

ಆರೋಗ್ಯ ರಕ್ಷಣೆಯಲ್ಲಿ ಎಐ ಉಪಕ್ರಮವನ್ನು ಔಪಚಾರಿಕಗೊಳಿಸಲು ತಿಳಿವಳಿಕೆ ಒಪ್ಪಂದಕ್ಕೆ (ಎಂಒಯು) ವಿಐಟಿ ಉಪಾಧ್ಯಕ್ಷ ಡಾ. ಜಿ.ವಿ. ಸೆಲ್ವಂ ಮತ್ತು ಟಿಎನ್‌ಎಮ್‌ಜಿಆರ್‌ಎಮ್‌ಯು ಉಪಕುಲಪತಿ ಡಾ. ಕೆ. ನಾರಾಯಣಸ್ವಾಮಿ ಅವರು ಸಹಿ ಹಾಕಿದರು. ಒಪ್ಪಂದ ಪ್ರಕಾರ ಬೋಧನೆಯಲ್ಲಿ ಸಹಕಾರ, ಜಂಟಿ ಸಂಶೋಧನೆ, ಸಾಮಾಜಿಕ ಪ್ರಜ್ಞೆಯುಳ್ಳ ಉತ್ಪನ್ನ ವಿನ್ಯಾಸ ಮತ್ತು ತಂತ್ರಜ್ಞಾನ ವರ್ಗಾವಣೆ ಒಳಗೊಂಡಿರುತ್ತದೆ.

ವಿಐಟಿ ಚೆನ್ನೈನ ಪ್ರೊ–ವೈಸ್ ಚಾನ್ಸಲರ್ ಡಾ. ಟಿ. ತ್ಯಾಗರಾಜನ್, ಕುಲಪತಿಗಳ ಸಲಹೆಗಾರ ಡಾ. ಎಸ್. ಪಿ. ತ್ಯಾಗರಾಜನ್ ಹಾಗೂ ಟಿಎನ್‌ಎಮ್‌ಜಿಆರ್‌ಎಮ್‌ಯು ರಿಜಿಸ್ಟ್ರಾರ್ ಡಾ. ಕೆ. ಶಿವಸಂಗೀತ ಅವರ ಸಮ್ಮುಖದಲ್ಲಿ ಎಂಒಯು ಸಹಿ ಕಾರ್ಯಕ್ರಮ ನಡೆಯಿತು.

ಈ ಪಾಲುಗಾರಿಕೆ ಒಪ್ಪಂದವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಜಂಟಿ ಸಂಶೋಧನೆ, ಪಿಎಚ್‌ಡಿ ಮೇಲ್ವಿಚಾರಣೆ, ಸಂಶೋಧನೆ ಮತ್ತು ಅಭಿವೃದ್ಧಿ ಪ್ರಸ್ತಾವನೆಗಳ ಸಲ್ಲಿಕೆ, ಜಂಟಿ ಪ್ರಕಟಣೆಗಳು, ಹೊಸ ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಜಂಟಿ ಪೇಟೆಂಟ್ ಸಲ್ಲಿಕೆಯನ್ನು ಉತ್ತೇಜಿಸುವತ್ತ ಗಮನಹರಿಸುತ್ತದೆ. ಇದರ ಜತೆಯಲ್ಲಿ ಕ್ಲಿನಿಕಲ್ ಮೌಲ್ಯೀಕರಣ ಪ್ರಕ್ರಿಯೆಗಳು, ನೈತಿಕ ಅನುಮತಿಗಳು ಮತ್ತು ಅನುವಾದ ಸಂಶೋಧನೆ ಹಾಗೂ ನಾವೀನ್ಯತೆಗೆ ಒತ್ತು ನೀಡುವ ಇತರ ಸಹಯೋಗದ ಚಟುವಟಿಕೆಗಳಿಗೂ ಉತ್ತೇಜನ ನೀಡಲಾಗುತ್ತದೆ ಎಂದು ವಿಐಟಿ ಪ್ರಕಟಣೆ ತಿಳಿಸಿದೆ.

ವಿಐಟಿ ಉಪಾಧ್ಯಕ್ಷ ಡಾ. ಜಿ. ವಿ. ಸೆಲ್ವಂ ಮಾತನಾಡಿ "ಈ ಪಾಲುದಾರಿಕೆಯು ದೇಶದ ಅಭಿವೃದ್ಧಿ ಮತ್ತು ಸಾರ್ವಜನಿಕ ಆರೋಗ್ಯದ ಗುರಿಯೊಂದಿಗೆ ಉನ್ನತ ಶಿಕ್ಷಣ ಮತ್ತು ಸಂಶೋಧನೆಯನ್ನು ಕೂಡಿಸುವ ವಿಐಟಿಯ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಭವಿಷ್ಯಕ್ಕೆ ತಯಾರಾಗಿರುವ ಆರೋಗ್ಯ ರಕ್ಷಣೆಗೆ ಬೇಕಾದ ನವೀನ ಪದ್ಧತಿಗಳನ್ನು ಚಾಲನೆ ತರಲು ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಸಂಶೋಧನೆಯನ್ನು ಸೇತುವೆಯಾಗಿಸುವುದು ಅಗತ್ಯ" ಎಂದು ಹೇಳಿದರು.

ನಂತರ ಟಿಎನ್‌ಎಮ್‌ಜಿಆರ್‌ಎಮ್‌ಯು ಉಪಕುಲಪತಿ ಡಾ. ಕೆ. ನಾರಾಯಣಸ್ವಾಮಿ, ಇಂದಿನ ಸಂಶೋಧನೆಗಳು ನಾಳಿನ ಚಿಕಿತ್ಸೆಗಳಿಗೆ ದಾರಿ ಮಾಡಿಕೊಡುತ್ತವೆ. ಗುಣಮಟ್ಟದ ಚಿಕಿತ್ಸೆ ಒದಗಿಸಲು ತಂತ್ರಜ್ಞಾನವನ್ನು ಆರೋಗ್ಯ ರಕ್ಷಣೆಯೊಂದಿಗೆ ಸಂಯೋಜಿಸುವ ಅಗತ್ಯದ ಬಗ್ಗೆ ಒತ್ತು ನೀಡಿ ಮಾತನಾಡಿದರು.

ವಿಐಟಿ ಉಪಾಧ್ಯಕ್ಷ ಡಾ. ಜಿ.ವಿ. ಸೆಲ್ವಂ ಮತ್ತು ಟಿಎನ್‌ಎಮ್‌ಜಿಆರ್‌ಎಮ್‌ಯು ಉಪಕುಲಪತಿ ಡಾ. ಕೆ. ನಾರಾಯಣಸ್ವಾಮಿ ಅವರು ಪಾಲುದಾರಿಕೆ ಒಪ್ಪಂದ ಪತ್ರ ವಿನಿಮಯ ಮಾಡಿಕೊಂಡರು. ಡಾ. ಟಿ. ತ್ಯಾಗರಾಜನ್, ಡಾ. ಎಸ್.ಪಿ. ತ್ಯಾಗರಾಜನ್ ಹಾಗೂ ಡಾ. ಕೆ. ಶಿವಸಂಗೀತ ಇತರರು ಉಪಸ್ಥಿತರಿದ್ದರು.

ಪ್ರಸ್ತುತಿ: ಪಿ.ವಿ.ಬ್ಯಾಂಡ್ ಸ್ಪಾಟ್

ಬ್ಯಾಂಕ್‌ನ ಅಧಿಕಾರಿ ಧೋರಣೆಗೆ ಸಿ.ಎಂ ಆಕ್ರೋಶ

ಕನ್ನಡ ವಿರೋಧಿ ಎಸ್‌ಬಿಐ ಮ್ಯಾನೇಜರ್ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮಾತಾಡುವುದೇ ಇಲ್ಲ ಎಂದು ಹೇಳಿ ಆಕ್ರೋಶಕ್ಕೆ ಗುರಿಯಾಗಿದ್ದ ಸೂರ್ಯಸಿಟಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಶಾಖೆಯ ವ್ಯವಸ್ಥಾಪಕಿ ಪ್ರಿಯಾಂಕ ಸಿಂಗ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಆ ಜವಾಬ್ದಾರಿಯನ್ನು ಕನ್ನಡಿಗರಾದ ಗಿರೀಶ್ ಅವರಿಗೆ ಪ್ರಭಾರವಾಗಿ ನೀಡಲಾಗಿದೆ.

ಸೂರ್ಯಸಿಟಿ ಎಸ್‌ಬಿಐ ಬ್ಯಾಂಕ್‌ನಲ್ಲಿ ಮಂಗಳವಾರ ಅವರು ಗ್ರಾಹಕರೊಂದಿಗೆ ಮಾತಿನ ಚಕಮಕಿ ನಡೆಸಿದ್ದು, 'ಇದು ಭಾರತ, ಹಾಗಾಗಿ ಕನ್ನಡ ಮಾತನಾಡುವುದಿಲ್ಲ' ಎಂದು ಹಿಂದಿಯಲ್ಲಿ ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಆಯಾ ರಾಜ್ಯಗಳಲ್ಲಿ ಸ್ಥಳೀಯ ಭಾಷೆ ಮಾತನಾಡುವಂತೆ ಆರ್‌ಬಿಐ ತಿಳಿಸಿದೆ. ಹಾಗಾಗಿ ಬ್ಯಾಂಕ್ ಸಿಬ್ಬಂದಿ ಕಡ್ಡಾಯವಾಗಿ ಕನ್ನಡ ಮಾತನಾಡಬೇಕು. ಆದರೆ ಚಂದಾಪುರ ಎಸ್‌ಬಿಐ ಶಾಖೆಯ ಮ್ಯಾನೇಜರ್ ಕನ್ನಡ ಮಾತನಾಡುವುದಿಲ್ಲ ಎಂದು ಹೇಳಿರುವುದು ಖಂಡನೀಯ ಎಂದು ಗ್ರಾಹಕ, ಕೆಆರ್‌ಎಸ್ ಪಕ್ಷದ ಮಹೇಶ್ ಆಕ್ಷೇಪ ಎತ್ತಿದ್ದರು.

ಕೆಆರ್‌ಎಸ್ ಪಕ್ಷದ ನಾಯಕ ರವಿಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ಬ್ಯಾಂಕ್ ಎದುರು ಬುಧವಾರ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಬ್ಯಾಂಕ್ ಪರವಾಗಿ ಸಹಾಯಕ ಮಹಾಪ್ರಬಂಧಕ ವಿನಯ್ ಪ್ರತಿಭಟನಾ ಸ್ಥಳಕ್ಕೆ ಬಂದು ಬ್ಯಾಂಕ್ ಕೈಗೊಂಡಿರುವ ಕ್ರಮಗಳನ್ನು ವಿವರಿಸಿದರು. ಮಂಗಳವಾರ ರಾತ್ರಿಯೇ ಪ್ರಿಯಾಂಕ ಸಿಂಗ್ ಅವರನ್ನು ಬೇರೆ ರಾಜ್ಯಕ್ಕೆ ವರ್ಗಾಯಿಸಲಾಗಿದೆ. ಗಿರೀಶ್ ಪ್ರಭಾರ ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ಮಾಹಿತಿ ನೀಡಿದ್ದರು.

ಸಿದ್ದರಾಮಯ್ಯ ಆಕ್ರೋಶ: 'ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಮಾತನಾಡಲು ನಿರಾಕರಿಸಿ ನಾಗರಿಕರನ್ನು ಕಡೆಗಣಿಸಿರುವ ಆನೇಕಲ್ ತಾಲ್ಲೂಕಿನ ಸೂರ್ಯಸಿಟಿಯ ಎಸ್‌ಬಿಐ ಶಾಖಾ ವ್ಯವಸ್ಥಾಪಕರ ವರ್ತನೆ ತೀವ್ರ ಖಂಡನೀಯ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ಅಧಿಕಾರಿಯನ್ನು ವರ್ಗಾವಣೆ ಮಾಡುವಲ್ಲಿ ಎಸ್‌ಬಿಐನ ತ್ವರಿತ ಕ್ರಮ ಪ್ರಶಂಸನೀಯ. ಆದರೂ ಇಂತಹ ಘಟನೆಗಳು ಮರುಕಳಿಸಬಾರದು. ಎಲ್ಲ ಬ್ಯಾಂಕ್ ಉದ್ಯೋಗಿಗಳು ಗ್ರಾಹಕರನ್ನು ಘನತೆಯಿಂದ ನಡೆಸಿಕೊಳ್ಳಬೇಕು ಮತ್ತು ಸ್ಥಳೀಯ ಭಾಷೆಯಲ್ಲಿ ಮಾತನಾಡಲು ಎಲ್ಲ ಪ್ರಯತ್ನಗಳನ್ನು ಮಾಡಬೇಕು' ಎಂದು ಹೇಳಿದ್ದಾರೆ.

'ಭಾರತದಾದ್ಯಂತ ಎಲ್ಲಾ ಬ್ಯಾಂಕ್ ಸಿಬ್ಬಂದಿಗೆ ಸಾಂಸ್ಕೃತಿಕ ಮತ್ತು ಭಾಷಾ ಸಂವೇದನಾ ತರಬೇತಿಯನ್ನು ಕಡ್ಡಾಯಗೊಳಿಸಬೇಕು ಎಂದು ನಾನು ಹಣಕಾಸು ಸಚಿವಾಲಯ ಮತ್ತು ಹಣಕಾಸು ಸೇವೆಗಳ ಇಲಾಖೆಯನ್ನು ಒತ್ತಾಯಿಸುತ್ತೇನೆ. ಸ್ಥಳೀಯ ಭಾಷೆಯನ್ನು ಗೌರವಿಸುವುದು ಎಂದರೆ ಜನರನ್ನು ಗೌರವಿಸುವುದಾಗಿದೆ' ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

'ಕನ್ನಡ ವಿರೋಧಿಗಳ ಮೇಲೆ ಕ್ರಮ ಆಗಬೇಕು. ಇದರಲ್ಲಿ ಎರಡು ಮಾತಿಲ್ಲ. ಎಲ್ಲ ಕಡೆ ಕನ್ನಡ ಕಡ್ಡಾಯಗೊಳಿಸಬೇಕು' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದ್ದಾರೆ.

ಪ್ರತಿಭಟನನಿರತಾ ಕೆಆರ್‌ಎಸ್ ಪಕ್ಷದ ನಾಯಕರೊಂದಿಗೆ ಎಸ್‌ಬಿಐ ಅಧಿಕಾರಿ ಮಾತುಕತೆ ನಡೆಸಿದರು

> **ಬ್ಯಾಂಕ್ ಮ್ಯಾನೇಜರ್ ಒಬ್ಬರು ಕನ್ನಡದಲ್ಲಿ ಮಾತನಾಡುವುದಿಲ್ಲ, ಹಿಂದಿಯಲ್ಲೇ ಮಾತನಾಡಿ ಎಂದು ದರ್ಪ ಮತ್ತು ಅಹಂಕಾರ ತೋರಿದ್ದು ಖಂಡನೀಯ**
> **ಬಿ.ವೈ.ವಿಜಯೇಂದ್ರ**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಬ್ಯಾಂಕ್‌ಗಳಲ್ಲಿ ಭಾಷಾ ಸೌಹಾರ್ದ ಬೇಕು'

'ಸ್ಥಳೀಯ ಗ್ರಾಹಕರ ಮೇಲೆ ಅನ್ಯಭಾಷಿಕ ಬ್ಯಾಂಕ್ ಸಿಬ್ಬಂದಿ ಮಾಡುವ ಭಾಷಾ ಪ್ರಹಾರ ತಡೆಯಲು ರಾಷ್ಟ್ರ ಮಟ್ಟದಲ್ಲಿ ಪರಿಹಾರ ಕಂಡುಕೊಳ್ಳಬೇಕಿದೆ. ರಾಜ್ಯದ ಎಲ್ಲ ಸಂಸದರು ಸಂಸತ್ತಿನಲ್ಲಿ ಈ ವಿಷಯದ ಬಗ್ಗೆ ಗಂಭೀರವಾಗಿ ಚರ್ಚಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಸಂಸದರಿಗೆ ಪತ್ರ ಬರೆದಿರುವ ಅವರು, 'ಯಾವುದೇ ರಾಜ್ಯದ ಬ್ಯಾಂಕ್‌ಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಸ್ಥಳೀಯ ಭಾಷಾ ಜ್ಞಾನದ ಕುರಿತಂತೆ ಪರೀಕ್ಷೆಯನ್ನು ಎದುರಿಸಿ, ಉತ್ತೀರ್ಣರಾಗಬೇಕು. ಸ್ಥಳೀಯ ಭಾಷೆಯ ಮೇಲೆ ಪ್ರಭುತ್ವ ಹೊಂದಿದವರಾಗಬೇಕು. ನೇಮಕಾತಿ ಸಂದರ್ಭದಲ್ಲಿಯೇ ಈ ಷರತ್ತನ್ನು ವಿಧಿಸಬೇಕು. ಈ ಬಗ್ಗೆ ಸಂಸದರು ಸಂಸತ್ತಿನಲ್ಲಿ ಆಗ್ರಹಿಸಬೇಕು' ಎಂದು ಹೇಳಿದ್ದಾರೆ.

'ಚಂದಾಪುರ ಶಾಖೆಯಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ವರದಿ ಸಲ್ಲಿಸಲು ಎಸ್‌ಬಿಐ ಪ್ರಧಾನ ವ್ಯವಸ್ಥಾಪಕರಿಗೆ ಸೂಚಿಸಲಾಗಿದೆ' ಎಂದು ತಿಳಿಸಿದ್ದಾರೆ.

ಮಳೆ ನೀರಿನಿಂದ ಜಲಾವೃತ ಪ್ರದೇಶಗಳಿಗೆ ಸಿ.ಎಂ, ಡಿಸಿಎಂ ಭೇಟಿ • ಅಧಿಕಾರಿಗಳಿಗೆ ಸಿದ್ದರಾಮಯ್ಯ ಸೂಚನೆ

ಮುಲಾಜಿಲ್ಲದೆ ಒತ್ತುವರಿ ತೆರವು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಚೆಗೆ ಸುರಿದ ಭಾರಿ ಮಳೆಯಿಂದ ಜಲಾವೃತವಾಗಿದ್ದ ನಗರದ ಹಲವು ಪ್ರದೇಶಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಭೇಟಿ ನೀಡಿ, ಪರಿಶೀಲಿಸಿದರು. 'ರಾಜಕಾಲುವೆ ಒತ್ತುವರಿ ತೆರವು ಮಾಡಿ, ತಡೆಗೋಡೆ–ಕೆಳಸೇತುವೆ ನಿರ್ಮಾಣಗಳಲ್ಲಿನ ನ್ಯೂನತೆಗಳನ್ನು ಶೀಘ್ರವೇ ಸರಿಪಡಿಸಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಕೆ.ಜೆ. ಜಾರ್ಜ್, ಬೈರತಿ ಸುರೇಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಬಿಬಿಎಂಪಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್, ಮುಖ್ಯ ಆಯುಕ್ತ ಮಹೇಶ್ವರರಾವ್ ಅವರು ಇದ್ದ ತಂಡವು ಯಲಹಂಕ, ಮಹದೇವಪುರ ವಲಯದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿತು.

ನಾಗವಾರ ಕೆರೆ ಬಳಿಯ ರಾಜಕಾಲುವೆ ಪ್ರದೇಶವನ್ನು ಪರಿಶೀಲನೆ ನಡೆಸುವಾಗ, ರಾಜಕಾಲುವೆ ಒತ್ತುವರಿಯಾಗಿದೆ ಎಂಬುದನ್ನು ಸ್ಥಳೀಯರು ಮುಖ್ಯಮಂತ್ರಿಯವರ ಗಮನಕ್ಕೆ ತಂದರು. 'ಮಾನ್ಯತಾ ಟೆಕ್ ಪಾರ್ಕ್, ಎಂಬೆಸಿ ಆಫೀಸ್ ಪಾರ್ಕ್ ಮತ್ತು ಐಬಿಸು ಟೆಕ್ ಪಾರ್ಕ್ ರಾಜಕಾಲುವೆ ಒತ್ತುವರಿ ಮಾಡಿವೆ. ಈ ಸಂಬಂಧ ಮೂರೂ ಕಂಪನಿಗಳಿಗೆ ಇದೇ ಮೇ 7ರಂದು ನೋಟಿಸ್ ನೀಡಲಾಗಿದೆ' ಎಂದು ಅಧಿಕಾರಿಗಳು ವಿವರಿಸಿದರು.

'ಯಾವುದೇ ಪ್ರಭಾವಿ ಕಂಪನಿ ಒತ್ತುವರಿ ಮಾಡಿದ್ದರೂ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳಿ' ಎಂದು ಸಿದ್ದರಾಮಯ್ಯ ಅವರು ತಾಕೀತು ಮಾಡಿದರು. ಇದಾಗಿ ಕೆಲವೇ ಗಂಟೆಗಳಲ್ಲಿ ಮಾನ್ಯತಾ ಟೆಕ್ ಪಾರ್ಕ್ ಪತ್ರಿಕಾ ಪ್ರಕಟಣೆ ಹೊರಡಿಸಿ, 'ರಾಜಕಾಲುವೆ ಪ್ರದೇಶದಲ್ಲಿ ಆಗಿರುವ ಸಮಸ್ಯೆಯನ್ನು ಸರಿಪಡಿಸುತ್ತೇವೆ. ನಮ್ಮದೇ ವೆಚ್ಚದಲ್ಲಿ ತಡೆಗೋಡೆ ನಿರ್ಮಿಸುತ್ತೇವೆ' ಎಂದಿತು.

ಗೆದ್ದಲಹಳ್ಳಿ ರೈಲ್ವೆ ಕೆಳಕಾಲುವೆ, ಸಾಯಿ ಬಡಾವಣೆ, ಪಣತ್ತೂರು ರೈಲ್ವೆ ಕೆಳಸೇತುವೆ, ರೇಷ್ಮೆ ಮಂಡಳಿ ಮತ್ತು ಗುರಪ್ಪನಪಾಳ್ಯ ಪ್ರದೇಶಗಳಿಗೆ ಭೇಟಿ ನೀಡಿದ ತಂಡವು ಪರಿಶೀಲನೆ ನಡೆಸಿತು. ಮಳೆ ನೀರಿನ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿಗೆ ವಿವರಿಸುತ್ತಿದ್ದ ಸಾಯಿ ಬಡಾವಣೆ ನಿವಾಸಿಗಳು, ಒಂದು ಹಂತದಲ್ಲಿ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಅವರನ್ನು ಮುಖ್ಯಮಂತ್ರಿ ಸಮಾಧಾನ ಪಡಿಸಿದರು.

ರೈಲ್ವೆ ಕೆಳಕಾಲುವೆ ಅಗಲೀಕರಣಕ್ಕೆ ಒಪ್ಪಿಗೆ: 'ವಡ್ಡರಪಾಳ್ಯ ಮತ್ತು ಗೆದ್ದಲಹಳ್ಳಿ ವ್ಯಾಪ್ತಿಯಲ್ಲಿ ಹಾದುಹೋಗುವ ರಾಜಕಾಲುವೆಯು 26 ಮೀಟರ್‌ನಷ್ಟು ಅಗಲವಿದೆ. ಆದರೆ ಗೆದ್ದಲಹಳ್ಳಿಯಲ್ಲಿ ರೈಲ್ವೆ ಮಾರ್ಗವನ್ನು ಹಾದು ಹೋಗುವಾಗ ಕಾಲುವೆಯ ಅಗಲ 8 ಮೀಟರ್‌ಗಳಿಗೆ ಕುಗ್ಗುತ್ತದೆ. ತೀವ್ರ ಮಳೆಯಾದ ಸಂದರ್ಭದಲ್ಲಿ ರೈಲ್ವೆ ಕೆಳಕಾಲುವೆಯಲ್ಲಿ (ರೈಲ್ವೆ ವೆಂಟ್) ನೀರು ಹರಿಯುವುದಿಲ್ಲ. ಪರಿಣಾಮವಾಗಿ ಮಳೆ ನೀರು ಹಿಮ್ಮುಖವಾಗಿ ಹರಿಯುತ್ತದೆ. ಈ ಕಾರಣದಿಂದಲೇ ಸುತ್ತಮುತ್ತಲ ಪ್ರದೇಶಗಳಿಗೆ ನೀರು ನುಗ್ಗುತ್ತದೆ' ಎಂದು ಎಚ್‌ಬಿಆರ್ ಬಡಾವಣೆ, ವಡ್ಡರಪಾಳ್ಯ, ಗೆದ್ದಲಹಳ್ಳಿ ಮತ್ತು ಸಾಯಿ ಬಡಾವಣೆ ನಿವಾಸಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೂರಿತ್ತರು.

ಈ ಬಗ್ಗೆ ವಿವರಣೆ ನೀಡಿದ ಅಧಿಕಾರಿಗಳು, 'ಕೆಳಕಾಲುವೆ ಅಗಲೀಕರಣಕ್ಕೆ ಅನುಮತಿ ನೀಡುವಂತೆ ಮಾರ್ಚ್ ಏಳರಂದೇ ನೈರುತ್ಯ ರೈಲ್ವೆಗೆ ಪತ್ರ ಬರೆಯಲಾಗಿತ್ತು. ಆದರೆ ಅವರು ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ಈ ಕೆಳಕಾಲುವೆ ಕಾರಣಕ್ಕೇ ಈಚೆಗೆ ಹಲವು ಪ್ರದೇಶಗಳಲ್ಲಿ ಪ್ರವಾಹ ಸ್ಥಿತಿ ಎದುರಾಗಿತ್ತು ಎಂಬುದನ್ನು ರೈಲ್ವೆ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಹೀಗಾಗಿ ಕಾಲುವೆ ಅಗಲೀಕರಣಕ್ಕೆ ಮಂಗಳವಾರ ಸಂಜೆ ಒಪ್ಪಿಗೆ ನೀಡಿದ್ದಾರೆ' ಎಂದು ಮುಖ್ಯಮಂತ್ರಿಗೆ ಮಾಹಿತಿ ನೀಡಿದರು.

'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈ ಕಾಮಗಾರಿ ನಡೆಸಲಿದ್ದು, ₹13 ಕೋಟಿ ವೆಚ್ಚವಾಗುತ್ತದೆ. ಅದರಲ್ಲಿ ಈಗಾಗಲೇ ₹6 ಕೋಟಿ ಬಿಡುಗಡೆ ಮಾಡಿದ್ದು, ಕಾಮಗಾರಿ ಆರಂಭಿಸಲಾಗಿದೆ' ಎಂದು ಸಿದ್ದರಾಮಯ್ಯ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಗೆದ್ದಲಹಳ್ಳಿ ರೈಲ್ವೆ ಕೆಳಕಾಲುವೆ ಬಳಿಯ ರಾಜಕಾಲುವೆಯನ್ನು ಸಚಿವ ಕೆ.ಜೆ.ಜಾರ್ಜ್, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ವೀಕ್ಷಿಸಿದರು –ಪ್ರಜಾವಾಣಿ ಚಿತ್ರಗಳು

ವಡ್ಡರಪಾಳ್ಯ ನಿವಾಸಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಮಸ್ಯೆಗಳನ್ನು ವಿವರಿಸಿದರು

ಭಾರಿ ಸಂಖ್ಯೆಯಲ್ಲಿ ಸೇರಿದ್ದ ಸಾಯಿ ಬಡಾವಣೆ ನಿವಾಸಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಮಸ್ಯೆಗಳನ್ನು ವಿವರಿಸಿದರು

26 ಮೀಟರ್ ಅಗಲದ ರಾಜಕಾಲುವೆಯು ಗೆದ್ದಲಹಳ್ಳಿ ರೈಲ್ವೆ ಕೆಳಕಾಲುವೆ ಬಳಿ 8 ಮೀಟರ್‌ಗೆ ಕುಗ್ಗುತ್ತದೆ

ಯಡಿಯೂರಪ್ಪ ಸರ್ಕಾರದಲ್ಲಿ ಆಗಿದ್ದು: ಲಿಂಬಾವಳಿ

ಮಹದೇವಪುರ ವ್ಯಾಪ್ತಿಯ ಪಣತ್ತೂರು ಗಾರ್ಡನ್ ರಸ್ತೆ ಅಗಲೀಕರಣ, ಪಣತ್ತೂರು ರೈಲ್ವೆ ಕೆಳಸೇತುವೆ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ, ಅಲ್ಲಿನ ಸಮಸ್ಯೆಗಳ ಬಗ್ಗೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾಹಿತಿ ನೀಡಿದರು.

'ಇಲ್ಲಿ ರಸ್ತೆ ಅಗಲೀಕರಣ, ಮಳೆನೀರಿನ ಕಾಲುವೆ ನಿರ್ಮಾಣ ಮಾಡದೆ ಅಪಾರ್ಟ್‌ಮೆಂಟ್‌ಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ. ಹೀಗಾಗಿಯೇ ಸಮಸ್ಯೆಯಾಗುತ್ತಿದೆ' ಎಂದರು. ಆಗ ಮಧ್ಯಪ್ರವೇಶಿಸಿದ ಸಚಿವ ಬೈರತಿ ಸುರೇಶ್, 'ಹಿಂದಿನ ಸರ್ಕಾರದಲ್ಲಿ ಅದೆಲ್ಲಾ ಆಗಿದ್ದು ಎಂಬುದನ್ನೂ ಹೇಳಿ' ಎಂದು ಆಗ್ರಹಿಸಿದರು.

ಆಗ ಲಿಂಬಾವಳಿ ಅವರು ತುಸು ಗಟ್ಟಿಯಾಗಿ, 'ಹೌದು ಹಿಂದಿನ ಸರ್ಕಾರದಲ್ಲಿ, ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗಲೇ ಅನುಮತಿ ನೀಡಿದ್ದು. ಅದೂ ಶೋಭಾ ಡೆವಲಪರ್ಸ್‌ಗೆ ಅನುಕೂಲ ಮಾಡಿಕೊಡಲು ಹಾಗೆ ಮಾಡಿದರು' ಎಂದು ಡಿ.ಕೆ.ಶಿವಕುಮಾರ್ ಅವರತ್ತ ನೋಡಿದರು.

'350 ಮೀಟರ್ ಉದ್ದದಷ್ಟು ಮಳೆ ನೀರಿನ ಕಾಲುವೆ ನಿರ್ಮಿಸಬೇಕಿದೆ. ಅದಕ್ಕೆ ಟೆಂಡರ್ ಆಗಬೇಕು. ಅದು ಆದರೆ ಸಮಸ್ಯೆ ಪರಿಹಾರವಾಗುತ್ತದೆ. ಆದರೆ ಇವರು ಕಾಮಗಾರಿಗೆ ಅಡ್ಡಿಪಡಿಸುತ್ತಿದ್ದಾರೆ' ಎಂದು ಬೈರತಿ ಸುರೇಶ್ ಅವರತ್ತ ಬೊಟ್ಟು ಮಾಡಿದರು.

ಅವರಿಬ್ಬರನ್ನು ಸುಮ್ಮನಿರಿಸಿದ ಸಿದ್ದರಾಮಯ್ಯ ಅವರು, 'ಮಳೆ ನೀರಿನ ಕಾಲುವೆ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಿ. ರೈಲ್ವೆ ಕೆಳಸೇತುವೆ ನಿರ್ಮಾಣ ಕಾಮಗಾರಿ ವಿಳಂಬದಿಂದ ಸಮಸ್ಯೆಯಾಗುತ್ತಿದ್ದು, ಅದನ್ನೂ 45 ದಿನಗಳ ಒಳಗೆ ಪೂರ್ಣಗೊಳಿಸಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಿಜೆಪಿಯವರು ಮಾಡಿದ್ದೇನು: ಡಿಕೆಶಿ

'ಮಳೆ ಅನಾಹುತಕ್ಕೆ ಕಾಂಗ್ರೆಸ್ ಸರ್ಕಾರ ಕಾರಣ ಎಂದು ಬಿಜೆಪಿ ನಾಯಕರು ಟೀಕಿಸುತ್ತಿದ್ದಾರೆ. ಅವರು ಅಧಿಕಾರದಲ್ಲಿ ಇದ್ದಾಗ ಏನು ಮಾಡಿದರು? ಈಗ ಸುಮ್ಮನೆ ಟೀಕೆ ಮಾಡುವುದರಿಂದ ಉಪಯೋಗವಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಅರವಿಂದ ಲಿಂಬಾವಳಿ ಅವರು ರಸ್ತೆ ಅಗಲೀಕರಣಕ್ಕೆ ಭೂಸ್ವಾಧೀನದ ಸಮಸ್ಯೆ ಇರುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ವಿವರಣಾತ್ಮಕವಾದ ಮಾಹಿತಿ ನೀಡುವಂತೆ ಹೇಳಿದ್ದೇನೆ. ಅದು ದೊರೆತ ನಂತರ ಸಚಿವ ಸಂಪುಟ ಸಭೆಯಲ್ಲಿ ಇರಿಸಿ, ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

'ಶಾಶ್ವತ ಪರಿಹಾರಕ್ಕೆ ಕ್ರಮ'

ಜಲಾವೃತ ಸಮಸ್ಯೆ ಎದುರಿಸಿದ್ದ ಪ್ರದೇಶಗಳಿಗೆ ಭೇಟಿ ನೀಡಿದ ನಂತರ 'ಕಾವೇರಿ' ನಿವಾಸದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಮಳೆನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲಾಗುವುದು. ನೆರೆಯಿಂದ ಹಾನಿಯಾದವರಿಗೆ ಪರಿಹಾರ ನೀಡಲಾಗುವುದು' ಎಂದರು.

'ನಗರದಲ್ಲಿನ 491 ಕಿ.ಮೀ.ನಷ್ಟು ರಾಜಕಾಲುವೆಯಲ್ಲಿ ತಡೆಗೋಡೆ ಕಾಮಗಾರಿ ಪೂರ್ಣಗೊಂಡಿದೆ. 125 ಕಿ.ಮೀ. ಕಾಲುವೆಯ ಕಾಮಗಾರಿ ನಡೆಯುತ್ತಿದೆ. ಇನ್ನೂ 173 ಕಿ.ಮೀ. ಉದ್ದದಷ್ಟು ಕಾಮಗಾರಿ ನಡೆಸಲು ವಿಶ್ವಬ್ಯಾಂಕ್‌ನಿಂದ ₹2,000 ಕೋಟಿ ಸಾಲ ಪಡೆಯಲಾಗಿದೆ. ಈ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಮೂರು ವರ್ಷಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿವೆ' ಎಂದರು.

'ನಗರದಲ್ಲಿ 168 ತಗ್ಗು ಪ್ರದೇಶಗಳನ್ನು ಗುರುತಿಸಲಾಗಿದ್ದು, ಅಂತಹ ಬಡಾವಣೆಗಳಲ್ಲಿ ಇನ್ನು ಮುಂದೆ ನೆಲಮಹಡಿ ನಿರ್ಮಿಸುವುದನ್ನು ನಿಷೇಧಿಸಿದ್ದೇವೆ. ರಾಜಕಾಲುವೆಗೆ ಕಸ ಸುರಿಯುತ್ತಿರುವುದರಿಂದಲೂ ಪ್ರವಾಹ ಸ್ಥಿತಿ ಎದುರಾಗುತ್ತಿದ್ದು, ಅಂತಹವರ ವಿರುದ್ಧ ಕ್ರಮಕ್ಕೆ ಸೂಚಿಸಿದ್ದೇನೆ' ಎಂದರು.

ಮಳೆ ದುಷ್ಪರಿಣಾಮ ತಡೆಯಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲೆಯಾದ್ಯಂತ ಮುಂಗಾರು ಸಮಯದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುವ ನಿರೀಕ್ಷೆಯಿದ್ದು, ಸಂಭವನೀಯ ಅನಾಹುತಗಳನ್ನು ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ಕೆ. ನಾಯಕ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರ ಜಿಲ್ಲೆಯ ಜಿಲ್ಲಾ, ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ ಮಾತನಾಡಿದ ಅವರು, 'ನಗರದಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಕೆರೆಗಳು ತುಂಬಿ ಹರಿಯುವ ಸಾಧ್ಯತೆಯಿದೆ. ತಹಶೀಲ್ದಾರ್, ಕಾರ್ಯ ನಿರ್ವಾಹಕ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಎಂಜಿನಿಯರ್‌ಗಳು ಎಲ್ಲಾ ಕೆರೆಗಳಿಗೆ ಭೇಟಿ ನೀಡಬೇಕು. ಕೆರೆ ಕೋಡಿ, ಕಾಲುವೆಗಳ ಜಂಟಿ ಪರಿವೀಕ್ಷಣೆ ನಡೆಸಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಅಗತ್ಯ ಕಂಡುಬಂದಲ್ಲಿ ನಿಯಮಾನುಸಾರ ದುರಸ್ತಿ ಕಾಮಗಾರಿಗಳನ್ನು ಕೂಡಲೇ ನಡೆಸಲು ಕ್ರಮ ಕೈಗೊಳ್ಳಬೇಕು' ಎಂದು ಆದೇಶಿಸಿದರು.

ಗ್ರಾಮ ಪಂಚಾಯಿತಿ ಕಾರ್ಯಪಡೆ ಹಾಗೂ ವಿಪತ್ತು ನಿರ್ವಹಣಾ ಸಮಿತಿಗಳ ಸಭೆಗಳನ್ನು ನಡೆಸಬೇಕು. ಅತಿವೃಷ್ಟಿಯಿಂದ ಮನೆಗಳಿಗೆ ಹಾನಿಯಾಗಿದ್ದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಎಂಜಿನಿಯರಿಂಗ್ ವಿಭಾಗದ ಎಂಜಿನಿಯರ್‌ಗಳು ಕೂಡಲೇ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಜಿಲ್ಲಾಧಿಕಾರಿಯವರಿಗೆ ವರದಿ ಸಲ್ಲಿಸಬೇಕು ಎಂದು ಸೂಚಿಸಿದರು.

ಸರ್ಕಾರಿ ಶಾಲೆಗಳು, ಅಂಗನವಾಡಿ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸರ್ಕಾರಿ ಕಟ್ಟಡಗಳು ಮತ್ತು ರಸ್ತೆಗಳು ಮಳೆಯಿಂದ ಹಾನಿಗೊಳಗಾಗಿದ್ದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ಉಪ ವಿಭಾಗಾಧಿಕಾರಿಗಳು, ಜಿಲ್ಲೆಯ ಎಲ್ಲ ತಹಶೀಲ್ದಾರರು, ಅಧಿಕಾರಿಗಳು, ಸಿಬ್ಬಂದಿ ಕಟ್ಟುನಿಟ್ಟಾಗಿ ಸೂಚನೆಗಳನ್ನು ಪಾಲಿಸಬೇಕು. ವಿಫಲವಾದವರಿಗೆ ನೋಟಿಸ್ ನೀಡದೇ ಸೇವೆಯಿಂದ ಅಮಾನತುಗೊಳಿಸಿ, ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

> ಮಳೆ ಸಂದರ್ಭದಲ್ಲಿ ತುರ್ತು ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷಿಸುವ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು
> **ಜಗದೀಶ್ ಕೆ. ನಾಯಕ್**
> ಹೆಚ್ಚುವರಿ ಜಿಲ್ಲಾಧಿಕಾರಿ

ಜಗದೀಶ್

ವಾಡಿಕೆಗಿಂತ ದುಪ್ಪಟ್ಟು ಮಳೆ

ಬೆಂಗಳೂರು ನಗರ ಜಿಲ್ಲೆಯಲ್ಲಿ ಮಾರ್ಚ್ 1ರಿಂದ ಮೇ 19ರವರೆಗೆ ಪೂರ್ವ ಮುಂಗಾರು ಹಂಗಾಮಿನಲ್ಲಿ ವಾಡಿಕೆ ಮಳೆ 112.6 ಮಿಲಿ ಮೀಟರ್‌ನಷ್ಟಿದ್ದು, ವಾಸ್ತವವಾಗಿ 241.4 ಮಿ.ಮೀ ಮಳೆಯಾಗಿದೆ. ವಾಡಿಕೆಗಿಂತ ಶೇ 114ರಷ್ಟು ಹೆಚ್ಚು ಮಳೆಯಾಗಿದೆ.

ಒಟ್ಟಾರೆ, ಬೆಂಗಳೂರು ನಗರ ಜಿಲ್ಲೆಯಲ್ಲಿ ಜನವರಿ 1ರಿಂದ ಮೇ 19ರವರೆಗೆ ವಾಡಿಕೆ ಮಳೆ 105.6 ಮಿ.ಮೀ ಇದ್ದು, 237.6 ಮಿ.ಮೀ. ಮಳೆಯಾಗಿದೆ. ಶೇ 125ರಷ್ಟು ಹೆಚ್ಚು ಮಳೆ ಬಿದ್ದಂತಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ತಡ ಮುಂಗಾರಿನ ಹಂಗಾಮಿದ್ದು ಜುಲೈ ಮತ್ತು ಆಗಸ್ಟ್‌ನಲ್ಲಿ ಬಿತ್ತನೆಯಾಗಲಿದೆ. ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನಿಗೆ ಕ್ರಮ ವಹಿಸಲಾಗಿದೆ. ಯಾವುದೇ ಕೊರತೆ ಇರುವುದಿಲ್ಲ. ಜಿಲ್ಲಾ ಸಹಾಯವಾಣಿ 080–22967200 ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ನೋಡಲ್ ಅಧಿಕಾರಿಗಳ ನೇಮಕ

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕರನ್ನು ಉತ್ತರ ತಾಲ್ಲೂಕು, ನಗರ ಜಿಲ್ಲೆ ಭೂದಾಖಲೆಗಳ ಸಹಾಯಕ ನಿರ್ದೇಶಕರನ್ನು ದಕ್ಷಿಣ ತಾಲ್ಲೂಕು, ಉತ್ತರ ಉಪ ವಿಭಾಗದ ಉಪ ವಿಭಾಗಾಧಿಕಾರಿಯನ್ನು ಪೂರ್ವ ತಾಲ್ಲೂಕು, ನಗರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರನ್ನು ಯಲಹಂಕ ತಾಲ್ಲೂಕು ಹಾಗೂ ದಕ್ಷಿಣ ಉಪ ವಿಭಾಗದ ಉಪ ವಿಭಾಗಾಧಿಕಾರಿಯನ್ನು ಆನೇಕಲ್ ತಾಲ್ಲೂಕಿನ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಎಲ್ಲ ನೋಡಲ್ ಅಧಿಕಾರಿಗಳು ತಾಲ್ಲೂಕು ಮಟ್ಟದ ಎಲ್ಲ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಬೇಕು. ಗ್ರಾಮ, ಪಂಚಾಯಿತಿವಾರು ಸಭೆಗಳನ್ನು ನಡೆಸಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ತಾಲ್ಲೂಕು ಕಚೇರಿಗಳಲ್ಲಿ ದಿನದ 24 ಗಂಟೆಯೂ ಸಹಾಯವಾಣಿ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳಬೇಕು ಎಂದು ಜಗದೀಶ್ ಕೆ. ನಾಯಕ್ ಸೂಚಿಸಿದರು.

ನಾಳೆಯಿಂದ 'ಸೃಷ್ಟಿ' ತಾಂತ್ರಿಕ ಮೇಳ

ಬೆಂಗಳೂರು: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಇದೇ 23ರಿಂದ 25ರವರೆಗೆ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ 'ಸೃಷ್ಟಿ' ತಾಂತ್ರಿಕ ಮೇಳವನ್ನು ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಬಿವಿಪಿ ಕರ್ನಾಟಕ ದಕ್ಷಿಣ ಪ್ರಾಂತದ ಸವಿಷ್ಕಾರ ಸಂಚಾಲಕಿ ಸೃಷ್ಟಿ, 'ಐಟಿ–ಬಿಟಿ ಕ್ಷೇತ್ರಕ್ಕೆ ಕೊಡುಗೆಯಾಗಿ ಈ ಸಮಾವೇಶ ಏರ್ಪಡಿಸಲಾಗಿದೆ. ರಾಜ್ಯದ 230 ಎಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದು, ಸುಮಾರು 500ಕ್ಕೂ ಅಧಿಕ ಯೋಜನಾ ಮಾದರಿಗಳು ಸ್ಪರ್ಧೆಯಲ್ಲಿ ಪ್ರದರ್ಶನ ಕಾಣಲಿವೆ. 3 ಸಾವಿರ ವಿದ್ಯಾರ್ಥಿ ಪ್ರತಿನಿಧಿಗಳು, 300 ಅಧ್ಯಾಪಕರು ಹಾಗೂ 100ಕ್ಕೂ ಅಧಿಕ ವಿಜ್ಞಾನಿಗಳು ಭಾಗವಹಿಸುತ್ತಾರೆ. ಮೂರು ದಿನಗಳ ಈ ಮೇಳಕ್ಕೆ ಒಟ್ಟು 50 ಸಾವಿರ ಜನರು ಭೇಟಿ ನೀಡುವ ನಿರೀಕ್ಷೆಯಿದೆ' ಎಂದು ತಿಳಿಸಿದರು.

'ವಿವಿಧ ವಿಭಾಗಗಳಲ್ಲಿ ಸ್ಪರ್ಧೆಯ ವಿಜೇತರಿಗೆ ಒಟ್ಟು ₹25 ಲಕ್ಷ ನಗದು ಬಹುಮಾನ ಕೊಡಲಾಗುವುದು. ಅತಿ ಹೆಚ್ಚು ಪ್ರಾಜೆಕ್ಟ್‌ಗಳಲ್ಲಿ ಗೆಲ್ಲುವ ಕಾಲೇಜಿಗೆ 'ಸೃಷ್ಟಿ 2025 ಚಾಂಪಿಯನ್ ಟ್ರೋಫಿ' ನೀಡಲಾಗುತ್ತದೆ. ವಿದ್ಯಾರ್ಥಿ ಸ್ನೇಹಿ ಕಾಲೇಜಿಗೆ ಪ್ರತ್ಯೇಕ ವಿಶೇಷ ಬಹುಮಾನ ನೀಡಲಾಗುತ್ತದೆ. ಈ ಮೇಳದಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯಲಿವೆ' ಎಂದು ವಿವರಿಸಿದರು.

'ಮೇ 23ರಂದು ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ (ಎಐಸಿಟಿಇ) ಉಪಾಧ್ಯಕ್ಷ ಅಭಯ್ ಜೆರೆ ಪಾಲ್ಗೊಳ್ಳುತ್ತಾರೆ. ಸಮಾರೋಪ ಸಮಾರಂಭದಲ್ಲಿ ಎಐಸಿಟಿಇ ಅಧ್ಯಕ್ಷ ಪ್ರೊ. ಅನಿಲ್ ಸಹಸ್ರಬುದ್ಧೆ ಭಾಗವಹಿಸುತ್ತಾರೆ' ಎಂದು ಹೇಳಿದರು.

ಮಾವು–ಹಲಸು ಮೇಳಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘದ (ಹಾಪ್‌ಕಾಮ್ಸ್) ವತಿಯಿಂದ 'ಮಾವು, ಹಲಸು, ಹುಣಸೆ ಹಣ್ಣು ಮಾರಾಟ ಮೇಳ'ಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಹಾಪ್‌ಕಾಮ್ಸ್‌ನಲ್ಲಿ ಮಾರಾಟವಾಗುವ ಮಾವಿನ ಹಣ್ಣನ್ನು ನೈಸರ್ಗಿಕವಾಗಿ ಮಾಗಿಸಲಾಗುತ್ತದೆ. ರಾಸಾಯನಿಕ ಮುಕ್ತ ಮಾವಿನ ಹಣ್ಣನ್ನು ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಮೇಳವನ್ನು ಪ್ರತಿ ವರ್ಷ ಆಯೋಜಿಸಲಾಗುತ್ತಿದೆ. ಹಾಪ್‌ಕಾಮ್ಸ್‌ನ ಎಲ್ಲಾ ಮಾರಾಟ ಮಳಿಗೆಗಳಲ್ಲಿ ಮೇಳ ಆರಂಭವಾಗಿದೆ.

ಮೇಳಕ್ಕೆ ಚಾಲನೆ ನೀಡಿದ ನಂತರ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ರೈತರ ತೋಟಗಳಿಂದ ನೇರ ಖರೀದಿ ವ್ಯವಸ್ಥೆ, ರೈತರ ಫಸಲಿಗೆ ಉತ್ತಮ ಧಾರಣೆ ಒದಗಿಸಿಕೊಡುವುದು ಈ ಮೇಳದ ಉದ್ದೇಶವಾಗಿದೆ. ಆರೋಗ್ಯಕರ ಮಾವು, ಹಲಸು ಮತ್ತು ಹುಣಸೆ ಹಣ್ಣುಗಳನ್ನು ರಿಯಾಯಿತಿ ದರಗಳಲ್ಲಿ ಮಾರಾಟಕ್ಕೆ ವ್ಯವಸ್ಥೆ ಮಾಡಿದ್ದು, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಸಬೇಕು' ಎಂದು ಕರೆ ನೀಡಿದರು.

'ಮೇಳವು ಮೇ 21ರಿಂದ 31ರವರೆಗೆ ನಡೆಯಲಿದ್ದು, ಹಲವು ತಳಿಯ ಮಾವಿನ ಮತ್ತು ಹಲಸಿನ ಹಣ್ಣುಗಳನ್ನು ಶೇಕಡ 5 ರಿಂದ 10ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ' ಎಂದು ಹಾಪ್‌ಕಾಮ್ಸ್ ಅಧ್ಯಕ್ಷ ಎನ್. ಗೋಪಾಲಕೃಷ್ಣ ಮಾಹಿತಿ ನೀಡಿದರು.

'ಕೋಲಾರ, ರಾಮನಗರ, ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾವು ಬೆಳೆಯಲಾಗುತ್ತದೆ. ರಾಜ್ಯದಲ್ಲಿ ಪ್ರಮುಖವಾಗಿ ಬಾದಾಮಿ, ಸೆಂಧೂರ, ನೀಲಂ, ತೋತಾಪುರಿ, ಮಲ್ಲಿಕಾ, ರಸಪೂರಿ ತಳಿಗಳನ್ನು ಬೆಳೆಯಲಾಗುತ್ತದೆ. ಹಲಸು ಕೂಡ ಒಂದು ಪ್ರಮುಖ ತೋಟಗಾರಿಕೆ ಬೆಳೆಯಾಗಿದ್ದು, ತುಮಕೂರು, ದಕ್ಷಿಣ ಕನ್ನಡ, ಹಾಸನ ಜಿಲ್ಲೆಗಳಲ್ಲಿ ಹಲಸಿನ ಹಣ್ಣಿನ ಬೆಳೆಯಿದೆ' ಎಂದು ಮಾಹಿತಿ ನೀಡಿದರು.

ಶಾಸಕ ಉದಯ್ ಬಿ. ಗರುಡಾಚಾರ್ ಉಪಸ್ಥಿತರಿದ್ದರು.

'ಆನ್‌ಲೈನ್ ಮಾರಾಟಕ್ಕೆ ಉತ್ತೇಜನ'

'ಬೆಂಗಳೂರು ನಗರ ವೇಗವಾಗಿ ಬೆಳೆಯುತ್ತಿದೆ. ಗ್ರಾಹಕರ ಅವಶ್ಯಕತೆಗಳಿಗೆ ತಕ್ಕಂತೆ ಹಾಪ್‌ಕಾಮ್ಸ್ ಆನ್‌ಲೈನ್ ಮಾರಾಟಕ್ಕೆ ಉತ್ತೇಜನ ನೀಡಬೇಕು. ವಸತಿ ಸಮುಚ್ಚಯಗಳಿಗೆ ಸಂಚಾರಿ ಮಾರಾಟ ವಾಹನಗಳ ಮೂಲಕ ತರಕಾರಿ–ಹಣ್ಣುಗಳನ್ನು ಪೂರೈಕೆ ಮಾಡಬೇಕು. ಇದಕ್ಕಾಗಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯ ಮೂಲಕ ವಿದ್ಯುತ್ ಚಾಲಿತ ವಾಹನಗಳನ್ನು ಖರೀದಿಸಿ ಹಾಪ್‌ಕಾಮ್ಸ್‌ಗೆ ನೀಡಲಾಗುವುದು' ಎಂದು ರಾಮಲಿಂಗಾರೆಡ್ಡಿ ಹೇಳಿದರು.

ಹಾಪ್‌ಕಾಮ್ಸ್ ಆಯೋಜಿಸಿದ್ದ 'ಮಾವು ಹಲಸು ಹಾಗೂ ಹುಣಸೆ ಹಣ್ಣಿನ ಮಾರಾಟ ಮೇಳ'ದಲ್ಲಿ ಸಚಿವ ರಾಮಲಿಂಗಾರೆಡ್ಡಿ ಅವರು ಮಾವಿನ ಹಣ್ಣುಗಳನ್ನು ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

ಪ್ರತಿಭಟನೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಚಂದಾಪುರ ಶಾಖೆಯ ವ್ಯವಸ್ಥಾಪಕಿಯ ಕನ್ನಡ ವಿರೋಧಿ ಧೋರಣೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಬೆಂಗಳೂರು ನಗರ ಘಟಕದ ಸದಸ್ಯರು, ಎಸ್‌ಬಿಐ ಪ್ರಧಾನ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಆಗ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು

ಸಂಚಾರ ದಟ್ಟಣೆ: ಸವಾರರು ಹೈರಾಣ

ದಾಬಸ್‌ಪೇಟೆ: ಸಾಲುಗಟ್ಟಿ ನಿಂತ ವಾಹನಗಳು, ಆಮೆಗತಿಯಲ್ಲಿ ಸಾಗಿದ ವಾಹನಗಳು, ವಾಹನ ದಟ್ಟಣೆಯಿಂದ ರಸ್ತೆಯಲ್ಲಿ ಸಿಲುಕಿದ ಆಂಬುಲೆನ್ಸ್, ರೋಗಿಗಳ ಪರದಾಟ.

ಬುಧವಾರ ಇಂತಹದೊಂದು ದೃಶ್ಯ ಕಂಡು ಬಂದಿದ್ದು ರಾಷ್ಟ್ರೀಯ ಹೆದ್ದಾರಿ 48ರ ಬೆಂಗಳೂರು - ಪುಣೆ ರಸ್ತೆಯ ದಾಬಸ್ ಪೇಟೆ ಬಳಿ. ಪಟ್ಟಣದ ದೊಡ್ಡಬಳ್ಳಾಪುರ ರಸ್ತೆ, ಮಧುಗಿರಿ ರಸ್ತೆ, ಶಿವಗಂಗೆ ರಸ್ತೆಗಳಲ್ಲಿಯೂ ವಾಹನ ದಟ್ಟಣೆ ಉಂಟಾಗಿತ್ತು. ತುಮಕೂರು ಕಡೆಯಿಂದ ಬೆಂಗಳೂರು ಕಡೆಗೆ ಹೋಗುವ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ವಾಹನ ಸವಾರರು ಹೈರಾಣಾಗಿ, ಪ್ರಯಾಣಿಕರು ಪರದಾಡಿದರು.

ಕಾನೂನುಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ

ಗೋವು, ಒಂಟೆ ಸಾಗಣೆ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋವು, ಒಂಟೆಗಳ ಸಾಗಣೆಯನ್ನು ನಿಷೇಧಿಸಲಾಗಿದೆ. ನಗರಕ್ಕೆ ಬರುವ ವಾಹನಗಳನ್ನು ತಪಾಸಣೆ ನಡೆಸಿ ಗೋವು, ಒಂಟೆಗಳ ಸಾಗಣೆ ಕಂಡುಬಂದಲ್ಲಿ ಕಾನೂನುಕ್ರಮ ಕೈಗೊಳ್ಳಬೇಕು' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ಕೆ. ನಾಯಕ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬಕ್ರೀದ್ ಸಂದರ್ಭದಲ್ಲಿ ಒಂಟೆ, ಗೋವುಗಳ ಸಾಗಣೆ ಮತ್ತು ಹತ್ಯೆ ಮಾಡುವುದನ್ನು ತಡೆಗಟ್ಟುವ ಬಗ್ಗೆ ನಡೆದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

'ಒಂಟೆ, ಗೋವುಗಳ ಹತ್ಯೆ ಮಾಡುವುದು ಅಪರಾಧವಾಗಿದ್ದು, ಸರ್ಕಾರದ ಕಾನೂನು ಮತ್ತು ನಿಯಮಗಳನ್ನು ಪಾಲಿಸಬೇಕು. ಹೊರ ರಾಜ್ಯ ಮತ್ತು ಹೊರ ಜಿಲ್ಲೆಗಳಿಂದ ಪ್ರಾಣಿಗಳನ್ನು ಕಳ್ಳ ಸಾಗಣೆ ಮಾಡುವುದು ಅಪರಾಧವಾಗಿದೆ. ಗೋವು, ಒಂಟೆಗಳ ಹತ್ಯೆ ತಡೆಗಟ್ಟಲು ಸಾರ್ವಜನಿಕರಲ್ಲಿ ಕಾನೂನಿನ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಕರಪತ್ರ ಹಂಚುವುದು ಹಾಗೂ ಆಟೊರಿಕ್ಷಾಗಳಲ್ಲಿ ಪ್ರಚಾರ ಮಾಡಬೇಕು' ಎಂದು ಸೂಚಿಸಿದರು.

ಮೈಸೂರು ರಸ್ತೆ (ಕುಂಬಳಗೋಡು), ತುಮಕೂರು ರಸ್ತೆ (ಮಾದಾವರ), ಮಾಗಡಿ ರಸ್ತೆ (ತಾವರೆಕೆರೆ), ಹೊಸೂರು ರಸ್ತೆ (ಅತ್ತಿಬೆಲೆ), ಹಳೆ ಮದ್ರಾಸ್ ರಸ್ತೆಗಳಲ್ಲಿ (ಹೊಸಕೋಟೆ) ತಪಾಸಣೆ ಕೇಂದ್ರಗಳನ್ನು ಸಾರಿಗೆ ಇಲಾಖೆ ನೇತೃತ್ವದಲ್ಲಿ ಸ್ಥಾಪಿಸಿ, ಜೂನ್ 7ರವರೆಗೆ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಗೋವು, ಒಂಟೆಗಳ ಸಾಗಣೆ ಕಂಡುಬಂದಲ್ಲಿ ವಾಹನಗಳನ್ನು ವಶಪಡಿಸಿಕೊಂಡು ಪೊಲೀಸ್, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪಶುಪಾಲನಾ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯದಿಂದ ಕಾರ್ಯ ನಿರ್ವಹಿಸಿ ಅವುಗಳನ್ನು ರಕ್ಷಣೆ ಮಾಡಿ ಸಮೀಪದಲ್ಲಿರುವ ಗೋಶಾಲೆಗಳಿಗೆ ಬಿಡಬೇಕು. ಒಂಟೆ, ಗೋಹತ್ಯೆ ಮಾಡುವುದು ಕಂಡುಬಂದಲ್ಲಿ ಸಾರ್ವಜನಿಕರು ಬಿಬಿಎಂಪಿಯ ಸಹಾಯವಾಣಿ 1533ಕ್ಕೆ ಕರೆ ಮಾಡಿ ದೂರು ನೀಡಬಹುದು ಎಂದು ತಿಳಿಸಿದರು.

ಹಬ್ಬದ ಸಂದರ್ಭಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಾಕದಂತೆ ಎಚ್ಚರವಹಿಸಬೇಕು. ಪ್ರಾಣಿ ವಧೆಯಿಂದ ಉತ್ಪತ್ತಿಯಾಗುವ ತ್ಯಾಜ್ಯ ವಿಲೇವಾರಿಯನ್ನು ಸುಸೂತ್ರವಾಗಿ ನಿರ್ವಹಣೆ ಮಾಡಬೇಕು ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿಯ ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕ ಡಾ.ಚಂದ್ರಯ್ಯ, ಪಶುಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಚಂದ್ರಶೇಖರ್ ಉಪಸ್ಥಿತರಿದ್ದರು.

ರಾಜ್ಯದ ಬೊಕ್ಕಸ ಬರಿದಾಗಿದೆ: ಆರ್. ಅಶೋಕ

'ಸಿದ್ದರಾಮಯ್ಯ ದಿವಾಳಿ ಮಾಡೆಲ್ ಆಫ್ ಕರ್ನಾಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಸಾಲ ಪಡೆದು ಸಂಬಳ ಕೊಡುವ ಪರಿಸ್ಥಿತಿಯಲ್ಲಿದೆ. ಇದಕ್ಕೆ ಕಾರಣರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 'ದಿವಾಳಿ ಮಾಡೆಲ್ ಆಫ್ ಕರ್ನಾಟಕ' ಬಿರುದು ನೀಡುತ್ತಿದ್ದೇವೆ' ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್. ಅಶೋಕ ಹೇಳಿದರು.

'ಕರ್ನಾಟಕ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ಚಾರ್ಜ್‌ಶೀಟ್' ಅನ್ನು ಬುಧವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಪಾಕಿಸ್ತಾನದ 60 ಭಯೋತ್ಪಾದಕರು ಯುದ್ಧದಲ್ಲಿ ನಿರ್ನಾಮ ಆಗಿದ್ದರು. ಆದರೂ ಅಲ್ಲಿನ ಸರ್ಕಾರವು ಸೇನಾ ಮುಖ್ಯಸ್ಥ ಅಸೀಮ್ ಮುನೀರ್‌ಗೆ ಫೀಲ್ಡ್ ಮಾರ್ಷಲ್ ಎಂಬ ಬಿರುದನ್ನು ನೀಡಿದೆ. ಅದೇ ರೀತಿ ಪಾಕಿಸ್ತಾನದ ಬಗ್ಗೆ ಪ್ರೀತಿ ಇರುವ, ಇಲ್ಲಿ ಯಾವುದೇ ಕೆಲಸ ಮಾಡದೇ ಇರುವ ಮುಖ್ಯಮಂತ್ರಿಗೆ ನಾವು ಬಿರುದು ನೀಡುತ್ತಿದ್ದೇವೆ' ಎಂದು ಹೇಳಿದರು.

ರಾಜ್ಯದ ಪ್ರತಿ ಪ್ರಜೆಯ ಮೇಲೆ ₹1 ಲಕ್ಷ ಸಾಲವನ್ನು ಈ ಸರ್ಕಾರ ಹೊರಿಸಿದೆ. ರಾಜ್ಯದ 40 ಸರ್ಕಾರಿ ಸಂಸ್ಥೆಗಳು ದಿವಾಳಿಯಾಗಿವೆ. ಸಾರ್ವಜನಿಕ ವಲಯದ 127 ಉದ್ಯಮಗಳಲ್ಲಿ ಪ್ರವಾಸೋದ್ಯಮ, ರಾಜೀವ್ ಗಾಂಧಿ ವಸತಿ ನಿಗಮ, ಮೈಸೂರು ಪೇಪರ್ ಮಿಲ್ಸ್, ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಆರ್‌ಟಿಸಿ, ಬೆಸ್ಕಾಂ ಸಹಿತ 60 ಉದ್ಯಮಗಳು ನಷ್ಟದಲ್ಲಿವೆ. ಈ ಕಂಪನಿಗಳು ₹46,800 ಕೋಟಿ ಸಾಲ ಮಾಡಿವೆ ಎಂದು ವಿವರಿಸಿದರು.

'ಸರ್ಕಾರದಲ್ಲಿ ದುಡ್ಡಿಲ್ಲ ಎನ್ನುವುದನ್ನು ಡಿ.ಕೆ. ಶಿವಕುಮಾರ್ ಸರಿಯಾಗಿ ಹೇಳಿದ್ದಾರೆ. ತಿಂಗಳಿಗೊಮ್ಮೆ ₹2 ಸಾವಿರ ಕೊಡಲು ನಿಮ್ಮಪ್ಪನ ಮನೆ ಗಂಟಾ? ತೆರಿಗೆ ಹಣ ಬಂದಾಗ ಕೊಡುತ್ತೇವೆ ಎಂದಿದ್ದಾರೆ. ತಿಂಗಳಿಗೊಮ್ಮೆ ₹2 ಸಾವಿರ ಫಟಾಫಟ್ ಕೊಡುವುದಾಗಿ ರಾಹುಲ್ ಗಾಂಧಿ ಹೇಳಿದ್ದರು. ಇಲ್ಲಿ ಶಿವಕುಮಾರ್ ಕಟಾಕಟ್ ಎನ್ನುತ್ತಿದ್ದಾರೆ' ಎಂದರು.

ಯಾವ ಸಾಧನೆಗೆ ಸಂಭ್ರಮ?: 'ಎರಡು ವರ್ಷದಲ್ಲಿ ಏನು ಕಡಿದು ಕಟ್ಟೆ ಹಾಕಿದ್ದೀರಿ ಎಂದು ಸಂಭ್ರಮಾಚರಣೆ ಮಾಡಿದ್ದೀರಿ? ಹಾಲಿನ ದರ, ನೀರು, ವಿದ್ಯುತ್, ಪೆಟ್ರೋಲ್, ಡೀಸೆಲ್, ಆಸ್ತಿ ತೆರಿಗೆ ಎಲ್ಲವನ್ನೂ ಹೆಚ್ಚಿಸಿದ್ದೀರಿ. ಜನರು ಸಂಕಷ್ಟದಲ್ಲಿ ಇರುವಾಗ ಸಮಾವೇಶ ಮಾಡಿದ್ದೀರಿ' ಎಂದು ಟೀಕಿಸಿದರು.

ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಗೆ ಮೀಸಲಾಗಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ ₹187 ಕೋಟಿಯನ್ನು ಲೂಟಿ ಮಾಡಿದ್ದಾಕ್ಕಾಗಿ ಸಂಭ್ರಮಾಚರಣೆಯೇ? ಮುಡಾದಲ್ಲಿ 14 ನಿವೇಶನ ಹೊಡೆದಿದ್ದಕ್ಕಾಗಿ, ಕಳಪೆ ದ್ರಾವಣ ನೀಡಿ ನಿತ್ಯ 15- 20 ಬಾಣಂತಿಯರ ಸಾವಾಗಿದ್ದಕ್ಕಾಗಿ, 2 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಕ್ಕಾಗಿ, ವಕ್ಫ್ ಮಂಡಳಿ ಹೆಸರಿನಲ್ಲಿ ಲಕ್ಷಾಂತರ ಎಕರೆ ರೈತರ, ದೇವಸ್ಥಾನಗಳ ಜಮೀನು ಲೂಟಿ ಮಾಡಿದ್ದಕ್ಕಾಗಿ, ಕೆಪಿಎಸ್‌ಸಿ ಪ್ರಶ್ನೆಪತ್ರಿಕೆಯಲ್ಲಿ 79 ತಪ್ಪುಗಳನ್ನು ಮಾಡಿ 2 ಲಕ್ಷ ಅಭ್ಯರ್ಥಿಗಳ ಬದುಕಿನಲ್ಲಿ ಚೆಲ್ಲಾಟವಾಡಿದ್ದಕ್ಕಾಗಿ ಸಮಾವೇಶ ಮಾಡಿದ್ರಾ ಎಂದು ಪ್ರಶ್ನಿಸಿದರು.

ಶಾಸಕರಾದ ಸಿ.ಎನ್. ಅಶ್ವತ್ಥನಾರಾಯಣ, ಕೆ. ಗೋಪಾಲಯ್ಯ, ಎಸ್. ರಘು, ಸಿ.ಕೆ. ರಾಮಮೂರ್ತಿ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಎ.ಆರ್. ಸಪ್ತಗಿರಿಗೌಡ ಉಪಸ್ಥಿತರಿದ್ದರು.

'ಕರ್ನಾಟಕ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ಚಾರ್ಜ್‌ಶೀಟ್' ಅನ್ನು ಆರ್. ಅಶೋಕ ಬಿಡುಗಡೆ ಮಾಡಿದರು. ಕೆ. ಗೋಪಾಲಯ್ಯ, ಸಿ.ಎನ್. ಅಶ್ವತ್ಥನಾರಾಯಣ, ಎಸ್. ರಘು ಉಪಸ್ಥಿತರಿದ್ದರು

ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದಿಂದ ಯೋಜನೆ

ಕಲಾಗ್ರಾಮದಲ್ಲಿ ‘ಪರಾಮರ್ಶನ’ ಗ್ರಂಥಾಲಯ

• ವರುಣ ಹೆಗಡೆ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ವತಿಯಿಂದ ಕನಕ ಸಾಹಿತ್ಯ, ಕೀರ್ತನ ಸಾಹಿತ್ಯ, ತತ್ವಪದ ಸಾಹಿತ್ಯ, ಭಕ್ತಿ ಸಾಹಿತ್ಯ ಮತ್ತು ಸಂತ-ಶರಣರ ಸಾಹಿತ್ಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ‘ಪರಾಮರ್ಶನ’ ಗ್ರಂಥಾಲಯ ಸ್ಥಾಪಿಸಲಾಗಿದೆ.

ಕೃತಿಗಳ ಪ್ರಸಾರದ ಜತೆಗೆ, ಈ ಕ್ಷೇತ್ರದಲ್ಲಿ ಅಧ್ಯಯನ ಕೈಗೊಂಡವರಿಗೆ ಒಂದೇ ಸೂರಿನಡಿ ಪುಸ್ತಕಗಳನ್ನು ಒದಗಿಸುವುದು ಗ್ರಂಥಾಲಯ ನಿರ್ಮಾಣದ ಹಿಂದಿನ ಉದ್ದೇಶವಾಗಿದೆ. ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿರುವ ಅಧ್ಯಯನ ಕೇಂದ್ರದ ಎರಡನೇ ಮಹಡಿಯಲ್ಲಿ ಈ ಗ್ರಂಥಾಲಯವನ್ನು ಸಜ್ಜುಗೊಳಿಸಲಾಗುತ್ತಿದ್ದು, ಜೂನ್ ಮೊದಲ ವಾರದಲ್ಲಿ ಕಾರ್ಯಾರಂಭಿಸಲಿದೆ.

ವಿವಿಧ ವಿಶ್ವವಿದ್ಯಾಲಯಗಳು, ಕನ್ನಡ ಪರ ಸಂಸ್ಥೆಗಳು ಹಾಗೂ ಪ್ರಕಾಶನ ಸಂಸ್ಥೆಗಳಿಂದ ಕನಕ ಸಾಹಿತ್ಯ, ಕೀರ್ತನ ಸಾಹಿತ್ಯ, ತತ್ವಪದ ಸಾಹಿತ್ಯ, ಭಕ್ತಿ ಸಾಹಿತ್ಯ ಮತ್ತು ಸಂತ-ಶರಣರ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಸಂಗ್ರಹಿಸಲಾಗುತ್ತಿದೆ. ಈಗಾಗಲೇ 1,500ಕ್ಕೂ ಅಧಿಕ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಈ ಸಂಗ್ರಹ ಕಾರ್ಯ ನಿರಂತರ ನಡೆಯಲಿದ್ದು, ಈಗಾಗಲೇ ಸಂಗ್ರಹಿಸಲಾದ ಪುಸ್ತಕಗಳನ್ನು ವಿಭಾಗವಾರು ಇರಿಸಲಾಗಿದೆ.

ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದಲ್ಲಿ ನಿರ್ಮಿಸಲಾಗಿರುವ ‘ಪರಾಮರ್ಶನ’ ಗ್ರಂಥಾಲಯ

ತತ್ವಪದಗಳ ಪರಿಭಾಷಾ ಕೋಶ

ತತ್ವಪದ ಸಾಹಿತ್ಯದಲ್ಲಿ ಪ್ರಯೋಗವಾಗಿರುವ ವಿಶಿಷ್ಟ ಪದಗಳ ಪರಿಭಾಷಾ ಕೋಶವನ್ನು ಹೊರತರಲು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಮುಂದಾಗಿದೆ. ಈ ಪದಕೋಶವು ತತ್ವಪದಗಳಲ್ಲಿ ಪ್ರಯೋಗವಾಗಿರುವ ವಿಶಿಷ್ಟ ಪದಗಳ ಸಾಂಸ್ಕೃತಿಕ, ತಾತ್ವಿಕ ಮತ್ತು ಅನುಭಾವಿಕ ಹಿನ್ನೆಲೆಯಲ್ಲಿ ವಿವರಗಳನ್ನು ಒಳಗೊಂಡಿರಲಿದೆ. ಇದಕ್ಕಾಗಿ ಸಂಪಾದಕ ಮಂಡಳಿಯನ್ನು ರಚಿಸಿ, ಪದಕೋಶದ ರಚನೆಗೆ ಕೇಂದ್ರವು ಸಿದ್ಧತೆ ಮಾಡಿಕೊಂಡಿದೆ.

₹5 ಲಕ್ಷ ಅನುದಾನ: ಈ ಗ್ರಂಥಾಲಯದಲ್ಲಿ ಸಾರ್ವಜನಿಕರಿಗೂ ಪ್ರವೇಶಕ್ಕೆ ಮುಕ್ತ ಅವಕಾಶ ನೀಡಲಾಗುತ್ತದೆ. ಸರ್ಕಾರಿ ರಜಾ ದಿನ ಹೊರತುಪಡಿಸಿ ಉಳಿದ ದಿನ ಬೆಳಿಗ್ಗೆ 10.30ರಿಂದ ಸಂಜೆ 5 ರವರೆಗೆ ಗ್ರಂಥಾಲಯ ತೆರೆದಿರಲಿದೆ.

ಇಲ್ಲಿ ಪುಸ್ತಕಗಳನ್ನು ಕೊಂಡೊಯ್ಯಲು ಅವಕಾಶ ಇರುವುದಿಲ್ಲ. ಬದಲಾಗಿ, ಅಲ್ಲಿಯೇ ಪುಸ್ತಕಗಳನ್ನು ಓದ ಬೇಕಾಗುತ್ತದೆ. ಸಂಶೋಧಕರು ನಿಗದಿತ ಪುಟಗಳನ್ನು ಜೆರಾಕ್ಸ್ ಮಾಡಿ, ಪಡೆಯುವ ಅವಕಾಶವನ್ನು ಕಲ್ಪಿಸಲಾಗುತ್ತದೆ. ಪುಸ್ತಕಗಳನ್ನು ಕೆಲ ಸಂಸ್ಥೆಗಳು ಉಚಿತ ಹಾಗೂ ರಿಯಾಯಿತಿ ದರದಲ್ಲಿ ಈ ಗ್ರಂಥಾಲಯಕ್ಕೆ ನೀಡುತ್ತಿವೆ. ಪುಸ್ತಕಗಳ ಖರೀದಿಗೆ ಕೇಂದ್ರವು ₹5 ಲಕ್ಷ ಅನುದಾನ ಮೀಸಲಿಟ್ಟಿದೆ.

‘ಓದುಗರಿಗೆ ಸಹಕಾರಿಯಾಗಲು ಗ್ರಂಥಾಲಯದಲ್ಲಿ ಟೇಬಲ್‌ಗಳನ್ನು ಇರಿಸಲಾಗಿದೆ. ಗುಂಪು ಚರ್ಚೆಗೂ ಅವಕಾಶ ಕಲ್ಪಿಸಲಾಗುತ್ತದೆ. ಹಳೆಯ ಹಾಗೂ ಹೊಸ ಪುಸ್ತಕಗಳನ್ನು ಸಂಗ್ರಹಿಸಲಾಗುತ್ತಿದೆ. ಅಪರೂಪದ ಗ್ರಂಥಗಳು ಕೂಡ ಇಲ್ಲಿ ಇರಲಿವೆ. ಓದಲು ಸೂಕ್ತವಾದ ವಾತಾವರಣ ನಿರ್ಮಿಸಲಾಗಿದೆ. ನಿರಂತರ ಪುಸ್ತಕ ಸಂಗ್ರಹಿಸಲಾಗುವುದು’ ಎಂದು ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದರು.



ಗ್ರಂಥಾಲಯವನ್ನು ಸಜ್ಜುಗೊಳಿಸಲಾಗಿದ್ದು, ಈಗಾಗಲೇ ಸಾವಿರಾರು ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಓದುಗರ ಸ್ಪಂದನೆ ಆಧರಿಸಿ ಭವಿಷ್ಯದಲ್ಲಿ ವಿಸ್ತರಿಸಲಾಗುವುದು

ಕಾ.ತ. ಚಿಕ್ಕಣ್ಣ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ

ಸುದ್ದಿ 2 ನಿಮಿಷ

ರೇಣುಕಸ್ವಾಮಿ ಪ್ರಕರಣ: ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಕೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಸಂಬಂಧ 57ನೇ ಎಸಿಎಂಎಂ ನ್ಯಾಯಾಲಯಕ್ಕೆ ತನಿಖಾಧಿಕಾರಿಗಳು, 132 ಪುಟಗಳ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

2024ರ ಜೂನ್ 8ರಂದು ಪಟ್ಟಣಗೆರೆಯ ಶೆಡ್‌ನಲ್ಲಿ ರೇಣುಕಸ್ವಾಮಿ ಅವರ ಕೊಲೆ ನಡೆದಿತ್ತು. ಕೊಲೆಯ ಆರೋಪದ ಮೇರೆಗೆ ದರ್ಶನ್, ಪವಿತ್ರಾಗೌಡ ಸೇರಿ 17 ಆರೋಪಿಗಳನ್ನು ಜೂನ್ 11ರಂದು ಪೊಲೀಸರು ಬಂಧಿಸಿದ್ದರು. ತನಿಖೆ ನಡೆಸಿ 90 ದಿನಗಳ ಒಳಗೆ ದೋಷಾರೋಪ ಪಟ್ಟಿಯನ್ನು ಪೊಲೀಸರು ಸಲ್ಲಿಸಿದ್ದರು. ಇದೀಗ ಕೆಲವು ಸಾಕ್ಷ್ಯಾಧಾರ ಸಹಿತ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ.

‘ಕೆಲವು ಮಹತ್ವದ ಸಾಕ್ಷ್ಯಗಳನ್ನು ಉಲ್ಲೇಖ ಮಾಡಲಾಗಿದೆ. ಕೃತ್ಯ ನಡೆದ ದಿನ ಆರೋಪಿಗಳು ತೆಗೆದುಕೊಂಡಿದ್ದ ಫೋಟೊಗಳನ್ನು ಡಿಲಿಟ್ ಮಾಡಿದ್ದರು. ಆರೋಪಿಗಳ ಮೊಬೈಲ್ ಅನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗಿತ್ತು. ಕೆಲವು ಫೋಟೊಗಳು ಈಗ ಮರು ಸಂಗ್ರಹವಾಗಿದ್ದು, ಫೋಟೊ ಸಹಿತ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಆರ್ನಬ್, ಮಾಳವೀಯಾ ವಿರುದ್ಧ ಎಫ್‌ಐಆರ್

ಬೆಂಗಳೂರು: ಟರ್ಕಿಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ನೋಂದಾಯಿತ ಕಚೇರಿಯನ್ನು ಹೊಂದಿದೆ ಎಂದು ಸುದ್ದಿ ಪ್ರಸಾರ ಮಾಡಿದ್ದ ಹಾಗೂ ಆ ವಿಡಿಯೊ ಹಂಚಿಕೊಂಡಿದ್ದ ಆರೋಪದ ಅಡಿ ಇಬ್ಬರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಿಪಬ್ಲಿಕ್ ಸುದ್ದಿ ವಾಹಿನಿಯ ಮುಖ್ಯಸ್ಥ ಆರ್ನಬ್ ಗೋಸ್ವಾಮಿ ಹಾಗೂ ಬಿಜೆಪಿ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ಯುವ ಕಾಂಗ್ರೆಸ್‌ ನ ಕಾನೂನು ಘಟಕದ ಮುಖ್ಯಸ್ಥ ಬಿ.ಎನ್.ಶ್ರೀಕಾಂತ್ ಸ್ವರೂಪ್ ಅವರು ನೀಡಿರುವ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸಂಬಂಧಿಸಿದವರಿಗೆ ನೋಟಿಸ್ ನೀಡಿ ವಿಚಾರಣೆಗೆ ಬರುವಂತೆ ಸೂಚಿಸಲಾಗುವುದು ಎಂದು ಪೊಲೀಸರು ಹೇಳಿದರು.

‘ಟರ್ಕಿಯ ಇಸ್ತಾಂಬುಲ್‌ನಲ್ಲಿರುವ ‘ಕಾಂಗ್ರೆಸ್ ಸೆಂಟರ್’ ಅನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಕಚೇರಿ ಎಂದು ವಾಹಿನಿ ಸುಳ್ಳು ಸುದ್ದಿ ಪ್ರಸಾರ ಮಾಡಿದೆ. ಸುದ್ದಿಯ ವಿಡಿಯೊವನ್ನು ತಮ್ಮ ‘ಎಕ್ಸ್’ ಖಾತೆಯಲ್ಲಿ ಅಮಿತ್ ಮಾಳವೀಯ ಅವರು ಹಂಚಿಕೊಂಡಿದ್ದಾರೆ. ಇದು ಭಾರತದ ರಾಷ್ಟ್ರೀಯ ಪಕ್ಷವೊಂದರ ಕುರಿತು ದೇಶದ ಪ್ರಜೆಗಳಲ್ಲಿ ತಪ್ಪು ಭಾವನೆ ಮೂಡಿಸುವ ಸಂಚಿನ ಭಾಗವಾಗಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದೂರಿನನ್ವಯ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 192 (ಗಲಭೆ ಸೃಷ್ಟಿಸುವ ಉದ್ದೇಶದಿಂದ ಪ್ರಚೋದನೆ ನೀಡುವುದು) ಮತ್ತು 352 (ಶಾಂತಿಭಂಗಕ್ಕೆ ಪ್ರಚೋದನೆ) ಆರೋಪದಡಿ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

₹5 ಲಕ್ಷ ಲಂಚ: ಎಇಇ, ಎಇ ಸೆರೆ

ಬೆಂಗಳೂರು: ನಿರ್ಮಾಣ ಕಾಮಗಾರಿಗೆ ನಿರಪೇಕ್ಷಣಾ ಪತ್ರ (ಎನ್‌ಒಸಿ) ನೀಡಲು ₹5 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಬಿಬಿಎಂಪಿಯ ಹೆಬ್ಬಾಳ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಮಾಧವ ರಾವ್, ಸಹಾಯಕ ಎಂಜಿನಿಯರ್ (ಎಇ) ಸುರೇಂದ್ರ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

‘ಆರ್‌ಎಂವಿ ಬಡಾವಣೆಯಲ್ಲಿ ಸಂಜಯ್ ಎಂಬುವವರು ವಾಣಿಜ್ಯ ಸಂಕೀರ್ಣ ನಿರ್ಮಿಸುತ್ತಿದ್ದು, ವಿದ್ಯುತ್ ಕೇಬಲ್ ಅಳವಡಿಕೆಗೆ ಎನ್‌ಒಸಿ ಪಡೆಯಲು ಬಿಬಿಎಂಪಿಗೆ ಅರ್ಜಿ ಸಲ್ಲಿಸಿದ್ದರು. ಈ ಕೆಲಸ ಮಾಡಿಕೊಡಲು ಎಇಇ ಮತ್ತು ಇಎ ₹10 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಮೊದಲು ₹5 ಲಕ್ಷ ಮತ್ತು ಎನ್‌ಒಸಿ ನೀಡಿದ ನಂತರ ₹5 ಲಕ್ಷ ನೀಡುವಂತೆ ಸೂಚಿಸಿದ್ದರು’ ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

‘ಸಂಜಯ್ ಅವರು ಈ ಸಂಬಂಧ ದೂರು ನೀಡಿದ್ದರು. ಲೋಕಾಯುಕ್ತ ಡಿವೈಎಸ್‌ಪಿ ಸಿ.ವಸಂತ್ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ಎಇಇ ಅವರ ಕಚೇರಿಗೆ ತೆರಳಿ ಹಣ ನೀಡುವಂತೆ ಸಂಜಯ್ ಅವರಿಗೆ ಸೂಚಿಸಲಾಗಿತ್ತು’ ಎಂದು ತಿಳಿಸಿದ್ದಾರೆ.

‘ಅದರಂತೆ ಎಇಇ ಕಚೇರಿಗೆ ತೆರಳಿದ ಸಂಜಯ್ ಅವರು ಎಇ ಸುರೇಂದ್ರ ಅವರಿಗೆ ₹5 ಲಕ್ಷ ನೀಡಿದ್ದರು. ಈ ವೇಳೆ ದಾಳಿ ನಡೆಸಿ ಅವರನ್ನು ಬಮಧಿಸಲಾಯಿತು. ಸುರೇಂದ್ರ ಅವರ ಹೇಳಿಕೆ ಆಧರಿಸಿ, ಎಇಇ ಮಾಧವ ರಾವ್ ಅವರನ್ನೂ ಬಂಧಿಸಲಾಯಿತು. ಹಣವನ್ನು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರೆದಿದೆ’ ಎಂದು ತಿಳಿಸಿದ್ದಾರೆ.

‘ಡೆಂಗಿ ನಿಯಂತ್ರಣಕ್ಕೆ ಸ್ವಯಂ ಸೇವಕರು’

ಸಚಿವ ದಿನೇಶ್ ಗುಂಡೂರಾವ್ ಮಾಹಿತಿ • ಆರೋಗ್ಯ ಇಲಾಖೆ, ಬಿಬಿಎಂಪಿಯಿಂದ ‘ಡೆಂಗಿ ದಿನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಡೆಂಗಿ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ. ಈ ಬಾರಿ ಡೆಂಗಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮುನ್ನೆಚ್ಚರಿಕೆ ವಹಿಸಲು 700 ಸ್ವಯಂ ಸೇವಕರು ಹಾಗೂ 240 ಆರೋಗ್ಯ ನಿರೀಕ್ಷಣಾಧಿಕಾರಿಗಳನ್ನು ನೇಮಿಸಲಾಗಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು

ಆರೋಗ್ಯ ಇಲಾಖೆ ಮತ್ತು ಬಿಬಿಎಂಪಿ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಡೆಂಗಿ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಬೆಂಗಳೂರಿನಲ್ಲಿಯೇ ಶೇ 40ರಿಂದ ಶೇ 50ರಷ್ಟು ಡೆಂಗಿ ಪ್ರಕರಣಗಳು ವರದಿಯಾಗುತ್ತಿವೆ. ಸ್ವಯಂ ಸ್ವಚ್ಛತೆಗೆ ಆದ್ಯತೆ ನೀಡಿ, ಸುರಕ್ಷತಾ ಕ್ರಮಗಳನ್ನು ಕೈಗೊಂಡಾಗ ಮಾತ್ರ ಡೆಂಗಿ ನಿಯಂತ್ರಣ ಸಾಧ್ಯ’ ಎಂದು ಅಭಿಪ್ರಾಯಪಟ್ಟರು.

ಕುಂಬಾರಗುಂಡಿ ಬಡಾವಣೆಯಲ್ಲಿ ಮಹಿಳೆಯೊಬ್ಬರಿಗೆ ಡೆಂಗಿ ಬಗ್ಗೆ ಸಚಿವ ದಿನೇಶ್ ಗುಂಡೂರಾವ್ ಜಾಗೃತಿ ಮೂಡಿಸಿದರು

‘ನಮ್ಮ ಆರೋಗ್ಯಕ್ಕೆ ನಾವು ಮೊದಲ ಪ್ರಾಮುಖ್ಯ ನೀಡಬೇಕಿದೆ. ಉತ್ತಮ ಆರೋಗ್ಯಕ್ಕೆ ಉತ್ತಮ ವಾತಾವರಣ ನಿರ್ಮಾಣ ಅಗತ್ಯವಿದ್ದು, ನಮ್ಮ ಸುತ್ತಮುತ್ತಲೂ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಸೊಳ್ಳೆಗಳು ಲಾರ್ವಾ ಉತ್ಪತ್ತಿ ಮಾಡುವ ಪ್ರದೇಶಗಳನ್ನು ಸ್ವಚ್ಛಗೊಳಿಸಬೇಕು’ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಿಕ್ಕಪೇಟೆ ಶಾಸಕ ಉದಯ್ ಬಿ. ಗರುಡಚಾರ್, ‘ಡೆಂಗಿ ತಡೆಗೆ ಎಲ್ಲರೂ ಒಟ್ಟಾಗಿ ಕಾರ್ಯನಿರ್ವಹಿಸಬೇಕು. ಪ್ರತಿಯೊಬ್ಬರೂ ಸ್ವಚ್ಛತೆಗೆ ಆದ್ಯತೆ ನೀಡಬೇಕು’ ಎಂದರು.

ಸುರಕ್ಷತಾ ಕ್ರಮದ ಬಗ್ಗೆ ಜಾಗೃತಿ

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕುಂಬಾರಗುಂಡಿ ಬಡಾವಣೆಯಲ್ಲಿ ಡೆಂಗಿ ಬಗ್ಗೆ ಸಚಿವ ದಿನೇಶ್ ಗುಂಡೂರಾವ್ ಅರಿವು ಮೂಡಿಸಿದರು.

ಆರೋಗ್ಯ ಇಲಾಖೆ ಹಾಗೂ ಬಿಬಿಎಂಪಿ ಅಧಿಕಾರಿಗಳು ಜೊತೆಗಿದ್ದರು. ಮನೆ ಮನೆಗೆ ತೆರಳಿದ ಅವರು, ಡೆಂಗಿ ವಿರುದ್ಧ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ತಿಳಿಸಿದರು.

‘ಈಡೀಸ್ ಸೊಳ್ಳೆಗಳ ಲಾರ್ವಾ ಉತ್ಪತ್ತಿ ತಾಣಗಳಾದ ನೀರಿನ ಟ್ಯಾಂಕ್, ತೆಂಗಿನ ಚಿಪ್ಪು ಸೇರಿ ವಿವಿಧೆಡೆ ಶುಚಿತ್ವಕ್ಕೆ ಆದ್ಯತೆ ನೀಡಬೇಕು. ಆಗ ಡೆಂಗಿ ನಿಯಂತ್ರಣ ಸಾಧ್ಯವಾಗುತ್ತದೆ’ ಎಂದು ದಿನೇಶ್ ಗುಂಡೂರಾವ್ ಸಾರ್ವಜನಿಕರಿಗೆ ಕಿವಿಮಾತು ಹೇಳಿದರು.

ಇದಕ್ಕೂ ಮೊದಲು, ಕಾರ್ಯಕ್ರಮದಲ್ಲಿ ಹಾಜರಿದ್ದ ಸ್ವಯಂ ಸೇವಕರು, ಆಶಾ ಕಾರ್ಯಕರ್ತೆಯರು ಹಾಗೂ ವಿದ್ಯಾರ್ಥಿಗಳಿಗೆ ಡೆಂಗಿ ಕುರಿತಾದ ಕರಪತ್ರಗಳನ್ನು ವಿತರಿಸಲಾಯಿತು.

ಆರೋಗ್ಯ ಇಲಾಖೆ ಆಯುಕ್ತ ಶಿವಕುಮಾರ್ ಕೆ.ಬಿ., ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ನವೀನ್ ಭಟ್, ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ ವಿಭಾಗ) ವಿಕಾಸ್ ಸುರಳ್ಕರ್ ಕಿಶೋರ್, ಆರೋಗ್ಯ ಇಲಾಖೆ ನಿರ್ದೇಶಕಿ ಡಾ. ತ್ರಿವೇಣಿ, ಸಹ ನಿರ್ದೇಶಕಿ ಡಾ. ರಜಿನಿ ಎಂ. ಉಪಸ್ಥಿತರಿದ್ದರು.

ಪ್ರತಿಕೂಲ ಹವಾಮಾನ ಅಲುಗಾಡಿದ ವಿಮಾನ

ಇಂಡಿಗೊ ವಿಮಾನದ ಮೂಗಿಗೆ ಹಾನಿಯಾಗಿರುವುದು –ಪಿಟಿಐ ಚಿತ್ರ

ಶ್ರೀನಗರ/ದೆಹಲಿ (ಪಿಟಿಐ): ದೆಹಲಿಯಿಂದ ಶ್ರೀನಗರಕ್ಕೆ 227 ಪ್ರಯಾಣಿಕರನ್ನು ಹೊತ್ತು ತೆರಳುತ್ತಿದ್ದ ಇಂಡಿಗೊ ವಿಮಾನವು ಬುಧವಾರ ಪ್ರತಿಕೂಲ ಹವಾಮಾನದಿಂದ ‘ಟರ್ಬ್ಯುಲೆನ್ಸ್’ಗೆ ಸಿಲುಕಿ (ಗಾಳಿಯ ತೀವ್ರ ಏರಿಳಿತದಿಂದ ಆಗುವ ಪ್ರಕ್ಷುಬ್ಧತೆ) ಅಲುಗಾಡಿದ ಪರಿಣಾಮ ಪ್ರಯಾಣಿಕರು ಆತಂಕಕ್ಕೆ ಒಳಗಾಗಿದ್ದರು.

ಕೂಡಲೇ ಪೈಲಟ್ ಈ ಕುರಿತು ಶ್ರೀನಗರದ ವಾಯು ಸಂಚಾರ ನಿಯಂತ್ರಣಕ್ಕೆ ತುರ್ತು ಪರಿಸ್ಥಿತಿಯ ವರದಿ ಮಾಡಿದರು. ಬಳಿಕ ವಿಮಾನ ಸುರಕ್ಷಿತವಾಗಿ ಇಳಿಯಿತು. ಎಲ್ಲ ಪ್ರಯಾಣಿಕರು ಮತ್ತು ವಿಮಾನದ ಸಿಬ್ಬಂದಿ ಸುರಕ್ಷಿತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ದೆಹಲಿಯಿಂದ ಶ್ರೀನಗರಕ್ಕೆ ಚಲಿಸುತ್ತಿದ್ದ ಇಂಡಿಗೊ(6ಇ2142) ವಿಮಾನವು ಆಲಿಕಲ್ಲು ಮಳೆ ಎದುರಿಸಿತು. ಈ ವೇಳೆ ಪೈಲಟ್ ಶ್ರೀನಗರ ವಿಮಾನ ನಿಲ್ದಾಣಕ್ಕೆ ತುರ್ತು ಪರಿಸ್ಥಿತಿಯ ವರದಿ ಮಾಡಿದ್ದಾರೆ. ಬಳಿಕ ವಿಮಾನವು ಸಂಜೆ 6.30 ಗಂಟೆಗೆ ಶ್ರೀನಗರದಲ್ಲಿ ಸುರಕ್ಷಿತವಾಗಿ ಇಳಿದಿದೆ’ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಯೊಬ್ಬರು ವಿವರಿಸಿದ್ದಾರೆ. ‘ಸಾವಿನ ಸಮೀಪ ಹೋದ ಅನುಭವವಾಯಿತು. ವಿಮಾನದ ಮೂಗು, ಬಲಭಾಗಕ್ಕೆ ಹಾನಿ ಯಾಗಿತ್ತು’ ಎಂದು ಪ್ರಯಾಣಿಕ ಓವೈಸ್ ಮಕ್ಬೂಲ್ ಹಕೀಂ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ದೆಹಲಿಯಲ್ಲಿ ಭಾರಿ ಮಳೆ: ದೆಹಲಿ–ಎನ್‌ಸಿಆರ್ ಪ್ರದೇಶದಲ್ಲಿ ಬುಧವಾರ ಸಂಜೆ ಬಿರುಗಾಳಿ, ಆಲಿಕಲ್ಲು ಸಹಿತ ಭಾರೀ ಮಳೆ ಸುರಿದಿದೆ. ಗಂಟೆಗೆ 79 ಕಿ.ಮೀ ವೇಗದಲ್ಲಿ ಗಾಳಿ ಬೀಸಿದ್ದು, ಹಲವು ಮರಧರೆಗುರುಳಿವೆ.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಕಾರ್ಯಕ್ರಮ ಆಯೋಜನೆ • ಒಪ್ಪಂದದ ಪೈಕಿ ಮೊದಲ ಹಂತದಲ್ಲಿ ನಾಲ್ಕು ಆನೆ ನೀಡಿದ ಸರ್ಕಾರ

ಆಂಧ್ರಕ್ಕೆ ಕರುನಾಡಿನ ನಾಲ್ಕು ಕುಮ್ಕಿ ಆನೆಗಳ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದಲ್ಲಿ ಆನೆ–ಮಾನವ ಸಂಘರ್ಷವನ್ನು ನಿಯಂತ್ರಣಕ್ಕೆ ತರಲು ಕರ್ನಾಟಕದಲ್ಲಿ ತರಬೇತುಗೊಂಡ ನಾಲ್ಕು ಕುಮ್ಕಿ ಆನೆಗಳನ್ನು ಬುಧವಾರ ಆ ರಾಜ್ಯಕ್ಕೆ ಹಸ್ತಾಂತರಿಸಲಾಯಿತು. ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಆನೆಗಳ ಹಸ್ತಾಂತರದ ದಾಖಲೆ ಪತ್ರಗಳನ್ನು ಸ್ವೀಕರಿಸಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅರಣ್ಯ ಸಚಿವ ಈಶ್ವರ ಖಂಡ್ರೆ ಪಾಲ್ಗೊಂಡಿದ್ದರು. ಹೂವುಗಳಿಂದ ಅಲಂಕೃತಗೊಂಡಿದ್ದ ಆನೆಗಳು ತಮ್ಮ ಸೊಂಡಿಲೆತ್ತಿ ಪ್ರಣಾಮ ಸಲ್ಲಿಸಿದವು. ಸಿದ್ದರಾಮಯ್ಯ, ಶಿವಕುಮಾರ್ ಮತ್ತು ಪವನ್ ಕಲ್ಯಾಣ್ ಅವರು ಆನೆಗಳ ಮೇಲೆ ಪುಷ್ಪ ವೃಷ್ಟಿ ಮಾಡಿದರು.

‘ಆಂಧ್ರದ ಜತೆ ಆಗಿರುವ ಒಪ್ಪಂದದ ಪ್ರಕಾರ ಆರು ಆನೆಗಳ ಪೈಕಿ ಮೊದಲ ಹಂತದಲ್ಲಿ ನಾಲ್ಕು ಆನೆಗಳನ್ನು ಹಸ್ತಾಂತರಿಸಲಾಗಿದೆ. ಉಳಿದ ಎರಡು ಆನೆಗಳನ್ನು ಮುಂದಿನ ದಿನಗಳಲ್ಲಿ ಹಸ್ತಾಂತರಿಸಲಾಗುವುದು. ನಾಲ್ಕು ಆನೆಗಳನ್ನು ಚಿತ್ತೂರು ಕಾಡಿಗೆ ಒಯ್ಯಲಾಗುವುದು. ಈ ಆನೆಗಳು ತರಬೇತಿ ಪಡೆದಿವೆ. ಇವು ಕಾಡಾನೆಗಳನ್ನು ಓಡಿಸುವುದು, ನಿರ್ದಿಷ್ಟ ಪ್ರದೇಶಕ್ಕೆ ತಳ್ಳುವುದು ಮತ್ತು ಪುಂಡಾನೆಗಳನ್ನು ಹಿಡಿಯುವುದರಲ್ಲಿ ತರಬೇತಿ ಪಡೆದಿವೆ. ಆಂಧ್ರದ ಸುಮಾರು 25 ಮಾವುತರು/ಕಾವಡಿಗಳಿಗೆ ತರಬೇತಿಯನ್ನೂ ನೀಡಲಾಗಿದೆ’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

ಆನೆಗಳ ಮೇಲೆ ನಿಗಾ: ‘ಆನೆಗಳ ಆರೋಗ್ಯ ಮತ್ತು ಅವುಗಳ ತೂಕದ ಬಗ್ಗೆ ಆಂಧ್ರಪ್ರದೇಶ ಪ್ರತಿ ವರ್ಷ ರಾಜ್ಯಕ್ಕೆ ವರದಿ ನೀಡಬೇಕು. ಇದರಿಂದ ಆನೆಗಳನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೆ ಎಂಬ ವಿಚಾರ ಗೊತ್ತಾಗುತ್ತದೆ. ಇಲ್ಲಿಂದ ಕಳುಹಿಸಿದ ಆನೆಗಳು ಅಲ್ಲಿನ ಅರಣ್ಯ ಮತ್ತು ಪರಿಸರದಲ್ಲಿ ಹೊಂದಿಕೊಳ್ಳಲು ಯಾವುದೇ ಸಮಸ್ಯೆ ಆಗುವುದಿಲ್ಲ’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸುದ್ದಿಗಾರರಿಗೆ ತಿಳಿಸಿದರು.

‘ದಸರಾ ಆನೆಗಳನ್ನು ಮೈಸೂರಿಗೆ ವೀರನಹೊಸಹಳ್ಳಿಯಿಂದ ಕಳುಹಿಸುವಾಗ ಪೂಜೆ ಮಾಡಿ ಕಳಿಸಲಾಗುತ್ತಿದೆ. ಅದೇ ರೀತಿ ಆಂಧ್ರಕ್ಕೆ ನೀಡುತ್ತಿರುವ ಆನೆಗಳಿಗೂ ಪೂಜೆ ಸಲ್ಲಿಸಲಾಗಿದೆ. ಇದು ಆನೆಗಳ ಬಗ್ಗೆ ಕರ್ನಾಟಕ ರಾಜ್ಯಕ್ಕೆ ಇರುವ ಪ್ರೀತಿ, ವಾತ್ಸಲ್ಯದ ಪ್ರತೀಕ’ ಎಂದರು.

‘ಪ್ರಕೃತಿ- ಕನ್ನಡಿ ಎರಡೂ ಒಂದೇ. ಕನ್ನಡಿ ಇರುವ ರೂಪವನ್ನೇ ನಿಮಗೆ ತೋರಿಸುತ್ತದೆ. ನೀವು ಪ್ರಕೃತಿ ರಕ್ಷಿಸಿದರೆ, ಪ್ರಕೃತಿ ನಿಮ್ಮನ್ನು ರಕ್ಷಿಸುತ್ತದೆ. ವೃಕ್ಷೋ ರಕ್ಷತಿ ರಕ್ಷಿತಃ ಎಂದು ಹೇಳುತ್ತಾರೆ. ನಾವು ಮರವನ್ನು ರಕ್ಷಿಸಿದರೆ ಮರ ನಮ್ಮನ್ನು ರಕ್ಷಿಸುತ್ತದೆ. ಹೀಗಾಗಿ ನಾವೆಲ್ಲರೂ ಸಸಿ ನೆಟ್ಟು ಪೋಷಿಸುವ ಸಂಕಲ್ಪ ಮಾಡೋಣ’ ಎಂದು ಖಂಡ್ರೆ ಅವರು ತೆಲುಗಿನಲ್ಲಿ ಪದ್ಯದ ಸಾಲನ್ನು ಹೇಳಿ ಕನ್ನಡದಲ್ಲಿ ಅರ್ಥ ವಿವರಿಸಿದರು.



ವಿಧಾನಸೌಧದ ಮುಂಭಾಗ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶಕ್ಕೆ ಕರ್ನಾಟಕದ ನಾಲ್ಕು ಕುಮ್ಕಿ ಆನೆಗಳನ್ನು ಹಸ್ತಾಂತರಿಸಲಾಯಿತು. ಆನೆಯೊಂದು ಸೊಂಡಿಲೆತ್ತಿ ಗಣ್ಯರಿಗೆ ವಂದನೆ ಸಲ್ಲಿಸಿತು.

ಸಂಘರ್ಷ ಸರಿಯಾಗಿ ನಿಭಾಯಿಸಬೇಕು: ಮುಖ್ಯಮಂತ್ರಿ

‘ಯಾವ ರಾಜ್ಯಗಳಲ್ಲಿ ಆನೆ– ಮಾನವ ಸಂಘರ್ಷ ಇದೆಯೋ, ಅದನ್ನು ಒಗ್ಗಟ್ಟಾಗಿ ನಿಭಾಯಿಸಬೇಕು. ಈ ನಿಟ್ಟಿನಲ್ಲಿ ಆಂಧ್ರಪ್ರದೇಶಕ್ಕೆ ಆರು ಆನೆಗಳನ್ನು ನೀಡಲು ಒಪ್ಪಿಕೊಂಡಿದ್ದೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಿದ್ದರಾಮಯ್ಯ

‘ಇಡೀ ದೇಶದಲ್ಲಿ ಕರ್ನಾಟಕದಲ್ಲಿ ಅತಿ ಹೆಚ್ಚು(6,395) ಆನೆಗಳಿವೆ. ಅಗತ್ಯಕ್ಕಿಂತ ಹೆಚ್ಚೇ ಇದೆ. ಹಿಂದೆಯೂ ಬೇರೆ ರಾಜ್ಯಗಳಿಗೆ ಆನೆ ನೀಡಿದ್ದೆವು. ರಾಜ್ಯಗಳ ಮಧ್ಯೆ ಪರಸ್ಪರ ಸಹಕಾರ ಇದ್ದರೆ ಸಂಘರ್ಷ ಕಡಿಮೆ ಮಾಡಲು ಸಾಧ್ಯ’ ಎಂದು ಅಭಿಪ್ರಾಯಪಟ್ಟರು.

ಹಸ್ತಾಂತರಗೊಂಡ ಆನೆಗಳು

ಕೃಷ್ಣ (15 ವರ್ಷ), 2022 ರಲ್ಲಿ ಚಿಕ್ಕಮಗಳೂರಿನಲ್ಲಿ ಸೆರೆ ಹಿಡಿಯಲಾಗಿತ್ತು
ಅಭಿಮನ್ಯು (14 ವರ್ಷ),2023 ರಲ್ಲಿ ಹೊನ್ನಾಳಿಯಲ್ಲಿ ಸೆರೆ ಹಿಡಿಯಲಾಗಿತ್ತು
ದೇವ (39 ವರ್ಷ), ಕುಶಾಲನಗರದಲ್ಲಿ 2019 ರಲ್ಲಿ ಸೆರೆ ಹಿಡಿಯಲಾಗಿತ್ತು
ರಂಜನ್ (26 ವರ್ಷ), ದುಬಾರೆಯಲ್ಲೇ ಜನಿಸಿತ್ತು.

‘ಜಯ ಭಾರತ ಜನನಿಯ ತನುಜಾತೆ’

‘ಜಯ ಭಾರತ ಜನನಿಯ ತನುಜಾತೆ...’ ಸಾಲುಗಳ ಮೂಲಕ ತಮ್ಮ ಭಾಷಣ ಆರಂಭಿಸಿದ ಪವನ್ ಕಲ್ಯಾಣ್ ಅವರು, ಕುವೆಂಪು ಅವರ ‘ಅಮೃತವಾಣಿ’ ಕವಿತೆಯ ‘ಅರಣ್ಯ ಹಾಡು ಹಾಡುವ ಮುನ್ನ..’. ಸಾಲುಗಳನ್ನು ವಾಚಿಸಿ ಸಭಿಕರ ಮನ ಗೆದ್ದರು.

‘ನಾವು ಬೇರೆ ರಾಜಕೀಯ ಪಕ್ಷಗಳ ಗುಂಪುಗಳಿಗೆ ಸೇರಿದ್ದರೂ, ಮೊದಲಿಗೆ ನಾವು ಭಾರತೀಯರು ಎಂಬ ಚಿಂತನೆ ಹೊಂದಿರುವವರು. ನಮ್ಮ ಅರಣ್ಯ ಮತ್ತು ಪರಿಸರದ ಸಂರಕ್ಷಣೆಗೆ ಸಹೋದರ ರಾಜ್ಯಗಳಾದ ನಾವು ಪಣ ತೊಟ್ಟಿದ್ದೇವೆ. ಎರಡೂ ರಾಜ್ಯಗಳ ಅರಣ್ಯ ಸುರಕ್ಷಿತವಾಗಿರಬೇಕು’ ಎಂದು ಪವನ್ ಕಲ್ಯಾಣ್ ತಿಳಿಸಿದರು. ಕುವೆಂಪು ಅವರ ಭಾವಚಿತ್ರವನ್ನು ಒಳಗೊಂಡ ಸ್ಮರಣಿಕೆಯನ್ನು ಅವರು ಸಿದ್ದರಾಮಯ್ಯ ಅವರಿಗೆ ನೀಡಿದರು.

‘ಮಾತುಕತೆಗೆ ಸಮಯ ನಿಗದಿ ಮಾಡಿಸಿ’

‘ತುಂಗಾಭದ್ರಾ ನದಿಯ ನಮ್ಮ ಪಾಲಿನ ನೀರನ್ನು ಬಳಕೆ ಮಾಡಿಕೊಳ್ಳುವ ಬಗ್ಗೆ ಚರ್ಚಿಸಲು ಆಂಧ್ರ ಪ್ರದೇಶ ಮುಖ್ಯಮಂತ್ರಿಗಳ ಜತೆ ಸಭೆಗೆ ಸಮಯ ನಿಗದಿ ಮಾಡಿಕೊಡಿ’ ಎಂದು ಪವನ್ ಕಲ್ಯಾಣ್ ಅವರಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮನವಿ ಮಾಡಿದರು.

ಶಿವಕುಮಾರ್

‘ಆಂಧ್ರ ಮತ್ತು ನಮ್ಮ ರಾಜ್ಯದ ಸಂಬಂಧ ಇನ್ನೂ ಉತ್ತಮವಾಗಲಿ. ನಮ್ಮ ಪಾಲಿನ 24 ಟಿಎಂಸಿ ಅಡಿ ನೀರಿನ ಬಳಕೆ ಬಗ್ಗೆ ನಿಮ್ಮ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಬೇಕಿದೆ. ನೀವೇ ಮುಂದೆ ನಿಂತು ಸಭೆ ನಿಗದಿ ಮಾಡಿ’ ಎಂದು ಹೇಳಿದರು.

ಇನ್‌ಸ್ಟಾಗ್ರಾಂ: ಮಹಿಳೆಯರ ಚಿತ್ರ ಹಾಕಿದ್ದ ಆರೋಪಿಗೆ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ದಲ್ಲಿ ಪ್ರಯಾಣಿಸುವ ಮಹಿಳೆಯರ ದೇಹದ ಭಾಗಗಳ ಚಿತ್ರಗಳನ್ನು ಸೆರೆ ಹಿಡಿದು ಸಾಮಾಜಿಕ ಜಾಲತಾಣವಾದ ಇನ್‌ಸ್ಟಾಗ್ರಾಂನ metro_chicks (Bangalore metro clicks) ಹೆಸರಿನ ಖಾತೆಯಲ್ಲಿ ಹರಿಯಬಿಟ್ಟಿದ್ದ ಆರೋಪಿ ವಿರುದ್ಧ ದಕ್ಷಿಣ ವಿಭಾಗದ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬನಶಂಕರಿ ಪೊಲೀಸ್ ಠಾಣೆಯ ಪಿಎಸ್‌ಐ ಬಿ.ಶಿವಶಂಕರ ಅವರು ಸಾಮಾಜಿಕ ಜಾಲತಾಣ ಪರಿಶೀಲನೆ ಮಾಡುತ್ತಿದ್ದ ವೇಳೆ ಇನ್‌ಸ್ಟಾಗ್ರಾಂನಲ್ಲಿ metro_chicks ಖಾತೆಯಲ್ಲಿ ಅಪರಿಚಿತ ವ್ಯಕ್ತಿಗಳು ವಿಡಿಯೊ ಹಾಕಿದ್ದು ಕಂಡುಬಂದಿತ್ತು. ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ–2008 ಹಾಗೂ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 78(2)ರ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದರು.

‘ವಿಡಿಯೊ ಮಾಡಿದವರು ಹಾಗೂ ಅದನ್ನು ಅಪ್‌ಲೋಡ್ ಮಾಡಿದವರ ಪತ್ತೆ ಕಾರ್ಯ ನಡೆಸಲಾಗುತ್ತಿದೆ. ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು’ ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ತಿಳಿಸಿದರು.

‘ಅಪರಿಚಿತ ವ್ಯಕ್ತಿಗಳು, ನಮ್ಮ ಮೆಟ್ರೊದಲ್ಲಿ ಸಂಚರಿಸುವ ಮಹಿಳೆಯರ ಮತ್ತು ಮೆಟ್ರೊ ನಿಲ್ದಾಣಗಳಲ್ಲಿ ನಡೆದುಕೊಂಡು ಹೋಗುತ್ತಿರುವ ಮಹಿಳೆಯರನ್ನು ಹಿಂಬಾಲಿಸಿಕೊಂಡು ಹೋಗಿ ಅವರ ದೇಹದ ಮುಂಭಾಗ, ಹಿಂಭಾಗದ ವಿಡಿಯೊ ಚಿತ್ರೀಕರಣ ಮಾಡಿ, ಈ ವಿಡಿಯೊಗಳನ್ನು metro_chicks ಎಂಬ ಖಾತೆಯಲ್ಲಿ ಅಪ್‌ಲೋಡ್ ಮಾಡಿರುವುದು ಕಂಡುಬಂದಿದೆ. ಈ ಖಾತೆಯಲ್ಲಿ 14 ವಿಡಿಯೊಗಳಿದ್ದವು’ ಎಂದು ಪೊಲೀಸರು ಹೇಳಿದರು.

ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸುತ್ತಿದ್ದಂತೆಯೇ ಇನ್‌ಸ್ಟಾಗ್ರಾಂನಲ್ಲಿದ್ದ 14 ವಿಡಿಯೊಗಳನ್ನೂ ಡಿಲಿಟ್ ಮಾಡಲಾಗಿದೆ. ಮೆಟ್ರೊ ನಿಲ್ದಾಣ ಗಳಲ್ಲಿ ಸಂಚರಿಸುವ, ನಿದ್ರಿಸುತ್ತಿರುವ, ಸ್ನೇಹಿತರ ಜತೆಗೆ ಆಪ್ತವಾಗಿರುವ ವಿಡಿಯೊಗಳನ್ನು ಈ ಖಾತೆಯಲ್ಲಿ ಅಪ್‌ಲೋಡ್ ಮಾಡಲಾಗಿತ್ತು.

ಸೋಮನಹಳ್ಳಿಯಲ್ಲಿ ಪ್ರತಿಭಟನೆ • ಶಾಸಕ ಸೋಮಶೇಖರ್ ಎಚ್ಚರಿಕೆ

‘ರೈತರ ಮೇಲಿನ ಗೂಂಡಾಗಿರಿ ಸಹಿಸಲ್ಲ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ಟೋಲ್ ಸಂಗ್ರಹ ನೆಪದಲ್ಲಿ ರೈತರ ಮೇಲಿನ ಗೂಂಡಾಗಿರಿಯನ್ನು ಎಂದಿಗೂ ಸಹಿಸುವುದಿಲ್ಲ ಎಂದು ಶಾಸಕ ಎಸ್.ಟಿ. ಸೋಮಶೇಖರ್ ಹೇಳಿದರು.

ಸೋಮನಹಳ್ಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ಥಳೀಯ ಗ್ರಾಮಸ್ಥರು ಹಾಗೂ ರೈತರಿಂದ ಟೋಲ್ ಸಂಗ್ರಹ ಮಾಡುತ್ತಿರುವುದನ್ನು ಖಂಡಿಸಿ ರಾಜ್ಯ ರೈತ ಹಿತ ರಕ್ಷಣಾ ಸಂಘದ ಕಗ್ಗಲಿಪುರ ಘಟಕದ ವತಿಯಿಂದ ಬುಧವಾರ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

‘ರಾಷ್ಟ್ರೀಯ ಹೆದ್ದಾರಿ ಇನ್ನೂ ಸಂಪೂರ್ಣಗೊಂಡಿಲ್ಲ. ಮಾರ್ಗಸೂಚಿಯಂತೆ ಸರ್ವಿಸ್ ರಸ್ತೆ ನಿರ್ಮಾಣ ಮಾಡಲಾಗಿಲ್ಲ. ಗೂಂಡಾಗಿರಿ ವರ್ತನೆ ತೋರಿ ರೈತರಿಂದ ಹಣ ವಸೂಲಿ ಮಾಡಲಾಗುತ್ತಿದೆ. ರೈತರೊಡನೆ ಗೂಂಡಾಗಿರಿ ಬೇಡ. ನಾನು ಕ್ಷೇತ್ರದ ಶಾಸಕನಿದ್ದೇನೆ. ಧೈರ್ಯವಿದ್ದರೆ ನನ್ನ ಮೇಲೆ ನಿಮ್ಮ ದರ್ಪ ತೋರಿ’ ಎಂದು ಸವಾಲು ಹಾಕಿದರು.

ಟೋಲ್ ಸಿಬ್ಬಂದಿ ಕಾನೂನು ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸಬೇಕು. ರೈತರ ಮೇಲೆ ದರ್ಪ ತೋರಿದ ಗೂಂಡಾಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸ್ಥಳೀಯ ಪೊಲೀಸ್ ಅಧಿಕಾರಿಗೆ ಸೂಚಿಸಿದರು.

ಪ್ರತಿಭಟನೆಯಲ್ಲಿ ಎಸ್‌ಟಿ.ಸೋಮಶೇಖರ್ ಮಾತನಾಡಿದರು. ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಸಿ.ಪುಟ್ಟಸ್ವಾಮಿ, ನದೀಂ ಉಪಸ್ಥಿತರಿದ್ದರು

‘ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು ಕಾನೂನು ಪರಿಮಿತಿಯಲ್ಲಿ ರೈತರಿಗೆ ಪರಿಹಾರ ದೊರಕುವ ಮಾರ್ಗ ವಿವರಿಸಿದ್ದು, ನಾಳೆ ನಿಗದಿಯಾಗಿರುವ ಜಿಲ್ಲಾಧಿಕಾರಿಯವರ ಸಭೆಯಲ್ಲಿ ಚರ್ಚಿಸಿ ಟೋಲ್ ರದ್ದತಿಗೆ ಒತ್ತಾಯಿಸುವುದಾಗಿ’ ತಿಳಿಸಿದರು. ‘ಜನಪರವಾಗಿ ಕಾರ್ಯ ನಿರ್ವಹಿಸುವುದು, ಮೂಲಸೌಕರ್ಯ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯ. ಅವೈಜ್ಞಾನಿಕವಾಗಿ ಟೋಲ್ ಸಂಗ್ರಹಣೆ ಮಾಡುವುದು ಜನ ವಿರೋಧಿ ನೀತಿ’ ಎಂದು ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದರು.

ರೈತ ಹಿತ ರಕ್ಷಣಾ ಸಂಘ– ಕಗ್ಗಲಿಪುರ ಘಟಕದ ಅಧ್ಯಕ್ಷ ನದೀಂ, ರೈತ ಮುಖಂಡ ಸಿ.ಪುಟ್ಟಸ್ವಾಮಿ, ಸೋಮನಹಳ್ಳಿ ಪವನ್ ಮುನಿರಾಜೇಗೌಡ, ನೆಲಗುಳಿ ಸಂಪತ್, ಕುಮಾರ ಸ್ವಾಮಿ, ಹಾಗೂ ನೆಲಗುಳಿ, ಸೋಮನಹಳ್ಳಿ ಹಾಗೂ ಕಗ್ಗಲಿಪುರ ಪಂಚಾಯಿತಿ ವ್ಯಾಪ್ತಿಯ ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಐಪಿಎಲ್‌ನಲ್ಲಿ ಅವಕಾಶ ನೀಡುವ ಆಮಿಷ: ವಂಚನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಐಪಿಎಲ್‌ನಲ್ಲಿ ಆಟವಾಡಲು ಅವಕಾಶ ನೀಡಲಾಗುವುದು, ರಾಜಸ್ಥಾನ ರಾಯಲ್ಸ್ ತಂಡಕ್ಕೆ ಆಯ್ಕೆ ಮಾಡಲಾಗು ವುದು ಎಂದು ಆಮಿಷವೊಡ್ಡಿ ಯುವ ಕ್ರಿಕೆಟಿಗನಿಗೆ ₹23.51 ಲಕ್ಷ ವಂಚಿಸಿದ ಪ್ರಕರಣ ಬೆಳಕಿಗೆ ಬಂದಿದೆ.

ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಚಿಂಚಲಿ ಗ್ರಾಮದ ರಾಕೇಶ ಯಡೂರೆ (19) ವಂಚನೆಗೆ ಒಳಗಾದವರು. ಕೊನ್ ಅರ್ಲಟಯಲ್ಲಿ ಸ್ಪೋರ್ಟ್ಸ್ ಗಾರ್ಡ್ ಆಗಿರುವ ರಾಕೇಶ ಅವರ ತಂದೆ ಭೀಮಪ್ಪ ಅವರು ಸಾಲ ಮಾಡಿ, ಚಿನ್ನಾಭರಣ ಮಾರಾಟ ಮಾಡಿ ಹಣ ನೀಡಿದ್ದಾರೆ.

ವಂಚಕರು 2024ರ ನವೆಂಬರ್‌ನಿಂದ 2025ರ ಏಪ್ರಿಲ್‌ವರೆಗೆ ಮೇಲಿಂದ ಮೇಲೆ 100ಕ್ಕೂ ಹೆಚ್ಚು ಬಾರಿ ಹಣ ಪಡೆದಿದ್ದಾರೆ. ಫೋನ್ ಪೇ, ಗೂಗಲ್ ಪೇ ಮತ್ತು ಆರ್‌ಟಿಜಿಎಸ್ ನಂಬರ್ ಮೂಲಕ ಕನಿಷ್ಠ ₹1,000ದಿಂದ ಗರಿಷ್ಠ ₹55 ಸಾವಿರದವರೆಗೂ ಪದೇ ಪದೇ ಹಣ ಹಾಕಿಸಿಕೊಂಡಿದ್ದಾರೆ. ವಿವಿಧ ಕಾರಣಗಳು, ಪೋಲೀಸ ನಪ ಹೇಳಿ ಹಣ ಪಡೆದಿದ್ದಾರೆ.

ಇದು ವಂಚಕರ ಜಾಲ ಎಂದು ಅನುಮಾನ ಬಂದ ಬಳಿಕ ತಂದೆ-ಮಗ ಬೆಳಗಾವಿಯ ಸಿಇಎನ್ ಠಾಣೆಗೆ ಬುಧವಾರ ದೂರು ನೀಡಿದ್ದಾರೆ.

ಜಾಲ ಬೀಸಿದ್ದು ಹೇಗೆ?: 2024ರ ಮೇ ತಿಂಗಳಲ್ಲಿ ಹೈದರಾಬಾದ್‌ನಲ್ಲಿ ನಡೆದ ರೈಸಿಂಗ್ ಭಾರತ್ ಕ್ರಿಕೆಟ್ ಲೀಗ್ (ಆರ್‌ಬಿಎಲ್) ಟೂರ್ನಿಯ ಆಯ್ಕೆ ಟ್ರಯಲ್ಸ್‌ನಲ್ಲಿ ರಾಕೇಶ ಭಾಗಿಯಾಗಿದ್ದರು.

ಸಾಕಷ್ಟು ಅರಿವು ಮೂಡಿಸಿದರೂ ಜನ ಅರ್ಥ ಮಾಡಿಕೊಳ್ಳುತ್ತಿಲ್ಲ. ಯಾರಾದರೂ ಆಮಿಷ ಒಡ್ಡಿದರೆ ನೇರವಾಗಿ ಪೊಲೀಸರಿಗೆ ಮಾಹಿತಿ ನೀಡಬೇಕು

ಡಾ.ಭೀಮಾಶಂಕರ ಗುಳೇದ,
ಎಸ್‌ಪಿ, ಬೆಳಗಾವಿ

ಆಲ್‌ರೌಂಡ್ ಆಟ ಪ್ರದರ್ಶಿಸಿ ಗಮನ ಸೆಳೆದಿದ್ದರು.

ಬಳಿಕ 'ಇನ್‌ಸ್ಟಾಗ್ರಾಂ ಖಾತೆಯ ಮೂಲಕ ರಾಕೇಶರನ್ನು ಸಂಪರ್ಕಿಸಿದ ವಂಚಕರು, 'ನಿಮ್ಮ ಕ್ರಿಕೆಟ್ ಪ್ರದರ್ಶನ ತುಂಬ ಚೆನ್ನಾಗಿದೆ. ಆಯ್ಕೆಯಲ್ಲಿ ಸಾಕಷ್ಟು ರಾಜಕೀಯ ನಡೆಯುತ್ತದೆ. ನಮ್ಮ ಜತೆಗೆ ಬಂದರೆ ರಾಜಸ್ಥಾನ ರಾಯಲ್ಸ್‌ಗೆ ಸೇರಿಸುತ್ತೇವೆ' ಎಂದಿದ್ದರು.

'ಅಸೋಸಿಯೇಷನ್ ಆಫ್ ಕ್ರಿಕೆಟ್' ಎಂಬ ವಾಟ್ಸ್‌ಆ್ಯಪ್ ಗ್ರೂಪ್ ಮೂಲಕ ರಾಕೇಶ ಅವರ ಸಂಪರ್ಕ ಬೆಳೆಸಿದ್ದರು. ನಕಲಿ ಫಾರಂಗಳನ್ನು ವಾಟ್ಸ್‌ಆ್ಯಪ್‌ಗೆ ಕಳುಹಿಸಿ, ವಿವರ ಭರ್ತಿ ಮಾಡಿ ಕಳುಹಿಸುವಂತೆ ನಂಬಿಕೆ ಹುಟ್ಟಿಸಿದ್ದರು. 'ಆಯ್ಕೆ ಮಾಡುವವರು ಹಣ ಕೇಳುತ್ತಿದ್ದಾರೆ, ನಿಮ್ಮ ಫೈಲ್ ಮುಂದಕ್ಕೆ ಹೋಗುತ್ತಿಲ್ಲ' ಎಂಬ ನೆಪ ಹೇಳಿ ಪದೇಪದೇ ಹಣ ಪಡೆದುಕೊಂಡಿದ್ದಾರೆ.

ಪಂಜಾಬಿನಲ್ಲಿ ಮೃತಪಟ್ಟಿದ್ದ ಯುವತಿ

ಬೊಳಿಯಾರಿನಲ್ಲಿ ಆಕಾಂಕ್ಷ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಉಜಿರೆ: ಪಂಜಾಬ್‌ನಲ್ಲಿ ಅಸಹಜವಾಗಿ ಮೃತಪಟ್ಟ ಧರ್ಮಸ್ಥಳ ಗ್ರಾಮದ ಬೊಳಿಯಾರು ನಿವಾಸಿ ಆಕಾಂಕ್ಷ (22) ಅವರ ಪಾರ್ಥಿವ ಶರೀರವನ್ನು ಬುಧವಾರ ಬೆಳಿಗ್ಗೆ ಮನೆಗೆ ತರಲಾಯಿತು.

ಆಕಾಂಕ್ಷ ಅವರ ತಂದೆ ಸುರೇಂದ್ರನ್ ನಾಯರ್ ಅವರ ಸಹೋದರ ಪ್ರಕಾಶ್ ಅವರ ಮನೆಯ ಅಂಗಳದಲ್ಲಿ ಪಾರ್ಥಿವ ಶರೀರ ದರ್ಶನಕ್ಕೆ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿತ್ತು. ನೂರಾರು ಮಂದಿ ಸ್ಥಳೀಯರು ಅಂತಿಮ ದರ್ಶನ ಪಡೆದು ಶ್ರದ್ಧಾಂಜಲಿ ಸಲ್ಲಿಸಿದರು. ಸುರೇಂದ್ರನ್ ನಾಯರ್ ಹಾಗೂ ಪ್ರಕಾಶ್ ಅವರು ಅಂತಿಮ ವಿಧಿಗಳನ್ನು ನೆರವೇರಿಸಿದರು. ಬಳಿಕ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಕುಟುಂಬದ ಸಂಪ್ರದಾಯ ಪ್ರಕಾರ ಮೃತದೇಹಕ್ಕೆ ಅಗ್ನಿಸ್ಪರ್ಶ ಮಾಡಲಾಗುತ್ತದೆ. ಆದರೆ ಯುವತಿ ನಿಗೂಢವಾಗಿ ಸಾವಿಗೀಡಾಗಿರುವುದರಿಂದ ಮೃತದೇಹವನ್ನು ಮಣ್ಣಿನಲ್ಲಿ ಹೂಳಲಾಯಿತು.

ಪಾರ್ಥಿವ ಶರೀರವನ್ನು ಮನೆಯ ಅಂಗಳಕ್ಕೆ ತಂದಾಗ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಆಕಾಂಕ್ಷ ಅವರ ತಾಯಿ ಸಿಂಧೂದೇವಿ, 'ಮಗಳು ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯತೆ ಇಲ್ಲ. ಪಂಜಾಬ್‌ನ ಪ್ರೊಫೆಸರ್ ದಂಪತಿ ಸಂಚು ಮಾಡಿ ಕೊಲೆ ಮಾಡಿದ್ದಾರೆ' ಎಂದು ಆರೋಪಿಸಿದ್ದಾರೆ. ಸಿಂಧೂದೇವಿ ಅನಾರೋಗ್ಯಕ್ಕೆ ಒಳಗಾಗಿದ್ದು ಉಜಿರೆಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶಾಸಕ ಹರೀಶ್ ಪೂಂಜ ಅವರು ಮನೆಗೆ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು. ಪ್ರಕರಣದ ತನಿಖೆಗೆ ರಾಜ್ಯ ಗೃಹ ಸಚಿವರ ಮೂಲಕ ಪಂಜಾಬ್ ಸರ್ಕಾರವನ್ನು ಒತ್ತಾಯಿಸುವುದಾಗಿ ಅವರು ಭರವಸೆ ನೀಡಿದರು.

'ಅಯೋಧ್ಯೆಯಲ್ಲಿ ಪ್ರಾಣಪ್ರತಿಷ್ಠೆ: ವಿಐಪಿಗಳಿಗೆ ಆಹ್ವಾನವಿಲ್ಲ'

ನವದೆಹಲಿ (ಪಿಟಿಐ): 'ಅಯೋಧ್ಯೆ ರಾಮ ಮಂದಿರದ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, ಜೂನ್ 5ರಂದು 'ರಾಮ ದರ್ಬಾರ್'ನಲ್ಲಿ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ನಡೆಯಲಿದೆ. ಆದರೆ, ಈ ಬಾರಿ ಅತಿಥಿಗಳ ಪಟ್ಟಿಯಲ್ಲಿ ರಾಜ್ಯ ಅಥವಾ ಕೇಂದ್ರದ ವಿಐಪಿಗಳ ಹೆಸರು ಇರುವುದಿಲ್ಲ' ಎಂದು ಶ್ರೀ ರಾಮ ಜನ್ಮಭೂಮಿ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ತಿಳಿಸಿದ್ದಾರೆ.

'ದೇವಾಲಯದ ಆವರಣದಲ್ಲಿರುವ ಇತರ 7 ದೇಗುಲಗಳ ಧಾರ್ಮಿಕ ಸಮಾರಂಭವೂ ಅದೇ ದಿನ ನಡೆಯಲಿದೆ' ಎಂದಿದ್ದಾರೆ.

ಮಹಾನಗರ ಪಾಲಿಕೆ, ಕಲಬುರಗಿ
ದೂ. 08472/278675 ಫ್ಯಾಕ್ಸ್ : 08472/260776 ಇ ಮೇಲ್– itstaff_ulb_gulbarga@yahoo.com

No: KMP/EE/TS-01/Computer operator/CF/2025-26 ದಿನಾಂಕ: 20.05.2025.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್
ಟೆಂಡರ್ ಪ್ರಕಟಣೆ. ಸಂಖ್ಯೆ : 01/2025–26 ದಿನಾಂಕ:20.05.2025

1) ಕಾಮಗಾರಿಯ ವಿವರ 2025–26 ನೇ ಸಾಲಿನ ಪಾಲಿಕೆ ನಿಧಿಯಲ್ಲಿ ಅನುಮೋದನೆಗೊಂಡ (01) (Service) Tender (Providing the service of computer operators/data entry operators on outsource basis to Kalaburagi Mahanagara Palike for the year 2025-26) **DMA/2025-26/SE5298.** (Service) Tender, 2) ಲೆಕ್ಕ ಶೀರ್ಷಿಕೆ: 2025–26 ನೇ ಸಾಲಿನ ಪಾಲಿಕೆ ನಿಧಿಯಲ್ಲಿ ಅನುಮೋದನೆಗೊಂಡ (01) ಕಾಮಗಾರಿಗಳ ಟೆಂಡರ್ (Service) Tender, 3) ಟೆಂಡರಿನಟ್ಟು ಮೊತ್ತ: ಗರಿಷ್ಠ /ಕನಿಷ್ಠ ಮೊತ್ತ ರೂ. **129,00,000.00**, 4) ಗುತ್ತಿಗೆದಾರರ ಅರ್ಹತೆ: As Per Bid Document, 5) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **04.06.2025 ಸಾಯಂಕಾಲ 4:30 ಗಂಟೆಯವರೆಗೆ**, 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ As per Karnataka Public Procurement Portal EMD ಗರಿಷ್ಠ / ಕನಿಷ್ಠ ಮೊತ್ತ **ರೂ. 1,93,500.00**, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **05.06.2025 ಸಾಯಂಕಾಲ 4:35 ಗಂಟೆಗೆ**, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **06.06.2025 ಬೆಳಿಗ್ಗೆ 11:30 ಗಂಟೆಗೆ**, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ. 9620341599 10) ಅಂತರಜಾಲ ತಾಣದ ವಿಳಾಸ : https://kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/135/ಕೆ.ಎಸ್.ಎಂ.ಸಿ.&ಎ/2025–26

Infosys
Navigate your next

Infosys Limited
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

Notice is hereby given that the following share certificate(s) issued by the Company are stated to have been lost or misplaced and the registered share holder(s) thereof have applied for the issue of duplicate share certificate(s).

Notice is hereby given that the Company will proceed to **issue letter of confirmation in lieu of duplicate share certificate(s)** unless a valid objection is received by the Company within 15 days from the date of publication of this notice. No claims will be entertained by the Company with respect to the original share certificate(s) subsequent to the issue of duplicates thereof.

Name of Shareholder	Folio No.	Certificate No.	Distinctive Nos. From	Distinctive Nos. To	No. of Shares
ASHISH BAHL	ITL100202	512487	556151625	556151704	80
		600355	575438544	575438623	80
		1000361	1150883639	1150883798	160
		2386737	4481337122	4481337441	320

Any person who has/have a claim in respect of the said certificate(s) should lodge his/her/their claim with all supporting documents with the Company at its registered office. If no valid and legitimate claim is received within 15 days from the date of publication of this notice, the Company will proceed to issue **Letter of Confirmation in lieu of duplicate share certificate(s)** to the person listed above and no further claim would be entertained from any other person(s).

Registered Office:
Electronics City, Hosur Road,
Bengaluru - 560 100

May 21, 2025
Bengaluru, India

For **Infosys Limited**
Sd/-
A.G.S. Manikantha
Company Secretary
Membership No. A21918

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯಿತಿ ಕಾರ್ಯಾಲಯ ತೆಕ್ಕಲಕೋಟೆ
ಬಳ್ಳಾರಿ (ಜಿಲ್ಲೆ)
☎ : 08396 248228 E-mail ka.tekkalakote.tp@gmail.com web site: www.tekkalakotetown.mrc.gov.in

ನಂ.ಪಪಂತೆ/ಕಾಮಗಾರಿ/15ನೇ.ಹ/2025–26 ದಿನಾಂಕ:– 21.05.2025

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಕೆ.ಪಿ.ಪಿ ಪೋರ್ಟಲ್ ಕೆಡಬ್ಲ್ಯು–3 ಸರ್ವಿಸ್ ಬಿಡ್ ಡಾಕ್ಯುಮೆಂಟ್ ಪ್ರಕಾರ ರ ನಿಬಂಧನೆಗಳಿಗೆ ಒಳಪಟ್ಟು)

1) ಬಾರಿ ಟೆಂಡರ್ ಫಾರಂಗಳು ಕೆ.ಪಿ.ಪಿ.ಪೋರ್ಟಲ್ ಪದ್ಧತಿಯಲ್ಲಿ ಅರ್ಜಿ ಸಲ್ಲಿಸುವ ಹಾಗೂ ಪೋರ್ಟಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಅವಧಿ : ದಿನಾಂಕ: 22/05/2025 ರಿಂದ 06/06/2025ರ ಸಂಜೆ 5.30 ಗಂಟೆವರೆಗೆ
2) ಟೆಂಡರನ್ನು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ದಿನಾಂಕ 09/06/2025 ರಂದು ಬೆಳಿಗ್ಗೆ 11.00 ಗಂಟೆಗೆ
3) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ದಿನಾಂಕ 13/06/2025 ರಂದು ಬೆಳಿಗ್ಗೆ 11.00 ಗಂಟೆಗೆ

ಒಂದು ವೇಳೆ ನಿಗದಿಪಡಿಸಿದ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.

ಕ್ರ. ಸಂ.	ಇಂಡೆಂಟ್ ನಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಬಿಡ್ ಮೂಲಕ ಫಾರಂ ಬೆಲೆ	ಗುತ್ತಿಗೆದಾರರ ಅರ್ಹತೆ	ಕಾಮಗಾರಿ ಕಾಲಾವಧಿ
		2022–23ನೇ ಸಾಲಿನ 15ನೇ ಹಣಕಾಸು ಮುಕ್ತನಿಧಿ ಅನುದಾನ					
1	DMA/2025-26/IND4834	ತೆಕ್ಕಲಕೋಟೆ ಪಟ್ಟಣ ಪಂಚಾಯಿತಿ ಕಾರ್ಯಾಲಯ ನೈರ್ಮಲ್ಯ ವಿಭಾಗಕ್ಕೆ front and back hoe loader ಯಂತ್ರವನ್ನು ಖರಿದಿಸಲು	42.58	ಕೆ.ಪಿ.ಪಿ.ಪೋರ್ಟಲ್ ಪದ್ಧತಿ			
2	DMA/2025-26/WS/ WORK_ INDENT40429	ತೆಕ್ಕಲಕೋಟೆ ಪಟ್ಟಣದ ಪ್ರಸ್ತುತವಿರುವ ಜಲಶುದ್ಧಿಕರಣ ಘಟಕದ ದುರಸ್ಥಿ ಕಾಮಗಾರಿ	95.40	ಕೆ.ಪಿ.ಪಿ.ಪೋರ್ಟಲ್ ಪದ್ಧತಿ			

ಸಹಿ/– ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ
ಸಹಿ/– ಅಧ್ಯಕ್ಷರು, ಪಟ್ಟಣ ಪಂಚಾಯಿತಿ, ತೆಕ್ಕಲಕೋಟೆ.

ಕರ್ನಾಟಕ ಸರ್ಕಾರ
ಪ್ರವಾಸೋದ್ಯಮ ಇಲಾಖೆ
ಪ್ರವಾಸೋದ್ಯಮ ಆಯುಕ್ತಾಲಯ, 5ನೇ ಮಹಡಿ, ಇಂಧನ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು– 560 001
ದೂರವಾಣಿ: 080–22352828, ಇ–ಮೇಲ್: director@karnatakatourism.org

ಸಂಖ್ಯೆ: ಪ್ರಇ/ಪ್ರಸಾದ್/ಮೈಸೂರು/2025–26 ದಿನಾಂಕ:21.05.2025

ಟೆಂಡರ್ ಅಧಿಸೂಚನೆ
(ಕೆಪಿಪಿಪಿ ವೇದಿಕೆ ಮೂಲಕ ಮಾತ್ರ)

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯವತಿಯಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಟೆಂಡರ್ ಅನ್ನು ವಿದ್ಯುನ್ಮಾನ ಸಂಗ್ರಹಣ ವೇದಿಕೆಯಲ್ಲಿ(ಕೆ.ಪಿ.ಪಿ.ಪಿ) ಪ್ರಕಟಿಸಲಾಗಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದ ವೇಳಾಪಟ್ಟಿ ಮತ್ತು ಟೆಂಡರ್ ದಾಖಲೆಗಳು ಇ–ಸಂಗ್ರಹಣ ವೇದಿಕೆಯಲ್ಲಿ ಲಭ್ಯವಿರುತ್ತದೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರ್ ಅಧಿಸೂಚನೆ ಸಂಖ್ಯೆ	ಟೆಂಡರ್ ವೇಳಾಪಟ್ಟಿ
1.	ಕೇಂದ್ರ ಪ್ರವಾಸೋದ್ಯಮ ಸಚಿವಾಲಯದ (MoT) ಪ್ರಸಾದ್ ಯೋಜನೆಯಡಿಯಲ್ಲಿ ಕರ್ನಾಟಕದ ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಿ ದೇವಸ್ಥಾನದಲ್ಲಿ ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿ.	DT/2025-26/BD/WORK_INDENT5/CALL-2	ಕೆ.ಪಿ.ಪಿ.ಪಿ ವೇದಿಕೆಯಲ್ಲಿ ಪ್ರಕಟಿಸಿರುವಂತೆ

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಲಭ್ಯವಿದ್ದು, (https://www.kppp.karnataka. gov.in) **ದಿನಾಂಕ: 17.05.2025** ರಿಂದ ಡೌನಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಇ.ಎಂ.ಡಿ ಮೊತ್ತ ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (https://www.kppp.karnataka.gov.in) ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬೇಕಾಗಿರುತ್ತದೆ. ಆಸಕ್ತಿಯುಳ್ಳ ಸಂಸ್ಥೆಗಳು ಸದರಿ ಟೆಂಡರ್ ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ನೊಂದಾಯಿಸುವ ಅಗತ್ಯವಿದೆ.

ಟಿಪ್ಪಣಿ: 1. ಈ ಕೆಳಗೆ ಸಹಿಮಾಡಿದವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ಸಂಪೂರ್ಣ ರದ್ದುಗೊಳಿಸುವ/ ತಿರಸ್ಕರಿಸುವ ಹಕ್ಕು ಹೊಂದಿರುತ್ತಾರೆ. **2.** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯಲ್ಲಿ(ಕೆ.ಪಿ.ಪಿ.ಪಿ) ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹಾಗೂ ಟೆಂಡರ್ ಆಹ್ವಾನಾಧಿಕಾರಿ, ಪ್ರವಾಸೋದ್ಯಮ ಇಲಾಖೆ.

ವಾಸಾಸಂಇ/ವಾ.ಪ್ರ/ಜಿಎ/793/2025–26

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
KUIDFC
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ 2ನೇ ಹಂತ, ಬಿ.ಎಂ.ಟಿ.ಸಿ ಡಿಪೋ ಹತ್ತಿರ, ಬೆಂಗಳೂರು–560038. ಫೋ.ನಂ.: 080–25196124 । ಇ–ಮೇಲ್: info@kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/37/ಎನ್‌ಟಿಎಫ್‌ಎನ್/2025–26/03/632 ದಿನಾಂಕ:20.05.2025

ಇ–ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯು N.G.T ಪರಿಸರ ಪರಿಹಾರ ನಿಧಿ ಹಾಗೂ ಎಸ್.ಬಿ.ಎಂ (ಯು) 2.0 ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್ ನಲ್ಲಿ (https:/kppp.karnataka. gov.in) ಲಭ್ಯವಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) ರೂ.ಲಕ್ಷಗಳಲ್ಲಿ	ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ
1	Construction/upgradation of sewerage system for Chinthamani city under NGT environmental compensation fund and Swachh Bharath Mission (U) 2.0 fund on DBOT Model-Call-2	3959.00	40.00
2	Construction/upgradation of sewerage system for Humnabad city under NGT environmental compensation fund and Swachh Bharath Mission (U) 2.0 fund on DBOT Model-Call-2.	2594.37	26.00

1) ಬಿಡ್ ಪೂರ್ವಭಾವಿ ಸಭೆಯ **ದಿನಾಂಕ & ಸಮಯ: 28.05.2025ರ ಬೆಳಿಗ್ಗೆ 11:30 ಗಂಟೆಗೆ. 2)** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ & ಸಮಯ: 31.05.2025ರ ಸಂಜೆ 5:30 ಗಂಟೆಯವರೆಗೆ. 3)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ & ಸಮಯ: 02.06.2025ರ ಬೆಳಿಗ್ಗೆ 11:00 ಗಂಟೆಗೆ. 4)** ಆರ್ಥಿಕ ಬಿಡ್ ತೆರೆಯುವ **ದಿನಾಂಕ & ಸಮಯ: 09.06.2025ರ ಬೆಳಿಗ್ಗೆ 11:00 ಗಂಟೆಗೆ.** ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ, ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, ಯೋಜನಾ ಮೇಲ್ವಿಚಾರಣಾ ಘಟಕ,
ಯುಡಬ್ಲ್ಯೂಎಂ– ಕೆಯುಐಡಿಎಫ್‌ಸಿ, ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/781/2025–26

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಸಾರ್ವಜನಿಕ ಆಸ್ಪತ್ರೆ ಮಳವಳ್ಳಿ, ಮಂಡ್ಯ ಜಿಲ್ಲೆ.
ದೂರವಾಣಿ ಸಂಖ್ಯೆ 08231–242059 ಇ–ಮೇಲ್:amomalavalli@gmail.com
ಸಂಖ್ಯೆ:ಸಾ.ಆ.ಮಳವಳ್ಳಿ/ಪಥ್ಯಾಹಾರ/ಟೆಂಡರ್/01/2025–26 ದಿ:19–05–2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ

ವಿಷಯ:– 2025–26ನೇ ಸಾಲಿನ ಈ ಆಸ್ಪತ್ರೆಯ ಒಳರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರ/ಊಟ ಸರಬರಾಜಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಲಕೋಟೆ ಪದ್ಧತಿ ಮೂಲಕ ಟೆಂಡರ್ ಸಲ್ಲಿಕೆ ಬಗ್ಗೆ.

ಉಲ್ಲೇಖ:– (1) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಲೆಪವಿ/ಪಥ್ಯಾಹಾರ/ಟೆಂ/10/2023–24, ದಿನಾಂಕ:12.03.2024. (2) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಮುಲೆಪ/ಲೆಪವಿ/ಪಥ್ಯಾಹಾರ/ಟೆಂ/07/2025–26.ದಿ:09.05.2025

ಸಾರ್ವಜನಿಕ ಆಸ್ಪತ್ರೆ ಮಳವಳ್ಳಿ, ಮಂಡ್ಯ ಜಿಲ್ಲೆ 2025–26ನೇ ಸಾಲಿನ ಒಳರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರ ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ 31.03.2026 ರ ವರೆಗೆ ಮಾತ್ರ ಇರುತ್ತದೆ. ಒಟ್ಟು ಟೆಂಡರಿನ ಅಂದಾಜು ಮೌಲ್ಯ ವರ್ಷಕ್ಕೆ ರೂ.36,00,000/– ಟೆಂಡರು ವಿವರಗಳ ಈ ಕೆಳಗಿನಂತಿರುತ್ತದೆ. ದ್ವಿ–ಲಕೋಟೆ ಪದ್ಧತಿಯಲ್ಲಿ ಸಿದ್ಧಪಡಿಸಿದ ಪಥ್ಯಾಹಾರ ಪೂರೈಕೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ : ಸಂಖ್ಯೆ:ಸಾ.ಆ.ಮಳವಳ್ಳಿ/ಪಥ್ಯಾಹಾರ/ಟೆಂಡರ್/01/2025–26 ದಿನಾಂಕ :19.05.2025

ಕ್ರಮ ಸಂಖ್ಯೆ : 01. ಆಹಾರ ಪದಾರ್ಥಗಳ ವಿವರ : ತರಕಾರಿ ಸೂಪ್ 100 ಮಿ.ಲಿ.

ಕ್ರಮ ಸಂಖ್ಯೆ : 02. ಆಹಾರ ಪದಾರ್ಥಗಳ ವಿವರ : ಉಪ್ಪಿಟ್ಟು 300 ಗ್ರಾಂ/03 ಇಡ್ಲಿಗಳು 40 ಗ್ರಾಂ each ಜೊತೆ ಚಟ್ನಿ ಅಥವಾ ಸಾಂಬಾರ್/02 ರಾಗಿ ದೋಸೆ–150 each/ಕಿಚಡಿ 300 ಗ್ರಾಂ–ರೈಸ್‌ಬಾತ್ 300 ಗ್ರಾಂ/ಅವಲಕ್ಕಿ 300 ಗ್ರಾಂ/ಪಲಾವ್ 300 ಗ್ರಾಂ (ದಿನಕ್ಕೊಂದರಂತೆ)

ಕ್ರಮ ಸಂಖ್ಯೆ : 03. ಆಹಾರ ಪದಾರ್ಥಗಳ ವಿವರ : 02 ಚಪಾತಿ 30ಗ್ರಾಂ each /ರಾಗಿ ಮುದ್ದೆ 250 ಗ್ರಾಂ/ಅನ್ನ 150ಗ್ರಾಂ ತರಕಾರಿ ಸಂಬಾರ್ 100 ಎಂ.ಎಲ್.ಪಲ್ಯ/ರಸಂ 50ಗ್ರಾಂ.ಮೊಟ್ಟೆ 01, ಬಾಳೆಹಣ್ಣು 01 (ಮಧ್ಯಾಹ್ನ ಮತ್ತು ರಾತ್ರಿ ಊಟ)

ಕ್ರಮ ಸಂಖ್ಯೆ : 04. ಆಹಾರ ಪದಾರ್ಥಗಳ ವಿವರ : ಹಾಲು 100 ಮಿ.ಲಿ ಹಾಗೂ ಬಿಸ್ಕೆಟ್(04)

*** ಮೇಲಿನ ಎಲ್ಲಾ ಕ್ರಮ ಸಂಖ್ಯೆ (1) ರಿಂದ (4) ರವರೆಗಿನ ಟೆಂಡರ್ ಬಿಡ್ ಮೊತ್ತ (ರೂ.ಲಕ್ಷಗಳಲ್ಲಿ) : 36,00,000=00. ಇ.ಎಂ.ಡಿ : 90,000=00.**

(3) e-portal ಮೂಲಕ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : 19.05.2025. (4) e-portal ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ : 17.06.2025 ರ ಸಂಜೆ : 05.00 ಗಂಟೆ. (5) Sample Submit ದಿನಾಂಕ : 02.06.2025 ರ ಬೆಳಿಗ್ಗೆ 11.00 ಗಂಟೆ. (6) e-portal ಟೆಂಡರ್ ಲಕೋಟೆಗಳನ್ನು ತೆರೆಯುವ ದಿನಾಂಕ & ಸಮಯ : 19.06.2025 ಬೆಳಿಗ್ಗೆ : 11–00 ಗಂಟೆ. (7) e-portal ನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ : 21.06.2025 ರ ಬೆಳಿಗ್ಗೆ 11.00 ಗಂಟೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ). (8) e-portal ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ : 24.06.2025 ರಂದು ಬೆಳಿಗ್ಗೆ 11.00 ಗಂಟೆಗೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ). (9) ಇ.ಎಂ.ಡಿ (2.5%)=90,000.00 : ಅನುಬಂಧ–1 ರ ನಮೂನೆಯಲ್ಲಿ EMD DECLARATION ಸಹಿಯೊಂದಿಗೆ ಸಲ್ಲಿಸುವುದು. (10) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ : Website:www.eproc.karnataka.gov.in ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಮಳವಳ್ಳಿ, ಮಂಡ್ಯ ಜಿಲ್ಲೆ. ಇ–ಮೇಲ್:amomalavalli@gmail.com ದೂರವಾಣಿ ಸಂಖ್ಯೆ: 08231–242059

ಸಹಿ/–ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಮಳವಳ್ಳಿ, ಮಂಡ್ಯ ಜಿಲ್ಲೆ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/111/2025–26

THE FEDERAL BANK LIMITED
Regd. Office: Aluva, Kerala.
ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2025-26 NOTICE FOR PRIVATE SALE OF GOLD 21/05/2025

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-06-2025 as shown below:

Br. Ainapur: Karchi Building, Opposite Pattan Panchayath, Ainapur, Taluk Athani, Belgaum, Karnataka- 591 303, Ph No. 08339-254084 :- 14976400020785,14976400022385,14976400016205,14976400016056,14976400021338,14976400021817.

Br. Athani: Near Head Post Office, Near Ganesh Mandir, A / P Athani, Belgaum, Karnataka-591 304, Ph no.0 8289-252725 :- 15076400065135,15076400072420,15076400072636,15076400056217,15076400059039.

Br. Bagalkot: Prema Arcade, Engineering college circle, Vidyagiri PO, Bagalkot, Karnataka-587 102 Ph no. 08354 233399 :- 21966400061021,21966400052418,21966400064256,21966400061039,21966400059231,21966100004040,21966400058803,21966400061591.

Br. Belgaum/Tilakwadi: Near 3rd Railway Gate, Khanapur Road, Tilakwadi, Belgaum- 590006 Ph: 0831-2495439:- 15306400022301,15306400015941,15306400025445,15306400025577,15306400025452,15306400025346,15306400025338,15306400025593,15306400025239,15306400025304,15306400025148.

Br. Belgaum/City: Ground Floor, Vijaylaxmi Arcade, Opp. Khade Bazar Police station, Narvekar Galli, Belgaum- 590002,Ph no. 0831-2423460:- 15096400037629,15096400042215,15096400043411,15096400034014,15096400041290,15096400043502,15096400028941,15096400043155,15096400032695,15096400041555,15096400044187,15096400037629,15096400040300,15096400045101,15096400039534,15096400043734,15096400039799,15096400041662,15096400039302,15096400042934,15096400043668,15096400041209,15096400041555,15096400045283,15096400044393,15096400043403,15096400042561.

Br. Bellary: Modi Chambers, 2nd Cross, Gandhi Nagar, Bellary, Karnataka-583 103, Ph no. 08392-258667:- 15896400201814,15896400202812,15896400194217,15896400204586,15896400203117,15896400193276,15896400202747,15896400169987,15896100157787,15896100156847,15896400204008,15896400168088,15896400204644,15896400159095,15896400193466,15896400174680,15896400212241,15896400201368,15896400202259,15896400202234,15896400203398,15896400177949,15896400200428,15896400189746,15896400188748,15896400177329,15896400178426,15896400189480,15896400200055,15896400171645,15896400171207,15896400183913.

Br. Challakere: Chaitanya Arcade, Bangalore Road, Challakere, Chitradurga- 577 522, Ph no. 08195-222456 :- 18976100051086.

Br. Chitradurga: Opp. Vasavi Mahal, Basaveshwara Talkies Road, Chitradurga, Karnataka- 577 501, Ph no. 08194-220931 :- 15946400091077,15946400093354,15946400095185,15946400094626,15946400091622,15946100084737,15946400095425,15946400093859,15946400079650,15946400093537,15946400095326,15946400094840,15946400091713,15946400093867,15946400095391,15946400079395,15946400087729,15946400092075,15946400095763,15946400098478,15946400091838,15946400082738,15946400102122,15946400100878,15946400091937,15946400094360,15946400095920,15946400102163,15946400092174,15946400096811,15946400096084,15946400105141,15946400092190,15946400100563,15946400102007,15946400094931,15946400092406,15946400102288,15946400096597,15946400094949,15946400092505,15946400094501,15946400084338,15946400095094,15946400094147,15946400102361,15946400090558,15946400095011,15946400092794,15946400094584,15946400078637,15946400092810,15946400092802,15946100084083.

Br. Davanagere: Raghavendra Plaza, No.200/1A & 200/1B, 3rd Main, 7th Cross, 28th Ward, P J Extension, Davangere-577 002,Ph no. 08192-222511:- 22976400039066,22976400047895,22976400048711,22976400056664,22976400056672,22976400024738,22976400039033,22976400049099,22976100002950,22976400040072,22976400037870,22976400054594,22976400054735,22976400050246,22976400054867,22976400054875,22976400037227,22976400037391,22976400055138,22976400055146,22976400055286,22976400055427,22976400050568,22976400027335,22976400055534,22976400055625,22976400041344,22976400039074,22976400052044,22976400052010,22976400062001,22976400052960,22976900001053,22976400053372,22976400061060,22976400057530,22976100003602,22976100004444,22976400037532,22976400053265.

Br. Dharwad: Inamdhar Desai Arcade, Opp Spandhana Hospital, Vivekananda Circle,Saptapur, Dharwad- 580 001, Ph no. 0836-2445280 :- 16386100024061,16386400116286,16386400120163,16386400112194,16386100024087,16386100023402,16386100026132,16386400095522,16386400113291,16386400110669,16386400112798,16386400113069,16386400113333,16386400113606,16386400115502,16386400117193,16386400113416,16386400113713,16386400113598,16386400113697,16386400114182,16386400113721,16386400115668,16386400109836.

Br. Gulbarga: Plot No.7, 1st Floor, Main Road, Super Market, Gulbarga, Karnataka- 585 101 Ph no. 08472-230107 :- 16046400058835,16046400052275,16046400051913,16046400052382,16046400058033,16046400052861,16046400035908,16046400051574,16046400040643,16046400058439,16046400051467,16046400061763,16046400051624,16046400051319,16046400032863,16046400052077,16046400052317,16046400058603,16046400044256,16046400057498,16046400054024,16046400052549,16046400059247,16046400058876,16046400051947,16046400059007,16046400052226,16046400052150,16046400057175,16046400056037,16046400055732,16046400057688.16046400054370,16046400059197,16046400056045,16046400057688,16046400059213,16046400046806,16046400060666,16856400153273,16046400055781,16046400052929,16046400055963,16046400054735,16046400046582,16046400051228,16046400054396,16046400051087,16046400046632,16046400059742,16046400052424,16046400053380,16046400057092.

Br. Ganeshpur: Plot No. 19, BUDA Scheme No 51, Near Military Hospital, Ganeshpur Main Road, Belgaum - 590 009, Ph no. 0831-2446719 :- 14956100110300,14956100109443,14956400027055,14956400026412,14956400023245,14956400027519,14956400024136,14956100110722,14956100108650,14956400015092,14956400020423,14956400029044,14956400023062,14956400015175,14956100108171,14956400025471,14956100111209,14956400021934,14956100111001,14956400026537,14956400026974,14956400023195,14956100110631,14956400027048,14956400026917,14956400024177,14956100110441,14956400028251,14956400020894,14956400024805,14956400023096,14956400028277,14956400026354,14956400026057,14956100108718,14956400028285,14956400026719,14956100110656,14956100110292,14956100107579.

Br.Gangawati: Building No 2-12-81,82,83, Malleswara Complex, Koppal road, Gangawati-583 227 Ph 08533-271861:- 16856400108350,16856400145667,16856400131733,16856400143613,16856400127962,16856400145758,16856400114077,16856400151558,16856400137227,16856400145907,16856400151749,16856400145972,16856400112584,16856400144421,16856400131949,16856400081664,16856400113905,16856400145618,16856400116676,16856400144413,16856400146541,16856400125446,16856400143159,16856400129901,16856400145006,16856400151939,16856400144348,16856400143621,16856400143225,16856400145642,16856400146798,16856400083330,16856400140981,16856400147507,16856400125974,16856400141658,16856400129034,16856400146640,16856400142342,16856400096290,16856400144058,16856400141179,16856400142714,16856400145071,16856400143365,16856400101298,16856400129695.

Br. Hubli: Swastik Central, Niligin Road, New Cotton Market, Hubballi, Dharwad, Karnataka- 580 029, Ph no. 0836-2369449 :- 13386400109938,13386100411386,13386400124564,13386400133904,13386400138465,13386400109193,13386100415619,13386400135586,13386400141683,13386400133516,13386400100887,13386400135560,13386100413267,13386400136576,13386400102313,13386400129654,13386400126460,13386100408242,13386400102347,13386100412707,13386400103576,13386400128888,13386400130926,13386100415049,13386400111520,13386100409901,13386400133235,13386400103485,13386100414737,13386400125637,13386400134738,13386400128896,13386400069157,13386400133631,13386400134753,13386400131643,13386400122949,13386400133649,13386400112676,13386400087167,13386400123541,13386400087605,13386400127724,13386400112262,13386400125363,13386400128870,13386400073472,13386400128235,13386400132609,13386400129357,13386400079677,13386400064265,13386400132617,13386400112742,13386400117998,13386400123350,13386100412889,13386400131064,13386400130314,13386400128649,13386400077390,13386400088363,13386400130371,13386100411410,13386400127468,13386100412178,13386400131767,13386400106025,13386400112015,13386100413226,13386400085021,13386400089643,13386400126379,13386400117915,13386400124168,13386400129043,13386100408192,13386400131171,13386400085070,13386400135529,13386400085401,13386900003524,13386400103667,13386400116230,13386400135867,13386400127401,13386400135792,13386400100895,13386400138630,13386400135727,13386400112353,13386400129225,13386400127740,13386400096606,13386400136147,13386400129233,13386400134506,13386400135784,13386400123731,13386400066856,13386400125496,13386400125108,13386400125728,13386400120638.

Bangalore 21-05-2025 **Vice President & Zonal Head**

ಸ್ಪರ್ಧಾ ವಾಣಿ

●2025ರ ರಾಷ್ಟ್ರೀಯ ಮತದಾರರ ದಿನದ ಧ್ಯೇಯೋಕ್ತಿ 'ನಾನು ಖಚಿತವಾಗಿ ಮತ ಚಲಾಯಿಸುತ್ತೇನೆ' ಎಂಬುದಾಗಿತ್ತು.

●ಭಾರತದ ಚುನಾವಣಾ ಆಯೋಗದ ದತ್ತಾಂಶವು ಪ್ರಸ್ತುತ 99.1 ಕೋಟಿ ನೋಂದಾಯಿತ ಮತದಾರರನ್ನು ಹೊಂದಿದೆ.

●ಈ ಮತದಾರರ ಪೈಕಿ 21.7 ಕೋಟಿ ಜನರು 18ರಿಂದ 29 ವರ್ಷ ವಯಸ್ಸಿನ ಯುವ ಮತದಾರರಾಗಿದ್ದಾರೆ.

- ಈ ವರ್ಷ ಮತದಾರರ ಲಿಂಗಾನುಪಾತ ಪ್ರಮಾಣ ಕೂಡ ಹೆಚ್ಚಾಗಿದೆ. 2024ರಲ್ಲಿ 1000:948 ಇದ್ದ ಮತದಾರರ ಲಿಂಗಾನುಪಾತ 2025ರಲ್ಲಿ 1000:954 ಕ್ಕೆ ಏರಿದೆ.
- 'ಇಂಡಿಯಾ ವೋಟ್ಸ್ – ಎ ಸಾಗಾ ಆಫ್ ಡೆಮಾಕ್ರಸಿ' ಎಂಬ ಶೀರ್ಷಿಕೆಯ ಕೈಪಿಡಿಯನ್ನು 2025ರ ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಬಿಡುಗಡೆ ಮಾಡಲಾಗಿದೆ.
- ವಾರ್ನರ್ ಬ್ರದರ್ಸ್ ಡಿಸ್ಕವರಿ ನಿರ್ಮಿಸಿದ 'ಇಂಡಿಯಾ ಡಿಸೈಡ್ಸ್' ಎಂಬ ಮೂರು ಭಾಗದ ಸಾಕ್ಷ್ಯಚಿತ್ರ ಸರಣಿಯನ್ನು ಕೂಡ ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಬಿಡುಗಡೆ ಮಾಡಲಾಗಿದೆ.
- ಯುವ ಮತದಾರರ ನೋಂದಣಿಯನ್ನು ಉತ್ತೇಜಿಸುವಲ್ಲಿ NVD ಪ್ರಮುಖ ಪಾತ್ರ ವಹಿಸುತ್ತದೆ. ದೇಶದಾದ್ಯಂತ ನಡೆಯುವ ಸಮಾರಂಭಗಳಲ್ಲಿ ಹೊಸ ಮತದಾರರನ್ನು ಸನ್ಮಾನಿಸಲಾಗುತ್ತದೆ ಮತ್ತು ಅವರಿಗೆ ಅವರ ಮತದಾರರ ಫೋಟೋ ಗುರುತಿನ ಚೀಟಿಗಳನ್ನು (EPIC: Election Photo Identity Card) ವಿತರಿಸಲಾಗುತ್ತದೆ. ಈ ಉಪಕ್ರಮವು ಚುನಾವಣಾ ಪ್ರಕ್ರಿಯೆಯಲ್ಲಿ ಯುವಕರು ಭಾಗವಹಿಸುವುದನ್ನು ಪ್ರೋತ್ಸಾಹಿಸುತ್ತದೆ.

ಜ.25ರಂದು ಮತದಾರರ ದಿನ

- ಭಾರತದಲ್ಲಿ ಪ್ರತಿ ವರ್ಷ ಜ.25ರಂದು ರಾಷ್ಟ್ರೀಯ ಮತದಾರರ ದಿನವನ್ನು (NVD: National Voters Day) ಆಚರಿಸಲಾಗುತ್ತದೆ.
- ಒಟ್ಟು ಮತದಾರರು 100 ಕೋಟಿ ಮೀರಿರುವುದು ಹಾಗೂ ಭಾರತದ ಚುನಾವಣಾ ಆಯೋಗ 75 ವರ್ಷಾಚರಣೆಯ ಸಂಭ್ರಮದಲ್ಲಿ ಇರುವುದರಿಂದ ಈ ವರ್ಷದ NVD ಒಂದು ಹೊಸ ಮೈಲಿಗಲ್ಲನ್ನು ಗುರುತಿಸಿದೆ.
- NVD ಪ್ರಜಾಪ್ರಭುತ್ವ ಚಟುವಟಿಕೆಗಳಲ್ಲಿ ಮತದಾರರ ಭಾಗವಹಿಸುವಿಕೆಯ ನಿಟ್ಟಿನಲ್ಲಿ ಮತದಾನದ ಮಹತ್ವವನ್ನು ಗುರುತಿಸುತ್ತದೆ.
- 1950ರ ಜನವರಿ 25ರಂದು ಭಾರತ ಚುನಾವಣಾ ಆಯೋಗವನ್ನು ಸ್ಥಾಪಿಸಿದ ಸ್ಮರಣಾರ್ಥ 2011ರಲ್ಲಿ ರಾಷ್ಟ್ರೀಯ ಮತದಾರರ ದಿನವನ್ನು ಮೊದಲ ಬಾರಿಗೆ ಆಚರಿಸಲಾಯಿತು.
- ಈ ದಿನವು ಹೊಸ ಮತದಾರರನ್ನು ಗೌರವಿಸಲು ಮತ್ತು ಮತದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.
- ಈ ಕಾರ್ಯಕ್ರಮವು ಜಾಗತಿಕ ಚುನಾವಣಾ ನಿರ್ವಹಣಾ ಸವಾಲುಗಳ ಕುರಿತು ಚುನಾವಣಾ ನಿರ್ವಹಣಾ ಸಂಸ್ಥೆಗಳ ಮುಖ್ಯಸ್ಥರ ನಡುವೆ ಚರ್ಚೆಗಳನ್ನು ಒಳಗೊಂಡಿರುತ್ತದೆ.

ರಾಷ್ಟ್ರೀಯ ವಿದ್ಯಮಾನ

ಶಾಸಕಾಂಗ ಪ್ರಕ್ರಿಯೆಯಲ್ಲಿ ರಾಜ್ಯಪಾಲರ ಅಧಿಕಾರಗಳು

- ಭಾರತದ ಸುಪ್ರೀಂ ಕೋರ್ಟ್ ಪ್ರಸ್ತುತ ಶಾಸಕಾಂಗ ಪ್ರಕ್ರಿಯೆಯಲ್ಲಿ ರಾಜ್ಯಪಾಲರ ಅಧಿಕಾರಗಳನ್ನು ಪರಿಶೀಲಿಸುತ್ತಿದೆ.
- ರಾಜ್ಯ ಮಸೂದೆಗಳಿಗೆ ರಾಜ್ಯಪಾಲರ ಒಪ್ಪಿಗೆ ವಿಳಂಬದ ಬಗ್ಗೆ ತಮಿಳುನಾಡು ಸರ್ಕಾರ ಸಲ್ಲಿಸಿದ ಅರ್ಜಿಗಳಿಗೆ ಪ್ರತಿಕ್ರಿಯೆಯಾಗಿ ಈ ಪರಿಶೀಲನೆ ನಡೆಯುತ್ತಿದೆ.
- ರಾಜ್ಯಪಾಲರ ಅನುಮೋದನೆಯಲ್ಲಿನ ವಿಳಂಬ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ ಎಂಬುದು ತಮಿಳುನಾಡಿನ ವಾದವಾಗಿದೆ.
- ಈ ನಿಟ್ಟಿನಲ್ಲಿ ಭಾರತದ ಸಂವಿಧಾನದ 200ನೇ ವಿಧಿಯ ಉಲ್ಲೇಖಗಳನ್ನು ಸುಪ್ರೀಂಕೋರ್ಟ್ ಪರಿಗಣಿಸಲಿದೆ. ಈ ವಿಧಿಯು ರಾಜ್ಯ ಶಾಸಕಾಂಗ ಮಂಡಿಸಿದ ಮಸೂದೆಗಳ ಮೇಲೆ ರಾಜ್ಯಪಾಲರು ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ಆದೇಶಿಸುತ್ತದೆ.
- ರಾಜ್ಯಪಾಲರು ರಾಜಕೀಯೇತರ ವ್ಯಕ್ತಿಯಾಗಿರಬೇಕು ಎಂದು ಸಂವಿಧಾನದಲ್ಲಿ ಅರ್ಥೈಸಲಾಗಿದೆ. ಸಾಮಾನ್ಯವಾಗಿ, ರಾಜ್ಯಪಾಲರು ಮಂತ್ರಿ ಮಂಡಳಿಯ ಸಲಹೆಯ ಪ್ರಕಾರ ಕಾರ್ಯನಿರ್ವಹಿಸಬೇಕು. ರಾಷ್ಟ್ರಪತಿ ಆಳ್ವಿಕೆಯನ್ನು ಶಿಫಾರಸು ಮಾಡುವಾಗ ಅಥವಾ ಮಸೂದೆಗಳಿಗೆ ಒಪ್ಪಿಗೆ ನೀಡುವಾಗ ಅವರಿಗೆ ಕೆಲ ವಿನಾಯಿತಿಗಳಿವೆ.
- ಸಂವಿಧಾನದ 200ನೇ ವಿಧಿ ರಾಜ್ಯಪಾಲರಿಗೆ ಮೂರು ಆಯ್ಕೆಗಳನ್ನು ನೀಡುತ್ತದೆ ಅವುಗಳೆಂದರೆ; ಮಸೂದೆಗಳಿಗೆ ಒಪ್ಪಿಗೆ ನೀಡಿ ಅದನ್ನು ಕಾನೂನನ್ನಾಗಿ ಮಾಡಿ, ಮಸೂದೆಗೆ ಒಪ್ಪಿಗೆಯನ್ನು ತಡೆಹಿಡಿದು ಮಸೂದೆಯನ್ನು ಪುನರ್ ವಿಮರ್ಶೆಗಾಗಿ ಹಿಂತಿರುಗಿಸಿ ಅಥವಾ ಮಸೂದೆಯನ್ನು ರಾಷ್ಟ್ರಪತಿಗಳ ಪರಿಗಣನೆಗೆ ಕಾಯ್ದಿರಿಸಿ.
- ರಾಜ್ಯಪಾಲರು ಒಂದು ಮಸೂದೆಯನ್ನು ಹಿಂತಿರುಗಿಸಿದ ನಂತರವೂ ವಿಧಾನಸಭೆಯು ಅದನ್ನು ತಿದ್ದುಪಡಿ ಇಲ್ಲದೇ ಅಥವಾ ತಿದ್ದುಪಡಿಗಳೊಂದಿಗೆ ಮರು-ಅಂಗೀಕಾರ ಮಾಡಿದಾಗ ಆ ಮಸೂದೆಗೆ ರಾಜ್ಯಪಾಲರು ಒಪ್ಪಿಗೆ ನೀಡಬೇಕು.
- ತಮಿಳುನಾಡಿನಲ್ಲಿ ಸೆಪ್ಟೆಂಬರ್ 2021ರಲ್ಲಿ ರಾಜ್ಯಪಾಲ ಆರ್.ಎನ್.ರವಿ ಅವರನ್ನು ನೇಮಕ ಮಾಡಿದ ನಂತರ, ಅನುಮೋದನೆ ವಿಳಂಬವಾಗಿವೆ. ಜನವರಿ 2023ರಿಂದ ಬಾಕಿ ಇರುವ ಮಸೂದೆಗಳನ್ನು ಉಲ್ಲೇಖಿಸಿ ರಾಜ್ಯವು ಸೆಪ್ಟೆಂಬರ್ 2023ರಲ್ಲಿ ಸುಪ್ರೀಂಕೋರ್ಟ್‌ಗೆ ಮೊರೆಹೋಗಿದೆ. ಸುಪ್ರೀಂಕೋರ್ಟ್ ರಾಜ್ಯಪಾಲರನ್ನು ವಿಳಂಬವಿಲ್ಲದೇ ಕಾರ್ಯನಿರ್ವಹಿಸುವಂತೆ ಒತ್ತಾಯಿಸಿದೆ.

- ಸುಪ್ರೀಂಕೋರ್ಟ್ ಮಸೂದೆಗಳನ್ನು ರಾಷ್ಟ್ರಪತಿಗೆ ಉಲ್ಲೇಖಿಸುವ ರಾಜ್ಯಪಾಲರ ಅಧಿಕಾರ ಅಪರಿಮಿತವೇ ಅಥವಾ ನಿರ್ಬಂಧಿತವೇ? ಎಂಬುದನ್ನು, ಮಸೂದೆಗೆ ಸಮ್ಮತಿ ಸೂಚಿಸಲು ರಾಜ್ಯಪಾಲರು ತೆಗೆದುಕೊಳ್ಳಬಹುದಾದ ಸಮಯಾವಕಾಶ ಕುರಿತು ಪರಿಶೀಲಿಸುತ್ತಿದೆ.
- ರಾಜ್ಯಪಾಲರು ಒಂದು ರಾಜ್ಯದಲ್ಲಿ ಅತ್ಯುನ್ನತ ಸಾಂವಿಧಾನಿಕ ಅಧಿಕಾರ ಹೊಂದಿರುವ ವ್ಯಕ್ತಿಯಾಗಿದ್ದು, ಅವರು ರಾಜ್ಯ ಸರ್ಕಾರದ ನಾಮಮಾತ್ರ ಮುಖ್ಯಸ್ಥರಾಗಿ ಹಾಗೂ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಾರೆ.
- ರಾಜ್ಯಪಾಲರು ರಾಜತಾಂತ್ರಿಕ, ಮಿಲಿಟರಿ, ತುರ್ತು ಪರಿಸ್ಥಿತಿಯ ಅಧಿಕಾರಗಳನ್ನು ಹೊರತುಪಡಿಸಿ ರಾಷ್ಟ್ರಪತಿಗಳಂತೆ ಕಾರ್ಯಾಂಗ, ಶಾಸಕಾಂಗ, ಹಣಕಾಸು, ನ್ಯಾಯಾಂಗ ಅಧಿಕಾರ ಹೊಂದಿದ್ದಾರೆ.
- ರಾಜ್ಯ ಸರ್ಕಾರದ ಎಲ್ಲಾ ಕ್ರಮಗಳು ರಾಜ್ಯಪಾಲರ ಹೆಸರಿನಲ್ಲಿ ನಡೆಯುತ್ತವೆ. ರಾಜ್ಯಪಾಲರು ಮುಖ್ಯಮಂತ್ರಿ ಮತ್ತು ಮಂತ್ರಿಗಳ ನೇಮಕ ಮಾತ್ರವಲ್ಲದೇ, ರಾಜ್ಯದ ಅಡ್ವೋಕೇಟ್ ಜನರಲ್, ರಾಜ್ಯ ಚುನಾವಣಾ ಆಯುಕ್ತರು, ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ರಾಜ್ಯ ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ನೇಮಿಸುವ ಅಧಿಕಾರವನ್ನು ಹೊಂದಿದ್ದಾರೆ.
- ರಾಜ್ಯಪಾಲರು ಆಯಾ ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿಯಾಗಿಯೂ ಕಾರ್ಯನಿರ್ವಹಿಸುತ್ತಾರೆ.
- ಅವರು ಮಂತ್ರಿಮಂಡಲದಲ್ಲಿ ಚರ್ಚೆಗಾಗಿ ಮಾಹಿತಿಯನ್ನು ಕೋರಬಹುದು ಮತ್ತು ವಿಷಯಗಳನ್ನು ಸೂಚಿಸಬಹುದು.
- ರಾಜ್ಯದಲ್ಲಿ ಸಾಂವಿಧಾನಿಕ ಕುಸಿತ ಉಂಟಾದರೆ ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು ಮಾಡುವ ವಿಶೇಷ ಅಧಿಕಾರ ರಾಜ್ಯಪಾಲರಿಗಿದೆ.
- ರಾಜ್ಯಪಾಲರು ಹೊಸ ಅಧಿವೇಶನದ ಆರಂಭದಲ್ಲಿ ಶಾಸಕಾಂಗವನ್ನು ಉದ್ದೇಶಿಸಿ ಮಾತನಾಡುತ್ತಾರೆ.
- 2020ರ ಮೊದಲು, ರಾಜ್ಯಪಾಲರು ಒಬ್ಬ ಆಂಗ್ಲೋ-ಇಂಡಿಯನ್ ಸದಸ್ಯರನ್ನು ವಿಧಾನಸಭೆಗೆ ನಾಮನಿರ್ದೇಶನ ಮಾಡಬಹುದಿತ್ತು. ಸಂವಿಧಾನದ 104ನೇ ತಿದ್ದುಪಡಿಯಿಂದ ಅದು ಕೊನೆಗೊಂಡಿದೆ.
- ರಾಜ್ಯಪಾಲರು ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ ಶಾಸಕರ ಅನರ್ಹತೆ ನಿರ್ಧರಿಸುವ ಅಧಿಕಾರ ಹೊಂದಿದ್ದಾರೆ.
- ಶಾಸಕಾಂಗ ಅಧಿವೇಶನದಲ್ಲಿ ಇಲ್ಲದಿರುವಾಗ ಸುಗ್ರೀವಾಜ್ಞೆ ಹೊರಡಿಸುವ ಅಧಿಕಾರ ಅವರಿಗಿದೆ.
- ಸರ್ಕಾರದ ಅವಧಿ ಮುಗಿದ ನಂತರ, ಸಚಿವ ಸಂಪುಟ ವಿಶ್ವಾಸಮತ ಕಳೆದುಕೊಂಡಾಗ ಅಥವಾ ಬಹುಮತವಿಲ್ಲದೇ ಸರ್ಕಾರ ಅತಂತ್ರ ಸ್ಥಿತಿಯಲ್ಲಿದ್ದಾಗ ಶಾಸಕಾಂಗವನ್ನು ವಿಸರ್ಜಿಸುವ ಅಧಿಕಾರ ಕೂಡ ಅವರಿಗಿದೆ.
- ಹಣಕಾಸು ಮಸೂದೆಗಳನ್ನು ಮಂಡಿಸುವ ಮೊದಲು ರಾಜ್ಯಪಾಲರ ಪೂರ್ವಾನುಮತಿ ಪಡೆಯಬೇಕಾಗುತ್ತದೆ ಹಾಗೂ ರಾಜ್ಯಪಾಲರ ಶಿಫಾರಸು ಇಲ್ಲದೆ ಯಾವುದೇ ಅನುದಾನವನ್ನು ಕೋರುವಂತಿಲ್ಲ.
- ರಾಜ್ಯಪಾಲರು ಆಕಸ್ಮಿಕ ನಿಧಿಯಿಂದ ತುರ್ತು ನಿಧಿಗಳನ್ನು ಅಧಿಕೃತಗೊಳಿಸಬಹುದು. ಸ್ಥಳೀಯ ಸಂಸ್ಥೆಗಳ ಹಣಕಾಸು ಪರಿಶೀಲಿಸಲು ಪ್ರತಿ ಐದು ವರ್ಷಗಳಿಗೊಮ್ಮೆ ರಾಜ್ಯ ಹಣಕಾಸು ಆಯೋಗ ರಚಿಸುತ್ತಾರೆ.
- ರಾಜ್ಯ ಕಾನೂನುಗಳ ಅಡಿಯಲ್ಲಿ ಅಪರಾಧಗಳಿಗೆ ವಿಧಿಸಿದ ಶಿಕ್ಷೆಯನ್ನು ರದ್ದುಪಡಿಸಬಹುದು ಅಥವಾ ಕಡಿಮೆ ಮಾಡಬಹುದು.
- ಹೈಕೋರ್ಟ್ ನ್ಯಾಯಾಧೀಶರ ನೇಮಕಾತಿಗಾಗಿ ರಾಷ್ಟ್ರಪತಿಗಳಿಂದ ಸಮಾಲೋಚಿಸುವ ಅಧಿಕಾರವನ್ನು ಹಾಗೂ ಹೈಕೋರ್ಟ್‌ನೊಂದಿಗೆ ಸಮಾಲೋಚಿಸಿ ಜಿಲ್ಲಾ ನ್ಯಾಯಾಧೀಶರನ್ನು ನೇಮಿಸುವ, ಬಡ್ತಿ ನೀಡುವ ಮತ್ತು ವರ್ಗಾವಣೆ ಮಾಡುವ ಅಧಿಕಾರವನ್ನು ರಾಜ್ಯಪಾಲರು ಹೊಂದಿದ್ದಾರೆ.
- ಹೈಕೋರ್ಟ್ ಮತ್ತು ಸಾರ್ವಜನಿಕ ಸೇವಾ ಆಯೋಗದೊಂದಿಗೆ ಸಮಾಲೋಚಿಸಿ ಇತರ ನ್ಯಾಯಾಂಗ ಅಧಿಕಾರಿಗಳನ್ನು ನೇಮಿಸುವ ಅಧಿಕಾರವೂ ರಾಜ್ಯಪಾಲರಿಗಿದೆ.

ಭಾರತದಲ್ಲಿ ರಾಷ್ಟ್ರಪತಿ ಆಳ್ವಿಕೆ

- ಮಣಿಪುರದ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರ ರಾಜೀನಾಮೆ ಭಾರತದಲ್ಲಿ ರಾಷ್ಟ್ರಪತಿ ಆಳ್ವಿಕೆ ಬಗ್ಗೆ ಮತ್ತೆ ಚರ್ಚೆ ಹುಟ್ಟುಹಾಕಿದೆ. ರಾಷ್ಟ್ರಪತಿ ಆಡಳಿತವನ್ನು ತಪ್ಪಿಸಲು ಭಾರತೀಯ ಜನತಾ ಪಕ್ಷ (ಬಿಜೆಪಿ) ಪರ್ಯಾಯಗಳನ್ನು ಅನ್ವೇಷಿಸುತ್ತಿದೆ.
- ಭಾರತದ ಸಂವಿಧಾನದ 356ನೇ ವಿಧಿಯ ಅಡಿಯಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೊಳಿಸಲಾಗುತ್ತದೆ.
- ರಾಜ್ಯ ಸರ್ಕಾರವು ಸಾಂವಿಧಾನಿಕ ನಿಬಂಧನೆಗಳ ಪ್ರಕಾರ ಕಾರ್ಯನಿರ್ವಹಿಸಲು ಸಾಧ್ಯವಾಗದೇ ಇದ್ದಾಗ ವಿಧಿಸುವ ರಾಷ್ಟ್ರಪತಿ ಆಳ್ವಿಕೆ ಕೇಂದ್ರ ಸರ್ಕಾರ ರಾಜ್ಯದ ನಿಯಂತ್ರಣ ವಹಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.
- ರಾಷ್ಟ್ರಪತಿ ಆಳ್ವಿಕೆ ಹೇರುವ ಪ್ರಕ್ರಿಯೆ: ರಾಷ್ಟ್ರಪತಿಗಳು ರಾಜ್ಯಪಾಲರಿಂದ ವರದಿಯನ್ನು ಸ್ವೀಕರಿಸಿದ ಮೇಲೆ ರಾಜ್ಯ ಸರ್ಕಾರವು ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂದು ರಾಷ್ಟ್ರಪತಿಗಳಿಗೆ ಮನದಟ್ಟಾದ ನಂತರ ರಾಷ್ಟ್ರಪತಿ ಆಳ್ವಿಕೆ ಪ್ರಾರಂಭವಾಗುತ್ತದೆ.
- ಆರಂಭಿಕವಾಗಿ ಒಂದು ಘೋಷಣೆಯ ಮೂಲಕ ಆರಂಭವಾಗುವ ರಾಷ್ಟ್ರಪತಿ ಆಳ್ವಿಕೆ ಎರಡು ತಿಂಗಳವರೆಗೆ ಇರುತ್ತದೆ. ಈ ಅವಧಿಯನ್ನು ಮುಂದುವರಿಸಲು ಲೋಕಸಭೆ ಮತ್ತು ರಾಜ್ಯಸಭೆ ಎರಡರಿಂದಲೂ ಅನುಮೋದನೆ ಪಡೆಯಬೇಕಾಗುತ್ತದೆ.
- ಅನುಮೋದನೆ ದೊರೆತರೆ, ರಾಷ್ಟ್ರಪತಿ ಆಳ್ವಿಕೆಯನ್ನು ಆರು ತಿಂಗಳವರೆಗೆ ವಿಸ್ತರಿಸಬಹುದು, ನಿರ್ದಿಷ್ಟ ಷರತ್ತುಗಳ ಅಡಿಯಲ್ಲಿ ಮತ್ತಷ್ಟು ವಿಸ್ತರಣೆ ಮಾಡಲು ಸಾಧ್ಯ.
- 1950ರಲ್ಲಿ ಸಂವಿಧಾನವನ್ನು ಅಂಗೀಕರಿಸಿದಾಗಿನಿಂದ ಇಲ್ಲಿಯವರೆಗೆ, 29 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ (UTs) 134 ಬಾರಿ ರಾಷ್ಟ್ರಪತಿ ಆಳ್ವಿಕೆಯನ್ನು ವಿಧಿಸಲಾಗಿದೆ.
- ಮಣಿಪುರ ಮತ್ತು ಉತ್ತರ ಪ್ರದೇಶಗಳು ಈ ಪ್ರಮಾಣವನ್ನು ಹೆಚ್ಚಾಗಿ ಅನುಭವಿಸಿವೆ (ತಲಾ ಹತ್ತು ಬಾರಿ!). ಜಮ್ಮು ಮತ್ತು ಕಾಶ್ಮೀರ 12 ವರ್ಷಗಳಿಗೂ ಹೆಚ್ಚು ಕಾಲ ರಾಷ್ಟ್ರಪತಿ ಆಳ್ವಿಕೆಯಲ್ಲಿದ್ದ ದಾಖಲೆಯನ್ನು ಹೊಂದಿದೆ.
- ರಾಷ್ಟ್ರಪತಿ ಆಳ್ವಿಕೆಯನ್ನು ಉಗ್ರಗಾಮಿ ಚಟುವಟಿಕೆಗಳು ಮತ್ತು ಅಸ್ಥಿರ ಕಾನೂನು ಮತ್ತು ಸುವ್ಯವಸ್ಥೆಯ ಕಾರಣ ಹೆಚ್ಚಾಗಿ ಹೇರಲಾಗುತ್ತದೆ.
- 2021ರಲ್ಲಿ ಪುದುಚೇರಿಯಲ್ಲಿ ಕಾಂಗ್ರೆಸ್ ಸರ್ಕಾರ ವಿಶ್ವಾಸ ಮತ ಕಳೆದುಕೊಂಡಾಗ ರಾಷ್ಟ್ರಪತಿ ಆಳ್ವಿಕೆಯ ಇತ್ತೀಚಿನ ಉದಾಹರಣೆ.
- ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಗಳು: ಕರ್ನಾಟಕದ ಮುಖ್ಯಮಂತ್ರಿ ಆಗಿದ್ದ ಎಸ್.ಆರ್.ಬೊಮ್ಮಾಯಿ v/s ಭಾರತ ಒಕ್ಕೂಟ (1994) ಪ್ರಕರಣದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವ ಅಧಿಕಾರದ ಬಗ್ಗೆ ಭಾರತದ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.
- ರಾಷ್ಟ್ರಪತಿಗಳ ನಿರ್ಧಾರ ನ್ಯಾಯಾಂಗ ಪರಿಶೀಲನೆಗೆ ಒಳಪಟ್ಟಿರುತ್ತದೆ ಎಂದು ತೀರ್ಪು ಹೇಳಿದೆ. ರಾಷ್ಟ್ರಪತಿ ಆಳ್ವಿಕೆ ಕಾನೂನುಬಾಹಿರ ಆಗಿದೆಯೇ ಅಥವಾ ಅಧಿಕಾರದ ದುರುಪಯೋಗ ಒಳಗೊಂಡಿದೆಯೇ ಎಂಬುದನ್ನು ಪರಿಶೀಲಿಸಲು ಅವಕಾಶವಿದೆ.
- ಸುಪ್ರೀಂಕೋರ್ಟ್‌ನ ತೀರ್ಪಿನಿಂದ ರಾಷ್ಟ್ರಪತಿ ಆಳ್ವಿಕೆ ಹೇರಿಕೆ ಪ್ರಮಾಣ ಕಡಿಮೆ ಆಗಿದೆ. ರಾಜ್ಯಗಳು ಕೇಂದ್ರ ಸರ್ಕಾರದ ವಿಸ್ತರಣೆಗಳಲ್ಲ ಎಂಬ ಕಲ್ಪನೆಯನ್ನು ಈ ತೀರ್ಪು ಬಲಪಡಿಸಿದೆ.
- ರಾಜ್ಯಗಳಿಗೆ ಮೀಸಲಾಗಿರುವ ಅಧಿಕಾರಗಳನ್ನು ಕೇಂದ್ರ ಸರ್ಕಾರ ಗೌರವಿಸಬೇಕಾದ ಅಗತ್ಯವನ್ನು ಇದು ಒತ್ತಿಹೇಳಿದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಕೆಳಗಿನ ಯಾವ ಸ್ಥಳಗಳಲ್ಲಿ ಭಾಷಾ ಅಲ್ಪಸಂಖ್ಯಾತ ಆಯುಕ್ತರ ಪ್ರಾದೇಶಿಕ ಕಚೇರಿಗಳನ್ನು ಸ್ಥಾಪಿಸಲಾಗಿದೆ?
1. ಬೆಂಗಳೂರು, ಕರ್ನಾಟಕ.
2. ಬೆಳಗಾವಿ, ಕರ್ನಾಟಕ.
3. ಚೆನ್ನೈ, ತಮಿಳುನಾಡು.
4. ಕೋಲ್ಕತ್ತ, ಪಶ್ಚಿಮ ಬಂಗಾಳ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 2, 3 ಮತ್ತು 4 ಬಿ. 1, 2 ಮತ್ತು 3
ಸಿ. 1 ಮತ್ತು 4 ಡಿ. 2 ಮತ್ತು 4

ಉತ್ತರ : ಎ

2. ಭಾಷಾವಾರು ಅಲ್ಪಸಂಖ್ಯಾತ ಅಧಿಕಾರಿಯ ಹುದ್ದೆಯನ್ನು ಸ್ಥಾಪಿಸುವಂತೆ ಕೆಳಗಿನ ಯಾವ ಆಯೋಗ ಶಿಫಾರಸು ನೀಡಿತು?
ಎ. ಜೆ.ವಿ.ಪಿ ಸಮಿತಿ. ಬಿ. ಎಸ್. ಕೆ. ದಾರ್ ಆಯೋಗ.
ಸಿ. ಫಜಲ್ ಅಲಿ ಆಯೋಗ.
ಡಿ. ಮಹಾಜನ್ ಆಯೋಗ.

ಉತ್ತರ : ಸಿ

3.ತೆಲಂಗಾಣದ ವಿಶೇಷ ಸವಲತ್ತುಗಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಈ ವಿಧಿಯ ಅನ್ವಯ ರಾಜ್ಯ ಸರ್ಕಾರದ ಹುದ್ದೆಗಳಲ್ಲಿ ಮೀಸಲಾತಿಯನ್ನು ಕಲ್ಪಿಸಬಹುದು.
2. ರಾಷ್ಟ್ರಪತಿಗಳು ಆಡಳಿತಾತ್ಮಕ ನ್ಯಾಯಾಧೀಕರಣಗಳನ್ನು ಸ್ಥಾಪಿಸುವ ಅಧಿಕಾರ ಹೊಂದಿರುತ್ತಾರೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿದೆ.

ಉತ್ತರ : ಸಿ

4. ನಾಗಾಲ್ಯಾಂಡಿನ ಕೆಳಗಿನ ಯಾವ ವಿಚಾರಗಳಿಗೆ ಸಂಬಂಧಿಸಿದಂತೆ ಸಂಸದೀಯ ಕಾನೂನು ನಾಗಾಲ್ಯಾಂಡಿನಲ್ಲಿ ಅನ್ವಯವಾಗುವುದಿಲ್ಲ?
1. ಸಾಮಾಜಿಕ ಆಚರಣೆ. 2. ಧಾರ್ಮಿಕ ಆಚರಣೆ.
3. ಆರ್ಥಿಕ ಆಚರಣೆ. 4. ಕಾನೂನಾತ್ಮಕ ಆಚರಣೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮತ್ತು 2 ಬಿ. 2 ಮಾತ್ರ
ಸಿ. 1 ಮಾತ್ರ ಡಿ. 3 ಮತ್ತು 4

ಉತ್ತರ : ಎ

5. ಗೋಲ್ಡ್ ಮ್ಯಾನ್ ಪರಿಸರ ಪ್ರಶಸ್ತಿಯನ್ನು ಕೆಳಗಿನ ಯಾವ ಹೆಸರಿನಿಂದಲೂ ಕೂಡ ಕರೆಯಲಾಗುತ್ತದೆ?
ಎ. ಹಸಿರು ನೊಬೆಲ್ ಪ್ರಶಸ್ತಿ.
ಬಿ. ಕೆಂಪು ನೊಬೆಲ್ ಪ್ರಶಸ್ತಿ.
ಸಿ. ಪರಿಸರ ನೊಬೆಲ್ ಪ್ರಶಸ್ತಿ.
ಡಿ. ಭೌಗೋಳಿಕ ನೊಬೆಲ್ ಪ್ರಶಸ್ತಿ.

ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಇಂಗ್ಲಿಷ್

Second Language ENGLISH
Unit-1 Poem
Grandma Climbs a Tree

5. Others had feared that granny would fall from a tree one day or the other. Did this happen? Or did something else happen? {Line 15-18}
Answer: Granny did not fall as feared by family members but there was a different outcome. When family was in town, granny climbed a tree and could not climb down. She had to be rescued.

6. What had the doctor recommended? What was the reaction of the kids to this advice?
Answer: The doctor took granny's temperature and advised for bed rest of one week. Kids sighed with relief on hearing doctor's advice to granny and tucked her up in bed well.

7. Quote the lines which suggest how wholeheartedly granny enjoyed climbing a tree.
Answer:
(a) "For being happier in a tree than in a lift"
(b) "For her it was like a brief season in hell"

8. 'My dad knew his duties'. What did he think his duty was?
Answer: Poet's dad knew it is his duty to fulfill the wish of the mother. When his mother wished a tree house, he agreed and made a tree house with window and door.

9. Look at the picture given below the title. Quote the lines that might have guided the artist to draw.

Answer: "Made her a tree house with windows and a door".

Read and appreciate

A.1. Read the poem again. Does the behavior of grandma strike you as unusual? If so, support your view quoting her ways and responses to others. One is done for you.
***Grandma climbing a tree. (Way 1)**
Ans:
*When told to stop tree climbing and grow old gracefully, granny laughed to reject it, preferred to grow old disgracefully.
* One day when she climbed a tree but could not come down and had to be rescued. Following the incident she was forced a bed rest for a week. Even this could not change her; instead she wanted a tree house for her stay.

2. 'Growing old gracefully' is an expression used in the poem Discuss with your partner whether what the grandma was doing was graceful or otherwise.
Answer: Grandma was an adventurer. Society wishes to see old people slow down their activities for their safety. However the modern health care and safety engineering is enabling many old people to do many feats beyond their age like flying aircraft, sky diving etc. Such adventures are appreciated and seen with respect. More and more some societies are now coming to view granny acts to live life fully as growing with grace. Grace or disgraces are the product of progress of time, values of a society.

3. Both the narrator (speaker in the poem) and his father were very considerate towards Grandma. Substantiate the statement with textual support.
Answer: The poet and his father were very considerate towards grandma. They respected her nature of adventure to climb trees even at old age when society expected her to age with grace by stopping it. One day granny climbed a tree but was unable to come down and she had to be rescued, but was advised bed rest for a week. Immediately after recovery she wanted a tree house to live. They immediately fulfilled her by building one with a door and window.

4. If you were to divide the entire poem into two parts which line would you pick up to be the beginning of the second part?
Answer: I would start second part with "After the rescue…...". After incident granny's will for adventure became even stronger and she now decided to live in a tree house.

B. 1. Have a close look at the rhyme-scheme. Write at least 5 pairs of the rhyming words. E.g. said–bed.
Answer: Tree-Free, Branch-Blanch,
Trice-Price, Spread-Bread,
Grace-Chase

2. "It was like a brief season". Name the figure of speech in the sentence. What are the two things compared? Explain.
Answer: The figure of speech is simile. The two things compared are grandma's feeling of 'misery' about compulsory bed rest and torture in the 'hell'.

3. 'For being happier in a tree than in a lift'. What is suggested through this line? Exchange your views with your partner.
Ans: Grandma was very skilled in tree climbing since the age of six and maintained her skill even at an old age sixty two. She could climb tree in a trice and enjoyed it than being stand still in a lift.

4. "There was not a tree, she hadn't been up' is an expression.
Rewrite the above sentences without using 'not' (note: the meaning should be the same)

II PUC- BIOLOGY

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

REPRODUCTION
Reproduction in flowering plants

32. What is Chiropterophily?
Ans:- Chiropterophily is the mode of pollination where the bats are the agents.

33. Name some of the common Chiropterophilous Flowers.
Ans:- Some of the common Chiropterophilous Flowers are – Anthocephalus, Bauhinia megalandra, Adansonia, Kigelia pinnata.

34. Mention the characteristics of Chiropterophilous Flowers.
Ans:- The characteristics of Chiropterophilous Flowers are –
(i) Flowers are stout and large sized.
(ii) They are dull coloured with strong fruity odour.
(iii) Stamens are numerous.
(iv) Corolla is often funnel shaped.
(v) Pollen grains are abundant.
(vi) Flowers secrete abundant dilute nectar.

35. Identify the type of pistil with the help of diagram given here.
(a)



(b)



Ans:- (a) Multicarpellary syncarpous
(b) Multicarpellary apocarpous

36. Label the following parts in the given figure.
a) male gametes, b) egg cell, c) nuclei, d) synergid, and e) pollen tube.



Ans:-



37. In the given diagram, write the names of the parts 1 - 7.



Ans:- 1. Scutellum
2. Coleoptile
3. Plumule
4. Epiblast
5. Radicle
6. Root cap
7. Coleorhiza

38. Mention some of the differences between the Parthenocarpy and Apomixis and also mention some of their benefits.
Ans:- Parthenocarpy – is the formation of seedless fruits, embryo is absent and it has no role in reproduction.
Apomixis - is the formation of seeds asexually. an embryo is formed asexually, it takes part in reproduction.
Benefits
Parthenocarpy - is economically important since irritant seeds are absent.
Apomixis – can maintain hybrid vigour indefinitely.

39. In the diagram given, show the path of a pollen tube from the pollen on the stigma into the embryo sac. Name the components of egg apparatus.

Ans:- (a) *(Contd….)*

ಸಂಕ್ಷಿಪ್ತ ಸುದ್ದಿ

ಡ್ರೋನ್ ಹೋಲುವ ಯಂತ್ರ ಹಾರಾಟ: ತನಿಖೆ ಶುರು

ಕೋಲ್ಕತ್ತ (ಪಿಟಿಐ): ಇಲ್ಲಿನ ಹಲವು ನಗರಗಳಲ್ಲಿ ರಾತ್ರಿ ವೇಳೆ ಡ್ರೋನ್ ಮಾದರಿಯ ಎಂಟು–ಹತ್ತು ಯಂತ್ರಗಳು ಹಾರಾಟ ನಡೆಸಿರುವುದು ಕಂಡುಬಂದಿದೆ. ಆ ಯಂತ್ರಗಳನ್ನು ಬೇಹುಗಾರಿಕೆಗೆ ಬಳಸಿರುವ ಶಂಕೆ ವ್ಯಕ್ತವಾಗಿದ್ದು, ಈ ಬಗ್ಗೆ ಪೊಲೀಸರು ತನಿಖೆ ಆರಂಭಿಸಿರುವುದಾಗಿ ಹೇಳಿದ್ದಾರೆ. ಇದಕ್ಕೆ ಸಂಬಂಧಿಸಿದ ವರದಿ ಸಲ್ಲಿಸುವಂತೆ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಕೇಂದ್ರ ಸರ್ಕಾರ ಸೂಚನೆಯನ್ನೂ ನೀಡಿದೆ.

ಹೇಸ್ಟಿಂಗ್ ನಗರ, ವಿದ್ಯಾಸಾಗರ ಸೇತು ಹಾಗೂ ಮೈದಾನ ಪ್ರದೇಶದಲ್ಲಿ ಸೋಮವಾರ ರಾತ್ರಿ ಡ್ರೋನ್ ಮಾದರಿಯ ಯಂತ್ರಗಳ ಹಾರಾಟ ಕಂಡುಬಂದಿದೆ. ಪಾರ್ಕ್ ಸರ್ಕಸ್, ವಿಲಿಯಂ ಫೋರ್ಟ್‌ನ ಬಳಿಯೂ ಹಾರಾಟ ನಡೆಸಿ, ನಾಪತ್ತೆಯಾಗಿವೆ. ಈ ಹಿನ್ನೆಲೆಯಲ್ಲಿ ವಿಶೇಷ ತನಿಖಾ ತಂಡ (ಎಸ್‌ಟಿಎಫ್) ಹಾಗೂ ಕೋಲ್ಕತ್ತ ಪೊಲೀಸರು ಎಲ್ಲಾ ಆಯಾಮದಲ್ಲೂ ತನಿಖೆ ಆರಂಭಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪಾಕ್ ಅಧಿಕಾರಿಗೆ ದೇಶ ತೊರೆಯಲು ತಾಕೀತು

ನವದೆಹಲಿ (ಪಿಟಿಐ): ಅಧಿಕೃತ ಕೆಲಸ ಹೊರತುಪಡಿಸಿದ ಚಟುವಟಿಕೆಗಳಲ್ಲಿ ತೊಡಗಿದ್ದ ಆರೋಪದ ಅಡಿ ಇಲ್ಲಿನ ಪಾಕಿಸ್ತಾನ ರಾಯಭಾರಿ ಕಚೇರಿ ಅಧಿಕಾರಿಯೊಬ್ಬರಿಗೆ ದೇಶ ತೊರೆಯಲು ಆದೇಶಿಸಲಾಗಿದೆ.

ಈ ಅಧಿಕಾರಿಗೆ ದೇಶವನ್ನು ತೊರೆಯಲು 24 ಗಂಟೆ ಸಮಯ ನೀಡಲಾಗಿದೆ. ರಾಯಭಾರ ಕಚೇರಿಗೂ ಮಾಹಿತಿ ನೀಡಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ತಿಳಿಸಿದೆ.

ರಾಯಭಾರ ಕಚೇರಿಯಲ್ಲಿ ಇರುವ ಯಾವುದೇ ರಾಜತಾಂತ್ರಿಕ ಅಥವಾ ಅಧಿಕಾರಿ ತನ್ನ ಕಾರ್ಯ ವ್ಯಾಪ್ತಿಯನ್ನು ಯಾವುದೇ ರೀತಿ ದುರ್ಬಳಕೆ ಮಾಡಿಕೊಳ್ಳಬಾರದು ಎಂದು ತಾಕೀತು ಮಾಡಲಾಗಿದೆ.

ಬೇಹುಗಾರಿಕೆಯಲ್ಲಿ ತೊಡಗಿದ್ದ ಆರೋಪದ ಮೇಲೆ ಮೇ 13ರಂದೂ ಅಧಿಕಾರಿಯೊಬ್ಬರನ್ನು ಗಡೀಪಾರು ಮಾಡಲಾಗಿತ್ತು.

ಲೈಂಗಿಕ ಸಂಪರ್ಕಕ್ಕೆ ಒತ್ತಾಯ: ಕಾರ್ಯಕರ್ತ ಅಮಾನತು

ಚೆನ್ನೈ (ಪಿಟಿಐ): 'ಪಕ್ಷದ ಉನ್ನತ ಮಟ್ಟದ ನಾಯಕರೊಂದಿಗೆ ಲೈಂಗಿಕ ಸಂಪರ್ಕ ಹೊಂದುವಂತೆ ಡಿಎಂಕೆಯ ಯುವ ಘಟಕದ ಕಾರ್ಯಕರ್ತರೊಬ್ಬರು ನನಗೆ ಒತ್ತಾಯ ಮಾಡುತ್ತಿದ್ದಾರೆ' ಎಂದು ರಾಣಿಪೇಟ್ ಜಿಲ್ಲೆಯ ಅರಕ್ಕೋಣಂನ 20 ವರ್ಷದ ಯುವತಿಯೊಬ್ಬರು ಆರೋಪಿಸಿದ್ದಾರೆ.

ಯುವತಿಯು ಆರೋಪ ಮಾಡಿದ ಬಳಿಕ ಡಿಎಂಕೆಯು, ಅರಕ್ಕೋಣಂ ಮೂಲದ ಕಾರ್ಯಕರ್ತ ಆರ್ ತೈವ ಅಲಿಯಾಸ್ ತೈವಸೆಯಲ್ ಅವರನ್ನು ಪಕ್ಷದಿಂದ ಹುದ್ದೆಯಿಂದ ಬುಧವಾರ ಅಮಾನತು ಮಾಡಿದೆ. ಅವರ ಸ್ಥಾನಕ್ಕೆ ಬೇರೊಬ್ಬರನ್ನು ನೇಮಕ ಮಾಡಿದೆ.

ಘಟನೆಗೆ ಸಂಬಂಧಿಸಿದಂತೆ ವಿರೋಧ ಪಕ್ಷ ಎಐಎಡಿಎಂಕೆಯು ಡಿಎಂಕೆ ವಿರುದ್ಧ ರಾಣಿಪೇಟ್‌ನಲ್ಲಿ ಪ್ರತಿಭಟನೆ ನಡೆಸಿತು. ಈ ವೇಳೆ ಮಾತನಾಡಿದ ಪಕ್ಷದ ನಾಯಕಿ ಬಿ. ವಲರಮತಿ ಅವರು, 'ಯುವತಿಗೆ ನ್ಯಾಯ ದೊರಕುವವರೆಗೂ ಎಐಎಡಿಎಂಕೆಯ ಪ್ರತಿಭಟನೆ ಮುಂದುವರಿಯುತ್ತದೆ' ಎಂದು ತಿಳಿಸಿದ್ದಾರೆ.

'ಆರೋಪಿ ಡಿಎಂಕೆ ಕಾರ್ಯಕರ್ತನ ವಿರುದ್ಧ ರಾಜ್ಯ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಬೇಕು. ಕ್ರಮ ಜರುಗಿಸದೇ ಇದ್ದರೆ ನಮ್ಮ ಪಕ್ಷ ಬೃಹತ್ ಪ್ರತಿಭಟನೆ ನಡೆಸುತ್ತದೆ' ಎಂದು ಎಐಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಹೇಳಿದ್ದಾರೆ.

ದಕ್ಷಿಣ ಕೊರಿಯಾ, ಮಲೇಷ್ಯಾ, ಇಂಡೋನೇಷ್ಯಾ, ಸಿಂಗಪುರಕ್ಕೂ ಭೇಟಿ ನೀಡಲಿರುವ ತಂಡ

ಜಪಾನ್‌ಗೆ ಸರ್ವಪಕ್ಷಗಳ ನಿಯೋಗ

ನವದೆಹಲಿ (ಪಿಟಿಐ): ಪಾಕಿಸ್ತಾನದ ನೆಲದಿಂದ ಕಾರ್ಯನಿರ್ವಹಿಸುತ್ತಿರುವ ಉಗ್ರರ ಚಟುವಟಿಕೆ ಕುರಿತು ದೇಶದ ನಿಲುವನ್ನು ಮನವರಿಕೆ ಮಾಡಿಕೊಡಲು ಜನತಾದಳ (ಯು) ಸಂಸದ ಸಂಜಯ್ ಝಾ ನೇತೃತ್ವದ ಸರ್ವಪಕ್ಷಗಳ ನಿಯೋಗವು ಬುಧವಾರ ಜಪಾನ್‌ಗೆ ತೆರಳಿತು.

ಈ ನಿಯೋಗವು ದಕ್ಷಿಣ ಕೊರಿಯಾ, ಮಲೇಷ್ಯಾ, ಇಂಡೋನೇಷ್ಯಾ, ಸಿಂಗಪುರಕ್ಕೆ ಭೇಟಿ ನೀಡಲಿದೆ. ಆಪರೇಷನ್ ಸಿಂಧೂರ ಮತ್ತು ಆನಂತರ ಭಾರತ–ಪಾಕಿಸ್ತಾನ ನಡುವೆ ನಡೆದ ಸಂಘರ್ಷದ ಹಿನ್ನೆಲೆಯಲ್ಲಿ ಜಾಗತಿಕವಾಗಿ ಭಾರತದ ನಿಲುವನ್ನು ತಿಳಿಸುವುದು ನಿಯೋಗದ ಭೇಟಿಯ ಉದ್ದೇಶವಾಗಿದೆ.

ಈ ನಿಯೋಗದಲ್ಲಿ ಬಿಜೆಪಿ ಸಂಸದರಾದ ಅಪರಾಜಿತಾ ಸಾರಂಗಿ, ಬ್ರಿಜ್‌ಲಾಲ್, ಪ್ರಧಾನ್ ಬರುವಾ, ಹೇಮಾಂಗ್ ಜೋಶಿ, ಕಾಂಗ್ರೆಸ್‌ನ ಸಲ್ಮಾನ್ ಖುರ್ಷಿದ್, ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ, ಸಿಪಿಎಂನ ಜಾನ್ ಬ್ರಿಟ್ಟಾಸ್ ಮತ್ತು ಮಾಜಿ ರಾಯಭಾರಿ ಮೋಹನ್ ಕುಮಾರ್ ಇದ್ದಾರೆ.

ಶಿವಸೇನಾ ಸಂಸದ ಶ್ರೀಕಾಂತ್ ಶಿಂದೆ ನೇತೃತ್ವದ ಮತ್ತೊಂದು ನಿಯೋಗವು ಯುಎಇ, ಲಿಬಿರಿಯಾ, ಕಾಂಗೊ ಮತ್ತು ಸಿಯಾರಾ ಲಿಯೋನ್‌ಗೆ ಭೇಟಿ ನೀಡಲು ನಿರ್ಗಮಿಸಿತು. ಕೇಂದ್ರ ಸರ್ಕಾರವು ಸರ್ವಪಕ್ಷಗಳ ಸದಸ್ಯರ ಏಳು ನಿಯೋಗಗಳನ್ನು ವಿವಿಧ ದೇಶಗಳಿಗೆ ಕಳುಹಿಸುತ್ತಿದೆ.

ಬಂಧನಕ್ಕೆ ಮೊದಲೇ ನಿಯೋಗ –ಟೀಕೆ

ನವದೆಹಲಿ (ಪಿಟಿಐ): 'ಪಹಲ್ಗಾಮ್ ದಾಳಿ ಕೃತ್ಯದ ಉಗ್ರರು ಇನ್ನೂ ತಲೆಮರೆಸಿಕೊಂಡಿದ್ದಾರೆ. ಆದರೆ, ಸರ್ಕಾರ ವಿದೇಶಗಳಿಗೆ ರಾಜತಾಂತ್ರಿಕ ನಿಯೋಗಗಳನ್ನು ಕಳುಹಿಸುತ್ತಿದೆ' ಎಂದು ಕಾಂಗ್ರೆಸ್ ಟೀಕಿಸಿದೆ.

26/11ರ ಉಗ್ರರ ದಾಳಿ ಕೃತ್ಯದ ಬಳಿಕ ಸಂಚುಕೋರರು, ಉಗ್ರರನ್ನು ಹತ್ಯೆ ಮಾಡಿದ್ದು ಒಬ್ಬ ಉಗ್ರನನ್ನು ಬಂಧಿಸಲಾಗಿತ್ತು. ಹೀಗಾಗಿ, ಭಾರತಕ್ಕೆ ವಿವಿಧ ರಾಷ್ಟ್ರಗಳ ಬೆಂಬಲ ವ್ಯಕ್ತವಾಗಿತ್ತು ಎಂದು ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಬುಧವಾರ ಮೆಲುಕು ಹಾಕಿದರು.

ಪಿಟಿಐ ಜೊತೆಗೆ ಮಾತನಾಡಿದ ಅವರು, 'ಬಿಜೆಪಿಯು ರಾಹುಲ್ ಗಾಂಧಿ ಅವರನ್ನು ಟೀಕಿಸುವ ಬದಲಿಗೆ ತನ್ನ ಶಕ್ತಿ, ಸಾಮರ್ಥ್ಯವನ್ನು ಚೀನಾ ಮತ್ತು ಪಾಕಿಸ್ತಾನ ಗುರಿಯಾಗಿಸಿ ಬಳಸಲಿ' ಎಂದು ಸಲಹೆ ನೀಡಿದರು.

ಜೈರಾಮ್ ರಮೇಶ್

'ಮೊಹಮ್ಮದ್ ಅಲಿ ಜಿನ್ನಾ ಅವರಿಗೆ ಕ್ಲೀನ್ ಚಿಟ್ ನೀಡಿದ್ದು ಯಾರು? ಜಸ್ವಂತ್ ಸಿನ್ಹಾ ಮತ್ತು ಎಲ್.ಕೆ.ಅಡ್ವಾಣಿ ಇಬ್ಬರೂ ಜಿನ್ನಾ ಅವರನ್ನು ಮಹಾನ್ ನಾಯಕ ಎಂದು ಹೊಗಳಿದ್ದರು. ಅಟಲ್ ಬಿಹಾರಿ ವಾಜಪೇಯಿ ಅವರು ಲಾಹೋರ್‌ಗೆ ಬಸ್ ಯಾತ್ರೆ ಒಯ್ದಿದ್ದರು. ನರೇಂದ್ರ ಮೋದಿ ಅವರು ನವಾಜ್ ಷರೀಫ್ ಅವರೊಂದಿಗೆ ತಿಂಡಿ ತಿನ್ನಲುಲಾಹೋರ್‌ಗೆ ಹೋಗಿದ್ದರು' ಎಂದೂ ಟೀಕಿಸಿದರು.

ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಅವರಿಗೆ ಪಾಕಿಸ್ತಾನದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ನಿಶಾನ್ ಇ ಪಾಕಿಸ್ತಾನ್' ಗೌರವ ಸಂದಿತ್ತು. ಅವರ ಸಂಪುಟದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರೂ ವಿದೇಶಾಂಗ ಸಚಿವರಾಗಿದ್ದರು ಎಂಬುದನ್ನು ಬಿಜೆಪಿ ಸ್ಮರಿಸಬೇಕು ಎಂದರು. ಪಹಲ್ಗಾಮ್ ದಾಳಿ ಕೃತ್ಯ ನಡೆದ ತಿಂಗಳ ನಂತರವೂ ಏಕೆ ಉಗ್ರರ ಬಂಧನವಾಗಿಲ್ಲ ಎಂದು ಪ್ರಶ್ನಿಸಿದರು.

ಯೋಧರು ಸನ್ನದ್ಧ...

ಜಮ್ಮುವಿನ ಹೊರವಲಯದಲ್ಲಿ ಅಂತರರಾಷ್ಟ್ರೀಯ ಗಡಿಯ ಬಳಿ ಬಿಎಸ್‌ಎಫ್ ಯೋಧರು ಸನ್ನದ್ಧ ಸ್ಥಿತಿಯಲ್ಲಿರುವುದು ಬುಧವಾರ ಮಾಧ್ಯಮ ಪ್ರತಿನಿಧಿಗಳ ಪ್ರವಾಸದ ಸಮಯದಲ್ಲಿ ಕಂಡುಬಂತು – ಪಿಟಿಐ ಚಿತ್ರ

ಪರಮೇಶ್ವರ ಬೆನ್ನುಬಿದ್ದ ಇ.ಡಿ

ಒಂದನೇ ಪುಟದಿಂದ...

ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡುತ್ತಿದ್ದ ಆರೋಪದಡಿ ಹರ್ಷವರ್ಧಿನಿ ರಾವ್ (ರನ್ಯಾ ರಾವ್) ಅವರನ್ನು ರೆವೆನ್ಯೂ ಗುಪ್ತಚರ ನಿರ್ದೇಶನಾಲಯ ಹಾಗೂ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಮಾರ್ಚ್ 3ರಂದು ಬಂಧಿಸಿದ್ದರು. ಪ್ರಕರಣದಲ್ಲಿ ತರುಣ್ ಕೊಂಡೂರು ಮತ್ತು ಸಾಹಿಲ್ ಜೈನ್ ಎಂಬವರನ್ನೂ ನಂತರ ಬಂಧಿಸಲಾಗಿತ್ತು.

2019ರಲ್ಲಿ ಐ.ಟಿ ಶೋಧ

ಸಿದ್ಧಾರ್ಥ ಶಿಕ್ಷಣ ಸಂಸ್ಥೆ ಸೊಸೈಟಿ ಅಧೀನದ ಸಂಸ್ಥೆಗಳ ಮೇಲೆ 2019ರ ಅಕ್ಟೋಬರ್ 10ರಂದು ಆದಾಯ ತೆರಿಗೆ ಅಧಿಕಾರಿಗಳು ಶೋಧ ನಡೆಸಿದ್ದರು. ಆಗ ದೊಡ್ಡ ಮೊತ್ತದ ನಗದು ವಶಕ್ಕೆ ಪಡೆಯಲಾಗಿತ್ತು. ಈ ಸಂಬಂಧವೂ ಇ.ಡಿ ತನಿಖೆ ಆರಂಭಿಸಿತ್ತು.

ಸೋನಿಯಾ, ರಾಹುಲ್ ವಿರುದ್ಧ ಆರೋಪ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರರು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ದೆಹಲಿ ನ್ಯಾಯಾಲಯಕ್ಕೆ ತಿಳಿಸಿದೆ.

ನ್ಯಾಷನಲ್ ಹೆರಾಲ್ಡ್

ಸೋನಿಯಾ ಗಾಂಧಿ, ರಾಹುಲ್ ಗಾಂಧಿ

ವಿಶೇಷ ನ್ಯಾಯಾಧೀಶ ವಿಶಾಲ್ ಗೋಗನೆ ಅವರ ಎದುರು ಇ.ಡಿ ಈ ಕುರಿತ ವರದಿ ಸಲ್ಲಿಸಿದೆ. ಇದೇ ಸಂದರ್ಭದಲ್ಲಿ ಪ್ರಕರಣದ ದೋಷಾರೋಪ ಪಟ್ಟಿಯ ಪ್ರತಿಯನ್ನು ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಅವರಿಗೂ ನೀಡುವಂತೆ ಇ.ಡಿಗೆ ನ್ಯಾಯಾಧೀಶರು ಸೂಚಿಸಿದರು.

ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು 2014ರ ಜೂನ್ 26ರಂದು ದಾಖಲಿಸಿದ ಖಾಸಗಿ ದೂರನ್ನು ಪಟಿಯಾಲಾ ಹೌಸ್ ನ್ಯಾಯಾಲಯದ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರು ಪರಿಗಣನೆಗೆ ತೆಗೆದುಕೊಂಡ ನಂತರ, ಇ.ಡಿ ತನಿಖೆಯು 2021ರಲ್ಲಿ ಶುರುವಾಯಿತು.

ಸೋನಿಯಾ ಗಾಂಧಿಯಿಂದ ಹುದ್ದೆ ದುರುಪಯೋಗ: ಇ.ಡಿ

ನವದೆಹಲಿ (ಪಿಟಿಐ): ಸೋನಿಯಾ ಗಾಂಧಿ ಅವರು ಎಐಸಿಸಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ವೈಯಕ್ತಿಕ ಲಾಭಕ್ಕಾಗಿ ತಮ್ಮ ಹುದ್ದೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ರಾಹುಲ್ ಗಾಂಧಿ ಅವರು ಯಂಗ್ ಇಂಡಿಯನ್ (ವೈಐ) ಕಂಪೆನಿ ಮೂಲಕ ಸಾರ್ವಜನಿಕ ಹಣವನ್ನು ತಮಗಾಗಿ ಬಳಕೆ ಮಾಡಿಕೊಂಡಿದ್ದಾರೆ ಎಂದು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಇ.ಡಿ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಆರೋಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಯಂಗ್ ಇಂಡಿಯಾ ಮತ್ತು ಅಸೋಸಿಯೇಟೆಡ್ ಜರ್ನಲ್ ಲಿಮಿಟೆಡ್‌ನಲ್ಲಿ (ಎಜೆಎಲ್) ನಡೆದಿದೆ ಎನ್ನಲಾದ ಚಟುವಟಿಕೆ ಬಗ್ಗೆ ಅರಿವಿಲ್ಲ' ಎಂದು ಇ.ಡಿ ವಿಚಾರಣೆ ಸಂದರ್ಭದಲ್ಲಿ ರಾಹುಲ್ ಮತ್ತು ಸೋನಿಯಾ ಗಾಂಧಿ ಹೇಳಿಕೆ ನೀಡಿದ್ದಾರೆ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ ಎಂದು ಹೇಳಿವೆ.

ಈ ಕಂಪನಿಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ಮತ್ತು ಆರ್ಥಿಕ ವ್ಯವಹಾರಗಳನ್ನು ಕಾಂಗ್ರೆಸ್ ನಾಯಕ ದಿವಂಗತ ಮೋತಿಲಾಲ್ ವೋರಾ ಅವರು ನೋಡಿಕೊಳ್ಳುತ್ತಿದ್ದರು ಎಂದು ತನಿಖಾ ಸಂಸ್ಥೆಗೆ ಹೇಳಿದ್ದಾರೆ ಎಂದು ತಿಳಿಸಿವೆ.

ಏಪ್ರಿಲ್ 9ರಂದು ಚಾರ್ಜ್‌ಶೀಟ್ ಸಲ್ಲಿಸಲಾಗಿದೆ.

'ರಾಜ್ಯಗಳ ಧ್ವನಿ ಅಡಗಿಸಲು ರಾಜ್ಯಪಾಲರ ದುರ್ಬಳಕೆ'

ನವದೆಹಲಿ (ಪಿಟಿಐ): 'ಚುನಾಯಿತ ರಾಜ್ಯ ಸರ್ಕಾರಗಳ ಧ್ವನಿ ಅಡಗಿಸಲು ಕೇಂದ್ರ ಸರ್ಕಾರವು ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬುಧವಾರ ಆರೋಪಿಸಿದ್ದಾರೆ.

'ಕೇಂದ್ರದ ಈ ನಿಲುವು, ಒಕ್ಕೂಟ ವ್ಯವಸ್ಥೆಯ ಮೇಲೆ ಅಪಾಯಕಾರಿ ಆಕ್ರಮಣವಾಗಿದೆ' ಎಂದಿದ್ದಾರೆ.

'ದೇಶದ ಪ್ರತಿಯೊಂದು ರಾಜ್ಯವು ತನ್ನದೇ ಆದ ಧ್ವನಿಯನ್ನು ಹೊಂದಿರುವುದರಿಂದ, ಕೇಂದ್ರದ ಈ ನಿಲುವನ್ನು ಎಲ್ಲ ರಾಜ್ಯಗಳು ವಿರೋಧಿಸಬೇಕು' ಎಂದು 'ಎಕ್ಸ್'ನಲ್ಲಿ ಉಲ್ಲೇಖಿಸಿದ್ದಾರೆ.

'ಭಾರತದ ಶಕ್ತಿ ಅದರ ವೈವಿಧ್ಯದಲ್ಲಿದೆ. ಒಕ್ಕೂಟ ವ್ಯವಸ್ಥೆಯಲ್ಲಿದೆ. ಪ್ರತಿಯೊಂದು ರಾಜ್ಯವೂ ತನ್ನದೇ ಆದ ಧ್ವನಿಯನ್ನು ಹೊಂದಿದ್ದು, ಇದನ್ನು ಹತ್ತಿಕ್ಕಲು ಮತ್ತು ಚುನಾಯಿತ ರಾಜ್ಯ ಸರ್ಕಾರಕ್ಕೆ ಅಡ್ಡಿಯುಂಟು ಮಾಡಲು ಮೋದಿ ನೇತೃತ್ವದ ಕೇಂದ್ರ ಸರ್ಕಾರವು ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದಿದ್ದಾರೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಪೋಸ್ಟ್‌ನ್ನು ರಾಹುಲ್ ಗಾಂಧಿ ಟ್ಯಾಗ್ ಮಾಡಿದ್ದು, ಕೇಂದ್ರದ ನಡೆಯನ್ನು ಖಂಡಿಸಿದ್ದಾರೆ.

ಐಎನ್‌ಎಸ್ ತಾರಿಣಿ ವಿಶ್ವಯಾನ ಅಂತಿಮ ಹಂತಕ್ಕೆ

ನವದೆಹಲಿ (ಪಿಟಿಐ): ಐಎನ್‌ಎಸ್ ತಾರಿಣಿ ಯುದ್ಧನೌಕೆಯ ವಿಶ್ವ ಪರ್ಯಟನೆ ಅಂತಿಮ ಹಂತಕ್ಕೆ ತಲುಪಿದ್ದು, ನೌಕೆಯನ್ನು ಮುನ್ನಡೆಸಿದ ಇಬ್ಬರು ಮಹಿಳಾ ಅಧಿಕಾರಿಗಳೊಂದಿಗೆ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ತ್ರಿಪಾಠಿ ಅವರು ಸಂವಾದ ನಡೆಸಿದರು.

ಲೆಫ್ಟಿನೆಂಟ್ ಕಮಾಂಡರ್‌ಗಳಾದ ದಿಲ್ನಾ ಕೆ. ಮತ್ತು ರೂಪಾ ಎ. ಅವರ ಅನುಪಮ ಕೌಶಲ ಮತ್ತು ತಂಡದ ಉತ್ಸಾಹವನ್ನು ತ್ರಿಪಾಠಿ ಮಂಗಳವಾರ ಶ್ಲಾಘಿಸಿದರು.

ಈ ವಿಶ್ವ ಪರ್ಯಟನೆಗೆ ಕಳೆದ ವರ್ಷ ಅಕ್ಟೋಬರ್ 2ರಂದು ಗೋವಾದಲ್ಲಿ ನೌಕಾಪಡೆಯ ಮುಖ್ಯಸ್ಥರು ಹಸಿರು ನಿಶಾನೆ ತೋರಿದ್ದರು. ಎಂಟು ತಿಂಗಳ ಯಾತ್ರೆಯಲ್ಲಿ ಐಎನ್‌ಎಸ್ ತಾರಿಣಿಯು ಸತತ ಮಳೆ, ಗಾಳಿ ಮತ್ತು ಅಲೆಗಳ ಹೊಡೆತವನ್ನು ಲೆಕ್ಕಿಸದೆ 'ಕೇಪ್ ಆಫ್ ಗುಡ್ ಹೋಪ್' ಅನ್ನು ದಾಟಿದೆ.

'ಕಳೆದ ಎಂಟು ತಿಂಗಳಲ್ಲಿ ನೌಕಾಪಡೆ ಮತ್ತು ದೇಶ ಹೆಮ್ಮೆ ಪಡುವಂತೆ ಮಾಡಿರುವಿರಿ. ಈ ಪ್ರಯಾಣ ಅಭೂತಪೂರ್ವವಾದದ್ದು, ನಿಮ್ಮನ್ನು ಸ್ವಾಗತಿಸಲು ನೌಕಾಪಡೆ ಕಾಯುತ್ತಿದೆ' ಎಂದು ತ್ರಿಪಾಠಿ ಹೇಳಿದರು.

ಸರ್ಕಾರಿ ವಸತಿ ಶಾಲೆ ಶಿಕ್ಷಕಿಯಿಂದ ಶಿಕ್ಷಣಕ್ಕೆ ಪ್ರೋತ್ಸಾಹ

ಬುಡಕಟ್ಟು ಬಾಲಕಿಯ ಭವಿಷ್ಯಕ್ಕೆ ಬೆಳಕು

● ಶಿವಪ್ರಿಯನ್

ಮುಖ್ಯಾಂಶಗಳು
- ವಲಸೆ ಕಾರ್ಮಿಕ ಕುಟುಂಬಕ್ಕೆ ಸೇರಿದ ಬಾಲಕಿ
- 10ನೇ ತರಗತಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣ
- ಬಾಲಕಿಯ ಸಾಧನೆಯಿಂದ ಶಾಲೆಗೆ ಹೆಮ್ಮೆ

ಚೆನ್ನೈ: ಶಿಕ್ಷಕಿಯೊಬ್ಬರು ಕಾಳಜಿ ತೋರಿ ಪ್ರೋತ್ಸಾಹಿಸಿದ ಪರಿಣಾಮ ಬುಡಕಟ್ಟು ಸಮುದಾಯದ ವಿದ್ಯಾರ್ಥಿನಿಯೊಬ್ಬರು ಶೈಕ್ಷಣಿಕವಾಗಿ ಸಾಧನೆ ಮಾಡಿ, ಮುಂದಿನ ಹಂತ ಪ್ರವೇಶಿಸಲು ಪ್ರೇರೇಪಣೆ ನೀಡಿದೆ.

ಆ ಬಾಲಕಿಯ ಹೆಸರು ದುರ್ಗಾ. ತಮಿಳುನಾಡಿನ ತಿರುವಣ್ಣಾಮಲೈ ಜಿಲ್ಲೆಯ ಸರ್ಕಾರಿ ಬುಡಕಟ್ಟು ವಸತಿ ಶಾಲೆಯ ವಿದ್ಯಾರ್ಥಿನಿ. ಶಿಕ್ಷಕಿ ನೀಡಿದ ಪ್ರೋತ್ಸಾಹದ ಕಾರಣ ಈ ಬಾರಿಯ 10ನೇ ತರಗತಿ ಪರೀಕ್ಷೆಯಲ್ಲಿ ಈ ಬುಡಕಟ್ಟು ವಿದ್ಯಾರ್ಥಿನಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿದ್ದಾಳೆ.

ಬಾಲಕಿಯ ಪೋಷಕರು ಪ್ರತಿ ವರ್ಷ ನಾಲ್ಕು ತಿಂಗಳು ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ಕಾಫಿ ತೋಟಗಳಲ್ಲಿ ಕೂಲಿ ಕೆಲಸಕ್ಕಾಗಿ ವಲಸೆ ಹೋಗುತ್ತಾರೆ. ಈ ಸಂದರ್ಭದಲ್ಲಿ ಬಾಲಕಿಯ ಶಿಕ್ಷಣ ಮೊಟಕಾಗುತ್ತಿತ್ತು. ಹೀಗೆ 1ರಿಂದ 8ನೇ ತರಗತಿವರೆಗೆ ಪ್ರತಿ ವರ್ಷ ನಾಲ್ಕು ತಿಂಗಳು ಬಾಲಕಿ ಶಿಕ್ಷಣದಿಂದ ವಂಚಿತಳಾಗಿದ್ದಳು.



ಬಾಲಕಿ ಪದೇ ಪದೇ ಶಾಲೆಗೆ ಗೈರಾಗುತ್ತಿದ್ದುದನ್ನು ಗಮನಿಸಿದ ಗಣಿತ ಶಿಕ್ಷಕಿ ಮಹಾಲಕ್ಷ್ಮಿ, ಬಾಲಕಿಯ ಪೋಷಕರ ಜತೆ ಮಾತುಕತೆ ನಡೆಸಿದರು. ವಿದ್ಯಾರ್ಥಿನಿಲಯದಲ್ಲಿ ಇದ್ದುಕೊಂಡು 9ನೇ ತರಗತಿ ಓದಲು ದುರ್ಗಾಳಿಗೆ ಅನುವು ಮಾಡಿಕೊಡುವಂತೆ ಅವರು ಪೋಷಕರನ್ನು ಒಪ್ಪಿಸಿದರು. ಇದರಿಂದಾಗಿ, ಪೋಷಕರು ಕೂಲಿಗಾಗಿ ಹೊರ ಊರುಗಳಿಗೆ ತೆರಳಿದರೂ ಬಾಲಕಿಯ ವಿದ್ಯಾಭ್ಯಾಸಕ್ಕೆ ಧಕ್ಕೆಯಾಗಲಿಲ್ಲ. ಬಾಲಕಿಯೂ ವಿದ್ಯಾಭ್ಯಾಸದತ್ತ ಹೆಚ್ಚಿನ ಆಸಕ್ತಿ ತೋರಿ, 10ನೇ ತರಗತಿಯಲ್ಲಿ ಶೇ 60ರಷ್ಟು ಅಂಕಗಳೊಂದಿಗೆ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದಾಳೆ.

'500 ಅಂಕಗಳಿಗೆ 301 ಅಂಕಗಳನ್ನು ಪಡೆದು ದುರ್ಗಾ ತೇರ್ಗಡೆ ಆಗಿದ್ದಾಳೆ. ಅಲ್ಲದೆ ಶಿಕ್ಷಣ ಮುಂದುವರಿಸಲೂ ಬಯಸಿದ್ದಾಳೆ. ಇದು ನನಗೆ ಹೆಚ್ಚು ಖುಷಿ ನೀಡಿದೆ' ಎಂದು ಶಿಕ್ಷಕಿ ಮಹಾಲಕ್ಷ್ಮಿ ಸಂತಸ ವ್ಯಕ್ತಪಡಿಸಿದರು.

'ವಿದ್ಯಾರ್ಥಿನಿಯ ಸಾಮರ್ಥ್ಯ ಎಂಥದ್ದು ಎಂಬುದು ಶಿಕ್ಷಕಿಯಾಗಿ ನನಗೆ ತಿಳಿದಿತ್ತು. ಅವಳು ಗಣಿತ ವಿಷಯದಲ್ಲಿ ಚೆನ್ನಾಗಿದ್ದಳು, ನಾನು ಪ್ರೋತ್ಸಾಹಿಸಿದೆ. ಈಗ ಅವಳ ಸಾಧನೆಯಿಂದ ನನಗೆ ಸಂತಸವಾಗಿದೆ. ಅವಳು ಶಾಲೆಗೂ ಹೆಮ್ಮೆ ತಂದಿದ್ದಾಳೆ' ಎಂದು ಅವರು ಪ್ರತಿಕ್ರಿಯಿಸಿದರು.

ನಕ್ಸಲ್ ನಾಯಕ ಬಸವರಾಜು ಹತ್ಯೆ

ಒಂದನೇ ಪುಟದಿಂದ...

ಜಿಲ್ಲಾ ಮೀಸಲು ಪಡೆಯ (ಡಿಆರ್‌ಜಿ) ಪೊಲೀಸರೊಬ್ಬರೂ ಎನ್‌ಕೌಂಟರ್‌ನಲ್ಲಿ ಮೃತಪಟ್ಟಿದ್ದು, ಹಲವು ಪೊಲೀಸರಿಗೆ ಗಾಯಗಳಾಗಿವೆ.

'ಈ ಪ್ರದೇಶಗಳಲ್ಲಿ ಸಿಪಿಎಂ ಪಕ್ಷದ ಪಾಲಿಟ್ ಬ್ಯುರೊ ಮತ್ತು ಕೇಂದ್ರ ಸಮಿತಿಯ ಸದಸ್ಯರ ಜೊತೆಗೆ 'ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಸಂಘಟನೆ'ಯ ಮಾಡ್ ವಿಭಾಗದ ನಕ್ಸರು ಇರುವ ಬಗ್ಗೆ ಗುಪ್ತಚರವು ನೀಡಿದ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ಆರಂಭಿಸಲಾಗಿತ್ತು' ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದರು.

'27 ನಕ್ಸಲರನ್ನು ಹತ್ಯೆ ಮಾಡಲಾಗಿದ್ದು, ಅವರ ಬಳಿ ಇದ್ದ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದೂ ವಿವರಿಸಿದರು.

ಬಸವರಾಜು ಯಾರು?

ಒಂದನೇ ಪುಟದಿಂದ...

ಈ ಬಳಿಕ ಸಿಪಿಐ (ಮಾವೋವಾದಿ) ಪಕ್ಷದ ಕೇಂದ್ರ ಸೇನಾ ಸಮಿತಿಯ ಮುಖ್ಯಸ್ಥರಾದರು. ಬಳಿಕ ಪಾಲಿಟ್ ಬ್ಯೂರೊ ಸದಸ್ಯರಾದರು.

'ಕಾಲೇಜು ದಿನಗಳಲ್ಲಿಯೇ ಅವರು ತೀವ್ರ ಎಡಪಂಥೀಯ ರಾಜಕಾರಣಕ್ಕೆ ತೆರೆದುಕೊಂಡಿದ್ದರು. ಶ್ರೀಕಾಕುಳದಲ್ಲಿ ಒಮ್ಮೆ ಎಬಿವಿಪಿ ಅವರೊಂದಿಗೆ ನಡೆದ ಜಗಳ ಮಾಡಿಕೊಂಡಿದ್ದರು. ಈ ಪ್ರಕರಣದಲ್ಲಿ ಅವರನ್ನು 1980ರಲ್ಲಿ ಪೊಲೀಸರು ಬಂಧಿಸಿದರು. 1970ರಲ್ಲಿಯೇ ಅವರು ತಮ್ಮ ಹುಟ್ಟೂರನ್ನು ತೊರೆದು ನಕ್ಸಲ್ ಚಳವಳಿಯನ್ನು ಸೇರಿಕೊಂಡಿದ್ದರು. ಛತ್ತೀಸಗಢದ ಬಸ್ತಾರ್‌ನಲ್ಲಿ 1987ರಲ್ಲಿ ಎಲ್‌ಟಿಟಿಇ ಹೋರಾಟಗಾರರಿಂದ ಗೆರಿಲ್ಲಾ ಯುದ್ಧ ತಂತ್ರ ಮತ್ತು ಸ್ಫೋಟಕಗಳ ಕುರಿತು ತರಬೇತಿ ಪಡೆದುಕೊಂಡಿದ್ದರು' ಎಂದು ಗುಪ್ತಚರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿದವು.

ಕೇಶವ್ ರಾವ್ ಸೇರಿದಂತೆ 27 ನಕ್ಸಲರ ಹತ್ಯೆಯನ್ನು ಖಂಡಿಸುತ್ತೇವೆ. ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು. ಕಾರ್ಯಾಚರಣೆಯಲ್ಲಿ ಛತ್ತೀಸಗಢದ ಆದಿವಾಸಿಗಳನ್ನೂ ಹತ್ಯೆ ಮಾಡಲಾಗಿದೆ. ನಕ್ಸಲರ ಕುರಿತು ಗುಪ್ತಚರ ಮಾಹಿತಿ ಸಿಕ್ಕಿದ್ದರೆ ಅವರನ್ನು ಯಾಕೆ ಬಂಧಿಸಿಲ್ಲ?

ಡಿ. ರಾಜ, ಸಿಪಿಐ ಪ್ರಧಾನ ಕಾರ್ಯದರ್ಶಿ

ನಕ್ಸಲರ ವಿರುದ್ಧದ ಮೂರು ದಶಕಗಳ ಹೋರಾಟದಲ್ಲಿ ಇದೇ ಮೊದಲು ಪ್ರಧಾನ ಕಾರ್ಯದರ್ಶಿಯಂಥ ಹುದ್ದೆಯಲ್ಲಿದ್ದವರನ್ನು ಭದ್ರತಾ ಪಡೆ ಹತ್ಯೆ ಮಾಡಿದೆ. 2026ರ ಮಾರ್ಚ್ 31ರ ಒಳಗೆ ನಕ್ಸಲರನ್ನು ನಿರ್ನಾಮ ಮಾಡುವುದಕ್ಕೆ ಮೋದಿ ಸರ್ಕಾರ ಬದ್ಧವಾಗಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಕೇಂದ್ರೀಯ ವಿದ್ಯಾಲಯ ಬಿ ಇ ಎಂ ಎಲ್ ನಗರ
ಬಿ.ಇ.ಎಂ.ಎಲ್. ನಗರ, ಕೆಜಿಎಫ್, 563115, ಜಿಲ್ಲೆ. ಕೋಲಾರ, ಕರ್ನಾಟಕ

ನೇರ ಸಂದರ್ಶನ

ಕೇಂದ್ರೀಯ ವಿದ್ಯಾಲಯ ಬಿ. ಇ.ಎಂ.ಎಲ್. ನಗರ ಇಲ್ಲಿಗೆ 2025–26ನೇ ಶೈಕ್ಷಣಿಕ ವರ್ಷಕ್ಕೆ ಗುತ್ತಿಗೆ ಮತ್ತು ಅರೆಕಾಲಿಕ ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಸಂದರ್ಶನವನ್ನು ಈ ಕೆಳಗಿನ ವೇಳಾಪಟ್ಟಿಯ ಪ್ರಕಾರ ನಡೆಸಲಾಗುವುದು.

ಹುದ್ದೆ	ದಿನಾಂಕ ಮತ್ತು ಸಮಯ
1. ತರಬೇತಿ ಪಡೆದ ಪದವೀಧರ ಶಿಕ್ಷಕರು–ಸಂಸ್ಕೃತ	23.05.2025 ರಂದು ಬೆಳಿಗ್ಗೆ 8.00 ರಿಂದ ಮಧ್ಯಾಹ್ನ2:00ರವರೆಗೆ

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು https://bemlnagarkolar.kvs.ac.in ಮತ್ತು ವಿದ್ಯಾಲಯ ಸೂಚನಾ ಫಲಕಕ್ಕೆ ಲಾಗ್ ಇನ್ ಮಾಡಿ

ಸಹಿ/– ಪ್ರಿನ್ಸಿಪಾಲ್

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/12/2025–26 ದಿನಾಂಕ: 21.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ನಗರಸಭಾ ನಿಧಿ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

INDENT NO	DMA/2025-26/RD/WORK_INDENT39493

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: **29.05.2025 ಸಂಜೆ 5.30 ಗಂಟೆವರೆಗೆ.** ಹಾಗೂ ಸಲ್ಲಿಸಿರುವ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **31.05.2025 ಬೆಳಿಗ್ಗೆ 11.00 ಗಂಟೆಗೆ.** ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದಾದರು ತಿದ್ದುಪಡಿಗಳಿದ್ದಲ್ಲಿ ಆನ್‌ಲೈನ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರ/789/ಸ್ಕ್ಯಾನ್/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ (ಯೋಜನೆ–ಪೂರ್ವ), ನೇತಾಜಿ ಸುಭಾಷ್ ಚಂದ್ರ ಬೋಸ್ ಬಿಲ್ಡಿಂಗ್, 21ನೇ ಮಹಡಿ (ಪಿಯುಬಿ),ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–560001.

ಸಂಖ್ಯೆ: ಕಾಪಾಅ/ಯೋ–ಪೂ/18/2025–26 ದಿನಾಂಕ: 20.05.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
ದ್ವಿಲಕೋಟೆ ಪದ್ಧತಿ (ಜಿಒಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ–ಪೂರ್ವ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯೂಡಿ/ ಕೆಪಿಡಬ್ಲ್ಯೂಡಿ/ ರೈಲ್ವೇಸ್/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿಯ ಹೆಸರು
1	2024–25ನೇ ಸಾಲಿಗೆ ಶಾಂತಿನಗರ ಉಪ–ವಿಭಾಗದ ಅಶೋಕನಗರ ವಾರ್ಡ್ ನಂ. 167ರಲ್ಲಿ ಪೂರ್ವ ವಲಯ ನಿಯಂತ್ರಣಾ ಕೊಠಡಿಗೆ ತುರ್ತು ಪರಿಹಾರ ಕಾರ್ಯಪಡೆ ತಂಡವನ್ನು ಒದಗಿಸುವುದು. (3ನೇ ಕರೆ).
	ಕಾಮಗಾರಿಯ ಅಂದಾಜು ಮೊತ್ತ: ರೂ. 99.97 ಲಕ್ಷಗಳು. ಇಎಂಡಿ: ರೂ. 1,99,940/–

ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ: **12 ತಿಂಗಳು.**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.inನಿಂದ ದಿನಾಂಕ: **22.05.2025ರ ಸಂಜೆ 4.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **30.05.2025 ರ ಸಂಜೆ 4.00 ಗಂಟೆಯವರೆಗೆ.** (3) ಪೂರ್ವ ಬಿಡ್ ಸಭೆಯ ದಿನಾಂಕ: **26.05.2025ರಂದು ಮಧ್ಯಾಹ್ನ 3.30 ಗಂಟೆಗೆ – ಮೇಲಿನ ಕಛೇರಿಯಲ್ಲಿ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **31.05.2025ರಂದು ಸಂಜೆ 4.30 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ–ಪೂರ್ವ ವಿಭಾಗ, ಬಿಬಿಎಂಪಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು–560001, ಕರ್ನಾಟಕ, ಇಂಡಿಯಾ.
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080–25586321
E-mail: ho@kspcb.gov.in, Website: https://kspcb.karnataka.gov.in

ಸಂಖ್ಯೆ: ಕೆಎಸ್‌ಪಿಸಿಬಿ/20/ಎಸ್‌ಎಸ್/2024–25/249 ದಿನಾಂಕ: 17.05.2025

ಟೆಂಡರ್‌ಗಾಗಿ ಆಹ್ವಾನ (1ನೇ ಕರೆ)

ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಮಂಡಳಿಯ ಕಛೇರಿಗಳಿಗೆ ಭದ್ರತಾ ಸಿಬ್ಬಂದಿ ಸೇವೆಯನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್‌ದಾರರು ಟೆಂಡರ್ ಡಾಕ್ಯುಮೆಂಟ್‌ನ ಅವಶ್ಯಕತೆಯ ವಿಭಾಗ V ರ ಕೋಷ್ಟಕದಲ್ಲಿ ಉಲ್ಲೇಖಿಸಿರುವ ಭದ್ರತಾ ಸಿಬ್ಬಂದಿಗಳಿಗೆ ಸೇವಾ ಶುಲ್ಕವನ್ನು ಶೇಕಡವಾರು ಉಲ್ಲೇಖಿಸಬೇಕು. ಟೆಂಡರ್‌ದಾರರು ಟೆಂಡರ್ ದಾಖಲೆಗಳಲ್ಲಿ ನಿರ್ದಿಷ್ಟಪಡಿಸಿದ ತಾಂತ್ರಿಕ ಹಾಗೂ ಅರ್ಹತಾ ಮಾನದಂಡಗಳನ್ನು ಪೂರೈಸಬೇಕಾಗುತ್ತದೆ ಹಾಗೂ ಇದನ್ನು ಅರ್ಹತೆ ಪಡೆಯಲು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ **ದಿನಾಂಕ 19.05.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ನಿಗಧಿತ ಇ.ಎಂ.ಡಿ ಮೊತ್ತ **ರೂ.5,32,400/–**ಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ ಪಾವತಿಸಬೇಕು.

ಟೆಂಡರ್‌ನ ಪೂರ್ವಭಾವಿ ಸಭೆಯನ್ನು **ದಿನಾಂಕ 09.06.2025 ರ 11.30 ಗಂಟೆಗೆ** ನಿಗಧಿಪಡಿಸಲಾಗಿದೆ ಮತ್ತು **ದಿನಾಂಕ 19.06.2025 ರ 17.00 ಗಂಟೆಯವರೆಗೂ** ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಟೆಂಡರ್ ಬಿಡ್‌ನ್ನು ಪರಾಮರ್ಶಿಸಬಹುದಾಗಿದೆ.

ಸೇವೆಗಳ ಹೆಸರು: ಕ.ರಾ.ಮಾ.ನಿ.ಮಂ. ಕಛೇರಿಗಳಿಗೆ ಭದ್ರತಾ ಸಿಬ್ಬಂದಿ ಸಿಬ್ಬಂದಿಗಳನ್ನು ಒದಗಿಸಲು ಅರ್ಹ ಟೆಂಡರ್‌ದಾರರ ಆಯ್ಕೆ. **ಸೇವೆಗಳ ಅಂದಾಜು ಮೌಲ್ಯ (ಲಕ್ಷಗಳಲ್ಲಿ) :** ರೂ.355 ಲಕ್ಷಗಳು, **ನಿಗಧಿತ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) :** ರೂ.5,32,400/–, **ದಾಖಲೆಯ ಬೆಲೆ (ರೂ.ಗಳಲ್ಲಿ):** ಇ–ಪೋರ್ಟಲ್ ಪ್ರಕಾರ.

ಸಹಿ/–
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ; ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ವಾಸಸಂಇ/ವಾಪ್ರ/774/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ.
ಸಂಖ್ಯೆ:ಸಅಸಂ.ಚನ್ನಗಿರಿ:ಟೆಂಡರ್.ಸಿ.ಆರ್–03/2025–26 ದಿ:19.05.2025.

2025–26 ನೇ ಸಾಲಿಗೆ ಭದ್ರಾವತಿ ವಿಭಾಗ ಕಛೇರಿ ಹಾಗೂ ವಿಭಾಗ ವ್ಯಾಪ್ತಿಯ ವಲಯಗಳಲ್ಲಿ ಈ ಕೆಳಕಂಡ ಅನುಸೂಚಿಯಲ್ಲಿ ಅಗತ್ಯವಿರುವ ವಲಯಗಳಿಗೆ ಗಣಕಯಂತ್ರ ನಿರ್ವಾಹಕರು/ವಾಹನ ಚಾಲಕರು/ ಕಾವಲುಗಾರರು/ರಕ್ಷಣಾಕ್ಯಾಂಪ್ ಕಾವಲುಗಾರರು/ ಕಳ್ಳಬೇಟೆ ತಡೆ ಶಿಬಿರಕ್ಕೆ ಕಾವಲುಗಾರರು ಇತ್ಯಾದಿ ಸೇವೆಯನ್ನು ಒದಗಿಸಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಕರ್ನಾಟಕ ಸಾರ್ವಜನಿಕ ಸರಬರಾಜು ಸಂಗ್ರಹಣೆಗಳಿಗೆ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಕಾಲ್–2 ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:26–05–2025 ರ ಸಂಜೆ 5.30 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ https://Kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪವಿಭಾಗ, ಚನ್ನಗಿರಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/139/05289

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 &Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529 PRINCIPAL :8147796527
CAO:8147796526PA : 8147796539.
e-mail-ids:directorbmcrcballari@gmail.com, website : https://vims.karnataka.gov.inprincipalbmcrcballari@gmail.com
No:BMCRC/SUP/TEND/Furniture/16/2024-25/Call-2/33
Date:17.05.2025

ಇ–ಟೆಂಡರ್ ಅಧಿಸೂಚನೆ

ಬಿಎಂಸಿಆರ್ ಸಿ, ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಪೀಠೋಪಕರಣಗಳನ್ನು ಪೂರೈಸಲು ಕೆ.ಟಿ.ಪಿ.ಪಿ ಅಧಿನಿಯಮ–1999–2000ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://kppp.karnataka.gov.in ಮೂಲಕ ಇ–ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್ದಾರರು ಮೇಲಿನ ಪೋರ್ಟಲ್‌ನಲ್ಲಿ ಟೆಂಡರನ್ನು **ದಿನಾಂಕ: 31.05.2025ಸಂಜೆ 5.00** ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ **ರೂ.960.00** ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ **www.bmcrcballari.karnataka.gov.in.** ನಲ್ಲಿ ಪಡೆಯ ಬಹುದಾಗಿದೆ.

ಸಹಿ/– ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/116/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
(ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2025–26/294
ದಿನಾಂಕ:19.05.2025

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024–25 ನೇ ಸಾಲಿನ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನ ಯೋಜನೆಯಡಿಯಲ್ಲಿ **ಸಾಮಾನ್ಯ ಗುತ್ತಿಗೆದಾರರ 5** ಕಾಮಗಾರಿ (ಇಂಡೆಂಟ ನಂ:RDPR/2025-26/RD/WORK_INDENT14414, 14434, 14415, 14416 & 14899) **ಪರಿಶಿಷ್ಟ ಜಾತಿ ಗುತ್ತಿಗೆದಾರರ 2** ಕಾಮಗಾರಿ (ಇಂಡೆಂಟ ನಂ: RDPR/2025-26/RD/WORK_INDENT14437 & 14436) **ಪ್ರವರ್ಗ–1 ಗುತ್ತಿಗೆದಾರರ 1** ಕಾಮಗಾರಿ (ಇಂಡೆಂಟ್ ನಂ.RDPR/2025-26/RD/WORK_INDENT14880) **ಪ್ರವರ್ಗ–2(ಎ) ಗುತ್ತಿಗೆದಾರರ 2** ಕಾಮಗಾರಿ (ಇಂಡೆಂಟ್ ನಂ. RDPR/2025-26/RD/WORK_INDENT14435 & 14417) ಹೀಗೆ ಒಟ್ಟು 10 ಕಾಮಗಾರಿಗಳಿಗೆ **ರೂ. 10.00 ಲಕ್ಷದವರೆಗೆ** ಕೆ.ಡಬ್ಲೂ–1 ಮತ್ತು 2 ಪ್ರಕಾರ ಈ ಕಚೇರಿಯ ಟೆಂಡರ ಪ್ರಕಟಣೆ **ಸಂಖ್ಯೆ: 294 ದಿನಾಂಕ: 19.05.2025** ರಂತೆ ಕಾಮಗಾರಿಗಳನ್ನು ಇ–ಟೆಂಡರ್‌ನ್ನು ಅಹ್ವಾನಿಸಿದ್ದು. ಕೆ.ಪಿ.ಪಿ. ಪ್ರೋಟಲ್ ಮುಖಾಂತರ ಟೆಂಡರ್‌ನ್ನು ಸಲ್ಲಿಸುವ ಕೊನೆಯ **ದಿನಾಂಕ: 06.06.2025** ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ.

ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾ.ಇಂ. ವಿಭಾಗ, ವಿಜಯಪುರ.

ವಾಸಾಸಂಇ/ವಿಜಯಪುರ/88/ಕೆಎಸ್‌ಎಂಸಿಎ/2025–26

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಜೀವನದಿಂದಲೇ ದೇವರು ಉದ್ಭವಿಸಬೇಕು, ಬೆಳೆಯಬೇಕು. ಎಷ್ಟು ಎಷ್ಟು ನಮ್ಮ ಜೀವನ ಹಿರಿದೋ ಅಷ್ಟು ಅಷ್ಟು ದೇವರೂ ಹಿರಿದು.

-ಶಿವರಾಮ ಕಾರಂತ

ಬಾನು ಮುಷ್ತಾಕ್‌ಗೆ ಬೂಕರ್ ಪ್ರಶಸ್ತಿ ವಿಶ್ವ ವೇದಿಕೆಯಲ್ಲಿ 'ಕನ್ನಡದ ವಿವೇಕ'

'ಹಾರ್ಟ್ ಲ್ಯಾಂಪ್' ಕಥಾಸಂಕಲನಕ್ಕೆ ಬಹು ನಿರೀಕ್ಷಿತ 'ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ-2025' ಸಲ್ಲುವುದರೊಂದಿಗೆ ಕನ್ನಡ ನಾಡು-ನುಡಿಯ ಹಿರಿಮೆಯನ್ನು ಬಾನು ಮುಷ್ತಾಕ್ ವಿಶ್ವಮಟ್ಟದಲ್ಲಿ ಎತ್ತಿಹಿಡಿದಿದ್ದಾರೆ. ಕಥೆಗಾರ್ತಿ ಬಾನು ಮುಷ್ತಾಕ್ ಹಾಗೂ ಅನುವಾದಕಿ ದೀಪಾ ಭಾಸ್ತಿ ಅವರು ಬೂಕರ್ ಪ್ರಶಸ್ತಿಗೆ ಭಾಜನರಾಗಿರುವುದು ಕನ್ನಡಿಗರ ಹೆಮ್ಮೆಗೆ ಸಹಜವಾಗಿಯೇ ಕಾರಣವಾಗಿದೆ. ವಿಶ್ವದ ಪ್ರತಿಷ್ಠಿತ ಸಾಹಿತ್ಯಕ ಪ್ರಶಸ್ತಿಗಳಲ್ಲೊಂದಾದ 'ಬೂಕರ್ ಪುರಸ್ಕಾರ'ವನ್ನು ಪಡೆಯುವುದು ಯಾವುದೇ ಭಾಷೆಯ ಬರಹಗಾರರಿಗೆ ಕೋಡು ಮೂಡಿಸುವಂತಹದ್ದು. ಬಾನು ಮುಷ್ತಾಕ್ ಅವರ ಮೂಲಕ ಬೂಕರ್ ಪ್ರಶಸ್ತಿ ಮೊದಲ ಬಾರಿಗೆ ಕನ್ನಡಕ್ಕೆ ಸಂದಿದೆ. ಸಾಹಿತ್ಯಕ ಸಾಧನೆಯಾಚೆಗೂ ಹಲವು ಕಾರಣಗಳಿಂದಾಗಿ ಈ ಸಾಲಿನ ಬೂಕರ್ ಪ್ರಶಸ್ತಿಗೆ ಮಹತ್ವವಿದೆ. ಓರ್ವ ಲೇಖಕಿ, ಅದರಲ್ಲೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಬರಹಗಾರ್ತಿ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುವುದು ಅಸಾಧಾರಣ ಸಾಧನೆಯೇ ಸರಿ. ಬಾನು ಮುಷ್ತಾಕ್ ಅವರ ಕೃತಿಗೆ ಸಂದಿರುವ ಬೂಕರ್ ಪ್ರಶಸ್ತಿ ಕನ್ನಡದಂಥ ದೇಸಿಭಾಷೆಗಳ ಅನನ್ಯತೆಯನ್ನು ಎತ್ತಿಹಿಡಿಯುವಂತಹದ್ದು. ಕನ್ನಡ ಹಾಗೂ ಕನ್ನಡಿಗರನ್ನು ಅವಮಾನಿಸುವ ಹಿಂದಿ ಯಜಮಾನಿಕೆಯ ಘಟನೆಗಳು ಮತ್ತೆ ಮತ್ತೆ ವರದಿಯಾಗುತ್ತಿರುವ ಸಂದರ್ಭದಲ್ಲಿ, ಹಿಂದಿಯೇತರ ಭಾರತೀಯ ಭಾಷೆಯೊಂದು ಮೊದಲ ಬಾರಿಗೆ ಬೂಕರ್ ಪ್ರಶಸ್ತಿ ಪಡೆಯುತ್ತಿರುವುದು ಕನ್ನಡದ ಸಾಮರ್ಥ್ಯವನ್ನು ಸಂಕೇತಿಸುವಂತಿದೆ. ಹೊಸ ತಲೆಮಾರಿಗೆ ಕನ್ನಡ ನುಡಿ ಹಾಗೂ ಕನ್ನಡ ಸಾಹಿತ್ಯದ ಬಗ್ಗೆ ಒಲವು ಹಾಗೂ ಅಭಿಮಾನವನ್ನು ಮೂಡಿಸಲು ಪ್ರೇರಣೆಯಾಗಿ ಒದಗಿಬರುವ ರೂಪದಲ್ಲೂ ಈ ಪ್ರಶಸ್ತಿಗೆ ಮಹತ್ವವಿದೆ. ಪುರಸ್ಕೃತ ಕೃತಿಯ 'ಹಾರ್ಟ್ ಲ್ಯಾಂಪ್' ಶೀರ್ಷಿಕೆಗೆ ಪ್ರಚಲಿತ ವಿದ್ಯಮಾನಗಳ ಹಿನ್ನೆಲೆಯಲ್ಲಿ ವಿಶೇಷ ಅರ್ಥವಿದೆ. ಸಾಮಾಜಿಕ ವಿಘಟನೆಗಳ ರಾಜಕಾರಣ ಸಮಾಜದ ಎಲ್ಲ ವರ್ಗಗಳನ್ನೂ ಪ್ರಭಾವಿಸುತ್ತಿರುವ ಸಂದರ್ಭದಲ್ಲಿ ಕೃತಿಯ ಶೀರ್ಷಿಕೆ ನಮ್ಮ ಮನಸುಗಳಲ್ಲಿ ಬೆಳಗಬೇಕಾದ 'ಎದೆಯ ಹಣತೆ'ಯ ಅಗತ್ಯವನ್ನು ಮನಗಾಣಿಸುವಂತಿದೆ. ಸಾಹಿತ್ಯದ ಮೂಲಕ ಸಾಧ್ಯವಾಗಬಹುದಾದ ಸೌಹಾರ್ದವನ್ನು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಾನು ಮುಷ್ತಾಕ್ ಅವರು ಆಡಿರುವ ಮಾತುಗಳೂ ಧ್ವನಿಸುತ್ತಿವೆ. ವೈವಿಧ್ಯಕ್ಕಾಗಿ ದುಡಿಯುವ, ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುವ, ಭಿನ್ನಮತಗಳನ್ನು ಸಂಭ್ರಮಿಸುವ ಹಾಗೂ ಪರಸ್ಪರರ ಏಳಿಗೆಗೆ ಹೆಗಲು ನೀಡುವ ಮನಸ್ಸುಗಳನ್ನು ವಿಶ್ವ ಗುರುತಿಸಿರುವ ಸಂಕೇತವಾಗಿ ಬೂಕರ್ ಪ್ರಶಸ್ತಿಯನ್ನು ಸ್ವೀಕರಿಸಿರುವ ಮೂಲಕ ಅಂತರರಾಷ್ಟ್ರೀಯ ವೇದಿಕೆಯಲ್ಲಿ 'ಕನ್ನಡ ವಿವೇಕ ಪರಂಪರೆ'ಯನ್ನು ಬಾನು ಮುಷ್ತಾಕ್ ಪ್ರತಿನಿಧಿಸಿದ್ದಾರೆ.

ಕನ್ನಡ ಕೃತಿಗಳ ಅನುವಾದ ಅನುಸಂಧಾನವು ತನ್ನ ಚೌಕಟ್ಟನ್ನು ವಿಸ್ತರಿಸಿಕೊಳ್ಳಲು ಇದು ಸಕಾಲ

ಬಾನು ಮುಷ್ತಾಕ್ ಅವರ ಕಥಾಸಂಕಲನಕ್ಕೆ ದೊರೆತಿರುವ ಯಶಸ್ಸು ಸಮರ್ಥ ಅನುವಾದಕ್ಕೆ ದೊರೆತಿರುವ ಮನ್ನಣೆಯೂ ಹೌದು. ಬೂಕರ್ ಪ್ರಶಸ್ತಿ ದೊರೆಯುವಲ್ಲಿ ಬಾನು ಮುಷ್ತಾಕ್ ಅವರ ಕಥೆಗಳ ಅನನ್ಯತೆಯೊಂದಿಗೆ, ದೀಪಾ ಭಾಸ್ತಿ ಅವರ ಸಮರ್ಥ ಅನುವಾದವೂ ಕಾರಣವಾಗಿದೆ. ಇಂಥ ಅನುವಾದಗಳ ಅದೃಷ್ಟ ಎಲ್ಲ ಕೃತಿಗಳಿಗೂ ದೊರೆಯುವುದಿಲ್ಲ. ಜಾಗತಿಕ ಸಾಹಿತ್ಯದ ಕೃತಿಗಳಿಗೆ ಹೆಗಲೆಣೆಯಾದ ಹಲವು ಕೃತಿಗಳು ಕನ್ನಡದಲ್ಲಿದ್ದರೂ ಅನುವಾದದ ಅವಕಾಶ ಲಭ್ಯವಾಗದೆ ಅವುಗಳು ವಿಶ್ವಕ್ಕೆ ಪರಿಚಿತಗೊಂಡಿಲ್ಲ. ಹಲವು ಭಾಷೆಗಳ ಸಾಹಿತ್ಯವನ್ನು ಅನುವಾದದ ಮೂಲಕ ಕನ್ನಡ ಮುಕ್ತವಾಗಿ ಸ್ವೀಕರಿಸುತ್ತಿದೆ. ಆದರೆ, ಕನ್ನಡದ ಕೃತಿಗಳು ಭಾರತೀಯ ಭಾಷೆಗಳಿಗೆ ಮತ್ತು ಇಂಗ್ಲಿಷ್‌ಗೆ ಅನುವಾದಗೊಳ್ಳುತ್ತಿರುವುದು ವಿರಳ. ಕನ್ನಡದ ಮಟ್ಟಿಗೆ ಬಹುತೇಕ ಏಕಮುಖಿಯಾಗಿರುವ ಅನುವಾದದ ಅನುಸಂಧಾನ ತನ್ನ ಚೌಕಟ್ಟನ್ನು ವಿಸ್ತರಿಸಿಕೊಳ್ಳಲು ಇದು ಸಕಾಲ. ಕಳೆದೊಂದು ದಶಕದಲ್ಲಿ ಕನ್ನಡದ ಅಭಿಜಾತ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸುವ ಕೆಲಸ ಬೇರೆ ಬೇರೆ ಸಂಸ್ಥೆಗಳಿಂದ ನಡೆದಿದೆ. ಅದರ ಜೊತೆಗೆ ಆಧುನಿಕ ಹಾಗೂ ಸಮಕಾಲೀನ ಕನ್ನಡ ಸಾಹಿತ್ಯದ ಅತ್ಯುತ್ತಮ ಕೃತಿಗಳನ್ನು ಭಾರತೀಯ ಭಾಷೆಗಳಿಗೆ, ವಿಶೇಷವಾಗಿ ಇಂಗ್ಲಿಷ್‌ಗೆ ಅನುವಾದಿಸುವ ಕೆಲಸ ವ್ಯಾಪಕವಾಗಿ ನಡೆಯಬೇಕಾಗಿದೆ. ಈ ಅನುವಾದ ಯೋಜನೆಗಳಿಗೆ ಸರ್ಕಾರವೂ ಕೈಜೋಡಿಸಬೇಕಾಗಿದೆ. ಮೂವತ್ತು- ನಲವತ್ತು ಕೋಟಿ ರೂಪಾಯಿ ವೆಚ್ಚದಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವುದಕ್ಕಿಂದಲೂ ಹೆಚ್ಚಿನ ಉಪಯೋಗವು ಸಾಹಿತ್ಯ ಕೃತಿಗಳನ್ನು ಇತರ ಭಾಷೆಗಳಿಗೆ ಮುಟ್ಟಿಸುವುದರಲ್ಲಿದೆ; ಸಮರ್ಥ ಅನುವಾದಗಳಿಂದ ಕನ್ನಡದ ಕಂಪು ನಾಡಿನ ಎಲ್ಲೆಗಳನ್ನು ಮೀರಿ ಪಸರಿಸಲಿಕ್ಕೆ ಸಾಧ್ಯವಿದೆ. ಅನುವಾದ ಚಟುವಟಿಕೆಗಳಿಗೆ ಮೀಸಲಾದ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕರ್ನಾಟಕದಲ್ಲಿದೆ. ಈ ಪ್ರಾಧಿಕಾರ, ಕನ್ನಡದ ಲೇಖಕರಿಗೆ ಕರ್ನಾಟಕದಾಚೆಗೂ ಓದುಗರು ಮತ್ತು ಗೌರವವನ್ನು ದೊರಕಿಸಿಕೊಡುವ ದಿಸೆಯಲ್ಲಿ ಪ್ರಯತ್ನಗಳನ್ನು ನಡೆಸುವ ಬಗ್ಗೆ ಯೋಚಿಸಬಹುದು. ಬೂಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕನ್ನಡ ನುಡಿಗಿರುವ ಹಾಲು-ಜೇನಿನ ಸವಿಯನ್ನು ಬಣ್ಣಿಸಿರುವ ಅನುವಾದಕಿ ದೀಪಾ ಭಾಸ್ತಿ, 'ಹಾರ್ಟ್ ಲ್ಯಾಂಪ್' ಕೃತಿಗೆ ದೊರೆತಿರುವ ಪ್ರಶಸ್ತಿ ಕನ್ನಡದ ಮತ್ತಷ್ಟು ಕೃತಿಗಳ ಸೀಮೋಲ್ಲಂಘನಕ್ಕೆ ಪ್ರೇರಣೆಯಾಗಲಿ ಎಂದು ಆಶಿಸಿದ್ದಾರೆ. ಆ ಬಗ್ಗೆ ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ನಡೆಸುವ ದಿಸೆಯಲ್ಲಿ ಸಾಹಿತ್ಯ ಕ್ಷೇತ್ರದೊಂದಿಗೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಬೇಕಾಗಿದೆ.

ದಿನದ ಟ್ವೀಟ್

ಭಾಷೆ, ಕಲಿಕೆ

ನನ್ನ ತಂದೆ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಸಹಾಯಕ ವ್ಯವಸ್ಥಾಪಕರಾಗಿದ್ದರು. ಸೊಲ್ಲಾಪುರದಲ್ಲಿ ಇದ್ದಾಗ ತುಸು ಮರಾಠಿ ಕಲಿತಿದ್ದರು, ಕುಡ್ಲದಲ್ಲಿ ಇದ್ದಾಗ ತುಳು ಮಾತನಾಡುತ್ತಿದ್ದರು, ಬಂಗಾಳಕ್ಕೆ ವರ್ಗ ಮಾಡುವುದಾಗಿ ಹೇಳಿದಾಗ ಬಂಗಾಳಿಯನ್ನು ಒಂದಿಷ್ಟು ಕಲಿತಿದ್ದರು...

ಕಿರಣ್ ಎಂ. ಭಟ್

ಕಿಡಿನುಡಿ

ಬೆಂಗಳೂರಿನಲ್ಲಿ ಎಲ್ಲೆಲ್ಲಿ ಬಿಜೆಪಿ ಶಾಸಕರಿದ್ದಾರೋ ಆ ಪ್ರದೇಶಗಳಲ್ಲಿ ಮಾತ್ರ ಮಳೆಯಿಂದ ನೀರು ನಿಂತು ಸಮಸ್ಯೆಯಾಗಿದೆ. ಅವರು ಯಾವುದೇ ಕೆಲಸ ಮಾಡಿಲ್ಲ ಎಂಬುದಕ್ಕೆ ಇದು ಸಾಕ್ಷಿ. ಕಾಂಗ್ರೆಸ್ ಶಾಸಕರು ಕಾಮಗಾರಿಗಳನ್ನು ಬೇಗ ಮುಗಿಸಿ ತಮ್ಮ ಕ್ಷೇತ್ರಗಳಲ್ಲಿನ ಸಮಸ್ಯೆ ಬಗೆಹರಿಸಿದ್ದಾರೆ.

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಸೋಮವಾರ, 22-5-2000

● **ತ್ರಿಪುರಾ ಜನಾಂಗೀಯ ಘರ್ಷಣೆ: 45 ಸಾವು**

ಅಗರ್ತಲ, ಮೇ 21 (ಪಿಟಿಐ): ನಿಷೇಧಿತ ತ್ರಿಪುರಾ ರಾಷ್ಟ್ರೀಯ ವಿಮೋಚನ ರಂಗ (ಎನ್‌ಎಲ್‌ಎಫ್‌ಟಿ) ಇಂದು ಇನ್ನೂ 7 ಮಂದಿಯನ್ನು ಗುಂಡಿಟ್ಟು ಸಾಯಿಸಿದ್ದು ಪಶ್ಚಿಮ ತ್ರಿಪುರಾ ಜಿಲ್ಲೆಯಲ್ಲಿ ನಿನ್ನೆಯಿಂದ ನಡೆಯುತ್ತಿರುವ ಜನಾಂಗೀಯ ಹಿಂಸಾಚಾರಕ್ಕೆ ಸತ್ತವರ ಸಂಖ್ಯೆ 45ಕ್ಕೆ ಏರಿದೆ.

ಕಲ್ಯಾಣಪುರ ಪೊಲೀಸ್ ಠಾಣೆ ವ್ಯಾಪ್ತಿಯ ರತಿಯಾದಲ್ಲಿ ಎನ್‌ಎಲ್‌ಎಫ್‌ಟಿ ಉಗ್ರಗಾಮಿಗಳು 7 ಮಂದಿಯನ್ನು ಗುಂಡಿಟ್ಟು ಸಾಯಿಸಿದರು. ಇದೇ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಿನ್ನೆ 25 ಮಂದಿಯನ್ನು ಉಗ್ರರು ಹತ್ಯೆ ಮಾಡಿದ್ದರು. ಶಾಲೆಯೊಂದರಲ್ಲಿ ರಕ್ಷಣೆ ಪಡೆದಿದ್ದವರ ಮೇಲೆ ಗುಂಡು ಹಾರಿಸಿ ಹತ್ಯೆ ಮಾಡಲಾಯಿತು.

● **'ಪಂಚಾಯಿತಿ ಚುನಾವಣೆ ಗೆಲುವು ಉಸ್ತುವಾರಿ ಸಚಿವರ ಜವಾಬ್ದಾರಿ'**

ಬೆಂಗಳೂರು, ಮೇ 21: ಮುಂಬರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಗೆಲುವು ತಂದುಕೊಡುವುದು ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರ ಜವಾಬ್ದಾರಿ ಎಂದು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮತ್ತು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಒಂದರ್ಥದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣಾ ಪ್ರಚಾರವನ್ನು ಉದ್ಘಾಟಿಸಿದಂತೆ ಮಾತನಾಡಿದರು. ಚುನಾವಣೆಯಲ್ಲಿ ಏನಾದರೂ ಹೆಚ್ಚು-ಕಡಿಮೆಯಾದರೆ ತಾವು ಹೊಣೆಯಲ್ಲ ಎಂದೂ ಹೇಳಿಬಿಟ್ಟರು.

50 ವರ್ಷಗಳ ಹಿಂದೆ

ಗುರುವಾರ, 22-5-1975

● **ವಾಣೀವಿಲಾಸ ಸಾಗರಕ್ಕೆ ಸೋಮವಾಹಿನಿ ನೀರು: ಯೋಜನೆಗೆ ಒಪ್ಪಿಗೆ**

ಬೆಂಗಳೂರು, ಮೇ 21: ಏಷ್ಯದಲ್ಲೇ ಪ್ರಥಮ ಅಣೆಕಟ್ಟೆ, ತನ್ನ 73 ವರ್ಷಗಳ ಅಸ್ತಿತ್ವದಲ್ಲಿ ತುಂಬಿದ್ದೇ ಒಂದು ಬಾರಿ, ಅದೂ ಅರವತ್ತು ವರ್ಷಗಳ ಹಿಂದೆ. ನಿರಂತರ ಕೊರತೆಯ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ವಾಣೀವಿಲಾಸ ಸಾಗರಕ್ಕೆ ನೀರು ತುಂಬಿಸಲು ಈಗ ಪ್ರಯತ್ನ.

ಭಾರಿ ನೀರಾವರಿ ಯೋಜನೆಗಳ ನಿಯಂತ್ರಣ ಮಂಡಳಿ ಇಂದು ಕೈಗೊಂಡ ನಿರ್ಧಾರ ಕಾರ್ಯಗತವಾದಾಗ ವರ್ಷದಲ್ಲಿ ಸಾಕಷ್ಟು ಕಾಲ ಒಣಗಿರುವ ವಾಣೀವಿಲಾಸ ಸಾಗರದ ಅಚ್ಚುಕಟ್ಟಿನ ಸುಮಾರು ಇಪ್ಪತ್ತೈದು ಸಾವಿರ ಎಕರೆಗೆ ಖಚಿತ ನೀರು ಸರಬರಾಜಾಗುವುದರ ಜೊತೆಗೆ ಮತ್ತೆ ಸುಮಾರು ಎಪ್ಪತ್ತು ಸಾವಿರ ಎಕರೆಗೆ ನೀರು ಸಿಕ್ಕಲಿದೆ.

● **ಗೌರಿಶಂಕರ ಸ್ವಾಮಿ ಸಿದ್ಧಗಂಗಾ ಮಠದ ಉತ್ತರಾಧಿಕಾರಿ**

ಸಿದ್ಧಗಂಗೆ, ಮೇ 21: ನಾಲ್ಕು ದಿಕ್ಕುಗಳಿಂದಲೂ ಒಂದೇ ಸಮನೆ ಆಗಮಿಸುತ್ತಿದ್ದ ಸಹಸ್ರ ಸಹಸ್ರ ಸಂಖ್ಯೆಯ ಭಕ್ತವೃಂದದ ಜಯಘೋಷ ಮುಗಿಲು ಮುಟ್ಟುತ್ತಿದ್ದಂತೆ ಇಂದು ಬ್ರಾಹ್ಮೀ ಮುಹೂರ್ತದಲ್ಲಿ 28 ವರ್ಷ ವಯಸ್ಸಿನ ಕಾಲೇಜು ಲೆಕ್ಚರರ್ ಜಗದೀಶ್ ಅವರು ಶ್ರೀ ಗೌರಿಶಂಕರ ಸ್ವಾಮಿಗಳು ಎಂಬ ನೂತನ ಹೆಸರಿನೊಂದಿಗೆ ವಿಧಿವತ್ತಾಗಿ ಶ್ರೀ ಸಿದ್ಧಗಂಗಾ ಮಠದ ಉತ್ತರಾಧಿಕಾರಿಗಳಾದರು.

ತಾಂತ್ರಿಕ ವಿಷಯಗಳೇ ಮಹತ್ವ ಪಡೆದು, ಶಿಕ್ಷಣದ ತತ್ವಜ್ಞಾನವನ್ನು 'ತಂತ್ರ'ಜ್ಞಾನ ನುಂಗುತ್ತಿದೆ

ಸಮಾನ ಶಾಲಾ ಶಿಕ್ಷಣ ಸಾಕಾರ ಎಂದು?

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಶಿಕ್ಷಣ ಕ್ಷೇತ್ರದ ಸುಧಾರಣೆಗಾಗಿ ನೀತಿ ನಿರೂಪಣೆ ಮಾಡುವ ಪ್ರಯತ್ನಗಳು ನಡೆಯುತ್ತಲೇ ಇವೆ. ಆದರೆ ನಮ್ಮ ಸರ್ಕಾರಗಳು ಸಮಾನ ಶಾಲಾ ಶಿಕ್ಷಣದ ಬಗ್ಗೆ ಗಂಭೀರ ಚಿಂತನೆ ನಡೆಸಿಲ್ಲ. ಅಷ್ಟೇ ಅಲ್ಲ, ಆಯೋಗಗಳೂ ಈ ಕುರಿತು ಪರಿಹಾರ ಮಾರ್ಗಗಳನ್ನು ಹುಡುಕಿದ್ದು ಇಲ್ಲ ಎನ್ನುವಷ್ಟು ಕಡಿಮೆ. ಈಗಂತೂ ಶಿಕ್ಷಣವೆಂಬುದು ಅಧಿಕೃತವಾಗಿಯೇ ಉದ್ಯಮವಾಗಿಬಿಟ್ಟಿದೆ.

ಗ್ಯಾಟ್ ಒಪ್ಪಂದದಲ್ಲಿ ಶಿಕ್ಷಣವನ್ನು 'Knowledge Industry' (ಜ್ಞಾನ ಉದ್ಯಮ) ಎಂದು ಕರೆಯಲಾಗಿದೆ. ಬೋಧಕರನ್ನು 'Knowledge Industry workers' (ಜ್ಞಾನ ಉದ್ಯಮದ ಕಾರ್ಮಿಕರು) ಎಂದು ಹೆಸರಿಸಲಾಗಿದೆ. ವಿದ್ಯಾರ್ಥಿಗಳ ವಿನಿಮಯವನ್ನು 'Consumption Abroad' (ವಿದೇಶಗಳಲ್ಲಿ ಬಳಕೆ) ಎಂದು, ವಿದೇಶಿ ಶಿಕ್ಷಣವನ್ನು 'Cross Border Supply' (ಗಡಿಯಾಚೆಗೆ ಪೂರೈಕೆ) ಎಂದು, ಸ್ವದೇಶದಲ್ಲಿ ಸ್ಥಾಪಿತವಾಗುವ ವಿದೇಶಿ ವಿಶ್ವವಿದ್ಯಾಲಯಗಳನ್ನು 'Commercial Presence' (ವಾಣಿಜ್ಯಿಕ ಇರುವಿಕೆ) ಎಂಬುದಾಗಿ ಮತ್ತು ಒಟ್ಟು ವಿದ್ಯಾರ್ಥಿಗಳನ್ನು 'Knowledge Industry Clients' (ಜ್ಞಾನ ಉದ್ಯಮದ ಸೇವೆ ಪಡೆಯುವವರು) ಎಂದು ನಮೂದಿಸಲಾಗಿದೆ. ಇಲ್ಲಿ ಶಿಕ್ಷಣ ಕ್ಷೇತ್ರದ ಪರಿಭಾಷೆಯು ಉದ್ಯಮದ ಪರಿಭಾಷೆಯಾಗಿ ಪರಿವರ್ತನೆಗೊಂಡಿರುವುದನ್ನು ಗಮನಿಸಬಹುದು.

ಅಷ್ಟೇ ಅಲ್ಲ, ಉದ್ಯಮಸ್ನೇಹಿಯಾದ ಶಿಕ್ಷಣವನ್ನು ರೂಪಿಸಬೇಕೆಂಬ ಮಾತುಗಳು ಬಹಳಷ್ಟು ಕೇಳಿಬರುತ್ತಿವೆ. ಉದ್ಯಮಸ್ನೇಹಿಯಾಗುವುದಕ್ಕೂ ಉದ್ಯೋಗಸ್ನೇಹಿಯಾಗುವುದಕ್ಕೂ ವ್ಯತ್ಯಾಸವಿದೆ. ಉದ್ಯೋಗಸ್ನೇಹಿಯಾದ ಶಿಕ್ಷಣವು ಯಾವ ಹಂತದಿಂದ ಆರಂಭವಾಗಬೇಕೆಂಬ ಖಚಿತತೆ ಕಾಣುತ್ತಿಲ್ಲ. ಎಲ್ಲಿಯವರೆಗೆ ಕೇವಲ ಜ್ಞಾನಮುಖಿ ಶಿಕ್ಷಣ, ಎಲ್ಲಿಂದ ಉದ್ಯೋಗಮುಖಿ ಶಿಕ್ಷಣ ಇರಬೇಕು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುತ್ತಿಲ್ಲ. ಅದರ ಬದಲು ಆರಂಭದ ಹಂತದಿಂದಲೇ ಕೌಶಲಾಭಿವೃದ್ಧಿ ಶಿಕ್ಷಣವನ್ನು ಸೇರಿಸುವ ಉತ್ಸಾಹ ಕಾಣುತ್ತಿದೆ.

ಜ್ಞಾನಮುಖಿ ಮತ್ತು ಉದ್ಯೋಗಮುಖಿಯನ್ನು ಸಮನ್ವಯಗೊಳಿಸುವ ಚಿಂತನೆ ಕೂಡ ನಡೆಯುತ್ತಿಲ್ಲ; ತಾಂತ್ರಿಕ ವಿಷಯಗಳೇ ಮಹತ್ವ ಪಡೆದುಕೊಳ್ಳುತ್ತ ಶಿಕ್ಷಣದ ತತ್ವಜ್ಞಾನವನ್ನು 'ತಂತ್ರ'ಜ್ಞಾನ ನುಂಗಿಹಾಕುತ್ತಿದೆ. ಹೀಗಾಗಿ ಸಮಾನ ಶಾಲಾ ಶಿಕ್ಷಣವೆಂಬ ಪರಿಕಲ್ಪನೆಗೆ ಕೋವಿಡ್ ಕಾಯಿಲೆ ಬರುವಂತೆ ಮಾಡಲಾಗಿದೆ. ಸಮಾನ ಶಾಲಾ ಶಿಕ್ಷಣದ ಪರಿಕಲ್ಪನೆಗೆ ಮೂಲಾಧಾರವೆಂದರೆ ಶೈಕ್ಷಣಿಕ ಸಮಾನತೆ. ಆದರೆ ನಮ್ಮಲ್ಲಿ ಹಸುಗೂಸುಗಳ ಹಂತದಲ್ಲೇ ಶೈಕ್ಷಣಿಕ ಅಸಮಾನತೆ ಆರಂಭವಾಗುತ್ತದೆ.

ಬಡವರ ಮಕ್ಕಳು ಅಂಗನವಾಡಿಗಳಿಗೆ ಮತ್ತು ಉಳ್ಳವರ ಮಕ್ಕಳು ಕಿಂಡರ್ ಗಾರ್ಟನ್ ಖಾಸಗಿ ಶಾಲೆಗಳಿಗೆ ಎಂಬುದು ಇಂದಿನ ವಾಸ್ತವ. ನಮ್ಮ ರಾಜ್ಯದಲ್ಲಿ ಅಂದಾಜು 65,911 ಅಂಗನವಾಡಿಗಳಿವೆ. ಅಂಗನವಾಡಿ ಮಕ್ಕಳ ವಯೋಮಾನಕ್ಕೆ ಸಮಾನರಾದ ಉಳ್ಳವರ ಮಕ್ಕಳು ಸೇರುವುದು ಕಿಂಡರ್ ಗಾರ್ಟನ್‌ಗಳಿಗೆ; ಅದೂ ಖಾಸಗಿ ಸಂಸ್ಥೆಗಳಿಗೆ. ಪೂರ್ವ ಪ್ರಾಥಮಿಕ ಶಿಕ್ಷಣದ ಹೆಸರಿನಲ್ಲಿ ನಡೆಯುವ ಈ ಖಾಸಗಿ ಕಿಂಡರ್ ಗಾರ್ಟನ್‌ಗಳ ನಿಯಂತ್ರಣಕ್ಕಾಗಿ 1995ರಲ್ಲೇ ನಿಯಮಗಳನ್ನು ರೂಪಿಸಿ ಆದೇಶ ಹೊರಡಿಸಲಾಗಿತ್ತು. ಆದರೆ ಅದು ಜಾರಿಯಾಗಿಲ್ಲ. ಅಂಗನವಾಡಿ ಮತ್ತು ಕಿಂಡರ್ ಗಾರ್ಟನ್‌ಗಳಿಂದಾಗುತ್ತಿರುವ ಶೈಕ್ಷಣಿಕ ಅಸಮಾನತೆಯನ್ನು ಹೋಗಲಾಡಿಸುವ ನೀತಿ ನಿರೂಪಣೆಯೂ ನಡೆದಿಲ್ಲ.

ಪ್ರಾಥಮಿಕ ಶಾಲಾ ಹಂತದಲ್ಲಿ ಸರ್ಕಾರಗಳೇ ವಿಭಿನ್ನ ಮಾದರಿಗಳ ಶಾಲೆಗಳನ್ನು ನಡೆಸುತ್ತ ಶೈಕ್ಷಣಿಕ ಅಸಮಾನತೆಯನ್ನು ಸಹಜಗೊಳಿಸಿವೆ! ಕನ್ನಡ ಮಾಧ್ಯಮ ಮತ್ತು ಇಂಗ್ಲಿಷ್ ಮಾಧ್ಯಮ, ಸರ್ಕಾರಿ ಶಾಲೆ ಮತ್ತು ಖಾಸಗಿ ಶಾಲೆ, ರಾಜ್ಯ ಪಠ್ಯಕ್ರಮ ಮತ್ತು ಕೇಂದ್ರ ಪಠ್ಯಕ್ರಮ- ಹೀಗೆ ವಿವಿಧ ವ್ಯತ್ಯಾಸದ ಶಾಲಾ ಮಾದರಿಗಳು ಅಸಮಾನತೆಗೆ ಸಾಕ್ಷಿಯಾಗಿವೆ. ಗುಣಮಟ್ಟದ ಹೆಸರಿನಲ್ಲಿ ನವೋದಯ, ಮೊರಾರ್ಜಿ, ಅಂಬೇಡ್ಕರ್, ರಾಣಿ ಚೆನ್ನಮ್ಮ ಮುಂತಾದ ವಿಶೇಷ ವಸತಿ ಶಾಲೆಗಳ ಜೊತೆಗೆ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಹೆಚ್ಚಿಸುವ ಉತ್ಸಾಹ ಕಾಣುತ್ತಿದೆ. ಹೀಗೆ ನಮ್ಮ ಸರ್ಕಾರಗಳೇ ಗುಣಮಟ್ಟದ ಹೆಸರಿನಲ್ಲಿ ಕೆಲವು ವಿಶೇಷ ಶಾಲೆಗಳನ್ನು ನಡೆಸುತ್ತವೆಯೆಂದರೆ, ತಾರ್ಕಿಕವಾಗಿ ಉಳಿದ ಶಾಲೆಗಳು ಇಷ್ಟು ಗುಣಮಟ್ಟದವಲ್ಲ ಎಂದರ್ಥ.

ಅಲ್ಲದೆ, ಒಂದೇ ವಯಸ್ಸಿನ ಮಕ್ಕಳಿಗೆ ಸಮಾನ ಶಿಕ್ಷಣ ಕೊಡುವ ಬದಲು ಅಸಮಾನ ಶಿಕ್ಷಣವೇ ನೀತಿಯಾಗಿರುವುದಕ್ಕೆ ಈ ವಿವಿಧ ಮಾದರಿಗಳೇ ನಿದರ್ಶನ. ಇಲ್ಲಿ ಮುಖ್ಯವಾಗಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವುದು ಸಾಮಾನ್ಯ ಸರ್ಕಾರಿ ಶಾಲೆಗಳ ಮಕ್ಕಳು ಮತ್ತು ವಿಶೇಷ ಶಾಲೆಗಳಿಗೆ ಹೊರತಾದ ಮಕ್ಕಳು. ಅಂದರೆ ಸರ್ಕಾರಿ ಶಾಲೆಗಳು ದುರ್ಬಲವಾಗುವುದಕ್ಕೆ ಶಾಲಾ ನೀತಿಯಲ್ಲೇ ಕೆಲವು ಕಾರಣಗಳಿವೆ.

ದೇಶದಲ್ಲಿ ಅಂದಾಜು 10,83,678 ಸರ್ಕಾರಿ ಶಾಲೆಗಳಿವೆ. ನಮ್ಮ ರಾಜ್ಯದಲ್ಲಿ ಅಂದಾಜು 44,615 ಸರ್ಕಾರಿ ಪ್ರಾಥಮಿಕ ಶಾಲೆಗಳೂ 5,240 ಸರ್ಕಾರಿ ಪ್ರೌಢಶಾಲೆಗಳೂ ಇವೆ. 4,000 (ಆದಿವಾಸಿ) ಆಶ್ರಮ ಶಾಲೆಗಳಿವೆ. ರಾಜ್ಯದ ಸುಮಾರು ಶೇ 72ರಷ್ಟು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಾರೆ. ಈ ಸರ್ಕಾರಿ ಶಾಲೆಗಳಲ್ಲೇ 'ವಿಶೇಷ' ಮತ್ತು 'ಸಾಮಾನ್ಯ'ವೆಂಬ ಅಸಮಾನತೆಯಿದೆ. ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚುತ್ತಲೇ ಇದ್ದು, 'ಅಸಮಾನತೆ'ಯ ಕಂದಕವೂ ದೊಡ್ಡದಾಗುತ್ತಿದೆ.

ಸರ್ಕಾರಿ ಪ್ರಾಥಮಿಕ ಶಾಲೆಗಳೆಂದರೆ ಬಹುಪಾಲು ಕನ್ನಡ ಮಾಧ್ಯಮದ ಶಾಲೆಗಳು. ಖಾಸಗಿ ಶಾಲೆಗಳನ್ನೂ ಒಳಗೊಂಡಂತೆ ರಾಜ್ಯದ ಎಲ್ಲ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಅಥವಾ ಮಾತೃಭಾಷೆಯೇ ಬೋಧನಾ ಮಾಧ್ಯಮವಾಗಿರಬೇಕೆಂಬ ರಾಜ್ಯ ಸರ್ಕಾರದ ಆದೇಶವನ್ನು 1993 ಮತ್ತು 1999ರಲ್ಲಿ ಸುಪ್ರೀಂ ಕೋರ್ಟ್ ಮಾನ್ಯ ಮಾಡಿತ್ತು. ಆದರೆ 2014ರಲ್ಲಿ ಬಂದ ಸುಪ್ರೀಂ ಕೋರ್ಟಿನ ಸಂವಿಧಾನ ಪೀಠದ ತೀರ್ಪು ಶಿಕ್ಷಣ ಮಾಧ್ಯಮದ ಆಯ್ಕೆಯು ಪೋಷಕರ ಸ್ವಾತಂತ್ರ್ಯ ಎಂದಿತು. ಮರುಪರಿಶೀಲನಾ ಅರ್ಜಿಯೂ ವಜಾಗೊಂಡಿತು. ಇದರಿಂದ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮ ಜಾರಿಗೆ ಅಡ್ಡಿಯಾಗುವುದಿಲ್ಲವಾದರೂ ಖಾಸಗಿ ಶಾಲೆಗಳಿಗೆ ಬೋಧನಾ ಮಾಧ್ಯಮವನ್ನು ಕಡ್ಡಾಯ ಮಾಡುವಂತಿಲ್ಲ. ಖಾಸಗೀಕರಣದ ಆರ್ಥಿಕ ನೀತಿಯ ಫಲವಾಗಿ ವಿವಿಧ ಕ್ಷೇತ್ರಗಳ ಮೇಲೆ ಆಗುತ್ತಿರುವ ಪರಿಣಾಮಕ್ಕೆ ಇದು ಒಂದು ಸಾಕ್ಷಿ. ಖಾಸಗೀಕರಣಕ್ಕೆ ರಾಷ್ಟ್ರೀಕರಣವೇ ಉತ್ತರವಾಗಬೇಕು. ಆದರೆ ಬಂಡವಾಳಶಾಹಿ ನೀತಿಯ ಸರ್ಕಾರಗಳಿಂದ ಇದು ಸಾಧ್ಯವೆ? ಸಾಧ್ಯವೆನ್ನಿಸದೆ ಇದ್ದರೂ ಒತ್ತಾಯವಂತೂ ಜೀವಂತವಾಗಿರಬೇಕು.

ಇಷ್ಟಾಗಿಯೂ ಎಲ್ಲ ಸಮಸ್ಯೆಗಳ ನಡುವೆ ಸರ್ಕಾರಿ ಶಾಲೆಗಳನ್ನು ಉಳಿಸಿ, ಬೆಳೆಸಲೇಬೇಕಾಗಿದೆ. ಹಾಗೆಂದು ಯಾವುದೇ ವರ್ಗದ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೇ ಸೇರಿಸಬೇಕೆಂದು ಕಾನೂನು ಮಾಡಲು 2014ರ ಸುಪ್ರೀಂ ಕೋರ್ಟಿನ ತೀರ್ಪಿನ ಪ್ರಕಾರ ಸಾಧ್ಯವಿಲ್ಲ. ಇಂಥ ಸಂದಿಗ್ಧ ಸಂದರ್ಭದಲ್ಲಿ ಸರ್ಕಾರಿ ಶಾಲೆಗಳನ್ನು ಮೂಲ ಸೌಕರ್ಯಗಳ ಮೂಲಕ ಬಲಗೊಳಿಸುವ ಹಾಗೂ ಆಕರ್ಷಕವಾಗಿಸುವ ಕೆಲಸವಾಗಬೇಕು. ಸೂಕ್ತ ಕಟ್ಟಡಗಳ ನಿರ್ಮಾಣವಾಗಬೇಕು; ಇಂಗ್ಲಿಷ್ ಭಾಷೆಯನ್ನು ಒಂದನೇ ತರಗತಿಯಿಂದಲೇ ಸಮರ್ಥವಾಗಿ ಕಲಿಸುವ ವ್ಯವಸ್ಥೆ ಆಗಬೇಕು. ಪೂರ್ಣ ಪ್ರಮಾಣದ ಅಧ್ಯಾಪಕರನ್ನು ಒದಗಿಸಬೇಕು. ಒಂದು ಅಂದಾಜಿನ ಪ್ರಕಾರ 41,869 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು, 8,292 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು, 3,539 ಪಿಯುಸಿ ಅಧ್ಯಾಪಕರ ಹುದ್ದೆಗಳು- ಒಟ್ಟು 53,700 ಹುದ್ದೆಗಳು ಖಾಲಿಯಿವೆ. ಇತ್ತೀಚೆಗೆ ಹೊಸ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದರೂ ಈಗ ಬಹುಪಾಲು ಅತಿಥಿ ಅಧ್ಯಾಪಕರನ್ನೇ ಅವಲಂಬಿಸಲಾಗಿದೆ.

ಈ ಮಧ್ಯೆ, ರಾಜ್ಯದ ಕೆಲವು ಸರ್ಕಾರಿ ಶಾಲೆಗಳನ್ನು ಸ್ಥಳೀಯರು ಸ್ವಯಂ ಸಬಲೀಕರಣ ಮಾಡಿದ ನಿದರ್ಶನಗಳಿವೆ. ವಿದ್ಯಾರ್ಥಿಗಳು ಖಾಸಗಿ ಶಾಲೆಯನ್ನು ತೊರೆದು ಇಂತಹ ಸರ್ಕಾರಿ ಶಾಲೆಗಳಿಗೆ ಪ್ರವೇಶ ಪಡೆದ ಉದಾಹರಣೆಗಳಿವೆ. ಸಬಲೀಕರಣ ಹೇಗೆ ಸಾಧ್ಯವಾಯಿತೆಂದು ತಿಳಿಯಲು ಈ ಶಾಲೆಗಳ ಅಧ್ಯಾಪಕರು, ಪೋಷಕರು ಮತ್ತು ಶಾಲಾಭಿವೃದ್ಧಿ ಸಮಿತಿಯವರ ಜೊತೆಗೆ ನಮ್ಮ ಸಚಿವರೂ ಅಧಿಕಾರಿಗಳೂ ಮಾತುಕತೆ ನಡೆಸಬೇಕು. ತಜ್ಞರ ಜೊತೆಗೂ ಸಮಾಲೋಚನೆ ನಡೆಸಬೇಕು. ತಾರತಮ್ಯಗಳ ತಾಣವಾದ ಶಾಲಾ ಮಾದರಿಗಳ ಬದಲು ಒಂದೇ ರೀತಿಯ ಸಮಾನ ಶಾಲಾ ಶಿಕ್ಷಣ ಜಾರಿಗೆ ಮುಂದಾಗಬೇಕು.

'ವಿಲೀನ' ಎಂಬ ವೇಷಭಾಷೆಯಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಬದಲು ಸೂಕ್ತ ಪರಿಹಾರ ಮಾರ್ಗಕ್ಕೆ ಮುಂದಾಗಬೇಕು. ಸಂಬಂಧಪಟ್ಟವರ ಜೊತೆಗಿನ ಪ್ರಜಾಸತ್ತಾತ್ಮಕ ಚರ್ಚೆಯು ಮೊದಲ ಹೆಜ್ಜೆಯಾಗಬೇಕು. ಏಕಪಕ್ಷೀಯ ತೀರ್ಮಾನಗಳು ತರವಲ್ಲ ಎಂಬ ತಿಳಿವಳಿಕೆ ಬೇಕು.

ಚುರುಮುರಿ

ಎಲ್ಲವೂ ಇಲ್ಲಿ 'ಗ್ರೇಟರ್'!

● ಗುರು ಪಿ.ಎಸ್.

'ಇದೇನ್ರೀ... ರೇನ್ ಕೋಟ್ ಹಾಕ್ಕೊಂಡು, ಕೊರಳಿಗೊಂದು ಟ್ಯೂಬ್ ಸಿಗಿಸಿಕೊಂಡು ಎಲ್ಲಿಗೆ ಹೋಗ್ತಿದೀರಿ' ಅಚ್ಚರಿಯಿಂದ ಕೇಳಿದಳು ಹೆಂಡತಿ.

'ಬೋಟ್ ಬುಕ್ ಮಾಡೋಕೆ ?'

'ಹಾಂ! ಇವತ್ತು ಆಫೀಸ್‌ಗೆ ಹೋಗಲ್ವಾ?'

'ಈ ಬೆಂಗಳೂರಿನಲ್ಲಿ ಆಫೀಸ್‌ಗೆ ಹೋಗೋಕೇ ಬೋಟ್ ಬೇಕು ಅಂತ ನಿನಗೆ ಗೊತ್ತಿಲ್ವ!'

'ಅಯ್ಯೋ ಹೌದಲ್ವ... ರಸ್ತೆಗಳೆಲ್ಲ ಈಜುಕೊಳದಂತಾಗಿರೋದನ್ನ ನಾನು ಮರೆತೇಬಿಟ್ಟಿದ್ದೆ, ಅದರಲ್ಲೂ, ನಮ್ಮೂರಿಗೆ ಈ ಗ್ರೇಟರ್ ಬೆಂಗಳೂರು ಅಂತ ಹೆಸರಿಟ್ಟಾಗಿನಿಂದ ಮಳೆ ಜಾಸ್ತಿ ಸುರೀತಿದೆ ಅಲ್ವೇನ್ರೀ?'

'ಗ್ರೇಟರ್ ಬೆಂಗಳೂರು ಅನ್ನೋದಕ್ಕೂ ಮಳೆ ಹೆಚ್ಚಾಗಿರೋದಕ್ಕೂ ಏನಮ್ಮ ಸಂಬಂಧ?'

'ಗ್ರೇಟರ್ ಎಂಬ ಪದಕ್ಕೆ ಕನ್ನಡದಲ್ಲಿ ಇನ್ನೊಂದು ಅರ್ಥ ಏನಿದೆ ಹೇಳಿ?'

'ಹೆಚ್ಚು ಅಂತ'

'ಹಾಂ... ಅದಕ್ಕೇ ಹೆಚ್ಚಾಗಿ ಮಳೆ ಸುರೀತಿದೆ'.

'ಓಹ್, ಗೊತ್ತಾಯ್ತು, ಗೊತ್ತಾಯ್ತು, ಈಗ ಗ್ರೇಟರ್ ಪದಕ್ಕೆ ನಿಜವಾದ ಅರ್ಥ ಗೊತ್ತಾಯ್ತು' ಜೋರಾಗಿ ನಗತೊಡಗಿದ.

'ಅದ್ಯಾಕ್ರೀ ಇಷ್ಟ್ ಜೋರಾಗಿ ನಗ್ತಿದೀರಿ?'

'ಎಲ್ಲದರಲ್ಲಿಯೂ ಈ ಸರ್ಕಾರ ಗ್ರೇಟರ್ ಅಂತ ನೆನಸ್ಕೊಂಡು ನಗು ಬಂತು'.

'ಅಂದ್ರೆ?'

'200 ಯುನಿಟ್‌ಗಿಂತ ಒಂದೇ ಒಂದು ಯುನಿಟ್ ಜಾಸ್ತಿ ವಿದ್ಯುತ್ ಬಳಸಿದರೂ ದರ ಮೂರು ಪಟ್ಟು ಗ್ರೇಟರ್, ಹೊಸ ಖಾತಾ ಸಿಗುತ್ತೆ ಅಂತ ಆಸ್ತಿ ರಿಜಿಸ್ಟರ್ ಮಾಡಿಸೋಕೆ ಹೋದರೆ ಮುದ್ರಾಂಕ ಶುಲ್ಕ ದುಪ್ಪಟ್ಟು ಗ್ರೇಟರ್, ರೋಡ್‌ನಲ್ಲಿ ಮಳೆ ಕಾಟ ಅಂತ ಮೆಟ್ರೊ ರೈಲು ಹತ್ತೋಕೆ ಹೋದರೆ ಟಿಕೆಟ್ ರೇಟೂ ಗ್ರೇಟರ್, ಒಟ್ಟಿನಲ್ಲಿ ಬೆಂಗಳೂರು ಗ್ರೇಟರ್ರೋ ಗ್ರೇಟರ್ರು' ಎನ್ನುತ್ತಾ ಆಫೀಸ್‌ಗೆ ಹೊರಡಲು ಸಿದ್ಧನಾದ.

'ಇದ್ಯಾಕ್ರೀ, ಟಿಮ್ ಡೇವಿಡ್ ಪೋಸ್ಟರ್ ಹಿಡ್ಕೊಂಡಿದೀರಿ, ಅವನೇನ್ ನಿಮಗೆ ರೋಲ್ ಮಾಡೆಲ್ಲಾ?'

'ಸದ್ಯಕ್ಕೆ ಅವನೇ ನನಗೆ ರೋಲ್ ಮಾಡೆಲ್. ಕ್ರಿಕೆಟ್‌ಗಿಂತ ಹೆಚ್ಚಾಗಿ ಬೆಂಗಳೂರಿನ 'ನೆಲದಲ್ಲಿ' ಹೇಗೆ ಈಜು ಹೊಡೀಬೇಕು ಅಂತ ತೋರಿಸಿಕೊಟ್ಟ ಪುಣ್ಯಾತ್ಮ ಅವನು!'

ಸಂಗತ

ಮನೆ ಅಡುಗೆಯ ಊಟದ ಸಂಭ್ರಮ!

ಪುರುಷರೂ ಅಡುಗೆ ಮಾಡುವುದನ್ನು ಕಲಿಯಬೇಕು, ಅವಶ್ಯವಿದ್ದಾಗ ಸಂತೋಷದಿಂದ ಅಡುಗೆ ಮಾಡಬೇಕು. ಇದರಿಂದ ಕುಟುಂಬದ ನೆಮ್ಮದಿಗೆ ಸಹಾಯವಾಗುತ್ತದೆ

● ಮಲ್ಲಿಕಾರ್ಜುನ ಹೆಗ್ಗಳಗಿ

ಬೆಳಗಿನ ಚಹಾ ನಾನೇ ಮಾಡಿಕೊಳ್ಳುತ್ತೇನೆ. ನನಗೆ ಬೇಕೆನಿಸಿದಷ್ಟು ಸಕ್ಕರೆ, ಟೀ ಪುಡಿ, ಹಾಲು ಹಾಕಿಕೊಳ್ಳುತ್ತೇನೆ. ಚೆನ್ನಾಗಿ ಕುದಿಯುವಾಗ ತುಳಸಿಯ ಒಂದೆರಡು ಎಲೆಗಳನ್ನು ಹಾಕುತ್ತೇನೆ. ನಿಧಾನಕ್ಕೆ ಮಾಡಿಕೊಂಡ ಚಹಾ ಬಹಳ ಸ್ವಾದಿಷ್ಟ. ಅದೇ ಹೊತ್ತಿಗೆ ಎದ್ದು, ಮುಖ ತೊಳೆದುಕೊಂಡು ಬರುವ ಮೊಮ್ಮಗನಿಗೂ ಒಂದು ಕಪ್ ಚಹಾ ಕೊಡುತ್ತೇನೆ. ಅವನ ಮುಖ ಅರಳುತ್ತದೆ. ಸ್ವತಃ ಮಾಡಿಕೊಳ್ಳುವ ಚಹಾದ ಖುಷಿ ಬಹಳ ದೊಡ್ಡದು!

ಮನೆಯಲ್ಲಿ ಮಹಿಳೆಯರೇ ಚಹಾ, ಕಾಫಿ ಮಾಡಬೇಕು; ಊಟ, ಉಪಾಹಾರ ಸಿದ್ಧಪಡಿಸಬೇಕು ಎನ್ನುವುದು ಸರಿಯಲ್ಲ. ಪುರುಷರೂ ಅಡುಗೆ ಮಾಡುವುದನ್ನು ಆಸಕ್ತಿಯಿಂದ ಕಲಿತುಕೊಳ್ಳಬೇಕು, ಅವಶ್ಯವಿದ್ದಾಗ ಸಂತೋಷದಿಂದ ಅಡುಗೆ ಮಾಡಬೇಕು. ಇದರಿಂದ ಕುಟುಂಬದ ನೆಮ್ಮದಿಗೆ ಸಹಾಯವಾಗುತ್ತದೆ. ಆಧುನಿಕ ಕಾಲಘಟ್ಟದಲ್ಲಿ ಮಹಿಳೆಯರು ಉದ್ಯೋಗ, ವ್ಯವಹಾರ ಹಾಗೂ ಸಾಮಾಜಿಕ ಕೆಲಸಗಳಲ್ಲಿ ತೊಡಗುತ್ತಿದ್ದಾರೆ. ಸಮಯಕ್ಕೆ ಸರಿಯಾಗಿ ತಮ್ಮ ಕೆಲಸಗಳಿಗೆ ಹೋಗುವ ಧಾವಂತ ಅವರಿಗೂ ಇರುತ್ತದೆ. ಶಾಲೆಗೆ ಹೋಗುವ ಮಕ್ಕಳಿಗೆ, ದುಡಿಯಲು ಹೋಗುವ ಪತಿಗೆ, ಮನೆಯಲ್ಲಿ ಇರುವ ಹಿರಿಯರಿಗೆ ಊಟ, ಉಪಾಹಾರ ಸಿದ್ಧಪಡಿಸುವುದಕ್ಕೆ ಅವರು ಹೆಣಗಬೇಕಾಗುತ್ತದೆ. ಅದು ಒತ್ತಡಗಳಿಗೂ ಕಾರಣವಾಗುತ್ತದೆ. ಕಲಹಗಳು ಹುಟ್ಟಿಕೊಳ್ಳಬಹುದು. ಇದರಿಂದ ಕುಟುಂಬದ ನೆಮ್ಮದಿಯ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ.

ಗುಣಮಟ್ಟದ ತಾಜಾ ಆಹಾರ ಸೇವಿಸಬೇಕು, ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಎಲ್ಲರೂ ಬಯಸುತ್ತಾರೆ. ಇದು ಸಾಧ್ಯವಾಗಬೇಕಾದರೆ ಮನೆಯಲ್ಲಿಯೇ ಸಿದ್ಧಪಡಿಸಿದ ಪೌಷ್ಟಿಕ ಆಹಾರವನ್ನು ಸೇವಿಸಬೇಕು. ಅಡುಗೆ ಕಲೆ ಬದುಕುವ ಕಲೆ. ಇದನ್ನು ಸ್ತ್ರೀ-ಪುರುಷ ಎಂಬ ಭೇದವಿಲ್ಲದೆ ಕಲಿಯಲೇಬೇಕು. ಪತಿ, ಬೆಳೆದ ಮಕ್ಕಳು ಒಂದು ವಾರ ಗಮನಕೊಟ್ಟು ಕಲಿತರೆ ಚಪಾತಿ, ರೊಟ್ಟಿ, ಪಲ್ಯ, ಅನ್ನ, ಸಾರು, ಆಮ್ಲೆಟ್ ಮುಂತಾದವುಗಳನ್ನು ತಾವೇ ಮಾಡಿಕೊಳ್ಳಬಹುದು.

'ಅಡುಗೆ ಕಲಿತವರಿಗೆ ತಮಗೆ ಇಷ್ಟವಾಗುವ ಆಹಾರ ಸಿದ್ಧಪಡಿಸಿ ಸೇವಿಸುವ ಭಾಗ್ಯ ದೊರೆಯುತ್ತದೆ' ಎಂದು ಸಾಹಿತಿ ಸತ್ಯಕಾಮ ಹೇಳುತ್ತಿದ್ದರು. ಅವರು ಚೆನ್ನಾಗಿ ಅಡುಗೆ ಮಾಡುತ್ತಿದ್ದರು. ಅವರು ಮಾಡುವ ತೆಳ್ಳಗಿನ, ಬೆಳ್ಳಗಿನ ಬಿಳಿ ಜೋಳದ ರೊಟ್ಟಿ ಸ್ನೇಹಿತರ ವಲಯದಲ್ಲಿ ಪ್ರಸಿದ್ಧವಾಗಿತ್ತು. ಆಪ್ತರ ಮನೆಗೆ ಹೋದಾಗ ತಾವೇ 'ಭಕ್ತರಿ' ಸಿದ್ಧಪಡಿಸುತ್ತಿದ್ದರು. 'ಅಡುಗೆ ಕಲಿತದ್ದರಿಂದ ಹಿಮಾಲಯ ಮತ್ತು ಬೇರೆ ಬೇರೆ ಕಡೆಗಳಲ್ಲಿ ವಾಸಿಸುವುದಕ್ಕೆ ಅನುಕೂಲವಾಯಿತು' ಎಂದು ಹೇಳುತ್ತಿದ್ದರು.

ಹಿಂದುಸ್ತಾನಿ ಗಾಯಕ ಪಂಡಿತ್ ಬಸವರಾಜ ರಾಜಗುರು ಅವರು ಬಾಗಲಕೋಟೆ ಜಿಲ್ಲೆಯ ಹುನ್ನೂರು ಗ್ರಾಮದಲ್ಲಿ ನಡೆದ ಸಂಗೀತ ಕಾರ್ಯಕ್ರಮಕ್ಕೆ ಒಮ್ಮೆ ಬಂದಿದ್ದರು. ಅವರು ತಮ್ಮ ವಾಹನದಲ್ಲಿ ಆಹಾರ ಸಾಮಗ್ರಿಗಳ ಪೆಟ್ಟಿಗೆ ತಂದಿದ್ದರು. ತಾವೇ ಅಡುಗೆ ಮಾಡಿಕೊಂಡು ಊಟ ಮಾಡಿದರು. ತಮ್ಮ ಧ್ವನಿ ಮತ್ತು ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಈ ವಿಧಾನ ಅನುಸರಿಸುತ್ತಿದ್ದರು. ಪಂಡಿತ್ ಮಲ್ಲಿಕಾರ್ಜುನ ಮನ್ಸೂರ್ ಕೂಡ ಈ ಮಾದರಿ ಪಾಲಿಸುತ್ತಿದ್ದರು. ಅವರು ತಮ್ಮ ಸಂಗೀತ ಯಾತ್ರೆಯನ್ನು 'ರಸಯಾತ್ರೆ' ಎಂದು ಕರೆಯುತ್ತಿದ್ದರು.

ಈಗಿನ ಶಾಲಾ ವಿದ್ಯಾರ್ಥಿಗಳ ಬುತ್ತಿಯನ್ನು ನೋಡಿದರೆ ಗಾಬರಿಯಾಗುತ್ತದೆ. ಬಹಳಷ್ಟು ಮಕ್ಕಳು ಹೋಟೆಲ್‌ಗಳಲ್ಲಿ ಸಿದ್ಧಪಡಿಸಿದ ಆಹಾರ ಪದಾರ್ಥಗಳು ಮತ್ತು ಜಂಕ್ ಫುಡ್ ತಂದಿರುತ್ತಾರೆ. ಅಪೌಷ್ಟಿಕ ಆಹಾರವು ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಅವರ ಕ್ರಿಯಾಶೀಲತೆ ಕಡಿಮೆಯಾಗುತ್ತದೆ. ಬೆಳೆಯುವ ಮಕ್ಕಳಿಗೆ ಮನೆಯಲ್ಲಿಯೇ ಪೌಷ್ಟಿಕ ಆಹಾರ ತಯಾರಿಸಿ ಕೊಡುವುದು ಬಹಳ ಅವಶ್ಯ. ಮಕ್ಕಳಿಗೆ ಅಡುಗೆ ಮಾಡುವುದು ತಾಯಿಗೆ ಸಾಧ್ಯವಾಗದೇ ಇದ್ದಾಗ ಆ ಕೆಲಸವನ್ನು ತಂದೆ ಸಮರ್ಥವಾಗಿ ಮಾಡಬೇಕು. ಇದರಿಂದ ಹೊರಗಿನ ಆಹಾರ ಸೇವನೆ ನಿಲ್ಲುತ್ತದೆ. ಖರ್ಚು ಕಡಿಮೆಯಾಗುತ್ತದೆ.

ಪಂಡಿತರೊಬ್ಬರು ನಾವೆಯಲ್ಲಿ ನದಿ ದಾಟುತ್ತಿದ್ದರು. ಅವರು ನಾವಿಕನಿಗೆ 'ರಾಮಾಯಣ ಓದಿರುವೆಯಾ' ಎಂದು ಕೇಳಿದರು. ನಾವಿಕ 'ಇಲ್ಲ' ಎಂದ. 'ಹಾಗಾದರೆ ನಿನ್ನ ಕಾಲುಭಾಗ ಆಯುಷ್ಯ ವ್ಯರ್ಥವಾದಂತೆ' ಎಂದು ಪಂಡಿತರು ಹೇಳುತ್ತಾರೆ. 'ತೀರ್ಥಕ್ಷೇತ್ರಗಳಿಗಾದರೂ ಹೋಗಿ ಬಂದಿರುವೆಯಾ' ಎಂದು ಮತ್ತೊಂದು ಪ್ರಶ್ನೆ ಕೇಳಿದರು. ನಾವಿಕ ಆ ಪ್ರಶ್ನೆಗೂ 'ಇಲ್ಲ' ಎಂದು ಉತ್ತರಿಸಿದ. ಹಾಗಾದರೆ 'ನಿನ್ನ ಅರ್ಧ ಆಯುಷ್ಯ ಹಾಳಾಯಿತು' ಎಂದು ಪಂಡಿತರು ಹೇಳುತ್ತಾರೆ. ಆ ಹೊತ್ತಿನಲ್ಲಿ ನಾವೆಯು ಬಿರುಗಾಳಿಗೆ ಅಲುಗಾಡುತ್ತದೆ. ಆಗ ನಾವಿಕ ಆತಂಕದಿಂದ 'ಪಂಡಿತರೇ, ಈಜಲು ಕಲಿತಿದ್ದೀರಾ' ಎಂದು ಕೇಳುತ್ತಾನೆ. ಗಾಬರಿಗೊಂಡ ಪಂಡಿತರು 'ಇಲ್ಲ' ಎನ್ನುತ್ತಾರೆ. 'ನಿಮ್ಮ ಬದುಕಿನ ಕಥೆ ಮುಗಿದಂತೆ' ಎಂದು ನಾವಿಕ ನಿಧಾನವಾಗಿ ಹೇಳುತ್ತಾನೆ. ಈ ಜಾನಪದ ಕಥೆಯು ಬದುಕುವ ವಿದ್ಯೆ ಕಲಿಯುವುದು ಮುಖ್ಯ ಎಂಬುದನ್ನು ಮಾರ್ಮಿಕವಾಗಿ ಹೇಳುತ್ತದೆ.

ರಾಜಸ್ಥಾನಿ ಯುವಕರು ಅಡುಗೆ ಕಲೆಯಲ್ಲಿ ಬಹಳ ಪ್ರವೀಣರು. ಅವರು ದೇಶದ ತುಂಬೆಲ್ಲ ಶ್ರೀಮಂತರ ಮನೆಗಳಲ್ಲಿ, ಅತಿಥಿ ಗೃಹಗಳಲ್ಲಿ ಅಡುಗೆಯವರಾಗಿ ಕೆಲಸ ಮಾಡುತ್ತಾರೆ. ಅವರನ್ನು 'ಮಹಾರಾಜ್' ಎಂದು ಗೌರವದಿಂದ ಕರೆಯಲಾಗುತ್ತದೆ. ಅಡುಗೆ ಕೋಣೆಯು ಮನೆಯ ಹೃದಯ ಭಾಗ ಇದ್ದಂತೆ. ಅಡುಗೆ ಮಾಡುವುದನ್ನು ಕಲಿತರೆ ಸಾಲದು, ಅಡುಗೆ ಮನೆಯ ಸುರಕ್ಷತೆ, ಅಲ್ಲಿ ನೈರ್ಮಲ್ಯ ಕಾಪಾಡುವುದಕ್ಕೆ ಗಮನ ಕೊಡಬೇಕು. ಆಹಾರ ಪದಾರ್ಥಗಳು ಕೆಡದಂತೆ ಕಾಪಾಡುವ ಮತ್ತು ಮಿತವ್ಯಯದ ವಿಧಾನಗಳನ್ನು ಅರಿತುಕೊಳ್ಳಬೇಕು.

ವಾಚಕರ ವಾಣಿ

ಮಹಿಳೆಯರ ಬರಹದ ಶಕ್ತಿ ತೋರಿಸಿದ್ದಾರೆ

ನಾನು ಮೂರು ಭಾಷೆಗಳಲ್ಲಿನ ಸಾಹಿತ್ಯವನ್ನು ಓದುತ್ತೇನೆ. ಕನ್ನಡ, ಹಿಂದಿ ಮತ್ತು ಉರ್ದು. ಈ ಮೂರು ಭಾಷೆಗಳಲ್ಲಿ ಅತಿ ಹೆಚ್ಚಾಗಿ ಓದುವುದು ಮಹಿಳೆಯರು ರಚಿಸುವ ಸಾಹಿತ್ಯವನ್ನು. ಅಡುಗೆಮನೆ ಸಾಹಿತ್ಯ ಎನ್ನುವ ಪದ ಕಣ್ಣಿಗೆ ಬಿದ್ದಿದ್ದು ಕನ್ನಡದಲ್ಲಿ ಮಾತ್ರ. ಹಿಂದಿಯಲ್ಲಾಗಲೀ ಉರ್ದುವಿನಲ್ಲಾಗಲೀ 'ಬಾವರ್ಚಿ ಖಾನೆ ಕ ಸಾಹಿತ್ಯ' ಅಥವಾ 'ಬಾವರ್ಚಿ ಖಾನೆ ಕ ಅದಬ್' ಎಂದು ಓದಿರಲಿಲ್ಲ.

ಎರಡು ವರ್ಷಗಳ ಹಿಂದೆ ಹಿಂದಿಯ ಗೀತಾಂಜಲಿ ಶ್ರೀ ಅವರಿಗೆ ಬೂಕರ್ ಪ್ರಶಸ್ತಿ ಬಂದಾಗ ಕೆಲವು ವಿಮರ್ಶಕರು, ಗೀತಾಂಜಲಿ ಶ್ರೀ ಯಾರು ಎಂದು ಕೇಳಿದರಂತೆ. ಈಗ ಬಾನು ದೀದಿ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಪಡೆಯುವ ಮೂಲಕ ಮಹಿಳೆಯರು ರಚಿಸುವ ಸಾಹಿತ್ಯಕ್ಕೆ ಎಂಥ ಶಕ್ತಿಯಿದೆ ಎಂಬುದನ್ನು ತೋರಿಸಿದ್ದಾರೆ.

ಅದೀಬ್ ಅಖ್ತರ್, ಬನ್ನೂರು

ಸುಪ್ರೀಂ ಕೋರ್ಟ್ ತೀರ್ಪು ಸ್ವಾಗತಾರ್ಹ

ದೇಶದ ವಿವಿಧ ನ್ಯಾಯಾಲಯಗಳಲ್ಲಿ ಸಿವಿಲ್ ನ್ಯಾಯಾಧೀಶರಾಗಿ ನೇಮಕ ಹೊಂದಲು ಅಭ್ಯರ್ಥಿಗಳು ವಕೀಲರಾಗಿ ಕಡೆಯಪಕ್ಷ ಮೂರು ವರ್ಷ ಕೆಲಸ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿರುವುದು ಸ್ವಾಗತಾರ್ಹ. ಇದು ದೇಶದ ನ್ಯಾಯಾಂಗ ವ್ಯವಸ್ಥೆಯನ್ನು ಸದೃಢಗೊಳಿಸುವ ಮತ್ತೊಂದು ಪ್ರಯತ್ನ. ಮೂರು ವರ್ಷ ವಕೀಲರಾಗಿ ಕೆಲಸ ಮಾಡಿರಬೇಕೆಂಬ ನಿಯಮವು 2002ರವರೆಗೂ ಜಾರಿಯಲ್ಲಿತ್ತಾದರೂ ನಂತರ ಆ ನಿಯಮವನ್ನು ತೆಗೆಯಲಾಯಿತು.

ನ್ಯಾಯಾಧೀಶರ ಹುದ್ದೆಯು ಉನ್ನತವಾದುದು ಹಾಗೂ ಪವಿತ್ರವಾದುದು. ಇಂತಹ ಹುದ್ದೆಗೆ ಬರುವವರು ನ್ಯಾಯಾಲಯದ ರೀತಿ ರಿವಾಜುಗಳನ್ನು ತಿಳಿದಿರಬೇಕು. ಜೊತೆಗೆ, ಕಾನೂನುಗಳನ್ನು ಅನ್ವಯ ಮಾಡುವ ಬಗ್ಗೆ ಹೆಚ್ಚಿನ ಜ್ಞಾನ ಹೊಂದಿರಬೇಕು. ಗ್ರಂಥಗಳಲ್ಲಿ ಏನೇ ಓದಿಕೊಂಡಿದ್ದರೂ ವಕೀಲರಾಗಿ ನ್ಯಾಯಾಲಯಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಳ್ಳದ ಹೊರತು, ಅವರಿಗೆ ನ್ಯಾಯಾಂಗದ ಬಗ್ಗೆ ಹೆಚ್ಚಿನ ತಿಳಿವಳಿಕೆ ಸಿಗುವುದು ಕಷ್ಟವಾಗಬಹುದು.

ಕೆ.ವಿ. ವಾಸು, ಮೈಸೂರು

ಬಾನುಗೆ ಪ್ರಶಸ್ತಿ ಸಂತಸ ನೀಡಿತು

ಲೇಖಕಿ ಬಾನು ಮುಷ್ತಾಕ್ ಅವರು ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾಗಿರುವುದನ್ನು ಬುಧವಾರ ಬೆಳಗಿನ ಜಾವದಲ್ಲಿ ತಿಳಿದು ಸಂತಸವಾಯಿತು. ಅವರ ಸ್ವೀಕಾರ ಭಾಷಣವನ್ನೂ ಕೇಳಿದೆ. 'ಕನ್ನಡದಲ್ಲಿ ನೊಬೆಲ್ ಪ್ರಶಸ್ತಿಗೆ ಆಯ್ಕೆಯಾಗುವ ಗುಣಮಟ್ಟದ ಕೃತಿಗಳು, ಬರಹಗಾರರು ಇದ್ದಾರೆ. ಆದರೆ ಅಂತಹ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸುವ ಕೆಲಸ ನಡೆದಿಲ್ಲ' ಎಂಬುದು ಹಳೆಯ ಮಾತು.

ಚಲನಚಿತ್ರಗಳಿಗೆ ಆಸ್ಕರ್ ಪ್ರಶಸ್ತಿ ದೊರೆಯಲು ಒಂದು ಅಭಿಯಾನ ನಡೆಯುತ್ತದೆ. ಸಾಹಿತ್ಯ ಕೃತಿಗೆ ನೊಬೆಲ್ ಬರಲು ಹಲವೆಡೆ 'ಪ್ರಸಿದ್ಧ' ಆಗಿರಬೇಕಾಗುತ್ತದೆ. ಈಗ ಈ ಪ್ರಶಸ್ತಿ ವಿಜೇತ ಕೃತಿಯು ಬೇರೆ ಭಾರತೀಯ ಭಾಷೆಗಳಿಗೂ ಅನುವಾದವಾಗಲಿ. ಅದರಿಂದ ಕನ್ನಡದ ಮಹತ್ವ ಇತರ ಭಾಷಿಕರಿಗೂ ತಿಳಿಯುತ್ತದೆ. ಬಾನು ಅವರನ್ನು ಮುಸ್ಲಿಂ ಲೇಖಕಿ ಎಂದು ವರ್ಗೀಕರಿಸುವ ಪ್ರಯತ್ನಗಳು ನಡೆಯುತ್ತಿವೆ. ಅವರು ಮಾನವ ಸಂಕಷ್ಟ, ಸಂವೇದನೆಗಳಿಗೆ ಹೆಚ್ಚು ಪ್ರಾಮುಖ್ಯ ಕೊಟ್ಟಿದ್ದಾರೆ ಎಂಬುದು ನನ್ನ ಗ್ರಹಿಕೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಬಾನುದೀಪ

'ಬಾನು'
ಬೆಳಗಿದ
'ದೀಪ',
ಮುನ್ನಡೆಸಿತು
ಕನ್ನಡವ,
'ಬೂಕರ್'ಗೆ;
ಇಷ್ಟು
ಕಾಲ
ಬೇಕಾಯ್ತು,
ಕರ್ನಾಟಕವ
ಪರಿಚಯಿಸಲು,
ಜಗತ್ತಿಗೆ.

ಬಸವರಾಜ ಸಾದರ
ಬೆಂಗಳೂರು

ಒಂದಾಗಿ ಬಾಳಿದರೆ ಮಾತ್ರ ಪ್ರಗತಿ

ಹಾರೋಹಳ್ಳಿ ಗ್ರಾಮದ ಹಬ್ಬದಲ್ಲಿ ಭಾಗವಹಿಸಲು ಅವಕಾಶ ನೀಡದಿರುವ ಕ್ರಮವನ್ನು ಪ್ರಶ್ನಿಸಿದ್ದಕ್ಕೆ ಪರಿಶಿಷ್ಟ ಜಾತಿಯವರಿಗೆ ಬಹಿಷ್ಕಾರ ಹಾಕಿರುವುದು ವರದಿಯಾಗಿದೆ (ಪ್ರ.ವಾ., ಮೇ 21). ನಾವು ಈಚೆಗಷ್ಟೇ ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಆಚರಿಸಿದ್ದೇವೆ. ಅವರು ಬೋಧಿಸಿದ ಸೌಹಾರ್ದ ಮತ್ತು ಸಹಬಾಳ್ವೆಯ ಪಾಠವನ್ನು ಕೊಂಡಾಡಿದ್ದೇವೆ. ಯಾವುದೇ ಊರಿನ ಹಬ್ಬ- ಹರಿದಿನಗಳನ್ನು ಜಾತಿ ಭೇದಭಾವ ಮಾಡದೆ, ಮನುಷ್ಯರೆಲ್ಲರೂ ಒಂದಾಗಿ ಒಗ್ಗೂಡಿ ಆಚರಿಸುವುದರಿಂದ ಮಾತ್ರ ಸಾಮಾಜಿಕ ಸಾಮರಸ್ಯ ಕಾಪಾಡಲು ಸಾಧ್ಯ. ಅಂತಹ ಸಾಮರಸ್ಯ ಮತ್ತು ಸೌಹಾರ್ದ ಭಾವದಿಂದ ಮಾತ್ರ ಹಬ್ಬ ಹರಿದಿನಗಳ ಸೌಂದರ್ಯವೂ ಹೆಚ್ಚುತ್ತದೆ ಎಂಬುದನ್ನು ನಾವೆಲ್ಲ ಮನಗಾಣಬೇಕು. ಅಂತಹ ನಡೆ-ನುಡಿಯಿಂದ ಮಾತ್ರವೇ ನಮ್ಮ ದೇಶದ ಪ್ರಗತಿ ಸಾಧ್ಯ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಕನ್ನಡ ಕಲಿಯದಿದ್ದರೆ ದಂಡ ವಿಧಿಸಿ

ಬೆಂಗಳೂರಿನ ಚಂದಾಪುರದ ಎಸ್‌ಬಿಐ ಬ್ಯಾಂಕಿನ ಶಾಖೆಯೊಂದರಲ್ಲಿ ಸಿಬ್ಬಂದಿಯೊಬ್ಬರು ಗ್ರಾಹಕರ ಜೊತೆ ಕನ್ನಡದಲ್ಲಿ ವ್ಯವಹರಿಸಲು ನಿರಾಕರಿಸಿದ ಪ್ರಸಂಗದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲೇ ಸ್ಪಂದಿಸಿದ್ದು ಅಭಿನಂದನೀಯ.

ಹೊರರಾಜ್ಯಗಳಿಂದ ಕರ್ನಾಟಕಕ್ಕೆ ಕರ್ತವ್ಯದ ನಿಮಿತ್ತ ಬರುವ ಯಾವುದೇ ಸಿಬ್ಬಂದಿಯು ಗ್ರಾಹಕರ ಜೊತೆ ಕನ್ನಡದಲ್ಲಿಯೇ ವ್ಯವಹರಿಸಬೇಕಿರುವುದು ಅಪೇಕ್ಷಣೀಯ. ಅಂಥವರು ಕರ್ನಾಟಕಕ್ಕೆ ಬಂದ ಆರು ತಿಂಗಳಲ್ಲಿ ಕನ್ನಡದಲ್ಲಿ ಮಾತನಾಡಲು ಹಾಗೂ ಒಂದು ವರ್ಷದ ಒಳಗೆ ಅವರ ಕೆಲಸಕ್ಕೆ ಅಗತ್ಯವಿರುವ ಮಟ್ಟಿಗೆ ಕನ್ನಡದಲ್ಲಿ ಓದಲು, ಬರೆಯಲು ಕಲಿತುಕೊಳ್ಳಬೇಕು ಎಂಬ ನಿಯಮವನ್ನು ಸರ್ಕಾರವೇ ರೂಪಿಸಿದರೆ ಸೂಕ್ತವಾಗುತ್ತದೆ. ಕನ್ನಡದ ಬಗ್ಗೆ ಹಗುರವಾಗಿ ನಡೆದುಕೊಂಡವರ ಸೂಕ್ತ ವಿಚಾರಣೆ ನಡೆಸಿ ಅವರಿಗೆ ದಂಡ ವಿಧಿಸುವ ವ್ಯವಸ್ಥೆಯನ್ನು ರಾಜ್ಯ ಸರ್ಕಾರವು ಜಾರಿಗೆ ತರಬೇಕು.

ಆರ್.ಟಿ.ಶರಣ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೀಪ ಬೆಳಗಿದ ಕನ್ನಡದ ಬಾನು

• ಪ್ರೀತಿ ನಾಗರಾಜ್

ನಿನ್ನೆ ಮುಂಜಾನೆ ಜಾಗತಿಕ ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಹೆಜ್ಜೆಯಿಟ್ಟಾಗ ಭಾರತದಲ್ಲಿ ದಟ್ಟರಾತ್ರಿ ಮಗ್ಗುಲು ಮುರಿಯುತ್ತಿತ್ತು. ಬರಹವೇ ದುಸ್ತರ ಎನಿಸಿದ ಕಾಲದಲ್ಲಿ ಬರೆಯಲು ತೊಡಗಿದ ಹಿರಿಯ ಬರಹಗಾರರು ಒಬ್ಬರು, ಬರಹ ದಕ್ಕಲು ತೊಡಗಿದ ಕಾಲಕ್ಕೆ ತನ್ನ ಧ್ವನಿ ಯಾವುದು ಎಂದು ಹುಡುಕಿಕೊಂಡು ಹೊರಟ ಕಿರಿಯ ಬರಹಗಾರರು ಇನ್ನೊಬ್ಬರು. ಈ ಇಬ್ಬರು ಒಂದು ಕಾಲಘಟ್ಟದಲ್ಲಿ ಭೇಟಿಯಾಗಿ ಕನ್ನಡಕ್ಕೊಂದು ಅಪರೂಪದ ವಜ್ರ ಕಿರೀಟವನ್ನು ತಂದುಕೊಟ್ಟಿದ್ದಾರೆ.

ಹಾಸನದಲ್ಲಿದ್ದು ಕಥೆಗಳ ಮೂಲಕ ಬದುಕನ್ನು ದಾಖಲಿಸುತ್ತಾ ಹೋದ ಹೋರಾಟಗಾರ್ತಿ, ಬಂಡಾಯ ಸಾಹಿತಿ, ವಕೀಲೆ, ಪತ್ರಕರ್ತೆ ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ನಡುವಿನ ನಿರ್ಭಿಡೆಯ ಧ್ವನಿಯಾಗಿರುವವರು ಬಾನು ಮುಷ್ತಾಕ್. ಬೆಂಗಳೂರಿನಲ್ಲಿ ಪತ್ರಕರ್ತೆಯಾಗಿ ವೃತ್ತಿ ಆರಂಭಿಸಿ ವಿಶದ ಬರವಣಿಗೆಗಳು ಮತ್ತು ಅನುವಾದದ ಮೂಲಕ ತಮ್ಮ ಧ್ವನಿಯನ್ನು ಕಂಡುಕೊಂಡ ಕೊಡಗು ವಾಸಿ ದೀಪಾ ಭಾಸ್ತಿ. ಇಬ್ಬರೂ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಕೊಡಮಾಡುವ ವೇದಿಕೆಯ ಮೇಲೆ ಒಬ್ಬರನ್ನೊಬ್ಬರು ತಬ್ಬಿ ಅಭಿನಂದಿಸಿದಾಗ ಅಲ್ಲೊಂದು ಅಪೂರ್ವ ಗಳಿಗೆ ಹಾಗೇ ಹರಳುಗಟ್ಟಿತು.

ಮಾತಿಲ್ಲದವರು ಒಂದನ್ನು ಧ್ವನಿಸಿದರೆ ಮಾತನಾಡುತ್ತಿರುವವರ ಧ್ವನಿಯೇ ಬೇರೆ ಎನ್ನುವ ಈ ದುರಿತಕಾಲದಲ್ಲಿ ಕನ್ನಡದ ಇಬ್ಬರು ಮಹಿಳೆಯರು ಸಾಹಿತ್ಯ ಲೋಕದ ಎಲ್ಲೆಗಳ ಮೀರಿ ನಿಂತರು; ಬೇರೆ ಬೇರೆ ಪೀಳಿಗೆಗಳಿಗೆ, ಬೇರೆ ಬೇರೆ ಊರುಗಳಿಗೆ, ಬೇರೆ ಬೇರೆ ವೃತ್ತಿಗಳಿಗೆ ಸೇರಿದವರು ಧುತ್ತೆಂದು ವಿಶ್ವ ಸಾಹಿತ್ಯದ ವೇದಿಕೆಯ ಮೇಲೆ ನಿಂತು ಕನ್ನಡದ ಪ್ರತಿನಿಧಿಗಳಾಗಿ ಹೊಚ್ಚಹೊಸ ಕನಸನ್ನು ಕಟ್ಟಿಕೊಟ್ಟರು. ನಿನ್ನೆ ರಾತ್ರಿ ನಿರಾಳವಾಗಿ ಮಲಗಿದ್ದ ಭಾರತಕ್ಕೆ 'ಕಲ್ಲು ನೀರು ಕರಗುವ ಹೊತ್ತಿನಲ್ಲಿ' ಸಂಭ್ರಮ ತುಂಬಿಸಿದರು. ಮುಂಜಾವು ಇನ್ನೇನು ಮೈಮುರಿದು ಏಳಬೇಕು ಎನ್ನುವ ಹೊತ್ತಿಗೆ ಕನ್ನಡದ ಕಂಪನ್ನು, ಈ ಭಾಷೆಯ ಶ್ರೀಮಂತ ಇತಿಹಾಸವನ್ನು ಲಂಡನ್ನಿನ ಟೇಟ್ ಮಾಡರ್ನ್ ಮ್ಯೂಸಿಯಂನಲ್ಲಿ ಪಸರಿಸಿದರು.

ಇಬ್ಬರೂ ಯಾವುದೇ ಆಡಂಬರವಿಲ್ಲದೆ ಅತಿ ಸರಳ ಸೀರೆಯುಟ್ಟು ಸ್ನಿಗ್ಧ ನಗುವಿನೊಂದಿಗೆ ತಮ್ಮ ಅತ್ಯಂತ ಭಾವುಕ ಗಳಿಗೆಯಲ್ಲೂ ಕನ್ನಡದ 'ಯಾವ ಕತೆಯೂ ಸಣ್ಣದಲ್ಲ' ಮತ್ತು 'ಜೇನಿನ ಹೊಳೆಯೋ ಹಾಲಿನ ಮಳೆಯೋ' ಎಂಬ ಸೂಕ್ತವಾದ ಮಾತುಗಳೊಂದಿಗೆ ತಮ್ಮ ಆಯ್ಕೆಗಳನ್ನು, ಹೋರಾಟಗಳನ್ನು ಮತ್ತು ಕನ್ನಡತನವನ್ನು ಅಲ್ಲಿ ಪ್ರಜ್ವಲಿಸುವಂತೆ ಎತ್ತಿ ಹಿಡಿದರು.

ಕನ್ನಡವೇ ಆಗಾಗ ತುಳಿತಕ್ಕೊಳಗಾಗುತ್ತಿರುವ ಕಾಲವಿದು. ಹಲವಾರು ವರ್ಷ ಬೆಂಗಳೂರಿನಲ್ಲಿ ಅನ್ನ ಮತ್ತು ಘನತೆಯ ಜೀವನಕ್ಕಾಗಿ ನೆಲೆ ನಿಂತಿದ್ದರೂ 'ಸಕಲ ಕನ್ನಡ ನಾಡು ನನ್ನ ಭಾಷೆ ಕಲಿಯಲಿ' ಎಂಬ ಅಹಂ ತೊಟ್ಟು ದಿನ ಬೆಳಗಾದರೆ ಕನ್ನಡಿಗರನ್ನು ಅವಹೇಳನ ಮಾಡುತ್ತಾ 'ಕನ್ನಡ್ ಗೊತ್ತಿಲ್' ಎಂದು ಸೆಟೆದು ಹೇಳುವ ಮಾತುಗಳೇ ಸಾಮಾಜಿಕ ಜಾಲತಾಣಗಳಲ್ಲಿ ಕಾಣುವ ದಿನಗಳಿವು. ಅಂತಹ ದಿನಗಳಲ್ಲಿ ಇದೊಂದು ಸಂಭ್ರಮ ಅನೂಹ್ಯ ನಿರಾಳ ಭಾವ ಮೂಡಿಸಿದೆ ಎಂದರೆ ಅತಿಶಯೋಕ್ತಿಯಲ್ಲ.

ಎಳೆಯರು ಇಂದು ಅಲ್ಗಾರಿದಂಗಳ ಜಗತ್ತಿನಲ್ಲಿ ಕಳೆದುಹೋಗಿ ಕನ್ನಡವನ್ನು ನಿರಾಕರಿಸಿ ಬದುಕುತ್ತಿರುವಾಗ ಕನ್ನಡದಿಂದ ಕೊಡುಕೊಳ್ಳುವಿಕೆಯ ಆಯ್ಕೆಯನ್ನು ಮಾಡಿದ ದೀಪಾ ಭಾಸ್ತಿ ನಿಜಕ್ಕೂ ಅಭಿನಂದನಾರ್ಹರು. ಹಟ ಹಿಡಿದು ಕನ್ನಡ ಕಲಿತು ಕನ್ನಡದಲ್ಲಿ ಬರೆದು ಕನ್ನಡವನ್ನೇ ಉಸಿರಾಡುವ ಬರಹಗಾರರಾದ ಬಾನು ಮುಷ್ತಾಕ್ ಐದು ದಶಕಗಳ ಹಿಂದೆ ಲಂಕೇಶ್ ಪತ್ರಿಕೆಯಲ್ಲಿ ಬರೆಯಲು ಪ್ರಾರಂಭಿಸಿದಾಗ ದೀಪಾ ಹುಟ್ಟಿರಲೂ ಇಲ್ಲವೇನೋ. ಇಂದು ಬಾನು ಅವರ ಕಥೆಗಳ ಜಗತ್ತನ್ನು ಅದರ ಎಲ್ಲಾ ಅನನ್ಯತೆಗಳೊಂದಿಗೆ ಇಂಗ್ಲಿಷ್‌ಗೆ ದಾಟಿಸುವ ಜವಾಬ್ದಾರಿಯನ್ನು ಕೈಗೆತ್ತಿಕೊಳ್ಳುವ ಮೂಲಕ ಕನ್ನಡಿಗರ ಸಂಭ್ರಮಕ್ಕೆ ದೀಪಾ ನಿಜಕ್ಕೂ ಜಾಗತಿಕ ಸಾಹಿತ್ಯದ ಹಣತೆ ಹಚ್ಚಿಟ್ಟಿದ್ದಾರೆ.

ಮುಖ್ಯವಾಹಿನಿಯಿಂದ ದೂರ ನಿಂತು ಬಾನು ಹಾಸನದಲ್ಲಿ ತಮ್ಮ ಹೋರಾಟ, ವಕೀಲಿಕೆ ಹಾಗೂ ಬರಹದ ಕೆಲಸ ಮಾಡುತ್ತಾ ಹೋದವರು. ಹಾಗೆಯೇ ಬೆಂಗಳೂರಿನ ಟೈಮ್ಸ್ ಆಫ್ ಇಂಡಿಯಾ, ಇಂಡಿಯನ್ ಎಕ್ಸ್‌ಪ್ರೆಸ್, ಸ್ಕ್ರಾಲ್, ಹಿಮಾಲ್ ಮ್ಯಾಗ್ ಪತ್ರಿಕೆಗಳಲ್ಲಿ ಕೆಲಸ ಮಾಡಿ ತಮ್ಮ ಬರಹದ ಆಯಾಮ ಬೇರೆಯೇ ಇದೆ ಎಂದು ನಂತರ ನಿರ್ಧರಿಸಿ ಕೊಡಗಿನ ಮಡಿಕೇರಿಯಲ್ಲಿ ನೆಲಸಿ ತನ್ನ ಬರವಣಿಗೆ, ಅನುವಾದಗಳನ್ನು ಮಾಡುತ್ತಾ ನಿಂತವರು ದೀಪಾ. ಇಬ್ಬರೂ 'ನೆಟ್‌ವರ್ಕ್' ಹಾಗೂ 'ಅವಕಾಶ'ಗಳನ್ನು ಲೆಕ್ಕಾಚಾರದಲ್ಲಿ ಬಳಸುವ ಜನಗಳ ನಡುವೆ ತೀರಾ ವಿಭಿನ್ನವಾಗಿ ನಿಂತಿದ್ದಾರೆ. ಬಾನು ಅವರು ತಮ್ಮ ಬರಹಗಳ ಮೂಲಕ ತಮ್ಮ ಇರವನ್ನು ದಾಖಲಿಸಿದರೆ, ಅವರಿಗಿಂತ ಎಳೆಯರಾದ ದೀಪಾ ಡಿಜಿಟಲ್ ಜಗತ್ತಿನ ಆಕರ್ಷಣೆಯನ್ನು ಮೀರಿ ಕೇವಲ ತಮ್ಮ ಕೆಲಸದ ಮೂಲಕವೇ ಪ್ರಸ್ತುತವಾಗಿದ್ದಾರೆ. ಜಾಲತಾಣದಲ್ಲಿ ಎಳೆದೆಳೆದು ಹುಡುಕಿದರೂ ಅವರ ಬಗ್ಗೆ ಚುಟುಕು ವಿವರಗಳನ್ನು, ಸಂದರ್ಶನಗಳನ್ನು ಬಿಟ್ಟರೆ ಹೆಚ್ಚಿನ ವಿವರ ದೊರಕದು.

ಹೀಗೆ ಯಾವುದೇ ಸದ್ದುಗದ್ದಲವಿಲ್ಲದೆ, ಮುಖ್ಯ ವೇದಿಕೆಗಳ ಆಸೆ, ಭಟ್ಟಂಗಿತನಕ್ಕೆ ಎಳೆಸದೆ ತಮ್ಮ ಪಾಡಿಗೆ ತಾವು ಕೆಲಸ ಮಾಡುತ್ತಾ ಹೋಗಿ ಅಲ್ಲೊಂದು ಬಿಂದುವಿನಲ್ಲಿ ಕನ್ನಡಕ್ಕೆ ಅಪರೂಪದ ಗೌರವವನ್ನು ತಂದುಕೊಟ್ಟು ಎಲ್ಲಾ ಕನ್ನಡಿಗರೂ ಮತ್ತಷ್ಟು ಹೆಮ್ಮೆಯಿಂದ ನಿಲ್ಲುವಂತೆ ಮಾಡಿದವರು ಇಬ್ಬರು ಮಹಿಳೆಯರು. ಭಿನ್ನ ಪರಂಪರೆಗೆ ಸೇರಿದರೂ ಭಾಷಾ ಹಾಗೂ ಸಾಮಾಜಿಕ ಬಹುತ್ವದ ಏಕ ನಂಬಿಕೆಯ ಸೂತ್ರದಲ್ಲಿ ಒಟ್ಟಾದವರು. ಲಂಕೇಶ್ ಪತ್ರಿಕೆಯಿಂದ ಪತ್ರಿಕಾ ಬರವಣಿಗೆಗೆ, ಪ್ರಜಾಮತದಿಂದ ಸಣ್ಣ ಕಥೆಗಳ ಜಗತ್ತಿಗೆ ಅಡಿಯಿಟ್ಟ ಬಾನು ಇಂದು ಆ ಗರಡಿಯಿಂದ ಬಂದ ಹೆಸರುಗಳ ಪೈಕಿ ಪ್ರಖರವಾಗಿ ಹೊಳೆಯುವ ಧ್ರುವತಾರೆ ಆಗಿದ್ದಾರೆ. ಮುಸ್ಲಿಂ ಮಹಿಳೆಯರ ಜಗತ್ತನ್ನು ಕನ್ನಡಿಗರು ನೋಡಲು ಶುರು ಮಾಡಿದ್ದು ಸಾರಾ ಅಬೂಬಕರ್ ಅವರಿಂದ. ಅಲ್ಲಿಂದ ಮುಂದಕ್ಕೆ ಬಾನು ಈ ಧ್ವನಿಯನ್ನು ಸತತವಾಗಿ ದಾಖಲಿಸಿದ್ದಾರೆ. ಕೆಲ ಕಾಲ ಶಿಕ್ಷಕಿಯಾಗಿಯೂ, ಪತ್ರಕರ್ತೆಯಾಗಿಯೂ ಇದ್ದ, ಪೂರ್ಣಕಾಲಿಕವಾಗಿ ವಕೀಲರಾಗಿರುವ ಬಾನು ಮುಷ್ತಾಕ್ ಅವರ ಬರಹಗಳು ಉರ್ದು, ಹಿಂದಿ, ತಮಿಳು, ಮಲಯಾಳ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟವಾಗಿವೆ.

ಉತ್ತಮ ಬರಹಗಾರರಿಗೆ ಉತ್ತಮ ಭಾಷಾಂತರಕಾರರೂ ಸಿಕ್ಕು ಅವರ ಲೇಖನಿಗೆ ಸ್ವಾತಂತ್ರ್ಯ ಸಿಕ್ಕರೆ ಏನಾಗಬಹುದು ಎನ್ನುವುದರ ಹೆಮ್ಮೆಯ ಫಲಿತಾಂಶ ನಮ್ಮ ಮುಂದಿದೆ. ಇಬ್ಬರ ಹಿಂದೆಯೂ ಅವರ ಬೆನ್ನಿಗೆ ನಿಂತ ಅವರ ಸಂಗಾತಿಗಳಿದ್ದಾರೆ; ಅವರ ತಾಯ್ತಂದೆ ಹಾಗೂ ಮಕ್ಕಳಿದ್ದಾರೆ. ಅವರೆಲ್ಲರ ಹೆಮ್ಮೆಯ ಪ್ರತೀಕವಾಗಿ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಹೀಗೆ ನಡೆಯುತ್ತಾ ಕರ್ನಾಟಕಕ್ಕೆ ಬಂದುಬಿಟ್ಟಿದೆ. ಇದೊಂದು ಅನನ್ಯ ಸೀಮೋಲ್ಲಂಘನ.

ಲೇಖಕಿ: ಪತ್ರಕರ್ತೆ

ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ

ಬೇರೆ ಭಾಷೆಗಳಿಂದ ಇಂಗ್ಲಿಷ್‌ಗೆ ಭಾಷಾಂತರ ಮಾಡಲಾದ ಸೃಜನಶೀಲ ಸಾಹಿತ್ಯ ಅಥವಾ ಸಣ್ಣ ಕಥೆಗಳಿಗೆ ಕೊಡಮಾಡುವ ಜಗತ್ತಿನ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿ ಇದು. ಬ್ರಿಟನ್‌ನ ಬೂಕರ್ ಪ್ರಶಸ್ತಿ ಫೌಂಡೇಷನ್ ವಾರ್ಷಿಕವಾಗಿ ಈ ಪ್ರಶಸ್ತಿಯನ್ನು ನೀಡುತ್ತದೆ. ಬ್ರಿಟನ್ ಅಥವಾ ಐರ್ಲೆಂಡ್‌ನಲ್ಲಿ ಪ್ರಕಟವಾದ ಕೃತಿಗಳನ್ನು ಮಾತ್ರ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಈ ಪ್ರಶಸ್ತಿಯ ಬಹುಮಾನ ಮೊತ್ತ 50 ಸಾವಿರ ಪೌಂಡ್ (₹57.34 ಲಕ್ಷ). 2005ರಲ್ಲಿ ಈ ಪ್ರಶಸ್ತಿ ಆರಂಭಿಸಲಾಗಿತ್ತು. ಆಗ ಇದಕ್ಕೆ ಮ್ಯಾನ್ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಎಂದು ಹೆಸರಿಡಲಾಗಿತ್ತು. 2015ರಲ್ಲಿ ನಿಯಮ ಬದಲಾವಣೆ ಆದ ನಂತರ ಪ್ರಶಸ್ತಿ ಹೆಸರನ್ನು ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಎಂದು ಬದಲಾಯಿಸಲಾಯಿತು.

ಬಾನು ಮುಷ್ತಾಕ್ ಅವರು ಈ ಪ್ರಶಸ್ತಿಗೆ ಭಾಜನರಾದ ಭಾರತದ ಎರಡನೇ ಲೇಖಕಿ. 2022ರಲ್ಲಿ ಗೀತಾಂಜಲಿ ಶ್ರೀ ಅವರ 'ಟಾಂಬ್ ಆಫ್ ಸ್ಯಾಂಡ್' (ಹಿಂದಿ ಕಾದಂಬರಿ) ಕೃತಿಗೆ ಈ ಪ್ರಶಸ್ತಿ ಬಂದಿತ್ತು. ದೀಪಾ ಭಾಸ್ತಿ ಅವರು ಈ ಪ್ರಶಸ್ತಿ ಮುಡಿಗೇರಿಸಿಕೊಂಡ ಭಾರತದ ಮೊದಲ ಅನುವಾದಕಿ.

2013ನೇ ಸಾಲಿನಲ್ಲಿ ಕನ್ನಡದ ಯು.ಆರ್. ಅನಂತಮೂರ್ತಿ ಅವರು ಪ್ರಶಸ್ತಿಗಾಗಿ ನಾಮನಿರ್ದೇಶನಗೊಂಡಿದ್ದ ಲೇಖಕರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದರು. ಆ ಪಟ್ಟಿಯಲ್ಲಿದ್ದ ದೇಶದ ಏಕೈಕ ಸಾಹಿತಿ ಅವರಾಗಿದ್ದರು.

ಬೂಕರ್ ಪ್ರಶಸ್ತಿ

The Booker Prizes

ಬೂಕರ್ ಪ್ರಶಸ್ತಿ ಫೌಂಡೇಷನ್, 'ಬೂಕರ್ ಪ್ರಶಸ್ತಿ' ಎಂಬ ಹೆಸರಿನಲ್ಲಿ ಇಂಗ್ಲಿಷ್ ಕಾದಂಬರಿಗೆ ಪ್ರತಿ ವರ್ಷ ಪ್ರಶಸ್ತಿಯನ್ನು ಘೋಷಿಸುತ್ತದೆ. ಇದಕ್ಕೆ ಮೊದಲು ಮ್ಯಾನ್ ಬೂಕರ್ ಪ್ರಶಸ್ತಿ ಎಂಬ ಹೆಸರಿತ್ತು. ಬ್ರಿಟನ್ ಮತ್ತು ಐರ್ಲೆಂಡ್‌ನಲ್ಲಿ ಪ್ರಕಟಗೊಂಡ ಕೃತಿಗಳನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. 1969ರಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಏಳು ಮಂದಿಯನ್ನೊಳಗೊಂಡ ತೀರ್ಪುಗಾರರ ಸಮಿತಿ ಕೃತಿಯನ್ನು ಆಯ್ಕೆ ಮಾಡುತ್ತದೆ. ಈ ಪ್ರಶಸ್ತಿಯ ಬಹುಮಾನ ಮೊತ್ತ 50 ಸಾವಿರ ಪೌಂಡ್ (₹57.34 ಲಕ್ಷ).

1997ರಲ್ಲಿ ಭಾರತದ ಅರುಂಧತಿ ರಾಯ್ (ಕೃತಿ: ಗಾಡ್ ಆಫ್ ಸ್ಮಾಲ್ ಥಿಂಗ್ಸ್), 2008ರಲ್ಲಿ ಅರವಿಂದ ಅಡಿಗ (ದಿ ವೈಟ್ ಟೈಗರ್) ಅವರು ಬೂಕರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಭಾರತ ಮೂಲದ ವಿ.ಎಸ್.ನೈಪಾಲ್ ಅವರು 1971ರಲ್ಲಿ (ಕೃತಿ:ಇನ್ ಎ ಫ್ರೀ ಸ್ಟೇಟ್) ಬೂಕರ್ ಪ್ರಶಸ್ತಿಗೆ ಆಯ್ಕೆಯಾಗಿದ್ದರು. ಅನಿವಾಸಿ ಭಾರತೀಯ ಸಲ್ಮಾನ್ ರಶ್ದಿ ಅವರ 'ಮಿಡ್‌ನೈಟ್ಸ್ ಚಿಲ್ಡ್ರನ್' ಕೃತಿಯು 1981ರಲ್ಲಿ ಬೂಕರ್ ಪ್ರಶಸ್ತಿಗೆ ಭಾಜನವಾಗಿತ್ತು. ಮತ್ತೊಬ್ಬ ಅನಿವಾಸಿ ಭಾರತೀಯ ಸಾಹಿತಿ ಕಿರಣ್ ದೇಸಾಯಿ (ಕೃತಿ: ದಿ ಇನ್‌ಹೆರಿಟೆನ್ಸ್ ಆಫ್ ಲಾಸ್) ಅವರು 2006ರಲ್ಲಿ ಈ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದರು.

ಎಂದಿಗೂ ಆರದ ಹೋರಾಟದ ಕಿಚ್ಚು

• ಧರ್ಮೇಶ್

ಬಾನು ಮುಷ್ತಾಕ್ ಅವರು ಲೇಖಕಿಯಷ್ಟೇ ಅಲ್ಲ, ಪತ್ರಕರ್ತೆ, ವಕೀಲೆ ಮತ್ತು ರೈತ, ದಲಿತ, ಪ್ರಗತಿಪರ ಹೋರಾಟಗಾರ್ತಿ ಕೂಡ. ಲಂಕೇಶ್ ಪತ್ರಿಕೆಯಲ್ಲಿ ವರದಿಗಾರ್ತಿಯಾಗಿ ಬರವಣಿಗೆ ಆರಂಭಿಸಿದರು ಅವರು. ಶಿವಮೊಗ್ಗ, ಹಾಸನ, ಮೈಸೂರು ಭಾಗದಲ್ಲಿ ಲಂಕೇಶ್ ಪತ್ರಿಕೆಗೆ ಬರೆಯುತ್ತ ಲಂಕೇಶ್ ಬಳಗದಲ್ಲಿ ಗುರುತಿಸಿಕೊಂಡಿದ್ದರು. ಈ ಒಡನಾಟವೇ ಅವರಲ್ಲಿ ಸಾಮಾಜಿಕ ಹಿನ್ನೆಲೆಯೊಂದನ್ನು ರೂಪುಗೊಳಿಸಿತು. ನಂತರದ ದಿನಗಳಲ್ಲಿ ಲಂಕೇಶ್ ಪತ್ರಿಕೆಯಲ್ಲಿ ಬರೆಯುವುದು ಕಡಿಮೆಯಾದ ಬಳಿಕ ವಕೀಲ ವೃತ್ತಿ ಆರಂಭಿಸಿದರು. ಜತೆ ಜತೆಯಲ್ಲೇ ಚಂದ್ರಪ್ರಸಾದ್ ತ್ಯಾಗಿ ಅವರೊಂದಿಗೆ ದಲಿತ ಹೋರಾಟ, ವೆಂಕಟೇಶಮೂರ್ತಿ, ಮಂಜುನಾಥದತ್ತ ಅವರೊಂದಿಗೆ ಸೇರಿ ರೈತ ಹೋರಾಟದಲ್ಲಿ ತೊಡಗಿಸಿಕೊಂಡರು. ಇದರ ನಡುವೆ ಒಮ್ಮೆ ಕಾಂಗ್ರೆಸ್ ಪಕ್ಷದಿಂದ ನಗರಸಭೆ ಸದಸ್ಯೆಯೂ ಆಗಿ ಜನರ ಧ್ವನಿಯಾಗಿದ್ದರು. ರಾಜಕೀಯ ಅವರ ಮನಃಸ್ಥಿತಿಗೆ ಒಗ್ಗದ ಕಾರಣ ವಕೀಲ ವೃತ್ತಿಯೊಂದಿಗೆ ಬರವಣಿಗೆಯಲ್ಲಿ ಹೆಚ್ಚು ತೊಡಗಿಸಿಕೊಂಡರು. ಸಾಮಾಜಿಕ ಹೋರಾಟಗಳಲ್ಲಿ ಗುರುತಿಸಿಕೊಂಡರು.

ಚಿಕ್ಕಮಗಳೂರಿನ ಸೌಹಾರ್ದದ ತಾಣ ಬಾಬಾಬುಡನ್‌ಗಿರಿಯನ್ನು ಸಂಘಪರಿವಾರದ ಗುಂಪು ಕೋಮು ರಾಜಕೀಯದ ಪ್ರಯೋಗಶಾಲೆ ಮಾಡಲು ಹೊರಟಾಗ ಅದರ ವಿರುದ್ಧ ರೂಪುಗೊಂಡ ಚಳವಳಿಯಲ್ಲಿ ಸಕ್ರಿಯರಾಗಿದ್ದರು. 2003ರಲ್ಲಿ ಗಿರೀಶ ಕಾರ್ನಾಡ, ಯು.ಆರ್. ಅನಂತಮೂರ್ತಿ, ಕೆ.ಮರುಳಸಿದ್ದಪ್ಪ, ಗೌರಿ ಲಂಕೇಶ್, ಶೂದ್ರ ಶ್ರೀನಿವಾಸ್ ಇತ್ಯಾದಿ ಪ್ರಮುಖರ ಜತೆಗೆ ಬಾಬಾಬುಡನ್ ಗಿರಿ ಸತ್ಯಶೋಧನಾ ಸಮಿತಿ ಭಾಗವಾಗಿ, ವರದಿ ತಯಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಅದೇ ಸಂದರ್ಭದಲ್ಲಿ ಬಾಬಾಬುಡನ್‌ಗಿರಿ ಉಳಿಸಿ ಹೋರಾಟ ತೀವ್ರಗೊಳ್ಳುತ್ತಿತ್ತು. ಅದರಲ್ಲಿ ಬಾನು ಅವರದ್ದು ಸಕ್ರಿಯ ಪಾತ್ರ. ಮುಸ್ಲಿಂ ಮಹಿಳೆಯರ ಮೇಲಿನ ದಬ್ಬಾಳಿಕೆಯ ವಿರುದ್ಧ ಬರವಣಿಗೆಯ ಮೂಲಕವೂ ಬಹಿರಂಗವಾಗಿಯೂ ಧ್ವನಿ ಎತ್ತಿದರು. ಮಹಿಳೆಯರಿಗೆ ಮಸೀದಿಯಲ್ಲಿ ಪ್ರಾರ್ಥನೆಗೆ ಅವಕಾಶ ನೀಡಬೇಕು ಎಂದು ಕೇಳಿದ್ದರು. ಆಗ ಅವರ ವಿರುದ್ಧ ಫತ್ವಾ ಹೊರಡಿಸಲಾಗಿತ್ತು. ಕೊಲೆ ಬೆದರಿಕೆಯೂ ಬಂದಿತ್ತು. ಆದರೂ ಅವರು ಮುಸ್ಲಿಂ ಸಮುದಾಯದ ಮಹಿಳೆಯರಿಗೂ ಧಾರ್ಮಿಕ ಹಕ್ಕು ಬೇಕು ಎಂದು ಪ್ರತಿಪಾದಿಸಿದ್ದರು.

ಜನನುಡಿ ಸಮ್ಮೇಳನ, ಉಡುಪಿ ಚಲೋ ರೀತಿಯ ಹೋರಾಟಗಳನ್ನು ಸಂಘಟಿಸವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಧಾರ್ಮಿಕ ಸೂಕ್ಷ್ಮತೆ, ಅಸ್ಪೃಶ್ಯತೆ, ಕೋಮುವಾದದ ವಿಷಯ ಬಂದಾಗ ನೇರವಾಗಿ ನಿಂತು ಮಾತನಾಡುವ ಗಟ್ಟಿಗಿತ್ತಿ. ಅಸ್ಪೃಶ್ಯತೆ ವಿರುದ್ಧ ನಡೆದ ಸಿಗರನಹಳ್ಳಿ ಹೋರಾಟದಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದರು. ಮಹಿಳೆಯರ ಮೇಲಿನ ಅನ್ಯಾಯಗಳ ವಿರುದ್ಧ, ಪ್ರಜ್ವಲ್ ರೇವಣ್ಣ ವಿರುದ್ಧ ನಡೆದ ದೊಡ್ಡಮಟ್ಟದ ಹೋರಾಟ ಸಂಘಟಿಸುವಲ್ಲಿ ಅವರು ತೊಡಗಿಕೊಂಡಿದ್ದರು. ಹಾಸನದಲ್ಲಿ ಪ್ರಗತಿಪರ ಸಮುದಾಯ, ಜನಪರ ಸಮುದಾಯ ಎಂದಾಗ ಬಾನು ಮುಷ್ತಾಕ್ ಹೆಸರು ಮುಖ್ಯವಾಗಿ ಕೇಳಿಬರುತ್ತದೆ.

ಲೇಖಕ: ಸಿಐಟಿಯು ಹಾಸನ ಜಿಲ್ಲಾ ಘಟಕದ ಅಧ್ಯಕ್ಷ

ಎದೆಯ ಹಣತೆಯ ಬೆಳಕೀಗ ಜಗದಗಲ

• ಪಿ.ಚಂದ್ರಿಕಾ

ಸಮಾಜದಲ್ಲಿನ ಕಟ್ಟುಪಾಡುಗಳು ಗಂಡಿನ ವಿಕೃತ ಮನಸ್ಸುಗಳು ಹುಟ್ಟುಹಾಕುವ ಸಂದರ್ಭಗಳನ್ನು ಒಟ್ಟಿಗೆ ಎದುರಿಸುವ ಹೆಣ್ಣು ಅದರ ಒಳಗೆ ಸಾಧಿಸಬಹುದಾದ ಸಂಗತಿಗಳ ಕಡೆಗೆ ಸಾಗುತ್ತಾಳೆ. ಸಮ್ಮಾನಗಳಿಗಿಂತ ಅವಮಾನಗಳನ್ನು ಹೊರುತ್ತಾಳೆ. ಸಮಾಜ ಅವಳಿಂದ ಮತ್ತೂ ನಿರೀಕ್ಷಿಸುತ್ತದೆ– ನೀನು ಮತ್ತಷ್ಟು ವಿನಮ್ರವಾಗು ಎಲ್ಲವನ್ನೂ ತಾಳಿಕೋ. ಇಂಥಾ ಹೊತ್ತಿನಲ್ಲಿ ಅಕ್ಷರವನ್ನು ನಂಬಿ, ಸೀಮಾರೇಖೆಗಳ ಒಳಗೇ ಸಾಧಿಸಬಹುದಾದ ಜಗತ್ತು ಮಹತ್ತೇ ಎಂದು ನಂಬಿ ಬರೆದವರು ಕನ್ನಡಕ್ಕೆ ಹೆಮ್ಮೆಯನ್ನು ತಂದಿತ್ತಿರುವ ಬಾನು ಮುಷ್ತಾಕ್.

ತನ್ನಂತೆ ಪರರೂ ಎಂದು ನಂಬಿರುವ ಸರಳ ವ್ಯಕ್ತಿತ್ವದ ಅವರು ಯಾವ ಜೀವಗಳಲ್ಲೂ ತಾರತಮ್ಯವನ್ನು ಎಣಿಸುವುದಿಲ್ಲ. ತಾನು ಹುಟ್ಟಿರುವ ಧರ್ಮ ವಿಶ್ವಧರ್ಮಕ್ಕೆ ಏನನ್ನು ಹೇಳುತ್ತದೆ ಎಂದು ಹೇಳದೇ ಹೋದರೆ ಅದು ಅಪರಾಧ. ನಿನ್ನ ಸುತ್ತಮುತ್ತಲಿನ ನಲವತ್ತು ಮನೆಗಳು ಅದು ಯಾವ ಧರ್ಮದವರದ್ದೇ ಆಗಲಿ ಅಲ್ಲಿ ಯಾರೂ ಹಸಿವಿನಿಂದ ಮಲಗಬಾರದು, ಯಾರೂ ನೋವನ್ನು ಅನುಭವಿಸಬಾರದು ಹಾಗೆ ನೋಡಿಕೊಳ್ಳಬೇಕಿರುವುದು ನಿನ್ನ ಧರ್ಮ ಎಂದು ಪೈಗಂಬರ್ ಸಾರಿದ್ದಾರೆ. ಇದನ್ನು ಮುಂದಿನ ಜನಾಂಗಕ್ಕೆ ದಾಟಿಸದೇ ಹೋದರೆ ನಾವು ದ್ರೋಹಿಗಳಾಗುತ್ತೇವೆ- ಯಾಕೆಂದರೆ ವಿಶ್ವದ ಯಾವ ಧರ್ಮವೂ ಜೀವ ವಿರೋಧಿಯಲ್ಲ ಎಂದಿದ್ದು ನೆನಪಾಗುತ್ತದೆ. 'ಫಕೀರನೊಬ್ಬ ಹಾಡುತ್ತಿದ್ದ ತತ್ವ ಪದ 'ಹಂದಿಯನೇಕೆ ಹೀಗಳೆವೆ ಮನದಲ್ಲಿ ಹಂದಿ, ಮನೆಯಲ್ಲಿ ಹಂದಿ, ಮೈಯಲ್ಲಿ ಹಂದಿ ಹೊತ್ತವನೇ- ಹಂದಿ ಮಾಂಸವು ಮುಸ್ಲಿಮರಿಗೆ ಹರಾಂ ಅದರಂತೆಯೇ ಕೋಪವು ಕೂಡಾ' (ಬೆಂಕಿ ಮಳೆ) ಎನ್ನುತ್ತಾ ಜೀವ ವಿರೋಧವಾದದ್ದನ್ನು ಹೊತ್ತು ಸಾಗದಂತೆ ಹೇಳುವ ಜೀವ ಕಾರುಣ್ಯವನ್ನು ಹಂಚುವ ಅವರು ಕಥೆಗಾರ್ತಿ, ಅಂಕಣಗಾರ್ತಿ, ವಕೀಲೆ, ಅಂತಃಕರಣದಲ್ಲಿ ಅಪ್ಪಟ ಮನುಷ್ಯೆ. ಇಂದು ಕನ್ನಡಿಗರ ಮನದುಂಬುವಂತೆ ಮಾಡಿದ್ದಾರೆ ತಮ್ಮದೇ ಕಥೆಗಳಿಂದ. ಬೂಕರ್ ಕನ್ನಡಕ್ಕೆ ಬರಬಹುದು ಎನ್ನುವ ಕಲ್ಪನೆಯೇ ರೋಮಾಂಚನವನ್ನು ಹುಟ್ಟು ಹಾಕುತ್ತಿದ್ದಾಗ ಅದನ್ನು ನನಸಾಗಿಸಿ ಪ್ರತಿ ಎದೆಯಲ್ಲೂ ಹಣತೆ ಹಚ್ಚಿದವರು. ನನಗೆ ತುಂಬಾ ಹತ್ತಿರವಾಗಿದ್ದು 'ಹಸೀನಾ' ಸಿನಿಮಾದಿಂದ. ಮೂಲ ಕಥೆಯ ಹೆಸರು 'ಕರಿ ನಾಗರಗಳು'. ಹೆಣ್ಣು ಮಾತ್ರ ಹೆರುವ ಯಂತ್ರವೇ ಆಗಿರಬೇಕು. ಮಕ್ಕಳನ್ನು ಬೆಳೆಸಲಿಕ್ಕೆ ಯೋಗ್ಯತೆ ಇಲ್ಲದಿದ್ದರೂ ಮಕ್ಕಳು ಬೇಕು ಎಂದು ಬಯಸುತ್ತಾನೆ ಗಂಡು. ಅದರಲ್ಲೂ ಗಂಡು ಮಗುವಿನ ಹಂಬಲ ಅಳಿಯಲಾಗದ್ದು. ಗಂಡಿನ ದರ್ಪದ ಪ್ರವೃತ್ತಿಯನ್ನು ಅತ್ಯಂತ ತಣ್ಣಗೆ ಪ್ರತಿಭಟಿಸುವ ಹಸೀನಾ ತನ್ನ ಮಕ್ಕಳ ಭವಿಷ್ಯಕ್ಕಾಗಿ ಹೋರಾಡುತ್ತಾ, ಸಾಮುದಾಯಿಕವಾಗಿ ಬೆಳೆಯುತ್ತಾ, ತನ್ನತನವನ್ನು ಮರೆಯದ ಪಾತ್ರವಾಗಿ ಕಣ್ಣೆದುರು ಕಟ್ಟುತ್ತಾಳೆ. ಕೊನೆಯಲ್ಲಿ ಮಕ್ಕಳಾಗದಂತೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುತ್ತೇನೆನ್ನುವ ಅವಳ ಸಂಕಲ್ಪ ಆಶಾದಾಯಕ ಸ್ಥಿತಿಯನ್ನು ಪ್ರತಿನಿಧೀಕರಿಸುತ್ತದೆ.

ಎಲ್ಲ ವಯೋಮಾನದ ಶ್ರಮಜೀವಿಗಳು ಬಾನು ಮುಷ್ತಾಕ್ ಅವರ ಕಥೆಗಳ ನಾಯಕಿಯರು. ಗಂಡನಿಂದ ನಿಂದನೆಗೊಳಗಾದವಳು, ತಾಯ ಸಾವಿನ ನಂತರ ಅಪ್ಪ ಇನ್ನೊಂದು ಮದುವೆಯಾದರೂ ತಾನೇ ತಾಯಂತೆ ತಮ್ಮ ತಂಗಿಯರನ್ನು ಸಲಹುವ ಪುಟ್ಟ ಬಾಲೆ, ಗಂಡನ ದೌರ್ಜನ್ಯಕ್ಕೆ ಒಳಗಾಗಿ ಜೀವವನ್ನೇ ಕಳಕೊಳ್ಳಲು ಹೊರಟವಳು, ತನ್ನದೇ ಜೀವದ ಕುಡಿಯ ಮಾತುಗಳಿಂದ ಚೈತನ್ಯ ತುಂಬಿಕೊಂಡವಳು... ಇವೆಲ್ಲವೂ ಸ್ತ್ರೀ ಅನುಭವ ವೇದ್ಯವಾದ ಗಾಢ ಸಂವೇದನೆಯ ಕಥೆಗಳು ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ವೃತ್ತಿಯಲ್ಲಿ ವಕೀಲೆಯಾದರೂ ಬಾನು ಅವರು ಎಲ್ಲೂ ವಕೀಲಿಕೆಯ ಗತ್ತು ಗೈರತ್ತನ್ನು ತರುವುದಿಲ್ಲ. ಬದಲಿಗೆ ಹೃದಯದಿಂದ ಮಾತನಾಡುತ್ತಾರೆ. ಸಮಾನತೆಯನ್ನು ನೀಡುವ ಕಾನೂನಿನ ಆಚೆಗೆ ಸಾಮಾಜಿಕ ಪರಿವೇಶ ತೊಟ್ಟ ಎಲ್ಲ ನೀತಿ ನಿಯಮಗಳ ಒಳಗೆ ತೊಳಲುವ ಹೆಣ್ಣುಗಳಿಗೆ ಬಿಡುಗಡೆಯ ಹಾದಿಯೊಂದಿದೆ ಎನ್ನುವುದನ್ನು ಹೇಳುವ ಅವರು ತಮ್ಮ ಜನಾಂಗದ ಒಳಗಿನ ಸ್ತ್ರೀ ಸಂಹಿತೆಯೊಂದನ್ನು ಚಳವಳಿಯಂತೆ ಹುಟ್ಟು ಹಾಕುತ್ತಾರೆ. ಕುಟುಂಬ ಉಳಿಯಲಿ ಎಂದು ಮಾಡಿಕೊಳ್ಳುವ ಹೊಂದಾಣಿಕೆಯನ್ನು ದೌರ್ಬಲ್ಯ ಎಂದು ಭಾವಿಸುವ ಗಂಡು ಅವಳನ್ನು ತುಳಿಯಲಿಕ್ಕೆ ನೋಡುತ್ತಾನೆ. ಅಂತರಂಗದ ನೋವಲ್ಲಿ ಕುದ್ದು ಪರಿಪಾಕಗೊಂಡು ಶುದ್ಧಾತ್ಮವಾದ ಹೆಣ್ಣುಗಳು ಪರಿಸ್ಥಿತಿಯನ್ನು ಚಿಮ್ಮುಹಲಗೆಯಾಗಿ ಮಾರ್ಪಡಿಸಿಕೊಳ್ಳುತ್ತಾರೆ. ಇದು ಅವರ ಹೆಜ್ಜೆ ಮೂಡದ ಹಾದಿ, ಬೆಂಕಿ ಮಳೆ, ಎದೆಯ ಹಣತೆ, ಸಫೀರಾ, ಬಡವರ ಮಗಳು ಹೆಣ್ಣಲ್ಲ ಎನ್ನುವ ಐದು ಸಂಕಲನಗಳ ಕಥೆಗಳ ಹೂರಣ. ಸಣ್ಣ ಸಣ್ಣ ವಿವರಗಳ ಮೂಲಕ ತಾನು ಬದುಕುತ್ತಿರುವ ಪರಿಸರದ ತನ್ನದೇ ಸಮುದಾಯದ ಹೆಣ್ಣುಗಳ ನೋವು ಸಂಕಟಗಳಿಗೆ ಆರ್ದ್ರವಾಗುತ್ತಾ, ವಿಶ್ಲೇಷಿಸುತ್ತಾ, ವಿಮರ್ಶಿಸುತ್ತಾ ನಮ್ಮನ್ನೂ ಒಳಗಾಗುವಂತೆ ಮಾಡುತ್ತಾರೆ.

ಬರವಣಿಗೆಯೂ ಅವಳ ಅಂತರಂಗದ ತುಡಿತವನ್ನು ಮೀರಬಹುದಾದ ಸಾಮಾಜಿಕ ಸಂಗತಿಗಳನ್ನು ಒಳಗೊಳ್ಳುವ ಹಾಗಿಲ್ಲ ಎನ್ನುವ ಸಮಾಜ ಕಟ್ಟುಗಳನ್ನು ಮೀರಿ ಬರೆದ ಕಥೆಗಳು ಕನ್ನಡವನ್ನು ವಿಸ್ತರಿಸಿವೆ. ದೀಪಾ ಭಾಸ್ತಿಯವರ ಶಕ್ತವಾದ ಅನುವಾದದಿಂದಾಗಿ ಇಂದು ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಲಭಿಸಿದೆ. ಅವರಿಗೂ ಕನ್ನಡ ಋಣಿಯಾಗಿದೆ. ಅಲ್ಲದೆ ಹೋಗಿದ್ದರೆ ಈ ಬೆಳಕು ಅಲ್ಲಿ ಹೇಗೆ ಚಲ್ಲವರಿಯುತ್ತಿತ್ತು! ಕನ್ನಡದ ಕೃತಿಗಳು ಹೆಚ್ಚು ಸತ್ವಶಾಲಿ ಎಂದು ನಿರೂಪಿಸಿದ ಇಬ್ಬರಿಗೂ ಅಭಿನಂದನೆಗಳು.

ಲೇಖಕಿ: ಸಾಹಿತಿ

ಬಹು ಆಯಾಮದ ಅನುವಾದಕಿ

ಬೂಕರ್ ಅಂತರರಾಷ್ಟ್ರೀಯ ಪ್ರಶಸ್ತಿ ಪಡೆಯುವ ಮೂಲಕ ಜಾಗತಿಕ ಮಟ್ಟದಲ್ಲಿ ಕನ್ನಡದ ಹಣತೆಯನ್ನು ಬೆಳಗಿಸಿದ ಪತ್ರಕರ್ತೆ, ಲೇಖಕಿ, ಅನುವಾದಕಿ ದೀಪಾ ಭಾಸ್ತಿ ಕೊಡಗಿನವರು. ಮಡಿಕೇರಿಯಲ್ಲಿ ಹುಟ್ಟಿ, ಬೆಳೆದ ಅವರು ಕೊಡಗು ವಿದ್ಯಾಲಯದಲ್ಲಿ ತಮ್ಮ ಆರಂಭಿಕ ವಿದ್ಯಾಭ್ಯಾಸ ಮಾಡಿದರು. ನಂತರ ಮಂಗಳೂರು ವಿಶ್ವವಿದ್ಯಾಲಯದಿಂದ ಸಮೂಹ ಸಂವಹನದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಬೆಂಗಳೂರಿನಲ್ಲಿ ಇಂಗ್ಲಿಷ್ ಪತ್ರಿಕೆಗಳಲ್ಲಿ ಒಂದಷ್ಟು ಕಾಲ ಕೆಲಸ ಮಾಡಿದ ಅವರು ನಂತರ ಫ್ರೀಲ್ಯಾನ್ಸ್ ಲೇಖಕಿ, ಅನುವಾದಕಿ ಆದರು.

ಇಂಡಿಯನ್ ಎಕ್ಸ್‌ಪ್ರೆಸ್, ಕ್ಯಾರವಾನ್, ಟೈಮ್ಸ್ ಆಫ್ ಇಂಡಿಯಾ, ಸ್ಕ್ರಾಲ್, ಓಪನ್ ಮುಂತಾದ ಪತ್ರಿಕೆಗಳಲ್ಲಿ ಅವರ ಸುದ್ದಿ/ಲೇಖನಗಳು ಪ್ರಕಟವಾಗಿವೆ; ಆರ್ಟ್ ರಿವ್ಯೂ, ದಿ ಗಾರ್ಡಿಯನ್, ಪ್ಯಾರಿಸ್ ರಿವ್ಯೂಗಳಲ್ಲಿ ಬರಹಗಳು ಪ್ರಕಟವಾಗಿವೆ. ದೀಪಾ ಅವರಿಗೆ ಸಾಹಿತ್ಯದಂತೆಯೇ ಕಲೆ, ಆಹಾರದ ಬಗೆಗೂ ಅಪಾರ ಆಸಕ್ತಿ. ಅವರು ಕಲಾ ವಿಮರ್ಶೆಯನ್ನೂ ಬರೆದಿದ್ದಾರೆ.

ಅಜ್ಜನ ಗ್ರಂಥಾಲಯದಲ್ಲಿದ್ದ ಪುಸ್ತಕಗಳು, ಅಜ್ಜಿ, ಅಮ್ಮನ ಕಥೆಗಳಿಂದ ಸಾಹಿತ್ಯದ, ಕನ್ನಡ ಪರಂಪರೆಯ ಅರಿವನ್ನು ದಕ್ಕಿಸಿಕೊಂಡವರು ಭಾಸ್ತಿ. ಕನ್ನಡ ಕಾದಂಬರಿಗಳನ್ನು ಓದುತ್ತಾ ಬೆಳೆದ ಅವರಿಗೆ ಪತ್ರಿಕೋದ್ಯಮದ ಅನುಭವದ ನಂತರ ಅನುವಾದದ ಬಗ್ಗೆ ಆಸಕ್ತಿ ಮೂಡಿತು. ಶಿವರಾಮ ಕಾರಂತ ಅವರ 'ಅದೇ ಊರು, ಅದೇ ಮರ' ಕಾದಂಬರಿ ಹಾಗೂ ಕೊಡಗಿನ ಗೌರಮ್ಮ ಅವರ ಸಣ್ಣಕತೆಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದ್ದಾರೆ.

ಬೆಂಗಳೂರಿನಲ್ಲಿ 'ಫೋರೇಜರ್ ಕಲೆಕ್ಟಿವ್' ಎನ್ನುವ ಲೇಖಕಿಯರ, ಕಲಾವಿದರ ಗುಂಪನ್ನು ರೂಪಿಸಿ, ಅದರ ಮೂಲಕ ರಾಜಕಾರಣ, ಸಂಸ್ಕೃತಿ, ಸಾಹಿತ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು.

ಅದರ ಭಾಗವಾಗಿಯೇ ಆಹಾರದ ಸಾಂಸ್ಕೃತಿಕ ಹಾಗೂ ರಾಜಕೀಯ ಆಯಾಮಗಳ ಕುರಿತಂತೆ 'ದಿ ಫೋರೇಜರ್' ಎನ್ನುವ ಆನ್‌ಲೈನ್ ಪಾಕ್ಷಿಕ ಪತ್ರಿಕೆಯನ್ನು ಹೊರತರುತ್ತಿದ್ದರು.

ದೀಪಾ ಭಾಸ್ತಿ ಅವರು ಬಾನು ಮುಷ್ತಾಕ್ ಅವರ ಕೆಲವು ಕಥೆಗಳನ್ನು ಅನುವಾದಿಸಿ, ಅದಕ್ಕೆ ಬ್ರಿಟನ್‌ನ ಸಂಸ್ಥೆಯೊಂದು ಕೊಡಮಾಡುವ 'ಇಂಗ್ಲಿಷ್ ಪೆನ್' ಅನುವಾದ ಪ್ರಶಸ್ತಿ ದೊರಕಿತ್ತು. ಬಾನು ಮುಷ್ತಾಕ್ ಅವರ ಕಥೆಗಳಲ್ಲಿನ ಸಾಮಾಜಿಕ ಪ್ರಜ್ಞೆ, ಮಹಿಳಾ ನೋಟ ಮತ್ತು ರಾಜಕೀಯ ತಮ್ಮ ವ್ಯಕ್ತಿತ್ವಕ್ಕೆ ಹತ್ತಿರವಾದವು; ಬರವಣಿಗೆಯಂತೆಯೇ ಅನುವಾದವೂ ಒಂದು ರಾಜಕೀಯ ಕ್ರಿಯೆ ಎನ್ನುವುದು ದೀಪಾ ಅವರ ಅಭಿಪ್ರಾಯ. ತಮ್ಮ ಪತಿ ಕಲಾವಿದ, ರೈತ ಚೆಟ್ಟೀರ ಸುಜನ್ ನಾಣಯ್ಯ ಅವರೊಂದಿಗೆ ದೀಪಾ ಅವರು ಮಡಿಕೇರಿಯಲ್ಲಿ ನೆಲಸಿದ್ದಾರೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಮೇ 22, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ದಶಮಿ ಗಂ. 25-13 ನಕ್ಷತ್ರ: ಪೂರ್ವಭಾದ್ರ ಗಂ. 17-47 ಯೋಗ: ವಿಷ್ಕಂಭ ಗಂ. 21-49 ಕರಣ: ವಣಜೆ ಗಂ. 14-22, ವೃಷಭ ಮಾಸದ 08 ನೇ ದಿನ.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-07 ಸೂರ್ಯಾಸ್ತ : 06-48

ಮುಸ್ಲಿಂ ದಿನಾಂಕ : 23 ಜುಲ್ಖಾಯದ್

ಅದೃಷ್ಟ ಸಂಖ್ಯೆ : 5, 12

ಮೇಷ: ಸಾಧುಸಂತರ ದರ್ಶನದಿಂದ ಮನಸ್ಸಿಗೆ ಸಮಾಧಾನ ಕಂಡುಬರಲಿದೆ. ಆಕಸ್ಮಿಕ ಧನಲಾಭದಿಂದ ಹರ್ಷವಾಗುವುದು. ಪರೀಕ್ಷಾ ಅಧಿಕಾರಿಗಳು ಕಚೇರಿಗೆ ಭೇಟಿ ನೀಡಿ ಪರೀಕ್ಷಿಸಬಹುದು. ಸಿದ್ಧರಾಗಿರಿ.

ವೃಷಭ: ಬಂಧು-ಮಿತ್ರರ ಒಡನಾಟದಿಂದ ಸಂತೋಷ ತೋರಿಬರಲಿದೆ. ಚಿನ್ನ-ಬೆಳ್ಳಿ ವ್ಯಾಪಾರಿಗಳಿಗಿಂದು ವ್ಯಾಪಾರವಾಗುವ ಸಂತೋಷದ ಜತೆಗೆ ಅಂಗಡಿಯಲ್ಲಿ ಬೆಲೆ ಬಾಳುವ ವಸ್ತುಗಳು ಕಾಣೆಯಾಗುವ ಆತಂಕವೂ ಎದುರಾಗಲಿದೆ.

ಮಿಥುನ: ಸತ್ಯನಾರಾಯಣ ಸ್ವಾಮಿಯ ಸೇವೆ ಮಾಡುವುದರಿಂದ ಜಟಿಲ ಸಮಸ್ಯೆಗಳೂ ಸೌಹಾರ್ದಯುತವಾಗಿ ಬಗೆಹರಿಯಲಿವೆ. ತಂತ್ರಗಾರಿಕಾ ಬುದ್ಧಿಯನ್ನು ಬದಲಿಸಿಕೊಳ್ಳುವ ಸಮಯ.

ಕರ್ಕಾಟಕ: ಪತ್ರಿಕೋದ್ಯಮಿಗಳಿಗೆ ಶುಭದಿನ. ಪ್ರಸ್ತುತ ರಾಜಕೀಯ ವಿದ್ಯಮಾನಗಳಿಂದ ಸಾಮಾಜಿಕ ಲಾಭವಾಗಲಿದೆ. ಅಧಿಕಾರ ಪಡೆದುಕೊಳ್ಳಲು ಲಾಬಿ ನಡೆಸಬೇಕಾಗಬಹುದು. ಪಾರಂಪರಿಕ ಹಿತಶತ್ರುಗಳ ಬಗ್ಗೆ ಎಚ್ಚರ ವಹಿಸಿ.

ಸಿಂಹ: ಹೊಸಕೆಲಸಕ್ಕೆ ಕೈ ಹಾಕಲಿಚ್ಛಿಸಿರುವ ನೀವು ಮೊದಲು ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಬೇಕಾಗುವ ಎಲ್ಲಾ ಕಾರ್ಯಗಳನ್ನು ಪ್ರಾರಂಭಿಸಿ. ಇನ್ನೊಬ್ಬರ ಜೀವನದ ಜತೆ ಆಟವಾಡುವುದು ಸರಿಯಲ್ಲ.

ಕನ್ಯಾ: ಪಟ್ಟು ಬಿಡದೆ ಕೆಲಸಗಳನ್ನು ಮಾಡಿಸಿಕೊಳ್ಳುವಿರಿ. ವೃತ್ತಿ ತರಬೇತಿ ಸಂಸ್ಥೆಗಳಲ್ಲಿ ಉದ್ಯೋಗ ಸಿಗಲಿದೆ. ಮಕ್ಕಳಿಂದ ವಿದ್ಯಾಭ್ಯಾಸದ ವಿಷಯದಲ್ಲಿ ಖರ್ಚು ಸಂಭವವಿರುವುದು. ಉದ್ಯೋಗ ಬದಲಾವಣೆಗೆ ಪ್ರಯತ್ನಿಸಬಹುದು.

ತುಲಾ: ವಾಣಿಜ್ಯೋದ್ಯಮ ಮಂದಿಗೆ ಇಂದು ವ್ಯವಹಾರದಲ್ಲಿ ಬಂಡವಾಳ ತೊಡಗಿಸಲು ಉತ್ತಮ ದಿನ. ಆದರೆ ಹಣದ ಹೊಂದಾಣಿಕೆ ವಿಷಯವಾಗಿ ನಂಬಿದವರಿಂದ ಮೋಸವಾಗಿ ಪರಿಸ್ಥಿತಿ ಕಷ್ಟವಾಗಲಿದೆ.

ವೃಶ್ಚಿಕ: ವೈದ್ಯಕೀಯ ಖರ್ಚಿನ ಹಣವನ್ನು ಸಂಸ್ಥೆಯಿಂದ ಪಡೆದುಕೊಳ್ಳುವಂತಾಗುವುದು. ಕುಟುಂಬ ಕಲಹದಿಂದ ಆದಷ್ಟು ದೂರ ಇರುವುದು ಒಳ್ಳೆಯದು. ಕಾರ್ಯಕ್ಷೇತ್ರದಲ್ಲಿ ಸಹೋದ್ಯೋಗಿಗಳಿಂದ ಕಿರುಕುಳವು ತೋರಿಬಂದೀತು.

ಧನು: ಕಚೇರಿಗಳಲ್ಲಿ ಸಹೋದ್ಯೋಗಿಗಳ ಸಹಕಾರ ಪಡೆಯುವುದು ಅಗತ್ಯ. ಸುಗಂಧ ದ್ರವ್ಯಗಳ ಉಪಯೋಗದಿಂದ ಅಲರ್ಜಿ ಸಂಭವಿಸಬಹುದು. ನಿಗಾದಿಂದ ಉಪಯೋಗಿಸಿ. ವಿದ್ಯಾ ಕ್ಷೇತ್ರದವರಿಗೆ ಗೌರವ ದೊರಕಲಿದೆ.

ಮಕರ: ಮಂಜುನಾಥನ ದರ್ಶನ ಭಾಗ್ಯದಿಂದ ಕಾರ್ಯಾನುಕೂಲವಾಗಲಿದೆ. ಆದಾಯವೆಚ್ಚಗಳನ್ನು ಸರಿದೂಗಿಸಿಕೊಳ್ಳುವಿರಿ. ಪ್ರತಿಭೆ ಮತ್ತು ಕೌಶಲಗಳು ಬೆಳಕಿಗೆ ಬಂದು ಇತರರಿಗೆ ವಿಶೇಷ ವ್ಯಕ್ತಿ ಎನಿಸುವಿರಿ.

ಕುಂಭ: ಧೈರ್ಯದಿಂದ ದೊಡ್ಡ ಯೋಜನೆ ಕೈಗೊಳ್ಳಬಹುದು. ಆದರೆ, ಹಣದ ವಿಚಾರದಲ್ಲಿ ಎಚ್ಚರವಹಿಸಿ. ಆಪ್ತಸ್ನೇಹಿತರು ಮತ್ತು ನೆರೆಯವರೊಂದಿಗೆ ಬಾಂಧವ್ಯ ಉತ್ತಮಗೊಳ್ಳುವುದು. ವ್ಯಸನಗಳಿಂದ ದೂರವಿರಿ.

ಮೀನ: ಶ್ರಮಜೀವಿಗಳಿಗೆ ಉತ್ತಮ ಆದಾಯವಿರುವುದು. ನಿಮ್ಮ ಯೋಜನೆಗಳು ಸರಿಯಾದ ಹಾದಿಯಲ್ಲಿ ಸಾಗುತ್ತಿರುವುದರಿಂದ ಸಮಾಧಾನ ಇರಲಿದೆ. ಯಶಸ್ಸಿಗಾಗಿ ವಿಶೇಷ ಪರಿಶ್ರಮದ ಆಗತ್ಯವಿದೆ.

ಭರವಸೆಯೊಂದಿಗೆ ಬದುಕಬೇಕು ಮನುಷ್ಯ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ,
ಗವಿಮಠ, ಕೊಪ್ಪಳ

200

ಜೀವನ ಎನ್ನುವುದು ನಿಸರ್ಗದ ದೊಡ್ಡ ಕೊಡುಗೆ. ನಿಮಗೆ ಯಾರಾದರೂ ಗಿಫ್ಟ್ ಕೊಟ್ಟರೆ ಅದನ್ನು ನೀವು ನಿಮ್ಮ ಶೋಕೇಸ್‌ನಲ್ಲಿ ಇಡುತ್ತೀರಿ. ಚೆನ್ನಾಗಿ ನೋಡಿಕೊಳ್ಳುತ್ತೀರಿ. ಗಿಫ್ಟ್ ಅನ್ನು ನೀವು ಚೆನ್ನಾಗಿ ಇಟ್ಟುಕೊಂಡಿರುವುದನ್ನು ನೋಡಿದರೆ ನಿಮಗೆ ಇನ್ನೊಂದು ಬಾರಿ ಗಿಫ್ಟ್ ಕೊಡಬೇಕು ಎಂದು ನಿಮಗೆ ಗಿಫ್ಟ್ ಕೊಟ್ಟವರಿಗೆ ಅನ್ನಿಸುತ್ತದೆ. ಅದೇ ರೀತಿ ನಿಮಗೆ ಕೊಟ್ಟ ಗಿಫ್ಟ್ ಅನ್ನು ಕೆಡಿಸಿ ಒಗೆದಿರಿ ಎಂದರೆ ಇನ್ನೊಮ್ಮೆ ಇವರಿಗೆ ಗಿಫ್ಟ್ ಕೊಡಬಾರದು ಎನ್ನಿಸುತ್ತದೆ ಅವರಿಗೆ. ಹಾಗೆಯೇ ಜೀವನ ಎನ್ನುವುದು ದೇವರು ಕೊಟ್ಟ ಗಿಫ್ಟ್. ಈ ಬದುಕನ್ನು ನಾವು ಚೆಂದ ಬದುಕಿದ್ವಿ ಅಂದ್ರೆ ಮತ್ತೊಮ್ಮೆ ಗಿಫ್ಟ್ ಕೊಟ್ಟು ಕಳಿಸುತ್ತಾನೆ ದೇವರು. ದೇವರು ಕೊಟ್ಟ ಈ ಬದುಕನ್ನು ನಾವು ಚಲೋ ಬದುಕದಿದ್ದರೆ ಇದಕ್ಕೆ ಗಿಫ್ಟ್ ಕೊಡಬಾರದು ಎಂದುಕೊಳ್ಳುತ್ತಾನೆ.

ಮನುಷ್ಯ ಹೇಗೆ ಬದುಕಬೇಕು ಎಂದು ನಮ್ಮ ಋಷಿಗಳು ವಿಚಾರ ಮಾಡಿದರು. 'ಜೀವನವನ್ನು ಕೊಟ್ಟ ದೇವರಿಗೇ ಸಂತೋಷವಾಗಬೇಕು, ಹಾಗೆ ಮನುಷ್ಯ ಬದುಕಬೇಕು' ಎಂದು ಅವರು ಹೇಳಿದರು. ನಿಮಗೆ ಬ್ಯಾಂಕ್‌ನಲ್ಲಿ ಸಾಲ ಬೇಕು ಎಂದರೆ ಬ್ಯಾಂಕ್‌ನವರು ಶ್ಯೂರಿಟಿ ಇಟ್ಟುಕೊಳ್ಳುತ್ತಾರೆ; ಮನೆ, ಹೊಲ ಎಲ್ಲ ಇಟ್ಟುಕೊಳ್ಳುತ್ತಾರೆ. ಗ್ಯಾರಂಟಿ ಇಲ್ಲದೇ ಅವರು ಏನನ್ನೂ ಕೊಡುವುದಿಲ್ಲ. ಒಂದು ನೂರು ವರ್ಷದ ಬದುಕು ಯಾವ ಗ್ಯಾರಂಟಿ ಇಲ್ಲದೆ ನಮ್ಮ ಮೇಲಿನ ಭರವಸೆಯ ಮೇಲೆ ದೇವರು ನಮಗೆ ಕೊಟ್ಟಿದ್ದಾನೆ. ಏನೂ ಇಸಗೊಂಡಿಲ್ಲ. ಪುಕ್ಕಟೆಯಾಗಿ ಕೊಟ್ಟಿದ್ದಾನೆ. ಹೀಗಿರುವಾಗ ಹೇಗೆ ಬದುಕಬೇಕು ಎಂದು ಯೋಚನೆ ಮಾಡಿ. ಪುಕ್ಕಟೆಯಾಗಿ ಕೆರೆ ಹಳ್ಳ ಬಾವಿಗಳನ್ನು ತುಂಬಿಸಿದ್ದಾನೆ. ಬೆಳಕಿಗಾಗಿ ಎಂದೆಂದಿಗೂ ಆರದ ದೀಪಗಳಾದ ಸೂರ್ಯ ಚಂದ್ರರನ್ನು ಪುಕ್ಕಟೆ ತೇಲಿಬಿಟ್ಟಿದ್ದಾನೆ. ಎಂದೂ ಬಿಲ್ ಕೇಳಿಲ್ಲ. ಭೂಮಿತಾಯಿ ಲಕ್ಷ ಲಕ್ಷ ಜನರಿಗೆ ಅನ್ನ ಹಾಕಿದರೂ ಸಹಿತ ತನ್ನ ಅಕ್ಷಯಪಾತ್ರೆ ಖಾಲಿಯಾಗಿದೆ ಎಂದು ಯಾರನ್ನೂ ಉಪವಾಸ ಹಾಕಿಲ್ಲ. ಇಷ್ಟೆಲ್ಲಾ ದೇವರು ಕರುಣಿಸಿದ. ಆದರೂ ಮನುಷ್ಯ ಅಳುವುದನ್ನು ಬಿಟ್ಟಿಲ್ಲ. ನಿಸರ್ಗ ಸಂತೋಷವಾಗಿದ್ದರೂ ಮನುಷ್ಯ ಅಳೋದು ಬಿಟ್ಟಿಲ್ಲ. ಎಲ್ಲರೂ ನಮಗೆ ಕೈಬಿಟ್ಟಾರೆ ಅಂತಾರೆ.

ನೀವು ಸೈಕಲ್ ಕಲಿಯುತ್ತೀರಿ. ನಿಮಗೆ ಕಲಿಸುವವರು ಎಲ್ಲಿಯವರೆಗೆ ಸೈಕಲ್ ಹಿಡಿದುಕೊಳ್ಳುತ್ತಾರೆ ಎಂದರೆ, ನಿಮಗೆ ಸೈಕಲ್ ಹೊಡೆಯಲು ಬರುವವರೆಗೆ ಮಾತ್ರ. ಸೈಕಲ್ ಕಲಿಸುವವರು ನಮ್ಮ ಕೈಬಿಟ್ಟಾಗಲೇ ನಮಗೆ ಸೈಕಲ್ ನಡೆಸುವುದು ಹೇಗೆ ಎನ್ನುವುದು ಗೊತ್ತಾಗುತ್ತದೆ. ಹಾಗೆಯೇ ಜೀವನದಲ್ಲಿಯೂ ನಮ್ಮ ಕೈಹಿಡಿದವರು ನಮ್ಮ ಕೈಬಿಟ್ಟಾಗಲೇ ನಮಗೆ ಜೀವನ ಹೇಗೆ ನಡೆಸಬೇಕು ಎನ್ನುವುದು ಗೊತ್ತಾಗುತ್ತದೆ. ಎಲ್ಲ ಕಳೆದುಕೊಂಡಿದ್ದೇವೆ ಎಂದು ಗೊಣಗಬಾರದು ಮನುಷ್ಯ. ಚಳಿಗಾಲದ ದಿನದಲ್ಲಿ ಗಿಡ ಎಲ್ಲ ಎಲೆಗಳನ್ನು ಕಳೆದುಕೊಳ್ಳುತ್ತದೆ. ಎಲ್ಲ ಎಲೆ ಹೋಗಿವೆ ಎಂದು ಗಿಡ ದುಃಖಪಟ್ಟಿಲ್ಲ. ವಸಂತ ಕಾಲ ಬಂದ ಮೇಲೆ ಮತ್ತೆ ಚಿಗುರು ಬರುತ್ತದೆ, ಹೂವು ಬರುತ್ತದೆ ಹಣ್ಣೂ ಆಗುತ್ತದೆ ಎಂಬ ಭರವಸೆಯಿಂದ ಗಿಡ ಬದುಕುತ್ತದೆ. ಬೇಸಿಗೆಯಲ್ಲಿ ನದಿ ಬತ್ತಿ ಹೋಗುತ್ತದೆ. ಆದರೆ ಮಳೆ ಬಂದರೆ ಮತ್ತೆ ತುಂಬಿ ಹರಿಯುತ್ತೇನೆ ಎನ್ನುವ ಭರವಸೆ ನದಿಗೆ. ಅದಕ್ಕೆ ಮನುಷ್ಯ ಭರವಸೆಯೊಂದಿಗೆ ಬದುಕಬೇಕು. ❖

ಪದಬಂಧ 6050

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಅರಸುತ್ತಿದ್ದಾಗ ಕಾಣಿಸಿದ ರಾಜ (3)
5.ವಾದ್ಯ ನುಡಿಸುವವನು ಇಲ್ಲಿದ್ದಾನೆ (3)
6.ಬಿಡದಿ ಹತ್ತಿರವಿರುವ ಹೆಂಡತಿ (3)
7.ಕ್ರೀಡೆಗೊಂದು ಪರ್ಯಾಯ ಪದ (2)
8. ವನದಲ್ಲಿ ತಿರುಗಿರುವಾಗ ಹೊಸದು ಕಂಡಿದೆ (2)
12.ಅಸತ್ಯವಿದು (2)
14.ಏಳು ದಿನಗಳ ಅವಧಿ (2)
15.ಪ್ರದೇಶ ಅಥವಾ ವರ್ತುಲ (3)
16.ಈತ ಕಬ್ಬಿಣದ ಕೆಲಸಗಾರ (3)
17.ದಿಣ್ಣೆ ಇಲ್ಲಿಯೇ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ

1.ಕಟ ಕಟ ಶಬ್ದ ಮಾಡುವ ಬಾಗಿಲು (3)
2.ಯಾವುದೇ ಕಳಂಕ ಇಲ್ಲದ್ದು (4)
3.ಹೊಂದಾಣಿಕೆಯನ್ನು ಹೀಗೆನ್ನಿ (4)
4.ಇದು ಒಳ್ಳೆಯ ದಿನ (3)
7.ಉದ್ದವಾದ ತೋಳು (5)
9.ಬಣ್ಣಗುಂದುವಿಕೆಯನ್ನು ಹೀಗೆನ್ನಿ (5)
10.ತನ್ನದೆಂಬ ಭಾವನೆ (4)
11.ಕೊಬ್ಬಿದ ಆನೆಯಿದು (4)
13.ಹುಲ್ಲಿನ ಅಥವಾ ಎಲೆಯ ಕಟ್ಟು (3)
14.ವಾರದಲ್ಲಿ ದೊರೆತ ಪಿತ್ರಾರ್ಜಿತ ಹಕ್ಕು (3)



6049ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಲೆಮಾರಿ 3.ಆಘ್ರಾಣಿಸು
5.ನಿಜ 7.ತಿರುಕ
8.ಹಂತ 9.ಜಲ
10.ಅಸುರ 12.ಕರ
14.ನರಾಕೃತಿ 15.ಪರಸ್ಪರ

ಮೇಲಿಂದ ಕೆಳಕ್ಕೆ:
1.ಅವಧಾನಿ 2.ರಿಯಾಯಿತಿ
3.ಆಮುಷ್ಮಿಕ 4.ಸುರಕ್ಷಿತ
6.ಜಟಿಲ 8.ಹಂತಕ
9.ಜಮಖಾನ 10.ಅನುಮತಿ
11.ರಜನಿಪ 13.ರತ್ನಾಕರ

ಸುಡೊಕು 6434

3				8		9		1
							6	
	4		9			3		8
6								9
	5		7		9		8	
8						6		
9			2			7		6
	6			9	7		3	
		7				4		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6433 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಷೇರುಪೇಟೆ ವಹಿವಾಟು 410



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,683
ಇಂದಿನ ಅಂತ್ಯ	24,813
▲	129
ದಿನದ ಗರಿಷ್ಠ	24,946

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹203-533
ದ್ವಿತಳಿ (ಬಿ.ವಿ)	₹350-702

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹193
ಆರ್‌ಎಸ್‌ಎಸ್-5	₹188
ಗುಡ್ ಲಾಟ್	₹178

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹27250
ಎಸಿ	₹15540
ಆರ್‌ಪಿ	₹21000
ಆರ್‌ಸಿ	₹11600

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ	
ಹೊಸತು	25000-46000
ಹಳತು	30000-49000
ಕುಮಟ	
ಚಾಲಿ	40598-42498
ಚಿಪ್ಪು	11199-26919
ಕೋಕ	6899-22189
ಹೊಸಚಾಲಿ	32589-42500
ಶಿವಮೊಗ್ಗ	
ಬೆಟ್ಟೆ	51319-58219
ಗೊರಬಲು	15499-30699
ರಾಶಿ	48169-58099
ಸರಕು	60399-92510
ಸಿದ್ದಾಪುರ	
ಬಿಳಿಗೋಟು	23869-29999
ಚಾಲಿ	34689-41299
ಕೋಕ	13100-24569
ಕೆಂಪುಗೋಟು	21312-21900
ರಾಶಿ	42189-46599
ತಟ್ಟಿಬೆಟ್ಟೆ	32609-38999

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,000-1,400
ಮಧ್ಯಮ	₹600-1,000
ಸಣ್ಣ	₹300-600

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಎಸ್. ಎಮ್. ಮುನಿರಾಜು
ಗೌ|| ಹಾಲಿ ನಿರ್ದೇಶಕರು
ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಇಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದು, ಇವರು ದಿನಾಂಕ: 17.05.2025 ರಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಇವರ ಕುಟುಂಬದವರಿಗೆ ಈ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗ
ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ಚಿನ್ನದ ದರ ₹1,910 ಏರಿಕೆ

ನವದೆಹಲಿ (ಪಿಟಿಐ): ಜಾಗತಿಕ ಮಾರುಕಟ್ಟೆಯಲ್ಲಿ ಬುಧವಾರ ಚಿನ್ನದ ದರ ಏರಿಕೆಯಾಗಿದೆ. ಹೀಗಾಗಿ, ದೇಶೀಯ ಚಿನಿವಾರ ಪೇಟೆಯಲ್ಲೂ ಧಾರಣೆಯು ಹೆಚ್ಚಳವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ದರವು ₹1,910 ಏರಿಕೆಯಾಗಿದ್ದು, ₹98,450ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ₹1,870 ಹೆಚ್ಚಳವಾಗಿ, ₹98 ಸಾವಿರ ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹1,660 ಏರಿಕೆಯಾಗಿ, ₹99,160 ಆಗಿದೆ.

'ಡಾಲರ್ ಮೌಲ್ಯ ಇಳಿಕೆಯಾಗುತ್ತಿದೆ. ಆರ್ಥಿಕ ಅನಿಶ್ಚಿತತೆಯಿಂದಾಗಿ ಮೂಡೀಸ್ ಸಂಸ್ಥೆಯು ಅಮೆರಿಕದ ಕ್ರೆಡಿಟ್ ರೇಟಿಂಗ್ ಅನ್ನು 'ಎಎಎ' ದಿಂದ 'ಎಎ1' ಶ್ರೇಣಿಗೆ ಇಳಿಸಿದೆ. ಇದು ಹೂಡಿಕೆದಾರರಲ್ಲಿ ಆತಂಕ ಹೆಚ್ಚಿಸಿದ್ದು, ಹಳದಿ ಲೋಹದ ಖರೀದಿಗೆ ಮುಂದಾಗಿದ್ದಾರೆ. ಇದರಿಂದ ಬೆಲೆ ಏರಿಕೆಯಾಗಿದೆ' ಎಂದು ಅಬಾನ್ಸ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಚಿಂತನ್ ಮೆಹ್ತಾ ಹೇಳಿದ್ದಾರೆ.

ದೇಶೀಯ ವಿಮಾನ ಪ್ರಯಾಣಿಕರ ಸಂಖ್ಯೆ ಏರಿಕೆ

ನವದೆಹಲಿ (ಪಿಟಿಐ): ಏಪ್ರಿಲ್‌ನಲ್ಲಿ ದೇಶೀಯ ಮಾರ್ಗದ ವಿಮಾನಗಳಲ್ಲಿ 1.43 ಕೋಟಿ ಪ್ರಯಾಣಿಕರು ಸಂಚರಿಸಿದ್ದಾರೆ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ತಿಳಿಸಿದೆ.

ಕಳೆದ ವರ್ಷದ ಏಪ್ರಿಲ್‌ನಲ್ಲಿ 1.32 ಕೋಟಿ ಪ್ರಯಾಣಿಕರು ಸಂಚರಿಸಿದ್ದರು. ಇದಕ್ಕೆ ಹೋಲಿಸಿದರೆ ಶೇ 8.45ರಷ್ಟು ಏರಿಕೆಯಾಗಿದೆ ಎಂದು ಬುಧವಾರ ತಿಳಿಸಿದೆ.

ಇಂಡಿಗೊ ವಿಮಾನಗಳಲ್ಲಿ ಶೇ 64.1ರಷ್ಟು ಪ್ರಯಾಣಿಕರು ಸಂಚರಿಸಿದ್ದಾರೆ. ಏರ್ ಇಂಡಿಯಾ ಶೇ 27.2, ಆಕಾಸಾ ಏರ್ ಶೇ 5, ಸ್ಪೈಸ್‌ಜೆಟ್‌ನಲ್ಲಿ ಶೇ 2.6ರಷ್ಟು ಪ್ರಯಾಣಿಕರು ಸಂಚರಿಸಿದ್ದಾರೆ.

ಈ ವರ್ಷದ ಜನವರಿಯಿಂದ ಏಪ್ರಿಲ್‌ವರೆಗೆ 5.75 ಕೋಟಿ ಪ್ರಯಾಣಿಕರು ಸಂಚರಿಸಿದ್ದಾರೆ. ಕಳೆದ ವರ್ಷದ ಇದೇ ಅವಧಿಯಲ್ಲಿ 5.23 ಕೋಟಿ ಜನರು ಪ್ರಯಾಣಿಸಿದ್ದರು.

ದೇಶದಾದ್ಯಂತ 72 ಸಾವಿರ ಕೇಂದ್ರಗಳ ಸ್ಥಾಪನೆ ಗುರಿ: ಎಚ್‌ಡಿಕೆ

ಇ.ವಿ ಚಾರ್ಜಿಂಗ್‌ಗೆ ಬಲ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: 'ದೇಶದಲ್ಲಿ ಇ.ವಿ ಚಾರ್ಜಿಂಗ್ ಕೇಂದ್ರಗಳ ಮೂಲಸೌಕರ್ಯದ ತ್ವರಿತ ಅಭಿವೃದ್ಧಿಗೆ ಸರ್ಕಾರ ಅಗತ್ಯ ಕ್ರಮಕೈಗೊಂಡಿದೆ' ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಬುಧವಾರ ಚಾರ್ಜಿಂಗ್ ಕೇಂದ್ರಗಳ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಸಚಿವಾಲಯದ ಹಿರಿಯ ಅಧಿಕಾರಿಗಳ ಸಭೆ ನಡೆಸಿದರು.

ಕೇಂದ್ರ ಪೆಟ್ರೋಲಿಯಂ ಸಚಿವಾಲಯ, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ಕೇಂದ್ರ ಬೃಹತ್ ಕೈಗಾರಿಕೆಗಳ ಸಚಿವಾಲಯದಿಂದ ಇ.ವಿ ಚಾರ್ಜಿಂಗ್ ಕೇಂದ್ರಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಪರಾಮರ್ಶೆ ನಡೆಸಿದರು.

'ದೇಶದಲ್ಲಿ ಇ.ವಿ ವಲಯವು ವೇಗವಾಗಿ ಬೆಳೆಯುತ್ತಿದೆ. ಇದಕ್ಕೆ ಅನುಗುಣವಾಗಿ ಮೂಲಸೌಕರ್ಯ ಒದಗಿಸಬೇಕಿದೆ. ಈ ವಲಯದ ಅಭಿವೃದ್ಧಿಗೆ ಪೂರಕವಾಗಿ ಇಂಧನ ಭದ್ರತೆಯನ್ನೂ ಹೆಚ್ಚಿಸಬೇಕಿದೆ' ಎಂದರು.

ಹಸಿರು ಸಾರಿಗೆಯ ಉತ್ತೇಜನಕ್ಕೆ ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಜನರನ್ನು ಸಜ್ಜುಗೊಳಿಸಲಾಗುವುದು ಎಂದು ಹೇಳಿದರು.

ವಿದ್ಯುತ್ ಚಾಲಿತ ವಾಹನಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರವು 'ಪಿಎಂ ಇ-ಡ್ರೈವ್' ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಇದರಡಿ ವಿದ್ಯುತ್‌ಚಾಲಿತ ವಾಹನಗಳಿಗೆ ಅವುಗಳ ಬ್ಯಾಟರಿ ಸಾಮರ್ಥ್ಯ ಆಧಾರದ ಮೇಲೆ ಸಬ್ಸಿಡಿ ದೊರೆಯಲಿದೆ. ಇದಕ್ಕಾಗಿ ₹10,900 ಕೋಟಿ ಮೀಸಲಿಡಲಾಗಿದೆ. ಈ ಮೊತ್ತದಲ್ಲಿ ದೇಶದಾದ್ಯಂತ 72 ಸಾವಿರ ಇ.ವಿ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ₹2 ಸಾವಿರ ಕೋಟಿಯನ್ನು ನಿಗದಿಪಡಿಸಲಾಗಿದೆ.

ಈ ಯೋಜನೆಯಡಿ 24.70 ಲಕ್ಷ ವಿದ್ಯುತ್‌ಚಾಲಿತ ದ್ವಿಚಕ್ರವಾಹನಗಳು, 3.16 ಲಕ್ಷ ಇ-ತ್ರಿಚಕ್ರ ವಾಹನಗಳು ಹಾಗೂ 14,028 ಇ-ಬಸ್‌ಗಳಿಗೆ ಮುಂದಿನ ಎರಡು ವರ್ಷಗಳವರೆಗೆ ಸಬ್ಸಿಡಿ ನೀಡುವ ಗುರಿ ಹೊಂದಲಾಗಿದೆ.

ರಾಜ್ಯದ 15 ಹೆದ್ದಾರಿಯಲ್ಲಿ ಕೇಂದ್ರ ಸ್ಥಾಪನೆ

ಕರ್ನಾಟಕದ 15 ರಾಷ್ಟ್ರೀಯ ಹೆದ್ದಾರಿಗಳಲ್ಲಿ ಇ.ವಿ ಚಾರ್ಜಿಂಗ್ ಕೇಂದ್ರಗಳು ಸ್ಥಾಪನೆಯಾಗಲಿವೆ.

'ದೇಶದ 50 ರಾಷ್ಟ್ರೀಯ ಹೆದ್ದಾರಿ ಕಾರಿಡಾರ್‌ಗಳು, ಮಹಾನಗರಗಳು, ಟೋಲ್ ಪ್ಲಾಜಾಗಳು, ರೈಲ್ವೆ ನಿಲ್ದಾಣಗಳು, ವಿಮಾನ ನಿಲ್ದಾಣಗಳು, ಇಂಧನ ಮಳಿಗೆಗಳು ಮತ್ತು ರಾಜ್ಯ ಹೆದ್ದಾರಿಗಳಂತಹ ಹೆಚ್ಚಿನ ದಟ್ಟಣೆಯ ತಾಣಗಳಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುವುದು' ಎಂದು ಸಚಿವ ಕುಮಾರಸ್ವಾಮಿ ತಿಳಿಸಿದ್ದಾರೆ.

ಕರ್ನಾಟಕದ ಮೂಲಕ ಹಾದುಹೋಗುವ ಎರಡು ರಾಷ್ಟ್ರೀಯ ಹೆದ್ದಾರಿ ಕಾರಿಡಾರ್‌ಗಳನ್ನು ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯ ಮತ್ತು ತೈಲ ಮಾರುಕಟ್ಟೆ ಕಂಪನಿಗಳು ಆದ್ಯತೆಯ ಮೇರೆಗೆ ವಿದ್ಯುದ್ದೀಕರಣಕ್ಕಾಗಿ ಗುರುತಿಸಿವೆ. ವಿಶೇಷವಾಗಿ ಬೆಂಗಳೂರು ನಗರವನ್ನು ಚೆನ್ನೈ, ಹೈದರಾಬಾದ್ ಮತ್ತು ಕರಾವಳಿ ಕರ್ನಾಟಕದೊಂದಿಗೆ ಸಂಪರ್ಕಿಸುವ ಮಾರ್ಗಗಳು ಒಳಗೊಂಡಿವೆ. ಬೆಂಗಳೂರು-ಮೈಸೂರು ಮತ್ತು ಬೆಂಗಳೂರು-ಚೆನ್ನೈ ಹೆದ್ದಾರಿಗಳು ಈ ಗುರುತಿಸಲಾದ ಕಾರಿಡಾರ್‌ಗಳ ಭಾಗವಾಗಿವೆ ಎಂದು ಮೂಲಗಳು ತಿಳಿಸಿವೆ.

ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಯ ಮೊದಲ ಹಂತದಲ್ಲಿ ಗುರುತಿಸಲಾದ 10 ಮಹಾನಗರಗಳಲ್ಲಿ ಬೆಂಗಳೂರು ಕೂಡ ಸೇರಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಬೆಂಗಳೂರು ನಗರ ರೈಲು ನಿಲ್ದಾಣದಲ್ಲಿ ಚಾರ್ಜಿಂಗ್ ಕೇಂದ್ರ ಸ್ಥಾಪಿಸಲಾಗುತ್ತದೆ. ಇವುಗಳ ಸ್ಥಾಪನೆ ಹಾಗೂ ಮೇಲ್ವಿಚಾರಣೆಯನ್ನು ಬಿಎಚ್‌ಇಎಲ್ ನೋಡಿಕೊಳ್ಳಲಿದೆ.

'ದೇಶದಾದ್ಯಂತ ಇ.ವಿ ಬಳಕೆದಾರರಿಗೆ ಒಂದೇ ವೇದಿಕೆಯಾಗಿ ಕಾರ್ಯ ನಿರ್ವಹಿಸುವ ಏಕೀಕೃತ ಡಿಜಿಟಲ್ ಸೂಪರ್ ಅಪ್ಲಿಕೇಷನ್‌ನ ಅಭಿವೃದ್ಧಿಗಾಗಿ ನೋಡಲ್ ಏಜೆನ್ಸಿಯಾಗಿ ಬಿಎಚ್‌ಇಎಲ್ ಅನ್ನು ನೇಮಿಸಲಾಗಿದೆ. ಈ ಅಪ್ಲಿಕೇಷನ್ ನೈಜ-ಸಮಯದ ಸ್ಲಾಟ್ ಬುಕಿಂಗ್, ಪಾವತಿ ವ್ಯವಸ್ಥೆ, ಚಾರ್ಜರ್ ಲಭ್ಯತೆಯ ಸ್ಥಿತಿ ಮತ್ತು ಪ್ರಗತಿ ಡ್ಯಾಶ್‌ಬೋರ್ಡ್‌ಗಳನ್ನು ಒಳಗೊಂಡಿರುತ್ತದೆ' ಎಂದು ಕುಮಾರಸ್ವಾಮಿ ಮಾಹಿತಿ ನೀಡಿದ್ದಾರೆ.

ಪ್ರತಿ ಸುಂಕದಿಂದ ವಿನಾಯಿತಿ ಪಡೆಯಲು ಭಾರತ ಯತ್ನ

ಜುಲೈ 8ರೊಳಗೆ ಮಧ್ಯಂತರ ಒಪ್ಪಂದ?

ನವದೆಹಲಿ (ಪಿಟಿಐ): ಅಮೆರಿಕ ವಿಧಿಸಿರುವ ಶೇ 26ರಷ್ಟು ಪ್ರತಿ ಸುಂಕದಿಂದ ಸಂಪೂರ್ಣ ವಿನಾಯಿತಿ ಪಡೆಯಲು ಭಾರತ ಮುಂದಾಗಿದೆ. ಹಾಗಾಗಿ, ಉಭಯ ದೇಶಗಳ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದವು ಜುಲೈ 8ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಕೇಂದ್ರ ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಏಪ್ರಿಲ್ 2ರಂದು ಅಮೆರಿಕವು ಪ್ರತಿ ಸುಂಕ ಹೇರಿತ್ತು. ಇದಕ್ಕೆ 90 ದಿನಗಳ ವಿರಾಮ ಘೋಷಿಸಿದ್ದು, ಈ ಆದೇಶವು ಜುಲೈ 9ರ ವರೆಗೆ ಜಾರಿಯಲ್ಲಿ ಇರಲಿದೆ. ಆದರೆ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ವಿಧಿಸಿರುವ ಶೇ 10ರಷ್ಟು ಮೂಲ ಸುಂಕದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಭಾರತದಿಂದ ಅಲ್ಲಿಗೆ ರಫ್ತಾಗುವ ಸರಕುಗಳಿಗೆ ಈ ಸುಂಕ ಅನ್ವಯಿಸಲಿದೆ ಎಂದು ಹೇಳಿದ್ದಾರೆ.

ಸರ್ಕಾರವು ಕೃಷಿ ಮತ್ತು ಹೈನುಗಾರಿಕೆ ವಲಯಗಳ ಹಿತಾಸಕ್ತಿ ಕಾಯ್ದುಕೊಳ್ಳಲು ಮುಂದಾಗಿದೆ. ಹಾಗಾಗಿ, ಅಲ್ಲಿಂದ ಆಮದಾಗುವ ಈ ವಲಯದ ಸರಕುಗಳಿಗೆ ಕೋಟಾ ಮಿತಿ ನಿಗದಿಪಡಿಸುವ ಸಾಧ್ಯತೆಯಿದೆ ಅಥವಾ ಕನಿಷ್ಠ ಆಮದು ದರ ನಿಗದಿಪಡಿಸಬಹುದು ಎಂದು ಹೇಳಿದ್ದಾರೆ.

ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಕುರಿತ ಮಾತುಕತೆಯು ಸಕಾರಾತ್ಮಕವಾಗಿ ನಡೆಯುತ್ತಿದೆ. ಸುಂಕಯೇತರ ಅಡೆತಡೆಗಳ ನಿವಾರಣೆ ಬಗ್ಗೆ ಚರ್ಚಿಸಲಾಗುತ್ತಿದೆ. ದೇಶದ ಸರಕುಗಳನ್ನು ಪ್ರತಿ ಸುಂಕ ಹಾಗೂ ಮೂಲ ಸುಂಕದ ಪರಿಧಿಯಿಂದ ಹೊರಗಿಡುವ ಬಗ್ಗೆ ಒಪ್ಪಂದವನ್ನು ಅಂತಿಮಗೊಳಿಸುವ ಕುರಿತು ಭಾರತವು ಪ್ರಯತ್ನಿಸುತ್ತಿದೆ ಎಂದು ಹೇಳಿದ್ದಾರೆ.

ಅತ್ಯಂತ ವಿಶ್ವಾಸಾರ್ಹ ರಾಷ್ಟ್ರಗಳ ಮೇಲಿನ ಸುಂಕ ಕಡಿತಗೊಳಿಸುವ ಬಗ್ಗೆ ಅಧಿಕೃತವಾಗಿ ಅಲ್ಲಿನ ಸಂಸತ್‌ನಿಂದ ಅನುಮೋದನೆ ಪಡೆಯಬೇಕಿದೆ. ಆದರೆ, ಭಾರತ ಸೇರಿ ಹಲವು ರಾಷ್ಟ್ರಗಳ ಮೇಲೆ ವಿಧಿಸಿರುವ ಪ್ರತಿ ಸುಂಕವನ್ನು ಹಿಂಪಡೆಯಲು ಟ್ರಂಪ್ ಸರ್ಕಾರವು ಅಧಿಕಾರ ಹೊಂದಿದೆ.

ಯಾವ ಸರಕುಗಳಿಗೆ ವಿನಾಯಿತಿ?

ಭಾರತವು ದ್ವಿಪಕ್ಷೀಯ ವ್ಯಾಪಾರ ಒಪ್ಪಂದದಲ್ಲಿ ಜವಳಿ, ಹರಳು ಮತ್ತು ಚಿನ್ನಾಭರಣ, ಚರ್ಮ ಉತ್ಪನ್ನ, ಸಿದ್ಧ ಉಡುಪು, ಪ್ಲಾಸ್ಟಿಕ್, ಕೆಮಿಕಲ್ಸ್, ಸೀಗಡಿ, ಎಣ್ಣೆಕಾಳು, ದ್ರಾಕ್ಷಿ ಮತ್ತು ಬಾಳೆಹಣ್ಣಿನ ಮೇಲೆ ಸುಂಕ ವಿನಾಯಿತಿಯ ಕೋರಿಕೆ ಮಂಡಿಸುವ ಸಾಧ್ಯತೆಯಿದೆ.

ಅಮೆರಿಕವು ಕೈಗಾರಿಕಾ ಸರಕು, ಆಟೊಮೊಬೈಲ್ (ವಿದ್ಯುತ್‌ಚಾಲಿತ ವಾಹನ), ವೈನ್, ಪೆಟ್ರೊಕೆಮಿಕಲ್ಸ್ ಸರಕು, ಹೈನು ಉತ್ಪನ್ನ, ಸೇಬು, ಒಣ ಹಣ್ಣುಗಳು, ಕುಲಾಂತರಿ ತಳಿಯ ಆಹಾರ ಉತ್ಪನ್ನಗಳ ಮೇಲೆ ಸುಂಕ ವಿನಾಯಿತಿ ಪ್ರಸ್ತಾವ ಮಂಡಿಸುವ ನಿರೀಕ್ಷೆಯಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್, ನಿಫ್ಟಿ ಚೇತರಿಕೆ

ಮುಂಬೈ (ಪಿಟಿಐ): ಕಳೆದ ಮೂರು ವಹಿವಾಟುಗಳಲ್ಲಿ ಇಳಿಕೆ ಕಂಡಿದ್ದ ದೇಶದ ಷೇರುಪೇಟೆಯು ಬುಧವಾರದ ವಹಿವಾಟಿನಲ್ಲಿ ಚೇತರಿಕೆ ಕಂಡಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್ ಷೇರುಗಳ ಖರೀದಿ ಹೆಚ್ಚಳ ಹಾಗೂ ಏಷ್ಯಾದ ಷೇರುಪೇಟೆಗಳಲ್ಲಿ ನಡೆದ ಸಕಾರಾತ್ಮಕ ವಹಿವಾಟು ಇದಕ್ಕೆ ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 410 ಅಂಶ ಏರಿಕೆ ಕಂಡು, 81,596 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 835 ಅಂಶ ಏರಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 129 ಅಂಶ ಹೆಚ್ಚಳ ಕಂಡು, 24,813 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಬಜಾಜ್ ಫಿನ್‌ಸರ್ವ್, ಟಾಟಾ ಸ್ಟೀಲ್, ಸನ್ ಫಾರ್ಮಾ, ಟೆಕ್ ಮಹೀಂದ್ರ, ಬಜಾಜ್ ಫೈನಾನ್ಸ್, ಎನ್‌ಟಿಪಿಸಿ, ನೆಸ್ಲೆ, ಟಾಟಾ ಮೋಟರ್ಸ್, ಎಚ್‌ಯುಎಲ್, ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಇಂಡಸ್ ಇಂಡ್ ಬ್ಯಾಂಕ್, ಕೋಟಕ್ ಮಹೀಂದ್ರ, ಪವರ್ ಗ್ರಿಡ್, ಐಟಿಸಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ದಕ್ಷಿಣ ಕೊರಿಯಾ, ಶಾಂಘೈ, ಹಾಂಗ್‌ಕಾಂಗ್ ಮಾರುಕಟ್ಟೆ ಏರಿಕೆ ದಾಖಲಿಸಿದ್ದರೆ, ಜಪಾನ್ ಷೇರುಪೇಟೆಯು ಇಳಿಕೆ ಕಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಶೇ 1.19ರಷ್ಟು ಏರಿಕೆಯಾಗಿದೆ. ಪ್ರತಿ ಬ್ಯಾರೆಲ್‌ಗೆ 66.16 ಡಾಲರ್ ಆಗಿದೆ.

ಇಪಿಎಫ್‌ಒ: ಹೊಸದಾಗಿ 14.58 ಲಕ್ಷ ಸದಸ್ಯರು ಸೇರ್ಪಡೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಮಾರ್ಚ್‌ನಲ್ಲಿ ನೌಕರರ ಭವಿಷ್ಯ ನಿಧಿ ಸಂಘಟನೆಗೆ (ಇಪಿಎಫ್‌ಒ) 14.58 ಲಕ್ಷ ಸದಸ್ಯರು ಹೊಸದಾಗಿ ಸೇರ್ಪಡೆಯಾಗಿದ್ದಾರೆ.

ಕಳೆದ ವರ್ಷದ ಮಾರ್ಚ್‌ಗೆ ಹೋಲಿಸಿದರೆ ಸೇರ್ಪಡೆ ಪ್ರಮಾಣ ಶೇ 1.15ರಷ್ಟು ಹೆಚ್ಚಳವಾಗಿದೆ ಎಂದು ಇಪಿಎಫ್‌ಒ ಬುಧವಾರ ತಿಳಿಸಿದೆ. ಸದಸ್ಯರ ಸೇರ್ಪಡೆಯಲ್ಲಿ ರಾಜ್ಯವಾರು ಪೈಕಿ ಮಹಾರಾಷ್ಟ್ರ ಮುಂಚೂಣಿಯಲ್ಲಿದ್ದು, ಶೇ 20.24ರಷ್ಟು ಪಾಲನ್ನು ಹೊಂದಿದೆ. ತಮಿಳುನಾಡು, ಕರ್ನಾಟಕ, ಹರಿಯಾಣ, ಗುಜರಾತ್, ದೆಹಲಿ, ಉತ್ತರ ಪ್ರದೇಶ ಮತ್ತು ತೆಲಂಗಾಣದಲ್ಲಿಯೂ ಹೆಚ್ಚು ಸದಸ್ಯರು ಸೇರ್ಪಡೆಯಾಗಿದ್ದಾರೆ.

ಹೊಸ ಸದಸ್ಯರಲ್ಲಿ 18ರಿಂದ 25ರ ವಯೋಮಾನದವರ ಪ್ರಮಾಣ ಶೇ 58ರಷ್ಟಿದೆ. ಒಟ್ಟು 4.45 ಲಕ್ಷ ಸೇರ್ಪಡೆಯಾಗಿದ್ದಾರೆ. ಇವರಲ್ಲಿ ಬಹುತೇಕರು ಮೊದಲ ಬಾರಿಗೆ ಉದ್ಯೋಗಕ್ಕೆ ಸೇರಿದ್ದಾರೆ.

ಪಿಂಚಣಿ ಲೆಕ್ಕಾಚಾರಕ್ಕೆ ಕಾಲ್ಪನಿಕ ವೇತನ ಪರಿಗಣನೆ: ಕೇಂದ್ರ

ನವದೆಹಲಿ (ಪಿಟಿಐ): ವಾರ್ಷಿಕ ವೇತನ ಹೆಚ್ಚಳದ ದಿನಾಂಕಕ್ಕೆ ಒಂದು ದಿನ ಮೊದಲೇ ನಿವೃತ್ತಿ ಹೊಂದುವ ಕೇಂದ್ರ ಸರ್ಕಾರಿ ನೌಕರರಿಗೆ ಲಭಿಸುವ ಪಿಂಚಣಿಯನ್ನು ಲೆಕ್ಕಹಾಕಲು, ಕಾಲ್ಪನಿಕ ವೇತನವನ್ನು ಮಾನದಂಡವಾಗಿ ಪರಿಗಣಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಸುಪ್ರೀಂ ಕೋರ್ಟ್‌ನ ಆದೇಶದ ಅನ್ವಯ ಕೇಂದ್ರ ಸಿಬ್ಬಂದಿ ಸಚಿವಾಲಯವು ಈ ಕುರಿತು ಆದೇಶ ಹೊರಡಿಸಿದೆ. ಇದರಿಂದ 48.66 ಲಕ್ಷ ನೌಕರರಿಗೆ ಅನುಕೂಲವಾಗಲಿದೆ.

ಜುಲೈ 1 ಅಥವಾ ಜನವರಿ 1 ಅನ್ನು ವೇತನ ಹೆಚ್ಚಳದ ದಿನಾಂಕವನ್ನಾಗಿ ಪರಿಗಣಿಸಬಹುದು ಎಂದು ಫೆಬ್ರುವರಿ 20ರಂದು ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ಸಲಹೆ ನೀಡಿತ್ತು. ಅಂದರೆ ಜೂನ್ 30 ಅಥವಾ ಡಿಸೆಂಬರ್ 31ರಂದು ನಿವೃತ್ತಿ ಹೊಂದಿದ ಮತ್ತು ನಿವೃತ್ತಿ ಹೊಂದುತ್ತಿರುವ ನೌಕರರ ಪಿಂಚಣಿ ಲೆಕ್ಕ ಹಾಕಲು ಈ ದಿನಾಂಕಗಳನ್ನು ಪರಿಗಣಿಸುವಂತೆ ಸೂಚಿಸಿತ್ತು.

ಇನ್ನು ಮುಂದೆ ಜುಲೈ 1 ಅಥವಾ ಜನವರಿ 1 ಅನ್ನು ತಮ್ಮ ವೇತನ ಬಡ್ತಿಯ ದಿನಾಂಕವಾಗಿ ಆಯ್ಕೆ ಮಾಡಲು ನೌಕರರಿಗೆ ಅವಕಾಶ ಸಿಗಲಿದೆ.

ಆದರೆ, ಈ ದಿನಾಂಕಗಳಂದು ನೀಡಲಾಗುವ ಕಾಲ್ಪನಿಕ ವೇತನ ಹೆಚ್ಚಳವನ್ನು ಇತರೆ ಪಿಂಚಣಿ ಸೌಲಭ್ಯ ಪಡೆಯುವ ಸಂಬಂಧ ಲೆಕ್ಕ ಹಾಕಲು ಮಾನದಂಡವಾಗಿ ಪರಿಗಣಿಸುವಂತಿಲ್ಲ. ತಮಗೆ ಸ್ವೀಕಾರಾರ್ಹವಾಗಿರುವ ಪಿಂಚಣಿ ಲೆಕ್ಕ ಮಾಡುವ ಉದ್ದೇಶಕ್ಕಾಗಿಯಷ್ಟೇ ಪರಿಗಣಿಸಬೇಕಿದೆ ಎಂದು ಸುಪ್ರೀಂ ಕೋರ್ಟ್‌ನ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಸರ್ಕಾರದ ಆದೇಶವು ಸ್ವಾಗತಾರ್ಹವಾಗಿದೆ. ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯಡಿ ಏಕೀಕೃತ ಪಿಂಚಣಿ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವ ನೌಕರರಿಗೂ ಕಾಲ್ಪನಿಕ ವೇತನದ ಪ್ರಯೋಜನವನ್ನು ವಿಸ್ತರಿಸಬೇಕು ಎಂದು ಅಖಿಲ ಭಾರತ ಎನ್‌ಪಿಎಸ್ ನೌಕರರ ಒಕ್ಕೂಟದ ಅಧ್ಯಕ್ಷ ಮಂಜೀತ್ ಸಿಂಗ್ ಪಟೇಲ್ ಮನವಿ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಾಯುಮಾರ್ಗ ನಿರ್ಬಂಧ ಅವಧಿ ವಿಸ್ತರಣೆ

ಇಸ್ಲಾಮಾಬಾದ್ (ಪಿಟಿಐ): ಭಾರತೀಯ ವಿಮಾನಗಳ ಹಾರಾಟಕ್ಕಾಗಿ ತನ್ನ ವಾಯುಮಾರ್ಗ ಮುಚ್ಚುವುದನ್ನು ಮತ್ತೊಂದು ತಿಂಗಳು ವಿಸ್ತರಿಸಲು ಪಾಕಿಸ್ತಾನ ನಿರ್ಧರಿಸಿದೆ.

ಏ. 22ರಂದು ಪಹಲ್ಗಾಮ್‌ನಲ್ಲಿ ಭಯೋತ್ಪಾದಕ ದಾಳಿ ನಡೆದ ಬಳಿಕ ಭಾರತವು ಕೈಗೊಂಡ ಕ್ರಮಗಳಿಗೆ ಪ್ರತಿಕ್ರಿಯಾತ್ಮಕವಾಗಿ ಪಾಕಿಸ್ತಾನವು ತನ್ನ ವಾಯುಮಾರ್ಗವನ್ನು ಮುಚ್ಚಿತ್ತು.

ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ (ಐಸಿಎಒ) ನಿಯಮದ ಪ್ರಕಾರ ಒಂದು ತಿಂಗಳಿಗಿಂತ ಹೆಚ್ಚು ಅವಧಿ ವಾಯುಮಾರ್ಗವನ್ನು ನಿರ್ಬಂಧಿಸುವಂತಿಲ್ಲ.

ಪಾಕಿಸ್ತಾನ ಮೇ 23ರವರೆಗೆ ಒಂದು ತಿಂಗಳು ವಾಯುಮಾರ್ಗ ಮುಚ್ಚಿತ್ತು. ಮತ್ತೊಂದು ತಿಂಗಳು ವಿಸ್ತರಿಸುವ ನಿರ್ಧಾರವನ್ನು ಬುಧವಾರ ಅಥವಾ ಗುರುವಾರ ಪ್ರಕಟಿಸುವ ನಿರೀಕ್ಷೆಯಿದೆ. ಈ ಕುರಿತಂತೆ ವಾಯುಪಡೆಗೆ ನೋಟಿಸ್ ನೀಡಲಾಗುವುದು ಎಂದು ಮೂಲಗಳನ್ನು ಉಲ್ಲೇಖಿಸಿ 'ಜಿಯೋ ನ್ಯೂಸ್' ವರದಿ ಮಾಡಿದೆ.

ಬಲೂಚಿಸ್ತಾನದಲ್ಲಿ ಆತ್ಮಾಹುತಿ ದಾಳಿ: 5 ಸಾವು

ಇಸ್ಲಾಮಾಬಾದ್/ ಕರಾಚಿ (ಪಿಟಿಐ): ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಶಾಲಾ ಬಸ್ ಒಂದನ್ನು ಗುರಿಯಾಗಿಸಿ ದುಷ್ಕರ್ಮಿಗಳು ಬುಧವಾರ ಆತ್ಮಾಹುತಿ ದಾಳಿ ನಡೆಸಿದ್ದಾರೆ. ಘಟನೆಯಲ್ಲಿ ಮೂವರು ಮಕ್ಕಳು ಸೇರಿ 5 ಮಂದಿ ಮೃತಪಟ್ಟಿದ್ದಾರೆ.

ಖುಜ್ದರ್ ಜಿಲ್ಲೆಯಲ್ಲಿ ಈ ಕೃತ್ಯ ನಡೆದಿದ್ದು, ಬಸ್‌ನಲ್ಲಿದ್ದ ಹಲವು ವಿದ್ಯಾರ್ಥಿಗಳು ಸೇರಿ 38 ಮಂದಿ ಗಾಯಗೊಂಡಿದ್ದಾರೆ. ಇದೊಂದು ಹೇಡಿ ಕೃತ್ಯ ಎಂದು ಪಾಕಿಸ್ತಾನ ಸೇನೆ ತಿಳಿಸಿದೆ.

ದಾಳಿಗೆ ಭಾರತ ಕಾರಣ ಎಂದ ಪಾಕ್: ಬಲೂಚಿಸ್ತಾನದಲ್ಲಿ ನಡೆದ ಆತ್ಮಾಹುತಿ ದಾಳಿಗೆ ಭಾರತ ಕಾರಣ ಎಂದು ಪಾಕಿಸ್ತಾನ ಆರೋಪಿಸಿದೆ. ಈ ಆರೋಪಗಳನ್ನು ಭಾರತ ತಿರಸ್ಕರಿಸಿದ್ದು, ಇದು ಆಧಾರರಹಿತ ಆರೋಪ ಎಂದಿದೆ. ಭಾರತ ಪ್ರಾಯೋಜಿಸಿದ ಹೇಡಿ ಕೃತ್ಯವನ್ನು ಎಸಗಿದವರನ್ನು ಹೊಡೆದುರುಳಿಸಲಾಗುವುದು ಎಂದು ಪಾಕಿಸ್ತಾನ ಸೇನೆ ಹೇಳಿದೆ. ಇದಕ್ಕೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಪ್ರತಿಕ್ರಿಯಿಸಿ, 'ಭಯೋತ್ಪಾದನೆಯ ಕೇಂದ್ರಬಿಂದುವಾಗಿರುವ ಪಾಕಿಸ್ತಾನ ತನ್ನ ನಿಜಬಣ್ಣವನ್ನು ಮರೆಮಾಚಲು ತನ್ನ ಆಂತರಿಕ ಸಮಸ್ಯೆಗಳಿಗೆ ಭಾರತವನ್ನು ಹೊಣೆ ಮಾಡುತ್ತಿದೆ. ಇದು ಅಂತರ ರಾಷ್ಟ್ರೀಯ ಸಮುದಾಯವನ್ನು ವಂಚಿಸುವ ಮತ್ತೊಂದು ತಂತ್ರ ಎಂದಿದ್ದಾರೆ.

HEALTH SPECIAL

ಶ್ರೀ ಶಕ್ತಿ ಮಸಾಜ್ ಥೆರಪಿ
ಬೆಂಗಳೂರು ಇವರ ವತಿಯಿಂದ
ಉಚಿತ ಚಿಕಿತ್ಸೆ (ಬೆಂಗಳೂರುನಲ್ಲಿ)
ದಿನಾಂಕ ರಿಂದ 19/05/2025 ಪ್ರಾರಂಭವಾಗಿದೆ
ಸಮಯ ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00 ವರಗೆ
ವಿಳಾಸ : ಆನಂದ್ ರಾವ್ ಸರ್ಕಲ್ ಹತ್ತಿರ SC ರೋಡ್, ಕುಮಾರಕೀನೊ ಅಪಾರ್ಟ್ಮೆಂಟ್ ಎದುರು, ಶೇಷಾದ್ರಿಪುರಂ, ಬೆಂಗಳೂರು 20
9019626612
ಮಂಡಿ, ಬೆನ್ನು, ಕತ್ತುನೋವು, ಕೀಲುನೋವು, ಲಕ್ವ, ಹಿಮ್ಮಡಿ ನೋವು, ಟೆನ್ನಿಸ್ ಎಲಬೋ ಪೇನ್, ತಲೆನೋವು, ಮೈಗ್ರೇನ್, ಮಾನಸಿಕ ಸಮಸ್ಯೆ, ಚಿಕನ್‌ಗುನ್ಯ ಗಂಟುನೋವು, ರೊಮೆಟೆಡ್ ಅರ್ಥೈಟಿಸ್, ವೆರಿಕೋಸ್ ವೇಯನ್ಸ್ ಸಮಸ್ಯೆ ಕಾಲುಗಳಲ್ಲಿ ಊತ ಮತ್ತು ರಕ್ತ ಚಲನೆ ಇಲ್ಲದವರಿಗೆ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ, ಸಯಾಟಕ್, ಮೂಳೆ ನೋವುಗಳಿಗೆ ಯಾವುದೇ ರೀತಿಯ ಔಷಧಿ ಇಲ್ಲದೆ, ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಇಲ್ಲದೆ ವಿಶೇಷವಾದ A C U ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿಯಿಂದ ಚಿಕಿತ್ಸೆ ಪಡೆಯಿರಿ.
ಪಾಶ್ವವಾಯು ಪೀಡಿತರಿಗೆ ದೇಶೀಯ ಚಿಕಿತ್ಸೆ
ಸೂಚನೆ : ಪಾರ್ಶ್ವವಾಯುವಿಗೆ ಗುರಿಯಾಗಿ ಒಂದು ವರ್ಷದಿಂದ ಮೇಲ್ಪಟ್ಟ ವಯೋವೃದ್ಧಿಯಾಗಿ ಬಾಯಿಯ ಮುಖಾಂತರ ಔಷಧಿಯನ್ನು ಸೇವಿಸಲು ಸಾಧ್ಯವಾಗುವಂತಹ ರೋಗಿಗಳಿಗೆ ಮಾತ್ರ ಈ ಚಿಕಿತ್ಸೆ ಮಾಡಲಾಗುವುದು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

Wanted
ಲೇಡಿಸ್ ಬ್ಯೂಟಿ ಪಾರ್ಲರ್ ನಲಿ ಲೇಡಿಸ್ ಬ್ಯೂಟಿಷಿಯನ್ಸ್ ಬೇಕಾಗಿದ್ದರೆ. ತಿಂಗಳಿಗೆ ವೇತನ 25000/- Full ಟೈಮ್ & Part ಟೈಮ್ ಶೇಷಾದ್ರಿಪುರಂ ಬೆಂಗಳೂರು, ಸಂಪರ್ಕಿಸಿ: 7349494852

ಭವಿಷ್ಯ
Astrology
(ಪ್ರೇಮ ಭವಿಷ್ಯ) LOVE BREAKUP ಸ್ತ್ರೀಲೈಂಗಿಕ ಸಂಭೋಗ ವಶೀಕರಣ ಶತ್ರುಉಚ್ಚಾಟನೆ ಶತ್ರುಸ್ತಂಭನ ಶತ್ರುಸರ್ವನಾಶ ಇಷ್ಟಪಟ್ಟವರು ನಿಮ್ಮಂತೆ ಆಗಲು ಗಂಡಹೆಂಡತಿ ಸಮಸ್ಯೆ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 | 080-45557163/164
*Conditions apply

ಮಯೂರ
ಜೂನ್ 2025
ಕೊಂಡು ಓದಿ, ಓದಿಸಿ
ಮಯೂರ ವಿಶೇಷ
'ನಾನು ಹಿಡಿದಿರೋದು ಕನ್ನಡಗಳ ಬೋಗುಣಿ'
ಸಾಹಿತಿ ಸ. ರಘುನಾಥ ಸಂದರ್ಶನ
ಚೀಮನಹಳ್ಳಿ ರಮೇಶಬಾಬು
ಹಂಸಗೀತೆ— 50
ದೃಶ್ಯಮಾಧ್ಯಮದ 'ಮೌನ'ಕಾವ್ಯ, ಕನ್ನಡ ಚಿತ್ರರಂಗದ ಅಯ್ಯರ್‌ಗಲ್ಲು
ಮುರಳೀಧರ ಖಜಾನೆ
ಅಂಕಣಗಳು
ಆರಿಫ್ ರಾಜಾ ಕಾವ್ಯಸಂಕದಲ್ಲಿ ಉಕ್ರೇನ್ ಕವಯಿತ್ರಿ ಐರಿನಾ ಶುವಾಲೊವಾ ಸಂದರ್ಶನ
ಕಾಡಿಗೆ ಕಣ್ಣು ಕಲೀಮ್ ಉಲ್ಲಾ ಸಿಟ್ಟಾಗಿ ದೇಶ ಬಿಟ್ಟು ಹೊರಟ ಹಕ್ಕಿ
ಕಥಾಕಾಲ
• ಅಗ್ರಹಾರ ಕೃಷ್ಣಮೂರ್ತಿ
• ಡಾ. ಮಿರ್ಜಾ ಬಷೀರ್
• ಡಾ. ನಾಗರಾಜು ಜಿ.ಬಿ. ಭೈರೇನಹಳ್ಳಿ
• ಇಸ್ಮಾಯಿಲ್ ತಳಕಲ್
• ಸಂದೀಪ ಈಶಾನ್ಯ
• ವಿನ್ಯಾಸ ಹೆಗಡೆ
• ಕಂನಾಡಿಗಾ ನಾರಾಯಣ
• ಬಿ. ಜನಾರ್ದನ್ ಭಟ್
ಕವಿಸಮಯ
• ಸವಿತಾ ನಾಗಭೂಷಣ
• ಚಂದ್ರಶೇಖರ ತಾಳ್ಯ
• ಎಚ್‌.ಆರ್. ಸುಜಾತಾ
• ರಾಧೇಶ್ ತೋಳ್ಪಾಡಿ
• ಸಂಗಮೇಶ ಗುಜಗೊಂಡ
• ಚಿನ್ಮಯ ಹೆಗಡೆ
ಪ್ರಬಂಧ
• ಯೋಗೀಂದ್ರ ಮರವಂತೆ
• ಧನಂಜಯಮೂರ್ತಿ
ನಂದಾದೀಪ
ಪಿ.ವಿ.ನಾರಾಯಣ: ಪಾಂಡಿತ್ಯ, ಪ್ರತಿಭೆ, ವಿದ್ವತ್ತು, ವಿನಯಗಳ ಅಪೂರ್ವ ಸಮೀಕರಣ
ಆರ್. ಲಕ್ಷ್ಮೀನಾರಾಯಣ
ನನ್ನ ಓದು
ಅಹೋಬಲರ ಕನ್ನಡದಲ್ಲಿ ಬಿಭೂತಿ ಅವರ 'ಅಪರಾಜಿತ' ಒಳಗಣ್ಣು ತೆರೆಸುವ ವಿರಾಟ್ ಆಸೀಮತೆ
ಜಯಂತ ಕಾಯ್ಕಿಣಿ
₹25
editormy@mayura.co.in
mayuraezine.com
/mayuramonthly
080-45557333/264

ಎಸ್‌ಆರ್ ಶಿಕ್ಷಣ ಸಂಸ್ಥೆ: ಶೈಕ್ಷಣಿಕ ಕ್ರಾಂತಿ

ಹೆಬ್ರಿಯ ಎಸ್‌ಆರ್ ಸಮೂಹ ಶಿಕ್ಷಣ ಸಂಸ್ಥೆ

ಹೆಬ್ರಿ: ನಾಲ್ವರು ವಿದ್ಯಾರ್ಥಿಗಳಿಂದ ಆರಂಭವಾದ ಹೆಬ್ರಿ ಎಸ್‌ಆರ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಈಗ 2,500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮೌಲ್ಯಯುತ, ಗುಣಮಟ್ಟದ ಶಿಕ್ಷಣ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗುವಂತೆ ಶೈಕ್ಷಣಿಕ ಕ್ರಾಂತಿಯನ್ನು ಎಸ್‌ಆರ್ ಸಮೂಹ ಶಿಕ್ಷಣ ಸಂಸ್ಥೆ ಮಾಡುತ್ತಿದೆ.

ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನಲ್ಲಿ ಆಗುಂಬೆಯಿಂದ ಮಣಿಪಾಲಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಸಂಸ್ಥೆಯಲ್ಲಿ ಎಲ್.ಕೆ.ಜಿ.ಯಿಂದ ಪಿಯುಸಿ ತನಕ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

ಸುಸಜ್ಜಿತ ಹಾಸ್ಟೆಲ್: ಸುಸಜ್ಜಿತ ಕಟ್ಟಡಗಳೊಂದಿಗೆ ಕ್ಯಾಂಪಸ್‌ನಲ್ಲಿಯೇ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಇದೆ. ಅತ್ಯಾಧುನಿಕ ಕೊಠಡಿ, ಶೌಚಗೃಹ, ಡೈನಿಂಗ್ ಹಾಲ್, ಸ್ವಾದಿಷ್ಟ ಆಹಾರ, ಶುಚಿತ್ವದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲಾಗುತ್ತದೆ. ಬೆಳಿಗ್ಗೆ, ರಾತ್ರಿ ಅಧ್ಯಯನಕ್ಕೆ ವಿಶೇಷ ಅವಧಿಯನ್ನು ನಿಗದಿಪಡಿಸಲಾಗಿದೆ.

ತಜ್ಞ ಶಿಕ್ಷಕರ ತಂಡ: ಬೇರೆಬೇರೆ ಶಿಕ್ಷಣ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಿದ ವಿಷಯ ತಜ್ಞ ಉಪನ್ಯಾಸಕರ ತಂಡವನ್ನು ಸಂಸ್ಥೆಯು ಹೊಂದಿದೆ. ಕೆಸಿಇಟಿ, ಎನ್‌ಇಇಟಿ, ಜೆಇಇ ಮುಂತಾದ ಪರೀಕ್ಷೆಗಳಿಗೆ ತರಬೇತಿ ಶಿಕ್ಷಣ ನೀಡಲಾಗುತ್ತದೆ.



ಶಿಕ್ಷಣ ಕ್ಷೇತ್ರದಲ್ಲಿ 26 ವರ್ಷಗಳ ಸಾರ್ಥಕ ಸೇವೆ ಮಾಡಿರುವುದಕ್ಕೆ ಸಂತೋಷವಿದೆ. ಇ–ಲೈಬ್ರರಿ ವಿದ್ಯಾರ್ಥಿಗಳ ಕಲಿಕೆಗೆ ಮತ್ತಷ್ಟು ಅವಕಾಶ ನೀಡುತ್ತದೆ. ಸಂಸ್ಥೆಯು ಉತ್ಕೃಷ್ಟ ಗುಣಮಟ್ಟದ ಶಿಕ್ಷಣವನ್ನು ನಿರಂತರ ನೀಡುವುದರ ಮೂಲಕ ಮಕ್ಕಳ ಭವಿಷ್ಯವನ್ನು ಬೆಳಗಿಸಿದೆ.
—ಎಚ್. ನಾಗರಾಜ ಶೆಟ್ಟಿ, ಅಧ್ಯಕ್ಷರು, ಎಸ್.ಆರ್ ಸಮೂಹ ಶಿಕ್ಷಣ ಸಂಸ್ಥೆ

ಎಸ್.ಆರ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ಪ್ರತಿಷ್ಠಿತ ಸಂಸ್ಥೆಗಳಲ್ಲಿ ವೈದ್ಯರಾಗಿ, ಎಂಜಿನಿಯರ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹಲವು ವಿದ್ಯಾರ್ಥಿಗಳು ಕಸ್ತೂರಬಾ ಮೆಡಿಕಲ್ ಕಾಲೇಜು, ಎ.ಜೆ ಮೆಡಿಕಲ್ ಕಾಲೇಜು, ಹಾಸನ ಮೆಡಿಕಲ್ ಕಾಲೇಜು, ಏಮ್ಸ್ ಮೆಡಿಕಲ್ ಕಾಲೇಜು ಮುಂತಾದ ವೈದ್ಯಕೀಯ ಶಿಕ್ಷಣ ಸಂಸ್ಥೆ ಹಾಗೂ ಆರ್.ವಿ ಎಂಜಿನಿಯರಿಂಗ್ ಕಾಲೇಜು, ನಿಟ್ಟೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸರ್ಕಾರಿ ಕೋಟದಡಿ ಸೀಟ್ ಪಡೆದಿದ್ದಾರೆ.

ಅಟಲ್ ಟಿಂಕರಿಂಗ್ ಲ್ಯಾಬ್: 6ನೇ ತರಗತಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳ ಶಿಕ್ಷಣ ಗುಣಮಟ್ಟದ ವೃದ್ಧಿಗಾಗಿ ಅತ್ಯಾಧುನಿಕ ಸಲಕರಣೆಯೊಂದಿಗೆ ಅಟಲ್ ಟಿಂಕರಿಂಗ್ ಲ್ಯಾಬ್ ಆರಂಭಿಸಲಾಗಿದೆ. ಸಂಸ್ಥೆಯಲ್ಲಿ ಇ–ಲೈಬ್ರರಿ ಮತ್ತು ಸೆಮಿನಾರ್ ಹಾಲ್ ಸಹ ಇದೆ.

ಸಂಪರ್ಕಕ್ಕೆ: 9448373109, 9448604417, 9448724251, 8277194408, 9844142425. ಇ– ಮೇಲ್: srpuchebri@gmail.com. ವೆಬ್‌ಸೈಟ್: www.sreduhebri.in ಫೇಸ್‌ಬುಕ್: srpuchebri

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

8 ವಾರಗಳ ಬಳಿಕ ಒಟಿಟಿಯಲ್ಲಿ ಥಗ್‌ಲೈಫ್

ತಮ್ಮ ಮುಂದಿನ 'ಥಗ್‌ಲೈಫ್' ಸಿನಿಮಾವನ್ನು ಎಂಟು ವಾರಗಳ ಬಳಿಕವಷ್ಟೇ ನೆಟ್‌ಫ್ಲಿಕ್ಸ್‌ನಲ್ಲಿ ರಿಲೀಸ್ ಮಾಡಲು ನಟ ಕಮಲ್ ಹಾಸನ್ ನಿರ್ಧರಿಸಿದ್ದಾರೆ. ಸಿನಿಮಾ ಜೂನ್ 5ರಂದು ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿದೆ.

ಚಿತ್ರರಂಗದಲ್ಲಿ ಉಳಿಯುವುದೇ ಸವಾಲು

'ಎರಡನೇ ಸಲ', 'ದಯವಿಟ್ಟು ಗಮನಿಸಿ' ಮೊದಲಾದ ಚಿತ್ರಗಳ ಮೂಲಕ ಗುರುತಿಸಿಕೊಂಡಿದ್ದ ನಟಿ ಸಂಗೀತಾ ಭಟ್ 'ಖೇಲಾ' ಚಿತ್ರದ ಮೂಲಕ ಮತ್ತೆ ಸ್ಯಾಂಡಲ್‌ವುಡ್‌ನಲ್ಲಿ ಸಕ್ರಿಯರಾಗಿದ್ದಾರೆ. ಚಿತ್ರಗಳು ಬಿಡುಗಡೆಯಾಗದೇ ಅವಕಾಶಗಳೇ ಕಡಿಮೆಯಾಗಿರುವ ಕುರಿತು ಅವರು ಮಾತನಾಡಿದ್ದಾರೆ...

ಸಂಗೀತಾ ಭಟ್

'ಖೇಲಾ' ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಕಮಲಿ ಎಂಬ ಪಾತ್ರ. ನಿರ್ದೇಶಕರು ಚಿತ್ರೀಕರಣದ ಹಂತದಲ್ಲಿ ಸೃಷ್ಟಿಸಿದ ಪಾತ್ರವಿದು. ಹೀಗಾಗಿ ಸಿನಿಮಾ ಕೆಲಕಾಲ ಮಾತ್ರ ಕಾಣಿಸುತ್ತೇನೆ. ವಿಶೇಷ ಪಾತ್ರವಾದರೂ ಅದರಲ್ಲಿನ ಗಟ್ಟಿತನ ಇಷ್ಟವಾಯಿತು. ಹೀಗಾಗಿ ಒಪ್ಪಿಕೊಂಡೆ' ಎಂದು ಮಾತು ಪ್ರಾರಂಭಿಸಿದರು ಸಂಗೀತಾ.

ಹತ್ತಾರು ಸಿನಿಮಾಗಳಲ್ಲಿ ನಟಿಸಿರುವ ಇವರು ವೈಯಕ್ತಿಕ ಕಾರಣಗಳಿಂದಾಗಿ ನಟನೆಯಿಂದ ವಿರಾಮ ತೆಗೆದುಕೊಂಡಿದ್ದರು. 2021ರಲ್ಲಿ ಮತ್ತೆ ಸ್ಯಾಂಡಲ್‌ವುಡ್‌ಗೆ ಮರಳಿ 'ಕ್ಲಾಂತಾ' ಚಿತ್ರದಲ್ಲಿ ಕಾಣಿಸಿಕೊಂಡರು. ಆದರೆ ಚಿತ್ರ ನಿರೀಕ್ಷಿತ ಯಶಸ್ಸು ಕಾಣಲಿಲ್ಲ. ಪತಿ ಜತೆ ಸೇರಿ ತಮ್ಮದೇ ಬ್ಯಾನರ್‌ನಲ್ಲಿ ಸಿನಿಮಾವೊಂದನ್ನು ನಿರ್ಮಿಸುವ ಯತ್ನದಲ್ಲಿದ್ದಾರೆ.

'ಇವತ್ತು ಸಿನಿಮಾಗಳಿಗೆ ಜನ ಬರುತ್ತಿಲ್ಲ. ಮಾಡಿದ ಸಿನಿಮಾಗಳು ಎಲ್ಲಿಯೂ ಮಾರಾಟವಾಗುತ್ತಿಲ್ಲ. ಹೀಗಾಗಿ ಅನೇಕರು ಸಿನಿಮಾ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಪೂರ್ಣಗೊಂಡ ಸಿನಿಮಾಗಳ ಬಿಡುಗಡೆಗೂ ಭಯ. ಇದರಿಂದಾಗಿ ನಟರಿಗೆ ಅವಕಾಶಗಳೇ ಕಡಿಮೆಯಾಗುತ್ತಿವೆ. ಕೆಲಸವಿಲ್ಲದೆ ಖಾಲಿಯಾಗಿ ಕೂರುವುದಕ್ಕಿಂತ ಪಾಲಿಗೆ ಬಂದಿರುವುದೇ ಪಂಚಾಮೃತ ಎಂಬಂತಾಗಿದೆ. ಸಿನಿಮಾ, ಪಾತ್ರಗಳು ಸವಾಲಲ್ಲ, ಉದ್ಯಮದಲ್ಲಿ ಉಳಿದುಕೊಳ್ಳುವುದೇ ಸವಾಲು' ಎನ್ನುತ್ತಾರೆ ಅವರು.

'ಕ್ಲಾಂತಾ' ಬಳಿಕ ಐದು ಸಿನಿಮಾಗಳಲ್ಲಿ ನಟಿಸಿದ್ದಾರೆ. ಯಾವುದೂ ಬಿಡುಗಡೆಗೊಂಡಿಲ್ಲ. 'ರೂಪಾಂತರ' ಚಿತ್ರಕ್ಕೆ ಶೀರ್ಷಿಕೆ ಸಮಸ್ಯೆಯಾಗಿ, ಈಗ ಶೀರ್ಷಿಕೆ ಬದಲಾವಣೆಗೊಂಡಿದೆ. 'ಮೂರು ಸಿನಿಮಾಗಳು ಚಿತ್ರೀಕರಣ ಮುಗಿದು ಡಬ್ಬಿಂಗ್ ಪೂರ್ಣಗೊಳಿಸಿರುವೆ. ಯಾವುದೂ ಘೋಷಣೆಯಾಗಿಲ್ಲ. ತಂಡಗಳಿಗೆ ಅವರದ್ದೇ ಆದ ಕಾರ್ಯತಂತ್ರವಿರುತ್ತದೆ. ಹೀಗಾಗಿ ಆ ಸಿನಿಮಾಗಳ ಶೀರ್ಷಿಕೆ ಘೋಷಣೆಗೆ ಕಾಯುತ್ತಿರುವೆ' ಎಂದರು.

ರಾಘು ಶಿವಮೊಗ್ಗ ನಿರ್ದೇಶನದ 'ದಿ ಟಾಸ್ಕ್' ಚಿತ್ರದಲ್ಲಿಯೂ ಇವರು ಕಾಣಿಸಿಕೊಂಡಿದ್ದಾರೆ.

ಅವಕಾಶ ಕೇಳಲು ಸಾಧ್ಯವಿಲ್ಲ

'ನಟನೆಯಲ್ಲಿ ಸ್ಪರ್ಧೆ ಹೆಚ್ಚಾಗಿ ಅವಕಾಶ ಕಡಿಮೆಯಾಗುತ್ತಿದೆ ಎನ್ನಲು ಸಾಧ್ಯವಿಲ್ಲ. ಪಾತ್ರ ಬರೆದಾಗ ನಿರ್ದೇಶಕರಿಗೆ ಈ ಪಾತ್ರಕ್ಕೆ ಇವರೇ ಸೂಕ್ತ ಎಂದು ತಲೆಯಲ್ಲಿ ಇರುತ್ತದೆ. ಅವರನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಅವರ ಬಳಿ ಹೋಗಿ ನೀವು ಆ ಪಾತ್ರಕ್ಕೆ ನನ್ನನ್ನು ಏಕೆ ಆಯ್ಕೆಮಾಡಿಕೊಳ್ಳಲಿಲ್ಲ ಎಂದು ಕೇಳಲು ಸಾಧ್ಯವಿಲ್ಲ. ಸಿನಿಮಾಗಳು ಹೆಚ್ಚಾದರೆ ಅವಕಾಶ ಹೆಚ್ಚುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಯಾರಿಗೂ ಸಿನಿಮಾ ನಿರ್ಮಾಣಕ್ಕೆ ಧೈರ್ಯ ಬರುತ್ತಿಲ್ಲ. ಒಂದು ಅಂಗಡಿಯಲ್ಲಿ ಬೇಕಾಗಿರುವುದು ಎಲ್ಲವೂ ಸಿಗುತ್ತದೆ ಎಂಬುದು ಗೊತ್ತಿರುತ್ತದೆ. ಹೀಗಾಗಿ ಬೇಕಾಗಿರುವುದುನ್ನು ಹೋಗಿ ಕೇಳಬಹುದು. ಆದರೆ ಸಿನಿಮಾದಲ್ಲಿ ಹಾಗಲ್ಲ. ಹುಡುಕಿಕೊಂಡು ಹೋಗಿ ಅವಕಾಶ ಕೇಳಲು ಸಾಧ್ಯವಿಲ್ಲ. ನಮ್ಮನ್ನೇ ಹುಡುಕಿಕೊಂಡು ಬಂದವರ ಜತೆ ಕೆಲಸ ಮಾಡುವುದಷ್ಟೆ' ಎನ್ನುತ್ತಾರೆ ಸಂಗೀತಾ.

ಜೂನಿಯರ್‌ನಲ್ಲಿ ಕಿರೀಟಿ-ಶ್ರೀಲೀಲಾ ಹೆಜ್ಜೆ

'ಮಾಯಾಬಜಾರ್' ಖ್ಯಾತಿಯ ನಿರ್ದೇಶಕ ರಾಧಾಕೃಷ್ಣ ರೆಡ್ಡಿ ನಿರ್ದೇಶನದ, ಕಿರೀಟಿ ನಟನೆಯ ಚೊಚ್ಚಲ ಸಿನಿಮಾ 'ಜೂನಿಯರ್' ಜುಲೈ 18ರಂದು ತೆರೆಕಾಣಲಿದೆ. ಚಿತ್ರದ ಮೊದಲ ಹಾಡು 'ಲೆಟ್ಸ್ ಲಿವ್ ದಿಸ್ ಮೂಮೆಂಟ್' ಇತ್ತೀಚೆಗೆ ರಿಲೀಸ್ ಆಗಿದ್ದು, ಹಾಡಿನಲ್ಲಿ ಕಿರೀಟಿ ಹಾಗೂ ಶ್ರೀಲೀಲಾ ಹೆಜ್ಜೆ ಹಾಕಿದ್ದಾರೆ.

ಖ್ಯಾತ ಸಂಗೀತ ನಿರ್ದೇಶಕ ದೇವಿಶ್ರೀ ಪ್ರಸಾದ್ ಸಂಗೀತ ಒದಗಿಸಿರುವ ಈ ಹಾಡಿಗೆ ಕನ್ನಡದಲ್ಲಿ ಪವನ್ ಭಟ್ ಸಾಹಿತ್ಯ ಬರೆದಿದ್ದು, ನಕುಲ್ ಅಭಯಂಕರ್ ಧ್ವನಿಯಾಗಿದ್ದಾರೆ.

'ಕಿರೀಟಿಯನ್ನು ಗೆಲ್ಲಿಸಬೇಕು ಎನ್ನುವುದು ಚಿತ್ರದಲ್ಲಿ ಕೆಲಸ ಮಾಡಿದ ಪ್ರತಿಯೊಬ್ಬ ತಂತ್ರಜ್ಞನ ಗುರಿಯಾಗಿತ್ತು. ಹೊಸಬರು ಈ ರೀತಿಯ ಸ್ಕ್ರಿಪ್ಟ್ ಆಯ್ಕೆ ಮಾಡಿಕೊಳ್ಳುವುದು ತುಂಬಾ ಕಡಿಮೆ. ತಾನು ಹೀರೊ ಆಗಬೇಕು ಎನ್ನುವತ್ತ ಆತನ ಚಿತ್ತವಿರಲಿಲ್ಲ. ರಾಧಾಕೃಷ್ಣ ಅವರು ಮಾಡಿರುವ ಈ ಕಥೆ ಮನಸ್ಸು ತಟ್ಟುತ್ತದೆ. ಡಬ್ಬಿಂಗ್ ಮಾಡಿದ ಸಂದರ್ಭದಲ್ಲಿ ಇದೊಂದು ಹ್ಯಾಪಿ ಜರ್ನಿ ಎನಿಸಿತು. ಒಂದು ಸಿನಿಮಾ ತೆರೆಕಾಣಲು ಎಷ್ಟು ಸಮಯ ತೆಗೆದುಕೊಂಡಿತು ಎನ್ನುವುದು ಮುಖ್ಯವಲ್ಲ. ಸಿನಿಮಾ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆಯೇ ಎನ್ನುವುದು ಮುಖ್ಯ. ಈ ಸಿನಿಮಾಗೆ ಆ ಸಾಮರ್ಥ್ಯವಿದೆ' ಎಂದರು ನಟ ರವಿಚಂದ್ರನ್.

ಸಂಗೀತ ನಿರ್ದೇಶಕ ದೇವಿ ಶ್ರೀ ಪ್ರಸಾದ್ ಮಾತನಾಡಿ, 'ಭಾವನಾತ್ಮಕ ಕಥೆ ಸಿನಿಮಾದಲ್ಲಿದೆ. ಈ ಹಾಡಿಗೆ ಶ್ರೀಮಣಿ ಅವರು ತೆಲುಗು ಸಾಹಿತ್ಯ ಬರೆದಿದ್ದಾರೆ. ಚಿತ್ರದ ಛಾಯಾಚಿತ್ರಗ್ರಾಹಕರಾದ ಸೆಂಥಿಲ್ ಅವರು ಸಿನಿಮಾದ ಬಲ' ಎಂದರು.

ಈ ಪ್ಯಾನ್ ಇಂಡಿಯಾ ಸಿನಿಮಾವನ್ನು ವಾರಾಹಿ ಫಿಲ್ಮಂ ಪ್ರೊಡಕ್ಷನ್ ನಿರ್ಮಾಣ ಮಾಡಿದ್ದು, ಕ್ರೇಜಿಸ್ಟಾರ್ ರವಿಚಂದ್ರನ್, ಜೆನಿಲಿಯಾ ರಿತೇಶ್ ದೇಶ್‌ಮುಖ್ ಚಿತ್ರದಲ್ಲಿ ನಟಿಸಿದ್ದಾರೆ. ಬಿಗ್ ಬಜೆಟ್‌ನಲ್ಲಿ ಸಿನಿಮಾ ನಿರ್ಮಾಣಗೊಂಡಿದೆ.


ಕಿರೀಟಿ, ಶ್ರೀಲೀಲಾ

> 'ಸಿನಿಮಾ ಮೂರು ವರ್ಷ ತಡವಾಗಿದೆ. ಸಾಹಸ ದೃಶ್ಯಗಳ ಚಿತ್ರೀಕರಣ ಮಾಡುವ ಸಂದರ್ಭದಲ್ಲಿ ಬೆನ್ನಿಗೆ ಪೆಟ್ಟಾಗಿತ್ತು. ಇದರಿಂದಾಗಿ ಒಂದು ವರ್ಷ ಸಂಪೂರ್ಣ ವಿಶ್ರಾಂತಿಯಲ್ಲಿದ್ದೆ. ಇದುವೇ ಸಿನಿಮಾ ವಿಳಂಬವಾಗಲು ಮುಖ್ಯ ಕಾರಣ. ರವಿಚಂದ್ರನ್ ಅವರ ಜೊತೆ ಇಪ್ಪತ್ತೈದು ದಿನ ಕೆಲಸ ಮಾಡಲು ಅವಕಾಶ ದೊರಕಿರುವುದು ಪುಣ್ಯ. ಹೊಸ ನಟರಿಗೆ ಇಂತಹ ಅವಕಾಶ ಸಿಗುವುದು ವಿರಳ.
>
> **ಕಿರೀಟಿ,** ನಟ

'ನಾಯಿ ಇದೆ ಎಚ್ಚರಿಕೆ' ಟೀಸರ್ ಬಿಡುಗಡೆ

ಲೀಲಾ ಮೋಹನ್, ದಿವ್ಯಶ್ರೀ

ಲೀಲಾ ಮೋಹನ್ ನಟನೆಯ, ಕಲಿ ಗೌಡ ನಿರ್ದೇಶಿಸಿರುವ 'ನಾಯಿ ಇದೆ ಎಚ್ಚರಿಕೆ' ಸಿನಿಮಾದ ಟೀಸರ್ ಹಾಗೂ ಹಾಡುಗಳು ಇತ್ತೀಚೆಗೆ ಬಿಡುಗಡೆಗೊಂಡವು.

ನಿರ್ಮಾಪಕ, ನಿರ್ದೇಶಕ ಇಂದ್ರಜಿತ್ ಲಂಕೇಶ್ ಟೀಸರ್ ಬಿಡುಗಡೆಗೊಳಿಸಿದರು. ನಟ ಪ್ರಥಮ್ ಅತಿಥಿಯಾಗಿ ಭಾಗವಹಿಸಿದ್ದರು. ಲೀಲಾ ಮೋಹನ್ ನಾಯಕರಾಗಿ ನಟಿಸುವುದರ ಜೊತೆಗೆ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಈ ಮೊದಲು 'ಗಡಿಯಾರ' ಎಂಬ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿರುವ ಇವರು 'ಕೌರ್ಯ', 'ಪುಟಾಣಿ ಪಂಟರುಗಳು', 'ರೋಡ್ ಕಿಂಗ್' ಮತ್ತು ತೆಲುಗಿನ 'ಕಲ್ಯಾಣಮಸ್ತು' ಸೇರಿದಂತೆ ಹಲವಾರು ಸಿನಿಮಾಗಳಲ್ಲಿ ಪೋಷಕ ಪಾತ್ರಗಳಲ್ಲಿ ನಟಿಸಿದ್ದಾರೆ. 'ಉಗ್ರಾವತಾರ' ಚಿತ್ರದಲ್ಲೂ ಪಾತ್ರವೊಂದಕ್ಕೆ ಬಣ್ಣಹಚ್ಚಿದ್ದರು.

'ನಾನು ವೃತ್ತಿಯಲ್ಲೂ ವೈದ್ಯ. ಈ ಚಿತ್ರದಲ್ಲೂ ವೈದ್ಯನ ಪಾತ್ರ ಮಾಡಿದ್ದೇನೆ. ಇದರಲ್ಲೂ ನನ್ನ ಹೆಸರು ಲೀಲಾ. ಇದು ನಾಯಿ ಹಾಗೂ ಮನುಷ್ಯನ ಬಾಂಧವ್ಯದ ಕುರಿತಾದ ಸಿನಿಮಾ. ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳುಳ್ಳ ಭಾವನಾತ್ಮಕ ಸಿನಿಮಾವಿದು. ದಿವ್ಯಶ್ರೀ ಈ ಚಿತ್ರದ ನಾಯಕಿ. ಪ್ರಮೋದ್ ಶೆಟ್ಟಿ, ರಾಜ್ ಬಲವಾಡಿ, ದಿನೇಶ್ ಮಂಗಳೂರು, ನಾಗೇಂದ್ರ ಅರಸ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಿನಿಮಾ ಮುಂದಿನ ತಿಂಗಳು ತೆರೆಕಾಣಲಿದೆ' ಎಂದರು ಲೀಲಾ ಮೋಹನ್.

ನ್ಯಾ. ವರ್ಮಾ ಮನೆಯಲ್ಲಿ ನಗದು ಸಿಕ್ಕಿದ್ದ ಪ್ರಕರಣ • ಎಫ್‌ಐಆರ್ ದಾಖಲಿಸಲು ಕೋರಿದ್ದ ಅರ್ಜಿ

ನಗದು ಪತ್ತೆ: ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ರಾಜಧಾನಿಯಲ್ಲಿನ ತಮ್ಮ ಅಧಿಕೃತ ನಿವಾಸದಲ್ಲಿ ನಗದು ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿದ್ದ ಅರ್ಜಿ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ.

'ಆದೇಶದ ರಿಟ್ ಅನ್ನು ಕೋರುವ ಮೊದಲು, ಅರ್ಜಿದಾರರು ಸಂಬಂಧಿಸಿದವರ ಮುಂದೆ ಅರ್ಜಿ ಸಲ್ಲಿಸಿ ಪರಿಹಾರ ಕೋರಬೇಕು. ಅದು ಇಲ್ಲಿ ಪಾಲನೆಯಾಗಿಲ್ಲದ ಕಾರಣಕ್ಕೆ ನಾವು ಈ ರಿಟ್ ಅರ್ಜಿ ಸ್ವೀಕರಿಸುತ್ತಿಲ್ಲ. ಈ ಹಂತದಲ್ಲಿ ಇತರ ಮನವಿಗಳನ್ನು ಪರಿಶೀಲಿಸುವ ಅಗತ್ಯವಿಲ್ಲ' ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರಿದ್ದ ನ್ಯಾಯಪೀಠವು ಹೇಳಿದೆ.

ನ್ಯಾ. ವರ್ಮಾ

ಆಂತರಿಕ ವಿಚಾರಣೆಯು ಬಾಕಿ ಇರುವ ಸ್ವರೂಪವನ್ನು ನ್ಯಾಯಪೀಠ ಉಲ್ಲೇಖಿಸಿತು. ಅರ್ಜಿದಾರರ ಮನವಿ ಅಕಾಲಿಕವೆಂದು ತಳ್ಳಿಹಾಕಿತು. ಮೇ 8ರಂದು ಸುಪ್ರೀಂ ಕೋರ್ಟ್ ಹೊರಡಿಸಿದ ಪತ್ರಿಕಾ ಪ್ರಕಟಣೆಯಲ್ಲಿ, ಮುಖ್ಯ ನ್ಯಾಯಮೂರ್ತಿಗಳು ಆಂತರಿಕ ತನಿಖಾ ಸಮಿತಿಯ ವರದಿಯನ್ನು ರಾಷ್ಟ್ರಪತಿ ಮತ್ತು ಪ್ರಧಾನಿಗೆ ಕಳುಹಿಸಿರುವುದನ್ನು ತಿಳಿಸಲಾಗಿದೆ ಎಂದು ಹೇಳಿತು.

ಆಂತರಿಕ ತನಿಖಾ ಸಮಿತಿಯು ವರ್ಮಾ ವಿರುದ್ಧ ದೋಷಾರೋಪಣೆ ಮಾಡಿದ ನಂತರ, ಈ ಹಿಂದಿನ ಸಿಜೆಐ ಸಂಜೀವ್ ಖನ್ನಾ ಅವರು ವರ್ಮಾ ಅವರ ರಾಜೀನಾಮೆಗೆ ಒತ್ತಾಯಿಸಿದ್ದರು. ದೆಹಲಿ ಹೈಕೋರ್ಟ್‌ನಿಂದ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆಯಾದ ವರ್ಮಾ ರಾಜೀನಾಮೆ ನೀಡಲು ನಿರಾಕರಿಸಿದ ನಂತರ ನ್ಯಾ. ಖನ್ನಾ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಅವರಿಗೂ ಈ ಬಗ್ಗೆ ಪತ್ರ ಬರೆದಿದ್ದಾರೆ.

ಪ್ರೊ. ಅಲಿ ಖಾನ್‌ಗೆ ಮಧ್ಯಂತರ ಜಾಮೀನು

ನವದೆಹಲಿ (ಪಿಟಿಐ): ಅಶೋಕ ವಿಶ್ವವಿದ್ಯಾಲಯದ ಪ್ರೊ.ಅಲಿ ಖಾನ್ ಮಹಮೂದಾಬಾದ್ ಅವರಿಗೆ ಸುಪ್ರೀಂ ಕೋರ್ಟ್ ಬುಧವಾರ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಆದರೆ, ಆಪರೇಷನ್ ಸಿಂಧೂರ ಕುರಿತಂತೆ ಸಾಮಾಜಿಕ ಜಾಲತಾಣದಲ್ಲಿ ವಿವಾದಾತ್ಮಕ ಪೋಸ್ಟ್ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾನುವಾರ ಬಂಧನಕ್ಕೊಳಗಾಗಿದ್ದ ಪ್ರೊಫೆಸರ್ ವಿರುದ್ಧದ ತನಿಖೆಗೆ ತಡೆಯಾಜ್ಞೆ ನೀಡಲು ನಿರಾಕರಿಸಿದೆ.

ಐಜಿ ಶ್ರೇಣಿಯ ಅಧಿಕಾರಿ ಮತ್ತು ಎಸ್‌ಪಿ ಶ್ರೇಣಿಯ ಮಹಿಳಾ ಅಧಿಕಾರಿ ಸೇರಿದಂತೆ ಮೂವರನ್ನೊಳಗೊಂಡ ವಿಶೇಷ ತನಿಖಾ ತಂಡವನ್ನು 24 ಗಂಟೆಗಳೊಳಗಾಗಿ ರಚಿಸುವಂತೆ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೇಶ್ವರ ಸಿಂಗ್ ಅವರನ್ನೊಳಗೊಂಡ ಪೀಠವು ಹರಿಯಾಣ ಡಿಜಿಪಿಗೆ ನಿರ್ದೇಶಿಸಿದೆ.

ಪ್ರೊಫೆಸರ್ ಅವರ ಪೋಸ್ಟ್‌ಗಳನ್ನು ಪರಾಮರ್ಶಿಸಿದ ನ್ಯಾಯಪೀಠವು ಅಸಮಾಧಾನ ವ್ಯಕ್ತಪಡಿಸಿತು. ಸಾಮಾಜಿಕ ಜಾಲತಾಣಗಳಲ್ಲಿ ಸಂಘರ್ಷಕ್ಕೆ ಸಂಬಂಧಿಸಿದಂತೆ ಯಾವುದೇ ಸಂದೇಶ ಬರೆಯಕೂಡದು ಎಂದು ತಾಕೀತು ಮಾಡಿತು.

'ವಕ್ಫ್ ಇಸ್ಲಾಂಗೆ ಅನಿವಾರ್ಯವಲ್ಲ'

ನವದೆಹಲಿ(ಪಿಟಿಐ): ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಬುಧವಾರ ಬಲವಾಗಿ ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, 'ವಕ್ಫ್ ಇಸ್ಲಾಮಿಕ್ ಪರಿಕಲ್ಪನೆಯಾಗಿದ್ದರೂ ಅದು ಇಸ್ಲಾಂನ ಅತ್ಯಗತ್ಯ ಭಾಗವಲ್ಲ' ಎಂದು ಹೇಳಿದೆ.

ವಕ್ಫ್ (ತಿದ್ದುಪಡಿ) ಕಾಯ್ದೆ 2025ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿರುವ ಅರ್ಜಿಗಳನ್ನು ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿ ಆಗಸ್ಟಿನ್ ಜಾರ್ಜ್ ಮಸೀಹ್ ಅವರಿರುವ ಪೀಠದ ಎದುರು 'ಸರ್ಕಾರಿ ಭೂಮಿಯನ್ನು ವಕ್ಫ್ ಎಂದು ಪರಿಗಣಿಸಲು ಸಾಧ್ಯವಿಲ್ಲ' ಎಂದು ಕೇಂದ್ರ ಸರ್ಕಾರ ವಾದಿಸಿದೆ.

ಕೇಂದ್ರದ ಪರವಾಗಿ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ದಾನವನ್ನು ಪ್ರತಿ ಧರ್ಮದಲ್ಲೂ ಗುರುತಿಸಲಾಗಿದೆ ಮತ್ತು ಅದನ್ನು ಯಾವುದೇ ಧರ್ಮದ ಅತ್ಯಗತ್ಯ ಸಿದ್ಧಾಂತವೆಂದು ಪರಿಗಣಿಸಲಾಗದು. ಇಸ್ಲಾಂನಲ್ಲಿ ವಕ್ಫ್ ಕೇವಲ ದಾನವಲ್ಲದೆ ಬೇರೇನೂ ಅಲ್ಲ. ವಕ್ಫ್ ಆಸ್ತಿ ಮೇಲೆ ಯಾರೂ ಹಕ್ಕು ಸಾಧಿಸಲು ಸಾಧ್ಯವಿಲ್ಲ. ವಕ್ಫ್ ಆಸ್ತಿಗಳನ್ನು ಮರಳಿ ಪಡೆಯಲು ಸರ್ಕಾರಕ್ಕೆ ಕಾನೂನುಬದ್ಧ ಅಧಿಕಾರ ವಿದೆ' ಎಂದು ಪ್ರತಿಪಾದಿಸಿದರು.

'ನೋಂದಾಯಿಸದ ಬಳಕೆದಾರರಿಂದ ವಕ್ಫ್ ಆಸ್ತಿಗಳನ್ನು ರದ್ದುಗೊಳಿಸುವ ನಿಬಂಧನೆಗೆ ನೀಡುವ ಯಾವುದೇ ತಡೆಯಾಜ್ಞೆಯು ಸರ್ಕಾರಿ ಭೂಮಿಯನ್ನು ಕಬಳಿಸುವ ಕುಕೃತ್ಯ ಹತ್ತಿಕ್ಕಲು ಜಾರಿಗೆ ತರಲಾದ ಕಾನೂನಿನ ಉದ್ದೇಶಕ್ಕೆ ಸೋಲುಂಟಾಗುತ್ತದೆ' ಎಂದು ಮೆಹ್ತಾ ಹೇಳಿದರು.

ಅರ್ಜಿಗಳ ವಿಚಾರಣೆ ಗುರುವಾರವೂ ಮುಂದುವರಿಯಲಿದೆ.

ತಂದೆ ಪಾಲನೆಗೆ ಮಕ್ಕಳ ನೇಮಕ

ಮುಂಬೈ (ಪಿಟಿಐ): ಹೃದಯಾಘಾತದ ಸಂದರ್ಭದಲ್ಲಿ ಮಿದುಳಿಗೆ ಹಾನಿಯಾಗಿ ಹಾಸಿಗೆ ಹಿಡಿದ ವೃದ್ಧ ತಂದೆಯ ಪಾಲನೆಗೆ ಅವರ ಇಬ್ಬರು ಹೆಣ್ಣುಮಕ್ಕಳನ್ನೇ ಬಾಂಬೆ ಹೈಕೋರ್ಟ್ ನೇಮಿಸಿದೆ.

ಇಂಥ ಸ್ಥಿತಿಯಲ್ಲಿರುವ ವ್ಯಕ್ತಿಗೆ ತಮ್ಮನ್ನು ಹಾಗೂ ತಮ್ಮ ಆಸ್ತಿಯನ್ನು ನೋಡಿಕೊಳ್ಳಲು ಸಾಧ್ಯವಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಭಯ್ ಅಹುಜಾ ಅವರು, 'ಇಂಥ ಪರಿಸ್ಥಿತಿಯಲ್ಲಿ ನ್ಯಾಯಾಲಯವು ಮೂಕ ಪ್ರೇಕ್ಷಕನಂತೆ ಕುಳಿತುಕೊಳ್ಳಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ. ನ್ಯಾಯಾಲಯವು ಮೇ 8ರಂದು ಈ ಆದೇಶ ಹೊರಡಿಸಿದ್ದು, ಆದೇಶದ ಪ್ರತಿಯು ಬುಧವಾರ ಲಭ್ಯವಾಗಿದೆ.

ಪೂಜಾಗೆ ನಿರೀಕ್ಷಣಾ ಜಾಮೀನು

ನವದೆಹಲಿ (ಪಿಟಿಐ): ಯುಪಿಎಸ್‌ಸಿ ಪರೀಕ್ಷೆಯಲ್ಲಿ ಜಾತಿ ಮತ್ತು ಅಂಗವಿಕಲ ಕೋಟಾದ ಮೀಸಲು ಅನುಕೂಲಕ್ಕಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದ ಆರೋಪ ಎದುರಿಸುತ್ತಿರುವ ಮಾಜಿ ಐಎಎಸ್ ಪ್ರೊಬೇಷನರಿ ಅಧಿಕಾರಿ ಪೂಜಾ ಖೇಡ್ಕರ್ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರಾಗಿದೆ.

ಪೂಜಾ ಖೇಡ್ಕರ್

ಬುಧವಾರ ಜಾಮೀನು ಮಂಜೂರು ಮಾಡಿದ ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ಸತೀಶ್ ಚಂದ್ರ ಶರ್ಮಾ ಅವರಿದ್ದ ಸುಪ್ರೀಂ ಕೋರ್ಟ್‌ನ ಪೀಠ, 'ಖೇಡ್ಕರ್ ಕೊಲೆ ಮಾಡಿಲ್ಲ. ಭಯೋತ್ಪಾದಕಿಯೂ ಅಲ್ಲ. ಆಕೆ ಮಾಡಿರುವ ಗಂಭೀರ ಅಪರಾಧ ವಾದರೂ ಏನು' ಎಂದು ಪ್ರಶ್ನಿಸಿತು.

'ನಿಮ್ಮ ಬಳಿ ಸೂಕ್ತ ತನಿಖಾ ವ್ಯವಸ್ಥೆ ಇರಬೇಕು. ಸಾಫ್ಟ್‌ವೇರ್ ಹೊಂದಿರಬೇಕು. ತನಿಖೆಯನ್ನು ಪೂರ್ಣಗೊಳಿಸಿ. ಆಕೆ ಎಲ್ಲವನ್ನೂ ಕಳೆದುಕೊಂಡಿದ್ದಾಳೆ. ಅವರಿಗೆ ಬೇರೆ ಎಲ್ಲೂ ಕೆಲಸ ಸಿಗುವುದಿಲ್ಲ' ಎಂದು ಪೀಠ ಇದೇ ವೇಳೆ ಮೌಖಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಿತು.

ಅನುದಾನ ತಡೆ: ಸುಪ್ರೀಂಗೆ ತಮಿಳುನಾಡು ಮೊರೆ

ನವದೆಹಲಿ: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020 ಮತ್ತು 'ಪಿಎಂಶ್ರೀ' ಯೋಜನೆ ಅನುಷ್ಠಾನ ಮಾಡದ ಕಾರಣಕ್ಕೆ ಸಮಗ್ರ ಶಿಕ್ಷಣ ಯೋಜನೆಯಡಿ ಅನುದಾನ ತಡೆಹಿಡಿದಿರುವ ಕೇಂದ್ರ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

ಕೇಂದ್ರ ಸರ್ಕಾರವು ₹2,151.59 ಕೋಟಿ ಮೂಲ ಮೊತ್ತ ಬಿಡುಗಡೆ ಮಾಡಬೇಕಿದ್ದು, ಅದಕ್ಕೆ ಶೇ 6ರ ಬಡ್ಡಿಯೊಂದಿಗೆ ₹2,291.30 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ನಿರ್ದೇಶಿಸಲು ಅರ್ಜಿಯಲ್ಲಿ ಕೋರಲಾಗಿದೆ.

ಮಹಾರಾಷ್ಟ್ರ: ತುರ್ತು ಮುನ್ಸೂಚನೆಗೆ ಡ್ರೋನ್ ಬಳಕೆ

ಛತ್ರಪತಿ ಸಂಭಾಜಿನಗರ (ಪಿಟಿಐ): ಮಹಾರಾಷ್ಟ್ರದ ಮರಾಠವಾಡ ಪ್ರಾಂತ್ಯದಲ್ಲಿ ಭಾರಿ ಮಳೆ ಸುರಿಯುತ್ತಿದೆ. ನದಿ ತೀರದಲ್ಲಿ ವಾಸವಿರುವ ಜನರಿಗೆ ವಿಪತ್ತು ಸಂದರ್ಭದಲ್ಲಿ ಮುನ್ಸೂಚನೆ ನೀಡಲು ಪೊಲೀಸರು ಡ್ರೋನ್ ಮೊರೆಹೋಗಲು ಮುಂದಾಗಿದ್ದಾರೆ.

ವಿಪತ್ತಿನ ವೇಳೆ, ಅಧಿಕಾರಿಗಳು ನದಿಪಾತ್ರದ ಹಳ್ಳಿಗಳಿಗೆ ತೆರಳಿ ಜನರಿಗೆ ಮುನ್ಸೂಚನೆ ನೀಡುವುದು ಕಷ್ಟಕರವಾಗಿರುತ್ತದೆ. ಅಲ್ಲದೆ, ಹೆಚ್ಚಿನ ಸಮಯವನ್ನೂ ತೆಗೆದುಕೊಳ್ಳುತ್ತದೆ. ಹೀಗಾಗಿ, ತಮಟೆ ಬಡಿಯುವ ಮೂಲಕ ಸಾರುವ ಸಾಂಪ್ರದಾಯಿಕ ಪದ್ಧತಿಯನ್ನು ಕೈಬಿಟ್ಟು ಡ್ರೋನ್‌ಗಳ ನೆರವು ಪಡೆಯಲು ಮುಂದಾಗಿದ್ದೇವೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.



DH DECCAN HERALD | ಪ್ರಜಾವಾಣಿ

ಖರೀದಿಸಿ ಅಥವಾ ಮಾರಾಟ ಮಾಡಿ

ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ

ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!

- ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
- ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
- ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
- ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ

ಈಗ ಬುಕ್ ಮಾಡಿ.
ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!

COLLATERAL

ಇಂಡಿಯನ್ ಪ್ರೀಮಿಯರ್ ಲೀಗ್ 2025

ಸೂರ್ಯ ಅಬ್ಬರದ ಬ್ಯಾಟಿಂಗ್ • ಬೂಮ್ರಾ, ಸ್ಯಾಂಟನರ್ ಮಿಂಚಿನ ದಾಳಿ • ಡೆಲ್ಲಿಗೆ ನಿರಾಶೆ

ಪ್ಲೇಆಫ್‌ಗೆ ಮುಂಬೈ ಇಂಡಿಯನ್ಸ್

ಮುಂಬೈ (ಪಿಟಿಐ): ಐದು ಬಾರಿಯ ಐಪಿಎಲ್ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ಈ ಸಲದ ಟೂರ್ನಿಯ ಪ್ಲೇ ಆಫ್‌ಗೆ ಲಗ್ಗೆ ಇಟ್ಟಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಮುಂಬೈ ತಂಡವು ಬುಧವಾರ ನಡೆದ ಪಂದ್ಯದಲ್ಲಿ 59 ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸೋಲಿಸಿತು. ಇದರೊಂದಿಗೆ ಡೆಲ್ಲಿ ತಂಡದ ಕನಸು ಕಮರಿತು. ಗುಜರಾತ್ ಟೈಟನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಇದಕ್ಕೆ ಮೊದಲೇ ಪ್ಲೇ ಆಫ್ ಪ್ರವೇಶಿಸಿದ್ದವು. ಮುಂಬೈ ನಾಲ್ಕನೇ ತಂಡವಾಗಿದೆ.

ಟಾಸ್ ಗೆದ್ದ ಡೆಲ್ಲಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸೂರ್ಯಕುಮಾರ್ ಯಾದವ್ (73; 43ಎಸೆತ, 4X7, 6X4) ಮತ್ತು ನಮನ್ ಧೀರ್ (ಔಟಾಗದೇ 24; 8ಎ, 4X2, 6X2) ಅವರ ಬ್ಯಾಟಿಂಗ್ ಬಲದಿಂದ ಮುಂಬೈ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 180 ರನ್ ಗಳಿಸಿತು. ಗುರಿ ಬೆನ್ನಟ್ಟಿದ್ದ ಡೆಲ್ಲಿ ತಂಡಕ್ಕೆ ಮುಂಬೈ ವೇಗಿ ಜಸ್‌ಪ್ರೀತ್ ಬೂಮ್ರಾ (12ಕ್ಕೆ3) ಮತ್ತು ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ (11ಕ್ಕೆ3) ಅಡ್ಡಿಯಾದರು. ಅದರಿಂದಾಗಿ ಡೆಲ್ಲಿ ತಂಡವು 18.2 ಓವರ್‌ಗಳಲ್ಲಿ 121 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಮುಂಬೈ ಇಂಡಿಯನ್ಸ್ ತಂಡದ ಸೂರ್ಯಕುಮಾರ್ ಯಾದವ್ ಅರ್ಧಶತಕದ ಸಂಭ್ರಮ ಆಚರಿಸಿದರು —ಪಿಟಿಐ ಚಿತ್ರ

ಅನಾರೋಗ್ಯದ ಕಾರಣದಿಂದ ಅಕ್ಷರ್ ಪಟೇಲ್ ಅವರು ಕಣಕ್ಕಿಳಿಯಲಿಲ್ಲ. ಅವರ ಬದಲಿಗೆ ಫಾಫ್ ಡುಪ್ಲೆಸಿ ಡೆಲ್ಲಿ ತಂಡವನ್ನು ಮುನ್ನಡೆಸಿದರು. ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದ ಕೆ.ಎಲ್. ರಾಹುಲ್, ಡುಪ್ಲೆಸಿ, ಪೊರೆಲ್, ಸ್ಟಬ್ಸ್ ಅವರು ಇಲ್ಲಿ ವಿಫಲರಾದರು. ಸಮೀರ್ ರಿಜ್ವಿ (39; 35ಎ) ಮತ್ತು ವಿಪ್ರಜ್ ನಿಗಮ್ (20 ;11ಎ) ಕೊಂಚ ಪ್ರತಿರೋಧ ತೋರಿದರು.

ಎರಡು ಓವರ್; 48ರನ್: ಸೂರ್ಯಕುಮಾರ್ ಮತ್ತು ನಮನ್ ಅವರಿಬ್ಬರೂ ಮುಂಬೈ ತಂಡದ ಇನಿಂಗ್ಸ್‌ನ ಕೊನೆಯ ಎರಡು ಓವರ್‌ಗಳಲ್ಲಿ 48 ರನ್ ಸೂರೆ ಮಾಡಿದರು. ಅದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಲು ಸಾಧ್ಯವಾಯಿತು.

ಮುಂಬೈ ತಂಡದ ಆರಂಭವು ಉತ್ತಮವಾಗಿರಲಿಲ್ಲ. ಅಗ್ರ ಕ್ರಮಾಂಕದ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಆಡಲಿಲ್ಲ. ಎಡಗೈ ವೇಗಿ ಮುಸ್ತಿಫಿಜುರ್ ರೆಹಮಾನ್ ಎಸೆತದಲ್ಲಿ ರೋಹಿತ್ ಶರ್ಮಾ (5 ರನ್) ಔಟಾದಾಗ ತಂಡದ ಖಾತೆಯಲ್ಲಿ 23 ರನ್‌ಗಳಷ್ಟೇ ಇದ್ದವು.

ರಿಯಾನ್ ರಿಕೆಲ್ಟನ್ ಮತ್ತು ವಿಲ್ ಜ್ಯಾಕ್ಸ್ ಅವರ ಜೊತೆಯಾಟವನ್ನು ವೇಗಿ ಮುಕೇಶ್ ಕುಮಾರ್ ಮುರಿದರು. ನಂತರದ ಓವರ್‌ನಲ್ಲಿ ಸ್ಪಿನ್ನರ್ ಕುಲದೀಪ್ ಯಾದವ್ ಮೋಡಿಗೆ ರಿಕೆಲ್ಟನ್ ಕೂಡ ಶರಣಾದರು.

ಈ ಹಂತದಲ್ಲಿ ಜೊತೆಗೂಡಿದ ಸೂರ್ಯಕುಮಾರ್ ಮತ್ತು ತಿಲಕ್ ವರ್ಮಾ ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 55 ರನ್ ಸೇರಿಸಿದರು. ಈ ಜೊತೆಯಾಟಕ್ಕೂ ಮುಕೇಶ್ ಪೆಟ್ಟುಕೊಟ್ಟರು. ವರ್ಮಾ (27; 27ಎ, 4X1, 6X1) ಅವರ ವಿಕೆಟ್ ಪಡೆದ ಮುಕೇಶ್ ಸಂಭ್ರಮಿಸಿದರು. ನಾಯಕ ಹಾರ್ದಿಕ್ ಪಾಂಡ್ಯ ಕೇವಲ 3 ರನ್ ಗಳಿಸಿ ನಿರ್ಗಮಿಸಿದರು.

ಇನ್ನೊಂದೆಡೆ ಬೀಸಾಟವಾಡುತ್ತಿದ್ದ ಸೂರ್ಯ ಮಾತ್ರ ತಂಡದ ಮೊತ್ತ ಹೆಚ್ಚಿಸುವತ್ತ ಗಮನ ನೀಡಿದ್ದರು. ಅವರಿಗೆ ನಮನ್ ಜೊತೆಗೂಡಿದಾಗ ಆಟ ರಂಗೇರಿತು. ಅದರಲ್ಲೂ ಕೊನೆಯ ಎರಡು ಓವರ್‌ಗಳು ಮುಂಬೈ ಪಾಲಿಗೆ ವರದಾನವಾದವು. ಮುಕೇಶ್ ಕುಮಾರ್ ಹಾಕಿದ 19ನೇ ಓವರ್‌ನಲ್ಲಿ 27 ರನ್‌ಗಳು ಬಂದವು. ಚಾಮೀರ ಹಾಕಿದ ಕೊನೆಯ ಓವರ್‌ನಲ್ಲಿ ಒಟ್ಟು 21 ರನ್‌ಗಳು ದಾಖಲಾದವು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 5ಕ್ಕೆ180 (ರಿಯಾನ್ ರಿಕೆಲ್ಟನ್ 25, ಸೂರ್ಯಕುಮಾರ್ ಯಾದವ್ ಅಜೇಯ 73, ತಿಲಕ್ ವರ್ಮಾ 27, ನಮನ್ ಧೀರ್ ಅಜೇಯ 24, ಮುಕೇಶ್ ಕುಮಾರ್ 48ಕ್ಕೆ2) ಡೆಲ್ಲಿ ಕ್ಯಾಪಿಟಲ್ಸ್: 18.2 ಓವರ್‌ಗಳಲ್ಲಿ 121 (ಸಮೀರ್ ರಿಜ್ವಿ 39, ವಿಪ್ರಜ್ ನಿಗಮ್ 20, ಮಿಚೆಲ್ ಸ್ಯಾಂಟನರ್ 11ಕ್ಕೆ3, ಜಸ್‌ಪ್ರೀತ್ ಬೂಮ್ರಾ 12ಕ್ಕೆ3) ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 59 ರನ್‌ಗಳ ಜಯ. ಪಂದ್ಯದ ಆಟಗಾರ: ಸೂರ್ಯಕುಮಾರ್ ಯಾದವ್

ಟೈಟನ್ಸ್–ಲಖನೌ ಹಣಾಹಣಿ ಇಂದು

ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಳ್ಳುವತ್ತ ಗಿಲ್ ಚಿತ್ತ

ಅಹಮದಾಬಾದ್ (ಪಿಟಿಐ): ಈಗಾಗಲೇ ಪ್ಲೇಆಫ್ ಪ್ರವೇಶಿಸಿರುವ ಗುಜರಾತ್ ಟೈಟನ್ಸ್ ತಂಡವು ಗುರುವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್‌ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಲೀಗ್‌ನಲ್ಲಿ 12 ಪಂದ್ಯಗಳಿಂದ 18 ಅಂಕಗಳನ್ನು ಗಳಿಸಿರುವ ಗುಜರಾತ್, ಸದ್ಯ ಪಾಯಿಂಟ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳಲ್ಲಿವೆ.

ಗುಜರಾತ್ ತಂಡವು ಎಲ್ಲ ವಿಭಾಗಗಳಲ್ಲಿಯೂ ಬಲಿಷ್ಠವಾಗಿದೆ. ಸಾಯಿ ಸುದರ್ಶನ್ (617 ರನ್), ನಾಯಕ ಶುಭಮನ್ ಗಿಲ್ (601 ರನ್) ಮತ್ತು ಜೋಸ್ ಬಟ್ಲರ್ (500 ರನ್) ಅವರು ಅಮೋಘ ಲಯದಲ್ಲಿದ್ದಾರೆ. ಈ ಮೂವರೂ ಸೇರಿ ಒಟ್ಟು 16 ಅರ್ಧಶತಕಗಳನ್ನು ದಾಖಲಿಸಿದ್ದಾರೆ. ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ಸಾಯಿ ಮತ್ತು ಗಿಲ್ ಅವರಿಬ್ಬರೇ ಇನ್ನೂರಕ್ಕೂ ಹೆಚ್ಚು ರನ್‌ಗಳ ಗುರಿಯನ್ನು ಸಾಧಿಸಿದರು. ಸಾಯಿ ಅವರು ಅಜೇಯ ಶತಕ ಗಳಿಸಿದ್ದರು.

ತಂಡದ ಬೌಲಿಂಗ್ ವಿಭಾಗವೂ ಉತ್ತಮವಾಗಿದೆ. ಕನ್ನಡಿಗ ಪ್ರಸಿದ್ಧಕೃಷ್ಣ (21 ವಿಕೆಟ್) ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿರುವ ಬೌಲರ್. ವೇಗಿ ಮೊಹಮ್ಮದ್ ಸಿರಾಜ್ ಮತ್ತು ಸ್ಪಿನ್ನರ್ ಆರ್. ಸಾಯಿಕಿಶೋರ್ ತಲಾ 15 ವಿಕೆಟ್ ಪಡೆದಿದ್ದಾರೆ. ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ ಕೂಡ ತಂಡಕ್ಕೆ ಮರಳಿದ್ದಾರೆ.

ಲಖನೌ ತಂಡದ ಬ್ಯಾಟರ್‌ಗಳಿಗೆ ಗುಜರಾತ್ ಬೌಲರ್‌ಗಳು ಕಠಿಣ ಸವಾಲೊಡ್ಡಬಲ್ಲರು. ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿರುವ ಲಖನೌ ತಂಡವು ಸಮಾಧಾನಕರ ಗೆಲುವಿನ ನಿರೀಕ್ಷೆಯಲ್ಲಿದೆ. ಬ್ಯಾಟಿಂಗ್‌ನಲ್ಲಿ ಮಿಚೆಲ್ ಮಾರ್ಷ್, ಏಡನ್ ಮರ್ಕರಂ ಮತ್ತು ನಿಕೊಲಸ್ ಪೂರನ್ ಅವರ ಮೇಲೆ ತಂಡವು ಹೆಚ್ಚು ಅವಲಂಬಿತವಾಗಿದೆ. ನಾಯಕ ರಿಷಭ್ ಪಂತ್ ಅವರು ಈ ಟೂರ್ನಿಯಲ್ಲಿ ಸತತ ವೈಫಲ್ಯ ಅನುಭವಿಸಿದ್ದಾರೆ.

ವೇಗಿಗಳಾದ ಆವೇಶ್ ಖಾನ್ ಮತ್ತು ಅಕಾಶ್ ದೀಪ್ ಅವರು ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಸ್ಪಿನ್ನರ್ ದಿಗ್ವೇಶ್ ಸಿಂಗ್ ರಾಠಿ ಅವರು ಸನ್‌ರೈಸರ್ಸ್ ಎದುರಿನ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಅವರೊಂದಿಗೆ ಮಾಡಿಕೊಂಡ ಜಟಾಪಟಿಯಲ್ಲಿ ಒಂದು ಪಂದ್ಯದಿಂದ ಅಮಾನತುಗೊಂಡಿದ್ದಾರೆ. ಆದ್ದರಿಂದ ಸ್ಪಿನ್ ಬೌಲಿಂಗ್ ಹೊಣೆ ರವಿ ಬಿಷ್ಣೋಯಿ ಅವರ ಹೆಗಲಿಗೆ ಬೀಳಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಗುಜರಾತ್ ಟೈಟನ್ಸ್ ತಂಡದ ಸಾಯಿ ಸುದರ್ಶನ್ —ಎಎಫ್‌ಪಿ ಚಿತ್ರ

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಜಿಟಿ	12	9	3	0	18	0.795
ಆರ್‌ಸಿಬಿ	12	8	3	1	17	0.482
ಪಿಬಿಕೆಎಸ್	12	8	3	1	17	0.389
ಎಂಐ	13	8	5	0	16	1.292
ಡಿಸಿ	13	6	6	1	13	-0.019
ಕೆಕೆಆರ್	13	5	6	2	12	0.193
ಎಲ್‌ಎಸ್‌ಜಿ	12	5	7	0	10	-0.506
ಎಸ್‌ಆರ್‌ಎಚ್	12	4	7	1	9	-1.005
ಆರ್‌ಆರ್	14	4	10	0	8	-0.549
ಸಿಎಸ್‌ಕೆ	13	3	10	0	6	-1.030



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ಅವರ ಪತ್ನಿ, ಬಾಲಿವುಡ್ ತಾರೆ ಅನುಷ್ಕಾ ಶರ್ಮಾ ಅವರು ಬುಧವಾರ ಬಿಡುವಿನ ಸಂದರ್ಭದಲ್ಲಿ ಪಿಕಲ್‌ಬಾಲ್ ಆಟವಾಡಿದರು. ಅವರೊಂದಿಗೆ ತಂಡದ ಸಹ ಆಟಗಾರರು ಮತ್ತು ನೆರವು ಸಿಬ್ಬಂದಿ ಭಾಗವಹಿಸಿದ್ದರು —'ಎಕ್ಸ್' ಚಿತ್ರ

ಪ್ರಣಯ್, ಕರುಣಾಕರನ್‌ಗೆ ಜಯ

ಮಲೇಷ್ಯಾ ಮಾಸ್ಟರ್ಸ್: ಸೋಲಿನಿಂದ ಹೊರಬರದ ಸಿಂಧು

ಕ್ವಾಲಾಲಂಪುರ (ಪಿಟಿಐ): ಅನುಭವಿಗಳಾದ ಎಚ್.ಎಸ್.ಪ್ರಣಯ್, ಕಿದಂಬಿ ಶ್ರೀಕಾಂತ್ ನೇತೃತ್ವದಲ್ಲಿ ಭಾರತದ ಪುರುಷ ಷಟ್ಲರ್‌ಗಳು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಶುಭಾರಂಭ ಮಾಡಿದರು. ಆದರೆ ಮಹಿಳೆಯರ ವಿಭಾಗದಲ್ಲಿ ಪ್ರಮುಖ ಆಟಗಾರ್ತಿ ಪಿ.ವಿ. ಸಿಂಧು ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಪ್ರಣಯ್, ಶ್ರೀಕಾಂತ್ ಜೊತೆಗೆ ಸತೀಶ್ ಕರುಣಾಕರನ್ ಕೂಡ ಸಿಂಗಲ್ಸ್ ಎರಡನೇ ಸುತ್ತಿಗೆ ಮುನ್ನಡೆದರು. ಪ್ರಣಯ್ 19–21, 21–17, 21–16 ರಿಂದ ಐದನೇ ಶ್ರೇಯಾಂಕದ ಆಟಗಾರ ಕೆಂಟಾ ನಿಶಿಮೊಟೊ (ಜಪಾನ್) ಅವರಿಗೆ ಆಘಾತ ನೀಡಿದರು. ಭಾರತದ ಆಟಗಾರ ಮುಂದಿನ ಸುತ್ತಿನಲ್ಲಿ ಜಪಾನ್‌ನ ಇನ್ನೊಬ್ಬ ಆಟಗಾರ ಯುಶಿ ತನಾಕ ಅವರನ್ನು ಎದುರಿಸಲಿದ್ದಾರೆ.

ಕರುಣಾಕರನ್ ಕೂಡ ಮೊದಲ ಸುತ್ತಿನಲ್ಲಿ ಅಚ್ಚರಿಯ ಜಯಗಳಿಸಿದರು. ಅವರು ಮೂರನೇ ಶ್ರೇಯಾಂಕದ ಚೌ ತಿಯೆನ್ ಚೆನ್ (ಚೀನಾ ತೈಪೆ) ಅವರನ್ನು 21–13, 21–14ರಿಂದ ಹಿಮ್ಮೆಟ್ಟಿಸಲು ತೆಗೆದುಕೊಂಡಿದ್ದು 39 ನಿಮಿಷಗಳನ್ನಷ್ಟೇ.

ಆಯುಷ್ ಶೆಟ್ಟಿ ಮೊದಲ ಸುತ್ತಿನಲ್ಲಿ 20–22, 21–10, 21–8 ರಿಂದ ಕೆನಡಾದ ಬ್ರಿಯಾನ್ ಯಂಗ್ ಅವರನ್ನು ಮಣಿಸಿದರು. 2023ರ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಕಂಚು ವಿಜೇತ ಆಯುಷ್ ಮುಂದಿನ ಸುತ್ತಿನಲ್ಲಿ ಫ್ರಾನ್ಸ್‌ನ ಟೋಮಾ ಜೂನಿಯರ್ ಪೊಪೊವ್ ಅವರನ್ನು ಎದುರಿಸಲಿದ್ದಾರೆ.

ಶ್ರೀಕಾಂತ್ 57 ನಿಮಿಷಗಳ ಸೆಣಸಾಟದಲ್ಲಿ ಆರನೇ ಶ್ರೇಯಾಂಕದ ಲು ಗುವಾಂಗ್ ಝು (ಚೀನಾ) ಅವರನ್ನು 23–21, 13–21, 21–11 ರಿಂದ ಸೋಲಿಸಿದರು. 32 ವರ್ಷ ವಯಸ್ಸಿನ ಶ್ರೀಕಾಂತ್ ಮುಂದಿನ ಸುತ್ತಿನಲ್ಲಿ ಐರ್ಲೆಂಡ್‌ನ ನಾಟ್ ನುಯೆನ್ ಅವರ ಸವಾಲನ್ನು ಎದುರಿಸಲಿದ್ದಾರೆ.

ಪ್ರಿಯಾಂಶು ನಿರ್ಗಮನ: ಸಿಂಗಪುರದ ಜಿಯಾ ಹೆಂಗ್ ಜೇಸನ್ ಇನ್ನೊಂದು ಪಂದ್ಯದಲ್ಲಿ 21–15, 21–17 ರಿಂದ ವಿಶ್ವದ 34ನೇ ಕ್ರಮಾಂಕದ ಆಟಗಾರ ಪ್ರಿಯಾಂಶು ರಾಜಾವತ್ ಅವರನ್ನು ಸೋಲಿಸಿದರು.

ಸಿಂಧುಗೆ ನಿರಾಸೆ: ಆದರೆ ಭಾರತದ ಅಗ್ರ ಸಿಂಗಲ್ಸ್ ಆಟಗಾರ್ತಿ ಸಿಂಧು ಅವರ ನಿರಾಶಾದಾಯಕ ಓಟ ಮುಂದುವರಿಯಿತು. ಅವರು ಮೊದಲ ಸುತ್ತಿನಲ್ಲಿ ವಿಯೆಟ್ನಾಮಿನ ನೂಯೆನ್ ತುಯ್ ಲಿನ್ ಅವರಿಗೆ 11–21, 21–14, 15–21ರಲ್ಲಿ ಮಣಿದರು.

ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ಕಪಿಲ ಮತ್ತು ತನಿಶಾ ಕ್ರಾಸ್ಟೊ ಎರಡನೇ ಸುತ್ತಿಗೆ ತಲುಪಿದರು. ಅವರು 21–18, 15–21, 21–14ರಿಂದ ಇಂಡೊನೇಷ್ಯಾದ ಅದ್ನಾನ್ ಮೌಲಾನಾ ಮತ್ತು ಇನದಾ ಕಹ್ಯಾ ಸಾರಿ ಜಮೀಲ್ ಜೋಡಿಯನ್ನು ಮಣಿಸಿದರು. ಆದರೆ ಇದೇ ವಿಭಾಗದಲ್ಲಿ ಭಾರತದ ಇತರ ಮೂರು ಜೋಡಿಗಳು ಹೊರಬಿದ್ದವು.

ಅಶಿತ್ ಸೂರ್ಯ ಮತ್ತು ಅಮೃತಾ ಪ್ರಮುತೇಶ್ ಜೋಡಿ 10–21, 12–21 ರಲ್ಲಿ ಚೀನಾದ ಜಿಯಾಂಗ್ ಝೆಂಗ್ ಬಂಗ್– ವೀ ಯಾಷಿನ್ ಜೋಡಿಗೆ; ರೋಹನ್ ಕಪೂರ್– ರುತ್ವಿಕಾ ಶಿವಾನಿ ಗದ್ದೆ ಜೋಡಿ 10–21, 14–21ರಲ್ಲಿ ನಾಲ್ಕನೇ ಶ್ರೇಯಾಂಕದ ಗುವೊ ಷಿನ್ ವಾ– ಚೆನ್ ಫಂಗ್ ಹುಯಿ ಜೋಡಿಗೆ ಮಣಿಯಿತು.

ಕರುಣಾಕರನ್ – ಆದ್ಯಾ ವಾರಿಯತ್ ಜೋಡಿ 15–21, 16–21ರಲ್ಲಿ ಇಂಡೊನೇಷ್ಯಾದ ವೆರೆಲ್ ಯುಸ್ಟಿನ್ ಮುಲಿಯ– ಲಿಸಾ ಅಯು ಕುಸುಮವತಿ ಜೋಡಿಯೆದುರು ಸೋಲನುಭವಿಸಿತು.

ಎಚ್‌.ಎಸ್‌. ಪ್ರಣಯ್

ಜೂನಿಯರ್ ಮಹಿಳಾ ಹಾಕಿ ತಂಡ ಅರ್ಜೆಂಟೀನಾಕ್ಕೆ

ಬೆಂಗಳೂರು (ಪಿಟಿಐ): ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯಲ್ಲಿ ಆಡಲು ಭಾರತ ಜೂನಿಯರ್ ಮಹಿಳಾ ಹಾಕಿ ತಂಡ ಬುಧವಾರ ಅರ್ಜೆಂಟೀನಾದ ರೊಸಾರಿಯೊಗೆ ನಿರ್ಗಮಿಸಿತು. ಈ ಟೂರ್ನಿ ಇದೇ 25ರಿಂದ ಜೂನ್ 2ರ ವರೆಗೆ ನಡೆಯಲಿದೆ.

ಚಿಲಿಯಲ್ಲಿ ನಡೆಯಲಿರುವ ಎಫ್‌ಐಎಚ್ ಹಾಕಿ ಜೂನಿಯರ್ ಮಹಿಳಾ ವಿಶ್ವಕಪ್‌ಗೆ ಸಿದ್ಧತೆಯ ಭಾಗವಾಗಿ ಈ ಸ್ನೇಹಪರ ಟೂರ್ನಿಯನ್ನು ಏರ್ಪಡಿಸಲಾಗಿದೆ. ಭಾರತ, ಆತಿಥೇಯ ಅರ್ಜೆಂಟೀನಾದ ಜೊತೆ ಉರುಗ್ವೆ ಮತ್ತು ಚಿಲಿ ತಂಡಗಳೂ ನಾಲ್ಕು ರಾಷ್ಟ್ರಗಳ ಟೂರ್ನಿಯ ಕಣದಲ್ಲಿವೆ.

ಭಾರತ ತಂಡವೂ ಇತರ ಮೂರು ತಂಡಗಳ ಜೊತೆ ತಲಾ ಎರಡು ಪಂಧ್ಯಗಳನ್ನು ಆಡಲಿದೆ. ಈ ಟೂರ್ನಿಯು ತಂಡಕ್ಕೆ ತನ್ನ ಸಾಮರ್ಥ್ಯದ ಮೌಲ್ಯಮಾಪನ ಮಾಡಲು, ಸಂಯೋಜನೆಗಳನ್ನು ಪರೀಕ್ಷಿಸಲು ಮತ್ತು ತಂತ್ರಗಳನ್ನು ಮರುರೂಪಿಸಲು ನೆರವಾಗಲಿದೆ. ಜೂನಿಯರ್ ವಿಶ್ವಕಪ್ ಡಿಸೆಂಬರ್‌ನಲ್ಲಿ ನಡೆಯಲಿದೆ.

ವಿಶ್ವಕಪ್ ಶೂಟಿಂಗ್: ಕನಕ್‌ಗೆ ಚಿನ್ನ

ನವದೆಹಲಿ (ಪಿಟಿಐ): ಹರಿಯಾಣದ ಉದಯೋನ್ಮುಖ ಶೂಟರ್ ಕನಕ್ ಅವರು, ಜರ್ಮನಿಯ ಝುಲ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನಲ್ಲಿ ಬುಧವಾರ ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡರು.



ಕನಕ್

17 ವರ್ಷ ವಯಸ್ಸಿನ ಕನಕ್, ಎಂಟು ಸ್ಪರ್ಧಿಗಳಿದ್ದ, 24 ಶಾಟ್‌ಗಳ ಫೈನಲ್‌ನಲ್ಲಿ 239 ಪಾಯಿಂಟ್ಸ್ ಕಲೆಹಾಕಿದರು. ಎರಡು ಬಾರಿಯ ಒಲಿಂಪಿಯನ್ ಮಾಲ್ಡೋವಾದ ಅನ್ನಾ ಡುಲ್ಸೆ 1.7 ಪಾಯಿಂಟ್ ಅಂತರದಿಂದ ಎರಡನೇ ಸ್ಥಾನಕ್ಕೆ ಸರಿದರು. ಚೀನಾ ತೈಪೆಯ ಚೆನ್ ಯೆನ್–ಚಿಂಗ್ ಕಂಚಿನ ಪದಕ ಪಡೆದರು.

ಲಿಮಾ (ಪೆರು)ದಲ್ಲಿ 2024ರಲ್ಲಿ ನಡೆದ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸ್ಪರ್ಧಿ ಬೆಳ್ಳಿ ಪದಕ ಗೆದ್ದಿದ್ದರು.

ಇದಕ್ಕೆ ಮೊದಲು ಭಾರತದ ಪ್ರಾಚಿ ಸಹ ಅರ್ಹತಾ ಸುತ್ತಿನ ನಂತರ ಐದನೇ ಸ್ಥಾನದೊಂದಿಗೆ ಫೈನಲ್‌ಗೆ ಅರ್ಹತೆ ಪಡೆದಿದ್ದರು. ಅರ್ಹತಾ ಸುತ್ತಿನಲ್ಲಿ ಕನಕ್ ನಾಲ್ಕನೇ ಸ್ಥಾನ ಗಳಿಸಿದ್ದರು.

ಸಂಕ್ಷಿಪ್ತ ಸುದ್ದಿ

ವಿಶ್ವ ಮಾಸ್ಟರ್ಸ್: ಅನ್ನಾಗೆ ಬೆಳ್ಳಿ, ಕಂಚಿನ ಪದಕ

ಮೈಸೂರು: ತೈವಾನ್‌ನ ತೈಪೆ ಸಿಟಿಯಲ್ಲಿ ನಡೆಯುತ್ತಿರುವ 'ವಿಶ್ವ ಮಾಸ್ಟರ್ಸ್ ಕ್ರೀಡಾಕೂಟ–2025'ರಲ್ಲಿ ನಗರದ ಡಾ.ಅನ್ನಾ ಸೈನಿ ಎರಡು ಪದಕಗಳಿಗೆ ಕೊರಳೊಡ್ಡಿದ್ದಾರೆ.

ಅನ್ನಾ ಸೈನಿ

ಈಜು ಸ್ಪರ್ಧೆಯ ಬ್ರೆಸ್ಟ್‌ಸ್ಟ್ರೋಕ್ 200 ಮೀಟರ್ಸ್ ಹಾಗೂ 100 ಮೀಟರ್ಸ್ ವಿಭಾಗದಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು. ಇದೇ ಮೊದಲ ಬಾರಿಗೆ ಭಾರತೀಯ ಮಹಿಳೆಯೊಬ್ಬರು ವಿಶ್ವ ಮಾಸ್ಟರ್ಸ್ ಕೂಟದಲ್ಲಿ ಸಾಧನೆ ಮಾಡಿದ್ದಾರೆ. ಅವರು ಮೈಸೂರಿನಲ್ಲಿ ಮಕ್ಕಳ ವೈದ್ಯೆಯಾಗಿ ಕೆಲಸ ಮಾಡುತ್ತಿದ್ದಾರೆ.

ಫ್ರೆಂಚ್ ಓಪನ್ ಟೆನಿಸ್: ಅರ್ಹತಾ ಸುತ್ತಿನಿಂದ ನಗಾಲ್ ನಿರ್ಗಮನ

ಪ್ಯಾರಿಸ್ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಅರ್ಹತಾ ಸುತ್ತಿನಿಂದ ಬುಧವಾರ ಹೊರಬಿದ್ದರು. ಅವರು ತಮಗಿಂತ ಕೆಳಕ್ರಮಾಂಕದ ಆಟಗಾರ ಜುರಿಜ್ ರೊಡಿಯೊನೊವ್ ಎದುರು 2–6, 4–6 ರಲ್ಲಿ ನೇರ ಸೆಟ್‌ಗಳ ಸೋಲನುಭವಿಸಿದರು.

ಪ್ಯಾರಾ ಶೂಟಿಂಗ್ ವಿಶ್ವಕಪ್: ರಾಕೇಶ ಆಯ್ಕೆ

ಹುಬ್ಬಳ್ಳಿ: ದಕ್ಷಿಣ ಕೊರಿಯಾದ ಚಾಂಗ್ವೊನ್‌ನಲ್ಲಿ ಮೇ 28ರಿಂದ ಜೂನ್ 6ರವರೆಗೆ ನಡೆಯಲಿರುವ ಪ್ಯಾರಾ ಶೂಟಿಂಗ್ ವಿಶ್ವಕಪ್‌ಗೆ ಹುಬ್ಬಳ್ಳಿಯ ರಾಕೇಶ ನಿಡಗುಂದಿ ಆಯ್ಕೆಯಾಗಿದ್ದಾರೆ. ಅವರು ಆರ್1 10 ಮೀ. ಏರ್ ರೈಫಲ್ ಸ್ಟ್ಯಾಂಡಿಂಗ್ (ಎಸ್‌ಎಚ್1ಬಿ) ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

ಈಚೆಗೆ ನಡೆದ ಖೇಲೊ ಇಂಡಿಯಾ ಪ್ಯಾರಾ ಕ್ರೀಡಾಕೂಟದಲ್ಲಿಯೂ ಅವರು ಉತ್ತಮ ಪ್ರದರ್ಶನ ನೀಡಿದ್ದರು. ಹುಬ್ಬಳ್ಳಿ ಶೂಟಿಂಗ್ ಅಕಾಡೆಮಿಯ ರವಿಚಂದ್ರ ಬಾಲೆಹೊಸೂರ ಅವರ ಬಳಿ ರಾಕೇಶ ತರಬೇತಿ ಪಡೆದಿದ್ದಾರೆ.

ಭಾಂಬ್ರಿ–ಗ್ಯಾಲವೆ ಜೋಡಿಗೆ ಸೋಲು

ಜಿನೇವಾ (ಪಿಟಿಐ): ಎರಡನೇ ಶ್ರೇಯಾಂಕದ ಯುಕಿ ಭಾಂಬ್ರಿ ಮತ್ತು ರಾಬರ್ಟ್ ಗ್ಯಾಲವೆ ಜೋಡಿ, ಜಿನೀವಾ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಜರ್ಮನಿಯ ಜಾಕೋಬ್ ಸ್ನೇಟ್ಟರ್– ಮಾರ್ಕ್ ವಾಲ್ನರ್ ಜೋಡಿಯ ಎದುರು ಸೋಲನುಭವಿಸಿತು.

ಇಂಡೊ–ಅಮೆರಿಕನ್ ಜೋಡಿ ಬುಧವಾರ ನಡೆದ 16ರ ಸುತ್ತಿನ ಪುರುಷರ ಡಬಲ್ಸ್ ಪಂದ್ಯದಲ್ಲಿ 6–7 (3), 4–6 ರಿಂದ ಶ್ರೇಯಾಂಕರಹಿತ ಎದುರಾಳಿಯೆದುರು ಹಿಮ್ಮೆಟ್ಟಿತು.

ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್

ದಿನಿಧಿ, ಉತ್ಕರ್ಷ್‌ಗೆ ಪ್ರಶಸ್ತಿ ಡಬಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಯನ್ ದಿನಿಧಿ ದೇಸಿಂಗು ಮತ್ತು ಉತ್ಕರ್ಷ್ ಎಸ್. ಪಾಟೀಲ ಅವರು ಬುಧವಾರ ಆರಂಭವಾದ ಎನ್‌ಆರ್‌ಜೆ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಮಹಿಳೆ ಮತ್ತು ಪುರುಷರ ವಿಭಾಗಗಳಲ್ಲಿ ಚಿನ್ನ ಡಬಲ್ ಸಾಧನೆ ಮಾಡಿದರು.

ಬಸವನಗುಡಿಯ ಕಾರ್ಪೊರೇಷನ್ ಈಜುಕೊಳದಲ್ಲಿ ಕರ್ನಾಟಕ ಈಜು ಸಂಸ್ಥೆ ಆಯೋಜಿಸಿರುವ ಕೂಟದಲ್ಲಿ ಡಾಲ್ಫಿನ್ ಅಕ್ವೆಟಿಕ್ಸ್‌ನ ದಿನಿಧಿ ಅವರು ಮಹಿಳೆಯರ 100 ಮೀಟರ್ಸ್ ಬಟರ್‌ಫ್ಲೈ ಮತ್ತು 100 ಮೀಟರ್ಸ್ ಫ್ರೀಸ್ಟೈಲ್ ವಿಭಾಗಗಳಲ್ಲಿ ಪ್ರಥಮ ಸ್ಥಾನ ಗಳಿಸಿದರು. ಪುರುಷರ 100 ಮೀ ಬ್ಯಾಕ್‌ಸ್ಟ್ರೋಕ್ ಮತ್ತು 200ಮೀ ಬ್ಯಾಕ್‌ಸ್ಟ್ರೋಕ್ ವಿಭಾಗಗಳಲ್ಲಿ ಬಸವನಗುಡಿ ಅಕ್ವೆಟಿಕ್ ಸೆಂಟರ್‌ನ ಉತ್ಕರ್ಷ್‌ಎಸ್. ಪಾಟೀಲ ಮೊದಲ ಸ್ಥಾನ ಗಳಿಸಿದರು.

ಈಜುಕೂಟವು ಮೇ 23ರ ವರೆಗೆ ನಡೆಯಲಿದೆ.

ಬೆಂಗಳೂರಿನ ದಿನಿಧಿ ದೇಸಿಂಗು —ಪ್ರಜಾವಾಣಿ ಸಂಗ್ರಹದಿಂದ

ಫಲಿತಾಂಶಗಳು: ಪುರುಷರು: 100 ಮೀ. ಬ್ಯಾಕ್‌ಸ್ಟ್ರೋಕ್: ಉತ್ಕರ್ಷ್ ಎಸ್. ಪಾಟೀಲ –1 (ಬಿಎಸಿ; ಕಾಲ: 56.42ಸೆ), ಆಕಾಶ್ ಮಣಿ (ಬಿಎಸಿ)–2, ಎಂ. ಧ್ಯಾನ್ (ಗ್ಲೋಬಲ್ ಸ್ವಿಮ್ ಸೆಂಟರ್)–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಎಸ್. ಶಂಕರ್ (ಡಾಲ್ಫಿನ್; 29.64ಸೆ)–1, ಡಿ.ಎಸ್. ಪೃಥ್ವಿಕ್ (ಬಿಎಸಿ) –2, ಸೂರ್ಯ ಜೋಯಪ್ಪ (ಬಿಎಸಿ)–3. 100 ಮೀ ಬಟರ್‌ಫ್ಲೈ: ಚಿಂತನ್ ಎಸ್. ಶೆಟ್ಟಿ (ಲಕ್ಷ್ಯನ್ ಸ್ವಿಮ್ಮಿಂಗ್; 56.64ಸೆ)–1, ಎಸ್. ದರ್ಶನ್ –2, ತನೀಶ್ ಜಾರ್ಜ್ ಮ್ಯಾಥ್ಯೂ–3 (ಇಬ್ಬರೂ ಬಿಎಸಿ). 400 ಮೀ. ಫ್ರೀಸ್ಟೈಲ್: ಅನೀಶ್ ಎಸ್. ಗೌಡ –1, ಎಸ್. ದಕ್ಷಣ –2, ಶಿವಾಂಕ್ ವಿಶ್ವನಾಥ್ –3 (ಮೂವರೂ ಬಿಎಸಿ) ಕಾಲ: 3ನಿ.59.56ಸೆ. 400 ಮೀ. ಮೆಡ್ಲೆ: ಶಾನ್ ಗಂಗೂಲಿ –1, ಶಿವಾಂಕ್ ವಿಶ್ವನಾಥ್ –2, ಪವನ್ ಧನಂಜಯ್ –3 (ಮೂವರೂ ಬಿಎಸಿ) ಕಾಲ: 4ನಿ,34.60ಸೆ. 200ಮೀ. ಬ್ಯಾಕ್‌ಸ್ಟ್ರೋಕ್: ಉತ್ಕರ್ಷ್ ಎಸ್. ಪಾಟೀಲ –1, ಆಕಾಶ್ ಮಣಿ –2, ಶಿವ ಶ್ರೀಧರ್ –3 (ಮೂವರೂ ಬಿಎಸಿ) ಕಾಲ: 2ನಿ.05.52ಸೆ. 100 ಮೀ. ಫ್ರೀಸ್ಟೈಲ್: ತನೀಶ್ ಜಾರ್ಜ್ ಮ್ಯಾಥ್ಯೂ (ಬಿಎಸಿ; 51.51ಸೆ)–1, ಆಕಾಶ್ ಮಣಿ (ಬಿಎಸಿ)–2, ಚಿಂತನ್ ಎಸ್. ಶೆಟ್ಟಿ (ಲಕ್ಷ್ಯನ್ ಸ್ವಿಮ್ಮಿಂಗ್)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಎಲ್. ಮಣಿಕಂಠ (ಬಿಎಸಿ; 1ನಿ.05.99ಸೆ)–1 ಸೂರ್ಯ ಜೋಯಪ್ಪಾ (ಬಿಎಸಿ)–2, ವಿದಿತ್ ಎಸ್. ಶಂಕರ್ (ಡಾಲ್ಫಿನ್)–3. 4X200ಮೀ. ಫ್ರೀಸ್ಟೈಲ್: ಬಸವನಗುಡಿ ಅಕ್ವೆಟಿಕ್ ಸೆಂಟರ್ ಎ (8ನಿ,08.84ಸೆ)–1, ಡಾಲ್ಫಿನ್ ಅಕ್ವೆಟಿಕ್ಸ್ –2, ಬಸವನಗುಡಿ ಅಕ್ವೆಟಿಕ್ ಸೆಂಟರ್ ಬಿ –3

ಮಹಿಳೆಯರು: 100 ಮೀ. ಬ್ಯಾಕ್ ಸ್ಟ್ರೋಕ್: ವಿಹಿತಾ ನಯನಾ (ಬಿಎಸಿ; 1ನಿ,7.16ಸೆ)–1, ನೈಶಾ (ಬಿಎಸಿ)–2, ಕೆ.ಆರ್. ಶ್ರುತಿ (ಗ್ಲೋಬಲ್)–3. 50ಮೀ. ಬ್ರೆಸ್ಟ್‌ಸ್ಟ್ರೋಕ್: ಮಾನವಿ ವರ್ಮಾ (ಡಾಲ್ಫಿನ್; 34.73ಸೆ)–1, ಎಸ್. ಲಕ್ಷ್ಯಾ (ಬಿಎಸಿ)–2, ಪ್ರತೀಕ್ಷಾ ಎನ್. ಶೆಣೈ (ಪುತ್ತೂರು ಅಕ್ವೆಟಿಕ್ ಕ್ಲಬ್)–3. 100 ಮೀ. ಬಟರ್‌ಫ್ಲೈ: ದಿನಿಧಿ ದೇಸಿಂಗು (ಡಾಲ್ಫಿನ್; 1ನಿ,04.39ಸೆ)–1, ತ್ರಿಷಾ ಸಿಂಧು ಎಸ್. (ಗ್ಲೋಬಲ್ ಸ್ವಿಮ್ ಸೆಂಟರ್)–2, ನೈಶಾ ಶೆಟ್ಟಿ (ಸ್ವಿಮ್‌ಲೈಫ್)–3. 400 ಮೀ. ಫ್ರೀಸ್ಟೈಲ್: ಶಿರಿನ್ (ಬಿಎಸಿ; 4ನಿ,36.45ಸೆ)–1, ಮೀನಾಕ್ಷಿ ಮೆನನ್ (ಬಿಎಸಿ)–2, ಅಶ್ಮಿತಾ ಚಂದ್ರ (ಇನ್‌ಸ್ಪೈರ್ ಇನ್ಸಿಟಿಟ್ಯೂಟ್ ಆಫ್ ಸ್ಪೋರ್ಟ್ಸ್)–3. 400 ಮೀ. ಮೆಡ್ಲೆ: ಎಸ್. ತಾನ್ಯಾ (ಜೆಐಆರ್‌ಎಸ್; 5ನಿ,18.09ಸೆ)–1, ಮೀನಾಕ್ಷಿ ಮೆನನ್ –2, ಅದಿತಿ ಎನ್. ಮೂಲ್ಯ –3 (ಇಬ್ಬರೂ ಬಿಎಸಿ) 200 ಮೀ. ಬ್ಯಾಕ್‌ಸ್ಟ್ರೋಕ್: ನೈಶಾ–1, ವಿಹಿತಾ ನಯನಾ –2, ಮೀನಾಕ್ಷಿ ಮೆನನ್ –3 (ಮೂವರು ಬಿಎಸಿ) ಕಾಲ: 2ನಿ.29.27ಸೆ. 100 ಮೀ. ಫ್ರೀಸ್ಟೈಲ್: ದಿನಿಧಿ ದೇಸಿಂಗು (ಡಾಲ್ಫಿನ್ ಅಕ್ವೆಟಿಕ್ಸ್; 57.95ಸೆ)–1, ಎಸ್. ಖುಜುಲಾ(ಡಾಲ್ಫಿನ್)–2, ಲತೀಶಾ ಮಂದಣ್ಣ (ಬಿಎಸಿ)–3. 100ಮೀ. ಬ್ರೆಸ್ಟ್ ಸ್ಟ್ರೋಕ್: ಮಾನವಿ ವರ್ಮಾ (ಡಾಲ್ಫಿನ್; 1ನಿ.18.04ಸೆ)–1, ಎಸ್. ತಾನ್ಯಾ (ಜೆಐಆರ್‌ಎಸ್)–2, ವಿ. ಹಿತೈಷಿ (ವಿಜಯನಗರ ಅಕ್ವೆಟಿಕ್ ಸೆಂಟರ್)–3. 4X100ಮೀ. ಫ್ರೀಸ್ಟೈಲ್: ಡಾಲ್ಫಿನ್ ಅಕ್ವೆಟಿಕ್ಸ್ (4ನಿ.05.40ಸೆ)–1, ಬಿಎಸಿ–ಎ –2, ಗ್ಲೋಬಲ್ ಸ್ವಿಮ್ ಸೆಂಟರ್ –3